ಶುಕ್ರವಾರ, ಜುಲೈ 15, 2022 | ₹ 6.00
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಬೆಡಗಿಯರ ಬೆಡಗು

ಮುಂಬೈನಲ್ಲಿ 'ಏಕ್ ವಿಲನ್ ರಿಟರ್ನ್ಸ್' ಚಿತ್ರದ ಪ್ರಚಾರದಲ್ಲಿ ಬಾಲಿವುಡ್ ಬೆಡಗಿಯರಾದ ದಿಶಾ ಪಟಾನಿ ಮತ್ತು ತಾರಾ ಸುತಾರಿಯಾ ಜೊತೆ ನಾಯಕ ನಟ ಅರ್ಜುನ್ ಕಪೂರ್

RERA: PRM/KA/RERA/1251/310/PR/210422/004845
For more details, visit: rera.karnataka.gov.in

100% CITY! 200% HAPPINESS!
@₹4399/sq.ft



LAUNCHING PHASE II
CASAGRAND AQUENE
5 mins from RR Nagar

KENGERI MARKET PRICE	CASAGRAND LAUNCH PRICE	CASAGRAND EARLY BIRD PRICE	LIFESTYLE 2 & 3 BHK APTS AT KENGERI FROM
~~₹6000~~ per sq.ft	~~₹4499~~ per sq.ft	₹4399* per sq.ft (for first 20 bookings only)	₹55 L

NEIGHBOURHOOD LOCATION MARKET PRICES

RR NAGAR (5 mins) ₹6500/SQ.FT	CASAGRAND AQUENE KENGERI	NAGARBHAVI (15 mins) ₹6000/SQ.FT
BANASHANKARI 3rd STAGE (15 mins) ₹6500/SQ.FT	₹4399/SQ.FT	UTTARAHALLI (12 mins) ₹5750/SQ.FT
MYSORE RD (2 mins) ₹5500/SQ.FT	Starting from ₹55 L	BANASHANKARI 6th STAGE (12 mins) ₹6500/SQ.FT

SALIENT FEATURES

- Thoughtfully crafted 333 homes spread across a 3.77 acre expanse
- Basement + Ground floor + 8 floors design structure
- Secured apartment community with a vehicle-free podium
- Standalone clubhouse of 12,000 sq.ft
- 75% open space for maximised ventilation & abundant lush greenery
- 100% Vaastu compliant homes with zero wastage of space
- Surrounded by prominent landmarks, schools, colleges & hospitals

*Conditions apply

Elevation View

INCREDIBLY PRICED! (Launching Phase II)

Type	Size (sq.ft)	Casagrand Launch Price	Casagrand Early Bird Price
2 BHK	1055 - 1303	~~₹57 L - ₹75 L~~	₹55 L - ₹73 L
3 BHK	1519 -1550	~~₹81 L - ₹89 L~~	₹79 L - ₹86 L

Total Units: 183 | Units Sold: 27 | Available Units: 156

COMPLETION IN 18 MONTHS

CREDAI
Exclusive site visit available. Visit model house at site.
77956 54058 | www.casagrand.co.in

CASAGRAND building aspirations

ಶುಕ್ರವಾರ, ಜುಲೈ 15, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 195 | ಪುಟ 20
• www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸಿನಿಮಾ ಪುರವಣಿ
ಸಂಗೀತದಲ್ಲೇ ಕಲಿಯುವುದು ಬಹಳಷ್ಟಿದೆ ಅನ್ನುತ್ತಾ ಮುಂಬೈಗೆ ಹೊರಟಿದ್ದಾರೆ ಸಂಜಿತ್ ಹೆಗ್ಡೆ

ಆಳ-ಅಗಲ
ಲಿಂಗ ಸಮಾನತೆ: ದಾರಿ ಇನ್ನೂ ಬಹಳ ದೂರ

'ಪಿಎಸ್‌ಐ ಅಕ್ರಮ ಭಯೋತ್ಪಾದನೆ ಇದ್ದಂತೆ' 8

ಬಿಬಿಎಂಪಿ ವಾರ್ಡ್ ವಿಂಗಡಣೆ: ಅಂತಿಮ ಅಧಿಸೂಚನೆ 3A

ಸೆನ್ಸೆಕ್ಸ್	ನಿಫ್ಟಿ	₹/$
53,416	15,938	79.99

'ಪದಗಳಿಗೆ ನಿಷೇಧ': ವಿರೋಧ ಪಕ್ಷಗಳ ಆಕ್ಷೇಪ • ಲೋಕಸಭೆ ಸ್ಪೀಕರ್ ಸ್ಪಷ್ಟನೆ

'ಅಸಂಸದೀಯ ಪದ'ಗಳಿಗೆ ಆಕ್ರೋಶ

ಪ್ರಜಾವಾಣಿ ವಾರ್ತೆ

ನವದೆಹಲಿ: ಲೋಕಸಭಾ ಕಾರ್ಯಾಲಯವು 'ಅಸಂಸದೀಯ ಅಭಿವ್ಯಕ್ತಿ'ಗಳಿಗೆ ಸಂಬಂಧಿಸಿ ರೂಪಿಸಿರುವ ಹೊಸ ಕಿರುಹೊತ್ತಗೆಗೆ ವಿರೋಧ ಪಕ್ಷಗಳಿಂದ ತೀವ್ರ ಪ್ರತಿರೋಧ ವ್ಯಕ್ತವಾಗಿದೆ. ನರೇಂದ್ರ ಮೋದಿ ನೇತೃತ್ವದ ಸರ್ಕಾರದ ವಾಸ್ತವಗಳನ್ನು ವಿವರಿಸಲು ಬಳಸಲಾದ ಪದಗಳನ್ನು ಅಸಂಸದೀಯ ಅಭಿವ್ಯಕ್ತಿ ಪಟ್ಟಿಗೆ ಸೇರಿಸಲಾಗಿದೆ ಎಂದು ವಿರೋಧ ಪಕ್ಷಗಳು ಗುರುವಾರ ಹೇಳಿವೆ. ಆದರೆ, ಯಾವುದೇ ಪದವನ್ನು ನಿಷೇಧಿಸಲಾಗಿಲ್ಲ ಎಂದು ಲೋಕಸಭೆಯ ಸ್ಪೀಕರ್ ಓಂ ಬಿರ್ಲಾ ಸ್ಪಷ್ಟೀಕರಣ ಕೊಟ್ಟಿದ್ದಾರೆ.

'ಜುಮ್ಲಾಜೀವಿ', 'ಕೋವಿಡ್‌ಹರಡುವವನು', 'ಸ್ನೂಪ್‌ಗೇಟ್', 'ನಾಚಿಕೆಗೇಡು', 'ವಂಚನೆ', 'ದುರುಪಯೋಗ', 'ಭ್ರಷ್ಟ', 'ನಾಟಕ', 'ಆಷಾಢಭೂತಿತನ', 'ಅದಕ್ಷ' ಪದಗಳನ್ನು ಕೂಡ ಲೋಕಸಭಾ ಕಾರ್ಯಾಲಯವು ಬಿಡುಗಡೆ ಮಾಡಿರುವ 'ಅಸಂಸದೀಯ ಅಭಿವ್ಯಕ್ತಿಗಳು' ಎಂಬ ಕಿರುಹೊತ್ತಗೆಯಲ್ಲಿ ಸೇರಿಸಲಾಗಿದೆ.

'ಜುಮ್ಲಾಜೀವಿ (ಸುಳ್ಳುಗಾರ) ಎಂಬ ಪದದ ಬಗ್ಗೆ ಯಾರಿಗೆ ಭಯ ಇರುತ್ತದೆ– ಸುಳ್ಳು ಭರವಸೆಗಳನ್ನು ನೀಡುವವರಿಗೆ. 'ಜೈಚಂದ್' ಎಂಬ ಪದದ ಬಗ್ಗೆ ಯಾರಿಗೆ ಭಯ ಇರುತ್ತದೆ– ದೇಶಕ್ಕೆ ದ್ರೋಹ ಎಸಗಿದವರಿಗೆ. ಈ ಪದಗಳನ್ನು ಸಂಸತ್ತಿನಲ್ಲಿ ನಿಷೇಧಿಸಲಾಗಿಲ್ಲ, ಪ್ರಧಾನಿ ಮೋದಿ ಅವರ ಭೀತಿ ಹೊರಬರುತ್ತಿದೆ' ಎಂದು ಕಾಂಗ್ರೆಸ್ ಪಕ್ಷವು ಟ್ವೀಟ್ ಮಾಡಿದೆ.

'ಅಸಂಸದೀಯ ಅಭಿವ್ಯಕ್ತಿಗಳು' ಎಂಬ ಕಿರುಹೊತ್ತಗೆಯನ್ನು 'ನವ ಭಾರತದ ಹೊಸ ಪದಕೋಶ' ಎಂದು ಕಾಂಗ್ರೆಸ್ ಸಂಸದ ರಾಹುಲ್ ಗಾಂಧಿ ಕರೆದಿದ್ದಾರೆ. 'ಪ್ರಧಾನಿಯವರು ಸರ್ಕಾರವನ್ನು ನಿಭಾಯಿಸಿದ ರೀತಿಯನ್ನು ಸಮರ್ಪಕವಾಗಿ ವಿವರಿಸುವ ಚರ್ಚೆ ಮತ್ತು ಸಂವಾದಗಳಲ್ಲಿ ಬಳಸುವ ಪದಗಳನ್ನು ಈಗ ನಿಷೇಧಿಸಲಾಗಿದೆ' ಎಂದು ರಾಹುಲ್ ಗಾಂಧಿ ಟ್ವೀಟ್ ಮಾಡಿದ್ದಾರೆ.

12ನೇ ಪುಟ ನೋಡಿ

ಯಾವ ಪದಕ್ಕೂ ನಿಷೇಧವಿಲ್ಲ: ಬಿರ್ಲಾ



ಲೋಕಸಭೆಯ ಸ್ಪೀಕರ್ ಓಂ ಬಿರ್ಲಾ ಅವರು ಗುರುವಾರ ಹಳೆಯ ಕಿರುಹೊತ್ತಗೆಯನ್ನು ಪ್ರದರ್ಶಿಸಿದರು –ಪಿಟಿಐ ಚಿತ್ರ

ಯಾವುದೇ ಪದವನ್ನು ನಿಷೇಧಿಸಲಾಗಿಲ್ಲ. ಕಡತದಿಂದ ಅಭಿವ್ಯಕ್ತಿಗಳನ್ನು ಸಂದರ್ಭಾನುಸಾರ ಕಿತ್ತು ಹಾಕಲಾಗುವುದು ಎಂದು ಲೋಕಸಭೆ ಸ್ಪೀಕರ್ ಓಂ ಬಿರ್ಲಾ ಹೇಳಿದ್ದಾರೆ.

ಕಿರುಹೊತ್ತಗೆ ರೂಪಿಸುವಲ್ಲಿ ಸರ್ಕಾರದ ಪಾತ್ರ ಏನೂ ಇಲ್ಲ. ಸಂಸತ್ತು ಮತ್ತು ವಿಧಾನಸಭೆಗಳು ಭಾರತದ ಪ್ರಜಾಪ್ರಭುತ್ವದ ಸ್ವತಂತ್ರ ಅಂಗಗಳು ಎಂದೂ ಅವರು ಹೇಳಿದ್ದಾರೆ.

'ಲೋಕಸಭೆ, ರಾಜ್ಯಸಭೆ ಅಥವಾ ರಾಜ್ಯ ವಿಧಾನಸಭೆಗಳು ಹಾಗೂ ಕಾಮನ್‌ವೆಲ್ತ್ ದೇಶಗಳ ಸಂಸತ್ತಿನಲ್ಲಿ ಅಳಿಸಿ ಹಾಕಲಾದ ಪದಗಳನ್ನು ಪಟ್ಟಿ ಮಾಡಲಾಗಿದೆ. ಇಂತಹ ಪಟ್ಟಿಯನ್ನು ಪ್ರತಿ ವರ್ಷವೂ ಹೊರತರಲಾಗುತ್ತಿದೆ. ಇದೊಂದು ಪಟ್ಟಿಯೇ ಹೊರತು ಸಲಹೆ ಅಥವಾ ಆದೇಶ ಅಲ್ಲ' ಎಂದು ಬಿರ್ಲಾ ತಿಳಿಸಿದ್ದಾರೆ. ಆಡಳಿತ ಪಕ್ಷ ಮತ್ತು ವಿರೋಧ ಪಕ್ಷಗಳ ಸಂಸದರು ಬಳಸಿದ ಪದಗಳು ಈ ಪಟ್ಟಿಯಲ್ಲಿ ಸೇರಿವೆ ಎಂದು ಅವರು ಹೇಳಿದ್ದಾರೆ.

ಸಂಸದರು ತಮ್ಮ ಅಭಿಪ್ರಾಯ ವ್ಯಕ್ತಪಡಿಸಲು ಸ್ವತಂತ್ರರು. ಆ ಹಕ್ಕನ್ನು ಯಾರೂ ಕಸಿದುಕೊಳ್ಳಲು ಸಾಧ್ಯವಿಲ್ಲ. ಆದರೆ, ಮಾತುಗಳು ಸಂಸತ್ತಿನ ಘನತೆಗೆ ತಕ್ಕಂತಿರಬೇಕು

ಓಂ ಬಿರ್ಲಾ, ಲೋಕಸಭೆ ಸ್ಪೀಕರ್

ಏನು ಮಾಡಬೇಕು, ಏನು ಮಾತನಾಡಬೇಕು, ವಾಹ್ ಮೋದೀಜಿ, ವಾಹ್ ಎಂಬ ಜನಪ್ರಿಯ ಮೀಮ್ ಈಗ ನಿಜವಾಗುತ್ತಿರುವಂತೆ ಕಾಣಿಸುತ್ತಿದೆ

ಪ್ರಿಯಾಂಕಾ ಚತುರ್ವೇದಿ, ರಾಜ್ಯಸಭೆಯಲ್ಲಿ ಶಿವಸೇನಾ ಉಪನಾಯಕಿ

ಈ ಪದಗಳನ್ನು ಸಂಸತ್ತಿನಲ್ಲಿ ಬಳಸದಂತೆ ಸರ್ಕಾರ ನಿಷೇಧ ಹೇರಿರಬಹುದು: ಜುಮ್ಲಾಜೀವಿ, ಭ್ರಷ್ಟ, ನಾಟಕ, ಆಷಾಢಭೂತಿತನ. ಆದರೆ, ಈ ಮುಂದಿನವುಗಳ ಬಗ್ಗೆ ಸರ್ಕಾರ ಉತ್ತರ ನೀಡಬೇಕಾಗುತ್ತದೆ: ಎಲ್‌ಪಿಜಿ ಮತ್ತು ದರ ಏರಿಕೆ, ನಿರುದ್ಯೋಗ, ಅಗ್ನಿಪಥ

ಮಲ್ಲಿಕಾರ್ಜುನ ಖರ್ಗೆ, ರಾಜ್ಯಸಭೆ ವಿರೋಧ ಪಕ್ಷದ ನಾಯಕ

ಚಿನಕುರಳಿ

ಪ್ರಕಾಶ್ ಶೆಟ್ಟಿ

ಶ್ರೀಲಂಕಾ: ಗೊಟಬಯ ಕೊನೆಗೂ ರಾಜೀನಾಮೆ

ಕೊಲಂಬೊ/ಸಿಂಗಪುರ (ರಾಯಿಟರ್ಸ್): ಶ್ರೀಲಂಕಾ ಅಧ್ಯಕ್ಷ ಗೊಟಬಯ ರಾಜಪಕ್ಸ ಅವರು ಗುರುವಾರ ರಾಜೀನಾಮೆ ನೀಡಿದ್ದಾರೆ ಎಂದು ಮೂಲಗಳು ತಿಳಿಸಿವೆ. ಮಾಲ್ದೀವ್ಸ್‌ನಿಂದ ಸಿಂಗಪುರಕ್ಕೆ ಗುರುವಾರ ತೆರಳಿರುವ ಅವರು ಅಲ್ಲಿಂದಲೇ ರಾಜೀನಾಮೆ ಪತ್ರವನ್ನು ಶ್ರೀಲಂಕಾ ಸಂಸತ್ತಿನ ಸ್ಪೀಕರ್ ಅವರಿಗೆ ಇ–ಮೇಲ್ ಮಾಡಿದ್ದಾರೆ ಎಂದು ಹೇಳಲಾಗಿದೆ.

ಸಿಂಗಪುರಕ್ಕೆ ಬಂದಿಳಿದ ತಕ್ಷಣ ಅವರು ರಾಜೀನಾಮೆ ಪತ್ರ ರವಾನಿಸಿದ್ದಾರೆಯೇ ಮತ್ತು ಇ–ಮೇಲ್ ಸ್ವರೂಪದ ರಾಜೀನಾಮೆ ಅಂಗೀಕಾರವಾಗುತ್ತದೆಯೇ ಎಂಬ ಅಂಶಗಳು ಇನ್ನೂ ಖಚಿತಪಟ್ಟಿಲ್ಲ.

ಹೆಂಡತಿಯ ಜತೆಗೆ ಮಾಲ್ದೀವ್ಸ್‌ಗೆ ಬುಧವಾರ ಪಲಾಯನ ಮಾಡಿದ್ದ ಗೊಟಬಯ ಅವರು ಗುರುವಾರ ಸಂಜೆ ವೇಳೆಗೆ ಸೌದಿ ಅರೇಬಿಯನ್ ಏರ್‌ಲೈನ್ಸ್ ವಿಮಾನದಲ್ಲಿ ಸಿಂಗಪುರಕ್ಕೆ ತೆರಳಿದ್ದಾರೆ ಎಂದು ಸಿಬ್ಬಂದಿ ತಿಳಿಸಿದ್ದಾರೆ.

12ನೇ ಪುಟ ನೋಡಿ

ಡೋಲೊ–650: ವೈದ್ಯರಿಗೆ ಸಾವಿರ ಕೋಟಿ ಉಡುಗೊರೆ!

ನವದೆಹಲಿ(ಪಿಟಿಐ): ಬೆಂಗಳೂರು ಮೂಲದ ಡೋಲೊ–650 ಔಷಧ ತಯಾರಿಕಾ ಕಂಪನಿ ತನ್ನ ಉತ್ಪನ್ನಗಳ ಮಾರಾಟಕ್ಕೆ ವಾಮಮಾರ್ಗದಲ್ಲಿ ಪ್ರಚಾರ ಮಾಡುವ ಸಲುವಾಗಿ ವೈದ್ಯರಿಗೆ ಮತ್ತು ವೈದ್ಯಕೀಯ ಕ್ಷೇತ್ರದ ವೃತ್ತಿಪರರಿಗೆ ಸುಮಾರು ₹1,000 ಕೋಟಿ ಮೊತ್ತದ ಉಡುಗೊರೆಗಳನ್ನು ನೀಡಿದೆ ಎಂದು ನೇರ ತೆರಿಗೆಯ ಕೇಂದ್ರೀಯ ಮಂಡಳಿ (ಸಿಬಿಡಿಟಿ) ತಿಳಿಸಿದೆ.

ಡೋಲೊ– 650 ಔಷಧ ತಯಾರಿಸುವ ಬೆಂಗಳೂರು ಮೂಲದ ಮೈಕ್ರೋ ಲ್ಯಾಬ್ಸ್ ಲಿಮಿಟೆಡ್‌ಗೆ ಸಂಬಂಧಪಟ್ಟ 9 ರಾಜ್ಯಗಳ, 36 ಸ್ಥಳಗಳಲ್ಲಿ ಜುಲೈ 6ರಂದು ಐ.ಟಿ ದಾಳಿ ನಡೆದಿತ್ತು. ಕಂಪನಿಯು ಸುಮಾರು ₹300 ಕೋಟಿ ತೆರಿಗೆ ವಂಚಿಸಿರುವುದನ್ನು ಅಂದಾಜಿಸಲಾಗಿದೆ ಎಂದು ಸಿಬಿಡಿಟಿಯು ಹೇಳಿಕೆಯಲ್ಲಿ ತಿಳಿಸಿದೆ.

ಐ.ಟಿ ದಾಳಿಯಲ್ಲಿ ₹1.20 ಕೋಟಿ ಅಕ್ರಮ ನಗದು, ಸೂಕ್ತ ದಾಖಲೆಗಳಿಲ್ಲದ ಸುಮಾರು ₹1.40 ಕೋಟಿ ಮೌಲ್ಯದ ಚಿನ್ನ ಮತ್ತು ವಜ್ರದ ಆಭರಣ ವಶಪಡಿಸಿಕೊಳ್ಳಲಾಗಿದೆ. ಅಕ್ರಮಕ್ಕೆ ಸಂಬಂಧಿಸಿದ ಹಲವು ಮಹತ್ವದ ದಾಖಲೆಗಳು, ಡಿಜಿಟಲ್ ದತ್ತಾಂಶಗಳು ಪತ್ತೆಯಾಗಿದ್ದು, ಅವುಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಸಿಬಿಡಿಟಿ ತಿಳಿಸಿದೆ.

12ನೇ ಪುಟ ನೋಡಿ

ನಿಮ್ಮ ಕಾರನ್ನು ಮಾರುತ್ತಿದ್ದೀರಾ?
ಅತ್ಯುತ್ತಮ ಬೆಲೆ ಪಡೆಯಿರಿ
ಕೇವಲ OLX AUTOSನಲ್ಲಿ.
ಅದೇ ದಿನ ಹಣಪಾವತಿ
ಉಚಿತ ಹೋಂ ಇನ್‌ಸ್ಪೆಕ್ಷನ್
ಯಾವುದೇ ಗುಪ್ತ ಶುಲ್ಕಗಳಿಲ್ಲ
1 ಕೋಟಿ+ ಕಾರುಗಳು ಮಾರಾಟವಾಗಿವೆ

09821110000 ಗೆ ಕರೆ ಮಾಡಿ ಅಥವಾ www.olxautos.in ಗೆ ಭೇಟಿ ಕೊಡಿ
Scan Now
OLX AUTOS
ಪ್ರೈಸ್ ಅಲ್ಲ, ಸರ್ಪ್ರೈಸ್ ಸಿಗುತ್ತದೆ

GRT JEWELLERS Since 1964
ಆಷಾಢ ಆಶ್ಚರ್ಯ
ಈ ಬಾರಿಯ ಆಷಾಢದಲ್ಲಿ, ಮಿತಿರಹಿತ ಅಚ್ಚರಿಗಳನ್ನು ಆನಂದಿಸಿ.
ನಿಮ್ಮ ಪ್ರತಿಯೊಂದು ಖರೀದಿಯ ಮೇಲೆ ನಮ್ಮಿಂದ ಒಂದು ಉಡುಗೊರೆಯನ್ನು ಪಡೆಯಿರಿ.
ಈ ಬಾರಿಯ ಆಷಾಢದಲ್ಲಿ ಜಿಆರ್‌ಟಿ ವತಿಯಿಂದ ಪ್ರತಿಯೊಬ್ಬರಿಗೂ
ಏನಾದರೂ ಒಂದು ಉಡುಗೊರೆ ಕಾದಿರುತ್ತದೆ !
* ಷರತ್ತುಗಳು ಮತ್ತು ನಿಬಂಧನೆಗಳು ಅನ್ವಯಿಸುತ್ತವೆ.
HDFC BANK We understand your world
UPTO ₹5000 CASHBACK# on HDFC Bank Credit Cards.
Offer: 2% Cashback #Min. transaction: ₹50,000
Validity: 01.07.2022 to 15.08.2022. T&C apply.
Attractive offer on online purchase also
AVAIL ATTRACTIVE GIFTS ON UPI PAYMENTS.
Karnataka | Andhra Pradesh | Telangana | Tamil Nadu | Puducherry || Singapore
Shop online at: www.oriana.com | mail@grtjewels.com | GRT LIVE VIDEO SHOPPING Shop from the comfort of your home

ವಿವಿಧೆಡೆ ವಿದ್ಯುತ್ ವ್ಯತ್ಯಯ

ಬೆಂಗಳೂರು: ನಿರ್ವಹಣೆ ಕಾರ್ಯ ಕೈಗೊಂಡಿರುವ ಜುಲೈ 15 ಮತ್ತು 16ರಂದು ನಗರದ ವಿವಿಧೆಡೆ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಬೆಸ್ಕಾಂ ಪ್ರಕಟಣೆ ತಿಳಿಸಿದೆ.

15ರಂದು ವ್ಯತ್ಯಯವಾಗುವ ಸ್ಥಳಗಳು: ವಿಶ್ವಪ್ರಿಯ ಲೇಔಟ್, ಬೇಗೂರು ಕೊಪ್ಪ ರಸ್ತೆ, ದೇವರಚಿಕ್ಕನಹಳ್ಳಿ, ಅಕ್ಷಯನಗರ, ತೇಜಸ್ವಿನಿ ನಗರ, ಹಿರ್ನಾದಾನಿ ಅಪಾರ್ಟ್‌ಮೆಂಟ್ ಮತ್ತು ಸುತ್ತಮುತ್ತಲಿನ ಪ್ರದೇಶಗಳು.

16ರಂದು ವ್ಯತ್ಯಯವಾಗುವ ಸ್ಥಳಗಳು: ಹೊಸೂರು ಮುಖ್ಯರಸ್ತೆ, ಬಂಡೆ ಪಾಳ್ಯ, ಸಿಂಗಸಂದ್ರ, ಜಿ.ಬಿ.ಪಾಳ್ಯ, ಕೂಡ್ಲು ಗೇಟ್, ಎಇಸಿಎಸ್ ಲೇಔಟ್ ಎ ಮತ್ತು ಬಿ ಬ್ಲಾಕ್, ಹೊಂಗಸಂದ್ರ, ಓಂಶಕ್ತಿ ಲೇಔಟ್, ಬೊಮ್ಮನಹಳ್ಳಿ(ಬೇಗೂರು ಮುಖ್ಯರಸ್ತೆ), ಬೊಮ್ಮನಹಳ್ಳಿ ಕೈಗಾರಿಕಾ ಪ್ರದೇಶ, ಬಿಟಿಆರ್ ಉದ್ಯಾನ, ಮುನೇಶ್ವರ ಲೇಔಟ್, ಹರಳುಕುಂಟೆ, ಹೊಸಪಾಳ್ಯ, ಯೆಳ್ಳುಕುಂಟೆ, ಓರ್ಫೋನ್ ಟೆಕ್ ಪಾರ್ಕ್, ಬಸವನಗರ, ಜಿ.ಎಸ್.ಪಾಳ್ಯ ಪ್ರದೇಶ, ಕೃಷ್ಣಾ ರೆಡ್ಡಿ ಲೇಔಟ್, ಸೆಮಿಕಾನ್ ಪಾರ್ಕ್, ಸತ್ಯಂ ಕಂಪ್ಯೂಟರ್, ಕನ್ಸರ್ವ್, ಕೆಐಎಡಿಬಿ ಲೇಔಟ್, ಆಕ್ಸಿಸ್ ಬ್ಯಾಂಕ್, ಡಿ-ಲಿಂಕ್, ಟಾಟಾ ಕನ್ಸಲ್ಟೆನ್ಸಿ, ಆನಂದ ರೆಡ್ಡಿ ಲೇಔಟ್, ಎಕ್ಸ್ಐಐಎಂ ಕಾಲೇಜು, ಜಿಇ-ಇಂಡಿಯಾ, ಗ್ಲೋಬಲ್ ಟೆಕ್ ಪಾರ್ಕ್, ಎಲೆಕ್ಟ್ರಾನಿಕ್ ಸಿಟಿ ಹಂತ-2, ವೀರಸಂದ್ರ, ದೊಡ್ಡನಾಗಮಂಗಲ, ಅನಂತನಗರ, ಶಾಂತಿಪುರ ಸುತ್ತಮುತ್ತಲಿನ ಪ್ರದೇಶಗಳು.

ಟವರ್ ಶುಲ್ಕ: ಸಾಫ್ಟ್‌ವೇರ್‌ಗೆ ಕಾಯುತ್ತಿರುವ ಬಿಬಿಎಂಪಿ

ಪ್ರಜಾವಾಣಿ ವಾರ್ತೆ

ಬಿಬಿಎಂಪಿ ಸುದ್ದಿ

ಬೆಂಗಳೂರು: ಟೆಲಿಕಾಂ ಟವರ್‌ಗಳಿಗೆ(ಮೊಬೈಲ್ ಫೋನ್) ಅನುಮತಿ ನೀಡಿ ಶುಲ್ಕ ಪಡೆಯಲು ರಾಜ್ಯ ಸರ್ಕಾರ ನಿಯಮ ರೂಪಿಸಿದ್ದರೂ, ಸಾಫ್ಟ್‌ವೇರ್ ಇಲ್ಲದೆ ಶುಲ್ಕ ವಸೂಲಿಯನ್ನೇ ಬಿಬಿಎಂಪಿ ಮಾಡಿಲ್ಲ.

2016ರಲ್ಲೇ ಕೇಂದ್ರ ಸರ್ಕಾರ ಇಂಡಿಯನ್ ಟೆಲಿಗ್ರಾಫ್ ರೈಟ್ ಆಫ್ ವೇ(ಆರ್‌ಒಡಬ್ಲ್ಯು) ನಿಯಮಗಳನ್ನು ಜಾರಿಗೆ ತಂದಿದೆ. ಇದರ ಪ್ರಕಾರ ನಿಯಮಗಳನ್ನು ರೂಪಿಸಲು ರಾಜ್ಯ ಸರ್ಕಾರ ಆರು ವರ್ಷಗಳ ಕಾಲಾವಕಾಶ ತೆಗೆದುಕೊಂಡಿದೆ. 2022ರ ಜನವರಿಯಲ್ಲಿ ನಿಯಮಗಳನ್ನು ರೂಪಿಸಿದೆ. ಆದರೆ, ಈವರೆಗೆ ಬಿಬಿಎಂಪಿ ಮೊಬೈಲ್ ಟವರ್‌ಗಳ ಅಳವಡಿಕೆಗೆ ಅನುಮತಿ ನೀಡುವ ಪ್ರಕ್ರಿಯೆಯನ್ನೇ ಆರಂಭಿಸಿಲ್ಲ.

ಆಸ್ತಿ ತೆರಿಗೆ, ಜಾಹೀರಾತು ತೆರಿಗೆ ಮತ್ತು ಮೊಬೈಲ್ ಟವರ್ ಶುಲ್ಕ ವಸೂಲಿಯಲ್ಲಿ ಪಾಲಿಕೆ ವಿಫಲವಾಗಿರುವ ಬಗ್ಗೆ ವಿಧಾನಸಭೆ ಅಂದಾಜುಗಳ ಸಮಿತಿ ಕೇಳಿರುವ ಪ್ರಶ್ನೆಗಳಿಗೆ ಪಾಲಿಕೆ ಮುಖ್ಯ ಆಯುಕ್ತರು ಉತ್ತರ ನೀಡಿದ್ದಾರೆ.

'ಮೊಬೈಲ್ ಟವರ್ ಅಳವಡಿಕೆಗೆ ಅನುಮತಿ ಪಡೆಯುವ ಪ್ರಕ್ರಿಯೆಯನ್ನು ಆನ್‌ಲೈನ್ ಮೂಲಕವೇ ನಿರ್ವಹಿಸಲು ಸರ್ಕಾರ ತಿಳಿಸಿದೆ. ಅದಕ್ಕಾಗಿ ಸಾಫ್ಟ್‌ವೇರ್ ಅಭಿವೃದ್ಧಿಪಡಿಸಲು ಮಾಹಿತಿ ತಂತ್ರಜ್ಞಾನ ವಿಭಾಗಕ್ಕೆ ತಿಳಿಸಲಾಗಿದೆ. ಸಾಫ್ಟ್‌ವೇರ್ ಅಭಿವೃದ್ಧಿಯಾಗದ ಕಾರಣ ಅನುಮತಿ ನೀಡಿ ಶುಲ್ಕ ಸಂಗ್ರಹಿಸುವ ಪ್ರಕ್ರಿಯೆ ಆರಂಭಿಸಲು ಸಾಧ್ಯವಾಗಿಲ್ಲ' ಎಂದಿದ್ದಾರೆ.

ಜಾಹೀರಾತು ತೆರಿಗೆ ಇಳಿಮುಖ: ಜಾಹೀರಾತು ಮೂಲಗಳಿಂದ ಪಾಲಿಕೆ ಸಂಗ್ರಹಿಸಿರುವ ತೆರಿಗೆ ಪ್ರಮಾಣ ವರ್ಷದಿಂದ ವರ್ಷಕ್ಕೆ ಇಳಿಮುಖ ಕಂಡಿದೆ. ಕಳೆದ ಆರು ವರ್ಷಗಳಲ್ಲಿ ಒಟ್ಟಾರೆ ₹39.06 ಕೋಟಿ ಸಂಗ್ರಹ ಮಾಡಿದೆ.

2017–18ನೇ ಸಾಲಿನಲ್ಲಿ ₹27.20 ಕೋಟಿ ಸಂಗ್ರಹವಾಗಿತ್ತು. ವರ್ಷದಿಂದ ವರ್ಷಕ್ಕೆ ಇಳಿಮುಖ ಕಂಡು 2021–22ನೇ ಸಾಲಿನಲ್ಲಿ ₹1.27 ಕೋಟಿಯಷ್ಟೇ ಸಂಗ್ರಹವಾಗಿದೆ. ಈ ಅಂಶವನ್ನೂ ಮುಖ್ಯ ಆಯುಕ್ತರು ಸಮಿತಿಗೆ ತಿಳಿಸಿದ್ದಾರೆ.

ಇಂದು ಎಪಿಎಂಸಿ ಬಂದ್

ಬೆಂಗಳೂರು: ಅಕ್ಕಿ, ಬೇಳೆ ಸೇರಿ ಆಹಾರ ಧಾನ್ಯಗಳ ಮೇಲೆ ಶೇ 5ರಷ್ಟು ಜಿಎಸ್‌ಟಿ ವಿಧಿಸಿರುವುದನ್ನು ವಿರೋಧಿಸಿ ಶುಕ್ರವಾರ ವಹಿವಾಟು ಸ್ಥಗಿತಗೊಳಿಸಿ ಬಂದ್ ನಡೆಸಲು ಎಪಿಎಂಸಿಗಳ ವರ್ತಕರ ಸಂಘಟನೆಗಳು ಮುಂದಾಗಿವೆ.

'ಯಶವಂತಪುರ ಮತ್ತು ಚಾಮರಾಜಪೇಟೆ ನ್ಯೂ ತರಗುಪೇಟೆಯಲ್ಲಿ ದವಸ–ಧಾನ್ಯಗಳ ವಹಿವಾಟು ಬಂದ್ ಆಗಲಿದೆ. ರಾಜ್ಯದ ಎಲ್ಲಾ ಎಪಿಎಂಸಿಗಳಲ್ಲಿನ ಅಕ್ಕಿ–ಬೇಳೆ ವ್ಯಾಪಾರ, ಅಕ್ಕಿ ಗಿರಣಿಗಳು ಬಂದ್ ಆಗಲಿವೆ' ಎಂದು ಬೆಂಗಳೂರು ಗ್ರೈನ್ ಮರ್ಚೆಂಟ್ಸ್ ಅಸೋಸಿಯೇಷನ್ ಕಾರ್ಯದರ್ಶಿ ಸಾಯಿರಾಮ್ ಪ್ರಸಾದ್ ತಿಳಿಸಿದರು.

'ಅಗತ್ಯ ವಸ್ತುಗಳ ಬೆಲೆ ಏರಿಕೆಯಿಂದ ಜನ ಮೊದಲೇ ನಲುಗಿದ್ದಾರೆ. ದವಸ–ಧಾನ್ಯಗಳಿಗೂ ಜಿಎಸ್‌ಟಿ ವಿಧಿಸಿದರೆ ಬಡವರು ಜೀವನ ನಡೆಸುವುದೇ ಕಷ್ಟವಾಗಲಿದೆ. ಒಂದು ಕೆ.ಜಿ ಅಕ್ಕಿಗೆ ₹40ಕ್ಕಿಂತ ಕಡಿಮೆ ಬೆಲೆ ಇಲ್ಲ. ಈಗ ಜಿಎಸ್‌ಟಿಯೂ ಸೇರ್ಪಡೆಯಾದರೆ ಒಂದು ಕೆ.ಜಿಗೆ ಕನಿಷ್ಠ ₹2 ಹೆಚ್ಚಾಗಲಿದೆ' ಎಂದು ಹೇಳಿದರು.

ರಿಷಿ ಮುನ್ನಡೆ, ಸುವೆಲಾ ಹೊರಕ್ಕೆ

ಲಂಡನ್ (ಪಿಟಿಐ): ಬ್ರಿಟನ್‌ನ ಕನ್‌ಸರ್ವೇಟಿವ್ ಪಕ್ಷದ ನಾಯಕತ್ವದ ಆಯ್ಕೆ ಸಂಬಂಧ ಗುರುವಾರ ನಡೆದ ಎರಡನೇ ಸುತ್ತಿನ ಮತದಾನದಲ್ಲೂ ಭಾರತೀಯ ಮೂಲದ ರಿಷಿ ಸುನಕ್ 101 ಮತಗಳನ್ನು ಪಡೆದು ಅಗ್ರಸ್ಥಾನದಲ್ಲಿ ಮುಂದುವರಿದಿದ್ದಾರೆ.

ಈ ಸುತ್ತಿನಲ್ಲಿ ಆರು ಅಭ್ಯರ್ಥಿಗಳು ಕಣದಲ್ಲಿದ್ದರು. ಇದರಲ್ಲಿ ಪೆನ್ನಿ ಮಾರ್ಡೆಂಟ್ ಅವರು 83 ಮತಗಳನ್ನು ಪಡೆದು ಎರಡನೇ ಸ್ಥಾನದಲ್ಲಿದ್ದಾರೆ. ಲಿಜ್ ಟ್ರಸ್ 64, ಕೆಮಿ ಬಡೆನಾಚ್ 49, ಟಾಮ್ ಟುಗೆಂಧತ್ 32 ಮತಗಳನ್ನು ಪಡೆದಿದ್ದಾರೆ. ಮುಂದಿನ ಗುರುವಾರದ ಒಳಗೆ ಸ್ಪರ್ಧಾ ಕಣದಲ್ಲಿ ಇಬ್ಬರಷ್ಟೇ ಉಳಿಯುವ ನಿರೀಕ್ಷೆ ಇದೆ.

ಭಾರತೀಯ ಮೂಲದ ಅಟಾರ್ನಿ ಜನರಲ್ ಸುವೆಲಾ ಬ್ರೇವರ್‌ಮನ್ ಅವರು ಕೇವಲ 27 ಮತಗಳನ್ನು ಪಡೆದು ಸ್ಪರ್ಧಾ ಕಣದಿಂದ ಹೊರಬಿದ್ದರು.

ನಗರದಲ್ಲಿ ಇಂದು

ವಿಜಯಾ ವಿಷ್ಣುಭಟ್ ಅನುವಾದಿತ 'ಭ್ರಷ್ಟ ವಿರೋಧಿ ಸಿದ್ಧಾಂತ' ಕೃತಿ ಲೋಕಾರ್ಪಣೆ: ಉದ್ಘಾಟನೆ: ಪಂಡಿತಾರಾಧ್ಯ ಶಿವಾಚಾರ್ಯ ಭಗವತ್ಪಾದರು, ಕೃತಿ ಬಿಡುಗಡೆ: ಎನ್. ಸಂತೋಷ್ ಹೆಗ್ಡೆ, ಅಧ್ಯಕ್ಷತೆ: ಸಿ.ಸೋಮಶೇಖರ್, ಆಯೋಜನೆ: ಭಗವತಿ ಚಿತ್ಪಾವನ ಮಹಿಳಾ ಟ್ರಸ್ಟ್, ಸ್ಥಳ: ಗಾಂಧಿಭವನ, ಶಿವಾನಂದ ಸರ್ಕಲ್, ಬೆಳಿಗ್ಗೆ 10.30

ವಿಶ್ವಕರ್ಮ ಸಮಾಜದ ಮುಖಂಡರ ರಾಜ್ಯ ಮಟ್ಟದ ಸಮಾವೇಶ: ಉದ್ಘಾಟನೆ: ಬಸವರಾಜ ಬೊಮ್ಮಾಯಿ, ಅಧ್ಯಕ್ಷತೆ: ನಳಿನ್‌ಕುಮಾರ್ ಕಟೀಲ್, ಉಪಸ್ಥಿತಿ: ಕೆ.ಪಿ. ನಂಜುಂಡಿ, ಅಜಯ್ ತಮಟಾ, ಆಯೋಜನೆ: ಅಖಿಲ ಕರ್ನಾಟಕ ವಿಶ್ವಕರ್ಮ ಮಹಾಸಭಾ, ಸ್ಥಳ: ವೈಟ್ ಪೆಟಲ್ಸ್, ಗೇಟ್ ನಂ.3 ಅರಮನೆ ಮೈದಾನ, ಮೇಖ್ರಿ ವೃತ್ತ, ಮಧ್ಯಾಹ್ನ 3.30

ಕೃಷ್ಣಾಚಾರಿ ಅವರ 'ಮಣ್ಣಿನ ಬೇರು' ಏಕವ್ಯಕ್ತಿ ಚಿತ್ರಕಲಾ ಪ್ರದರ್ಶನ: ಅತಿಥಿಗಳು: ಕೆ.ಟಿ. ಶಿವಪ್ರಸಾದ್, ಬಲವಂತರಾವ್ ಪಾಟೀಲ್, ಎ.ಎಂ. ಪ್ರಕಾಶ್, ಆರ್.ಸಿ. ಕಾರದಕಟ್ಟಿ, ಆಯೋಜನೆ: ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಸ್ಥಳ: ಕರ್ನಾಟಕ ಚಿತ್ರಕಲಾ ಪರಿಷತ್, ಸಂಜೆ 4

ನಿಹಾರಿಕಾ, ಪ್ರತಿಭಾ

ಭರತನಾಟ್ಯ ರಂಗಪ್ರವೇಶ: **ಪ್ರಸ್ತುತಿ:** ರೇಖಾ ರಾಜು ಅವರ ಶಿಷ್ಯೆಯರಾದ ಪ್ರತಿಭಾ ಗೋಪಾಲಂ ಮತ್ತು ಅವರ ಪುತ್ರಿ ನಿಹಾರಿಕಾ ನವೀನ್, ಸ್ಥಳ: ಶ್ರೀಕೃಷ್ಣದೇವರಾಯ ಕಲಾಮಂದಿರ, ಮಲ್ಲೇಶ್ವರ, ಸಂಜೆ 5.30

ಕನಕ–ಪುರಂದರದಾಸರ ಸಂಸ್ಮರಣಾ ಮಹೋತ್ಸವ ಹಾಗೂ ಶ್ರೀನಿವಾಸ ಉತ್ಸವ ಬಳಗದ ದಶಮಾನೋತ್ಸವ: ಸಂಜೆ 4ರಿಂದ 6.15ರ ವರೆಗೆ ಭಜನಾ ಕಾರ್ಯಕ್ರಮಗಳು, ಉದ್ಘಾಟನೆ: ಸುಜಯನಿಧಿ ತೀರ್ಥ ಸ್ವಾಮೀಜಿ, ಅತಿಥಿಗಳು: ಸತ್ಯಧ್ಯಾನಾಚಾರ್ಯ ಕಟ್ಟಿ, ವ್ಯಾಸನಕೆರೆ ಪ್ರಭಂಜನಾಚಾರ್, ಎ.ಬಿ. ಶಾಮಾಚಾರ್, ಕೆ.ಎಸ್. ರಂಗಪ್ಪ, ಆಯೋಜನೆ: ಶ್ರೀನಿವಾಸ ಉತ್ಸವ ಬಳಗ, ಸ್ಥಳ: ಸತ್ಯಪ್ರಮೋದ ಕಲ್ಯಾಣ ಮಂಟಪ, ಉತ್ತರಾಧಿಮಠ, ಪಂಪಮಹಾಕವಿ ರಸ್ತೆ, ಬಸವನಗುಡಿ, ಸಂಜೆ 6.15

ಆಲೂರು ವೆಂಕಟರಾಯರ ಸಂಸ್ಮರಣೆ ಹಾಗೂ ಆಲೂರು ವೆಂಕಟರಾಯರ ಕೃತಿ ಲೋಕಾರ್ಪಣೆ: ಕೃತಿ ಬಿಡುಗಡೆ: ಅಶೋಕ್ ಚಂದರಗಿ, ಅತಿಥಿಗಳು: ಜೆ. ಹುಚ್ಚಪ್ಪ, ಯ.ರು. ಪಾಟೀಲ, ಅಧ್ಯಕ್ಷತೆ: ಸಿ.ಕೆ. ರಾಮೇಗೌಡ, ಆಯೋಜನೆ: ಕನ್ನಡ ಜನಶಕ್ತಿ ಕೇಂದ್ರ, ಸ್ಥಳ: ಕುವೆಂಪು ಸಭಾಂಗಣ, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಸಂಜೆ 5.15

ಆರ್ಟ್ ಸ್ಪ್ರಿಂಗ್–2022 ಚಿತ್ರಕಲೆ ಪ್ರದರ್ಶನ: ಉದ್ಘಾಟನೆ: ಚಂದ್ರನಾಥ ಆಚಾರ್ಯ, ಅತಿಥಿಗಳು: ಅಚ್ಯುತ ಗೌಡ, ಸಿ.ಎಸ್. ಕೃಷ್ಣ ಸೆಟ್ಟಿ, ಆಯೋಜನೆ: ದಾವಣಗೆರೆ ಕಲಾಶಾಲೆಯ ಹಳೆಯ ವಿದ್ಯಾರ್ಥಿಗಳ ಸಂಘ(ದಾಕಹವಿಸ), ಸ್ಥಳ: ಚಿತ್ರಕಲಾ ಪರಿಷತ್, ಕುಮಾರಕೃಪಾ ರಸ್ತೆ ಸಂಜೆ 5.30

ಚೈತನ್ಯ ಸಂಜೆ–818: ಅಧ್ಯಕ್ಷತೆ: ದಿಬ್ಬೂರು ಎಸ್. ಗಿರೀಶ್, ಉಪನ್ಯಾಸ: ರೇಣುಕಾ ಶಂಕರ್, ಉಪಸ್ಥಿತಿ: ಕೆ.ವಿ. ನಾಗರಾಜಮೂರ್ತಿ, ಕೊಟ್ರಯ್ಯ ಎ.ಎಂ. ಆರ್., ಆಯೋಜನೆ: ಜಿಲ್ಲಾ ಶರಣ ಸಾಹಿತ್ಯ ಪರಿಷತ್ತು, ಸ್ಥಳ: ಜೆಎಸ್‌ಎಸ್ ಕಾಲೇಜು ಸಭಾಂಗಣ, ವಿಜಯನಗರ, ಸಂಜೆ 5.30

ಬಿಬಿಎಂಪಿ ವಾರ್ಡ್ ವಿಂಗಡಣೆ: ಅಂತಿಮ ಅಧಿಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿಯ 243 ವಾರ್ಡ್‌ಗಳಲ್ಲಿ 23 ವಾರ್ಡ್‌ಗಳ ಹೆಸರು ಬದಲಿಸಿ, ಸುಮಾರು 40 ವಾರ್ಡ್‌ಗಳ ಗಡಿಯಲ್ಲಿ ಕೆಲವು ಬದಲಾವಣೆ ಮಾಡಿ ಸರ್ಕಾರ ಗುರುವಾರ ರಾತ್ರಿ ಅಂತಿಮ ಅಧಿಸೂಚನೆ ಹೊರಡಿಸಿದೆ.

ಮಹಾಲಕ್ಷ್ಮಿಪುರ ಬಡಾವಣೆ ವಿಧಾನಸಭೆ ಕ್ಷೇತ್ರದ 55ನೇ ವಾರ್ಡ್‌ನ ಕಾವೇರಿನಗರದ ಹೆಸರು ಬದಲಿಸಿ, ಬಹುಜನರ ಬೇಡಿಕೆಯಾಗಿದ್ದ ಪುನೀತ್ ರಾಜ್‌ಕುಮಾರ್ ಅವರ ಹೆಸರನ್ನು ಇರಿಸಲಾಗಿದೆ. ಕರಡಿನಲ್ಲಿದ್ದ ಕೆಲವು ವಾರ್ಡ್‌ಗಳ ಹೆಸರನ್ನು ಅದಲು-ಬದಲು ಮಾಡಲಾಗಿದೆ. ಅಂತಿಮ ಅಧಿಸೂಚನೆಯಲ್ಲಿ 180 ಮತ್ತು 230 ವಾರ್ಡ್‌ಗಳೆರಡಕ್ಕೂ ಅಗರ ಎಂದೇ ಹೆಸರಿಸಲಾಗಿದೆ.

198 ವಾರ್ಡ್‌ಗಳಿಂದ 243 ವಾರ್ಡ್‌ಗಳಿಗೆ ಪುನರ್‌ವಿಂಗಡಣೆ ಮಾಡಿ ಸರ್ಕಾರ ಜೂನ್ 23ರಂದು ಕರಡು ಪಟ್ಟಿಯ ಅಧಿಸೂಚನೆ ಹೊರಡಿಸಿತ್ತು. ಇದಕ್ಕೆ ಜುಲೈ 7ರವರೆಗೆ ಆಕ್ಷೇಪಣೆಗಳನ್ನು ಸಲ್ಲಿಸಬಹುದಾಗಿತ್ತು. ಈ ಆಕ್ಷೇಪಣೆಗಳನ್ನು ಸ್ವೀಕರಿಸಿದ ಮೇಲೆ, ನಗರಾಭಿವೃದ್ಧಿ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಅಧ್ಯಕ್ಷತೆಯಲ್ಲಿ ಜುಲೈ 11 ಮತ್ತು 12ರಂದು ಪರಿಶೀಲನಾ ಸಮಿತಿ ಸಭೆಗಳನ್ನು ನಡೆಸಲಾಗಿತ್ತು. ಈ ಸಭೆಗಳ ಶಿಫಾರಸಿನ ಮೇರೆಗೆ ಕೆಲವೊಂದು ಬದಲಾವಣೆ ಮಾಡಲಾಗಿದೆ ಎಂದು ಅಧಿಸೂಚನೆಯಲ್ಲಿ ತಿಳಿಸಲಾಗಿದೆ.

ವಾರ್ಡ್ ಸಂಖ್ಯೆ	ಕರಡು	ಅಂತಿಮ
28	ಹಂದ್ರಹಳ್ಳಿ	ದೊಡ್ಡಬಿಡ್ಡಬಿದರಕಲ್ಲು
33	ಕೆಂಗೇರಿ ಉಪನಗರ	ಕೆಂಗೇರಿ
35	ತಲಘಟ್ಟಪುರ	ಹೆಮ್ಮಿಗೆಪುರ
36	ಕನ್ನೇಶ್ವರರಾಮ	ಛತ್ರಪತಿ ಶಿವಾಜಿ
37	ವೀರಮದಕರಿ	ಚಾಣಕ್ಯ
39	ಚಾಣಕ್ಯ	ಕನ್ನೇಶ್ವರರಾಮ
40	ಛತ್ರಪತಿ ಶಿವಾಜಿ	ವೀರಮದಕರಿ
55	ಕಾವೇರಿನಗರ	ಪುನೀತ್ ರಾಜ್‌ಕುಮಾರ್ ವಾರ್ಡ್
69	ಚೋಳನಗರ	ಮನೋರಾಯನಪಾಳ್ಯ
77	ಮೋದಿ ಗಾರ್ಡನ್	ದೇವರಜೀವನಹಳ್ಳಿ
84	ಕೌದೇನಹಳ್ಳಿ	ರಾಮಮೂರ್ತಿನಗರ
85	ವಿಜ್ಞಾನಪುರ	ವಿಜಿನಪುರ
87	ತಂಬುಚೆಟ್ಟಿಪಾಳ್ಯ	ಮೇಡಹಳ್ಳಿ
95	ಗೋವಿಂದಪುರ	ನಾಗಾವರ
153	ಕಲ್ಯಾಣನಗರ	ನಾಗರಬಾವಿ
154	ನಾಗರಬಾವಿ	ಚಂದ್ರಾಲೇಔಟ್
180	ವನ್ನಾರ್‌ಪೇಟೆ	ಅಗರ
183	ಆಸ್ಟಿನ್‌ಟೌನ್	ನೀಲಸಂದ್ರ
184	ನೀಲಸಂದ್ರ	ವನ್ನಾರ್‌ಪೇಟೆ
220	ಕನಕನಗರ	ಯಲಚೇನಹಳ್ಳಿ
221	ಯಲಚೇನಹಳ್ಳಿ	ಕೋಣನಕುಂಟೆ
232	ಎಚ್‌ಎಸ್‌ಆರ್ ಲೇಔಟ್	ಎಚ್‌ಎಸ್‌ಆರ್–ಸಿಂಗಸಂದ್ರ
241	ಸಾರಕ್ಕಿಕೆರೆ	ಪುಟ್ಟೇನಹಳ್ಳಿ–ಸಾರಕ್ಕಿ ಕೆರೆ

3,833 ಆಕ್ಷೇಪಣೆ: ಬಿಬಿಎಂಪಿ ವಾರ್ಡ್ ಮರುವಿಂಗಡಣೆಗೆ ನಾಗರಿಕರು, ಸಂಘ–ಸಂಸ್ಥೆಗಳಿಂದ 3,833 ಆಕ್ಷೇಪಣೆಗಳು ಬಂದಿವೆ. ಇದರಲ್ಲಿ 1,700 ಅರ್ಜಿಗಳು ವಾರ್ಡ್ ಹೆಸರು ಬದಲಾವಣೆಗೆ ಆಗ್ರಹಿಸಿದ್ದವು. ಆಕ್ಷೇಪಣೆಗಳನ್ನು ಒಟ್ಟುಗೂಡಿಸಿ, ಬಿಬಿಎಂಪಿ ಕಂದಾಯ ವಿಭಾಗದ ವಿಶೇಷ ಆಯುಕ್ತ ಡಾ. ಆರ್.ಎಲ್. ದೀಪಕ್ ನೇತೃತ್ವದ ಸಮಾಲೋಚನಾ ಸಮಿತಿ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಲಾಗಿತ್ತು ಎಂದು ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ತಿಳಿಸಿದರು.

ಮುಖ್ಯಾಂಶಗಳು
- 55ನೇ ವಾರ್ಡ್‌ಗೆ ಪುನೀತ್ ರಾಜ್‌ಕುಮಾರ್ ಹೆಸರು
- 180 ಮತ್ತು 230 ವಾರ್ಡ್‌ಗೆ ಅಗರ ಹೆಸರು

ಹೆಸರು ಬದಲಾವಣೆಯ ನಂತರ ಗಡಿ ಗುರುತಿಸುವಿಕೆ ಬಗ್ಗೆ ಆಕ್ಷೇಪಗಳು ಹೆಚ್ಚಾಗಿವೆ. ಕೆಲವರು ವೈಜ್ಞಾನಿಕವಾಗಿಲ್ಲ ಎಂದಿದ್ದಾರೆ. ಇನ್ನು ಕೆಲವರು ಮಧ್ಯೆ ಮುಖ್ಯ ರಸ್ತೆ ಇದ್ದು, ಅದನ್ನು ಇಲ್ಲಿಗೆ ಸೇರಿಸಬಹುದು ಎಂದೆಲ್ಲ ಸಲಹೆ ನೀಡಿದ್ದಾರೆ. ಕೆಲವು ವಾರ್ಡ್‌ಗಳು ಎರಡು–ಮೂರು ವಾರ್ಡ್‌ಗಳಾಗಿ ವಿಭಜನೆಗೊಂಡಿರುವುದರಿಂದ ಯಾವುದಕ್ಕೆ ಮೂಲ ಹೆಸರನ್ನು ಇಡಬೇಕು ಎಂಬ ಸಲಹೆಗಳೂ ಬಂದಿವೆ ಎಂದು ಮಾಹಿತಿ ನೀಡಿದರು.

'ಯಶವಂತಪುರ ವಿಧಾನಸಭೆ ಕ್ಷೇತ್ರದಿಂದ ಅತಿಹೆಚ್ಚು ಆಕ್ಷೇಪಣೆಗಳು (1967) ಬಂದಿವೆ. ನಮ್ಮ ಭಾಗದಲ್ಲಿದ್ದ ಎಲ್ಲ ಕರ್ತವ್ಯಗಳನ್ನು ನಾವು ಪೂರೈಸಿ ಸರ್ಕಾರಕ್ಕೆ ಸಲ್ಲಿಸಿದ್ದೇವೆ' ಎಂದು ತುಷಾರ್ ಗಿರಿನಾಥ್ ತಿಳಿಸಿದರು.

ಶುಕ್ರವಾರ ಮೀಸಲಾತಿ ವರದಿ: ನ್ಯಾಯಮೂರ್ತಿ ಭಕ್ತವತ್ಸಲಂ ನೇತೃತ್ವದ ಸಮಿತಿ ವಾರ್ಡ್‌ಗಳ ಮೀಸಲಾತಿ ವರದಿಯನ್ನು ಶುಕ್ರವಾರ ಸರ್ಕಾರಕ್ಕೆ ಸಲ್ಲಿಸುತ್ತದೆ ಎಂದು ಮೂಲಗಳು ತಿಳಿಸಿವೆ. ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಹಿಂದುಳಿದ ವರ್ಗಗಳಿಗೆ ನೀಡುವ ಮೀಸಲಾತಿಯ ಪ್ರಮಾಣವನ್ನು ಶೇಕಡ 50ಕ್ಕೆ ಸೀಮಿತಗೊಳಿಸಿ ಕಳೆದ ತಿಂಗಳು ಸುಗ್ರೀವಾಜ್ಞೆ ಹೊರಡಿಸಿತ್ತು.

ASTRO YATRA

ವಿಶ್ವವಿಖ್ಯಾತ ಕೇರಳ ಜೋತಿಷ್ಯರು
ಶ್ರೀ ಗುರೂಜಿ ಜಿ.ಕೆ.ಡಿ. ದಿವ್ಯದಾಸನ್
ಕಳೆದ 35 ವರ್ಷಗಳಿಂದ ಬೆಂಗಳೂರಿನಲ್ಲಿ ನಿರಂತರವಾಗಿ ನೆಲೆಸಿದ್ದಾರೆ. ಇವರನ್ನು ಇಂದೇ ಭೇಟಿಮಾಡಿ ನಿಮ್ಮ ಉದ್ಯೋಗ, ವ್ಯಾಪಾರ, ಅದೃಷ್ಟ, ಕುಟುಂಬ ಸಮಸ್ಯೆ, ಮದುವೆಯೋಗ, ಪ್ರೇಮ–ಪ್ರೀತಿ, ಆರೋಗ್ಯ, ವಿದೇಶ ಪ್ರಯಾಣ, ಶತ್ರು ದೋಷ, ಲಕ್ಷ್ಮಿಯೋಗ ಮತ್ತು ಮಕ್ಕಳ ವಿದ್ಯಾಭ್ಯಾಸ ಮತ್ತು ನಿಮ್ಮ ಜೀವನವು ಉತ್ತಮವಾಗಿ ಮೂಡಿಬರಲು ಕೇರಳ ಜ್ಯೋತಿಷ್ಯ ಶಕ್ತಿಯ ಮೂಲಕವಾಗಿಯೂ, ಗುರೂಜಿಯ ದಿವ್ಯಶಕ್ತಿಯಿಂದಲೂ, ಶಕ್ತಿಯುತವಾದ ಪರಿಹಾರ ನೀಡುವರು.
ಸೂಚನೆ : ಇಲ್ಲಿ ಹೇಳುವ ವಿಚಾರಗಳನ್ನು ರಹಸ್ಯವಾಗಿ ಇಡಲಾಗುತ್ತದೆ.
ಸಂದರ್ಶನದ ಸ್ಥಳ: ಶ್ರೀ ಗುರೂಜಿ ಜಿ.ಕೆ.ಡಿ. ದಿವ್ಯದಾಸನ್ (ಕೇರಳ)
ಮನೆ: ಗುರುಕೃಪಾ ನಿಲಯ, ನಂ. 24, 1ನೇ ಕ್ರಾಸ್, ಕೆ.ಇ.ಬಿ ಕಛೇರಿ ರಸ್ತೆ, ಸಿಟಿ ಸೂಪರ್ ಮಾರ್ಕೆಟ್ ಎದುರು, ಕುಳ್ಳಪ್ಪ ವೃತ್ತ, ಕಮ್ಮನಹಳ್ಳಿ, ಬೆಂಗಳೂರು - 560 084. ದೂ: 080-2542 0833.
ಮೊಬೈಲ್: 98441 65272 / 99727 41083
ಸಮಯ: ಬೆಳಿಗ್ಗೆ 10 ರಿಂದ ಮಧ್ಯಾಹ್ನ 1 ಮತ್ತು 3 ರಿಂದ ರಾತ್ರಿ 8ರವರೆಗೆ

ADMISSION CORNER

2nd PU Failed?
Don't be left behind!
A golden opportunity to study degree under Bangalore University this academic year and save one precious year of your life.
BBA B.Com BCA BA
Limited seats. For admissions call:
2ನೇ ಪಿಯುಸಿ ಅನುತ್ತೀರ್ಣವಾದ ವಿದ್ಯಾರ್ಥಿಗಳಿಗೆ ಒಂದು ಸುವರ್ಣ ಅವಕಾಶ. ಸಂಪರ್ಕಿಸಿ:
7846000222

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

REAL ESTATE BUYING

Sites

Vishweshwariah Layout

WANTED SITES 20x30,30x40,40x60,50x80 Vishveshwaraiah layout, Kempegowda Layout, RHCS-Layout, NGEF-Layout, ITI-Layout, Arkavathi Layout-8861063532

REAL ESTATE SELLING

Flat

Malleshwaram

MALLESHWARAM SALE/RENT, 2 or 3BHK Flat with car parking contact : 9980426430 brokers no commission

Sites

Airport Road

BDA BIAAPA Approved Corner Sites For Sale 14 Kms Before Airport Near Stone Hill School Direct Owner 8904050690

Chandapura

SITE SALE- near Chandapura, Hosur Road, 30X50 North face, KHB Suryacity- 2nd phase. Owner: 9845911411.

J P Nagar

SALE JP-NAGAR 2nd Phase 1270 Sft West Facing BDA Site Please Contact Ramesh on 9844104958

RENTAL PROPERTIES

Accommodation Available

Commercial

FOR RENT 2390 Sqft 3CarPark Raheja Plaza GF, Suitable Office/ Showrm Commissonarate Road: 9845221555/ 9341213693

JOB OPPORTUNITIES

Multiple Vacancy

JOB OPENINGS in Retail Showroom- Helpers: 11000/- to 13000/- Sales Executive: 14000/- to 18000/- Cashier: 14000/- to 18000/- Floor Incharge: 13000/- to 17000/- AC Electrical Maintenances: 13000/- to 18000/- Employees (Male & Females) (Age 18y to 40y). Good Salary. Sudarshan Family Store, Chickpet, Bangalore-53. Contact: 08041300357/ 9740166737/ 8904311018.

Teachers/ Professors

WANTED Teacher's for English,Kannada,Hindi and PET Teachers with minimum 2yrs experiences for V V R SCHOOL on Sarjapur road. send resume to vvrschool2003@gmail.com/ 9480181149

COMPUTER TEACHERS with knowledgein JAVA required for ICSE schools at Nagarbhavi, Vijayanagar and Malleswaram.Walk-in interview TODAY. ARENA ANIMATION, No.8,CMH Road,very Close Metro-Station, Indiranagar B'lore-38. 6364917865/ info@ilmedu.org

Accounts & Finance

WANTED ACCOUNTANT male with minimum 2 yrs exp / fresher for V V R SCHOOL on Sarjapur road. salary is 14000/- & fuel surcharge,P.F etc send resume to vvrschool2003@gmail.com/ 9480181149

Graphic Designers

WANTED MALE/ Female Graphic Designer (Corel Draw Photoshop Illustrator) for a Pvt Limited Company in around Rajajinagar Contact: 9108458798/ 23384085

BUSINESS

Business to Business

Finance

WE ARRANGE Mortgage, Purchase, Construction & Completion of Construction, Takeover, Loans from Banks. Contact: 9353705002

Business Offers

Finance

NRI'S INVESTMENT And Finance Available On Low Interest Against Properties, Land& Building,Sites,Flats, Converted& Agriculture Lands Call: 7411265189

FINANCE AGAINST Land & Building Properties Industries Schools Hospitals Projects & NRI Funds.7358729820

WANTED BUSINESS Partner Non Veg Hotel 10 Lakhs Investment Monthly Income 1 Lakhs: 8892501007/ 9606701007

EDUCATIONAL

Admission

DIRECT FINAL YEAR: LLB (Can Practice), B.Tech/ M.Tech/MBA/MCA/BCA/ BBA/BSc/BCom/D.Pharm (BAMS,BYNS,GNM) PU/SSLC. All Courses Recognised by UGC/NAAC Govt. Asha Academy, Bangalore. Ph: 9448460103/ 7093438248

PERSONAL

Change of Name

BASANTI DEY W/o JC672599M- Sub/Musin-SWARUPA NANDA DE, R/a Tanadighi, Gelia, Jaypur, Bankura, WB changed name from BASANTI DEY to BASANTI DE notary K.V.Mani, Bangalore.

I, VIJAYA Krishnappa Mayannagowda alias M Vijayakrishnappa alias Vijayalakshmi D/o Mayannagowda, W/o Krishnappa B R/a#43, 1st Floor, 3rd Cross, Near Priyadarshini School, Central Excise Layout Vijayanagar Bengaluru- 560040 Have Changed My Name to Vijayalakshmi M W/o Krishnappa B Vide Affidavit Dated 13-07-2022 Before Notary B.A Lakshminarayana Rao Bengaluru. old Names are Abandoned and Waived

I, RAJENDRA Alias RATNAKAR DEVENDRAPPA KITTUR, R/a No. 506, 'Kuber Nivas', Elephant Rock Road, Jayanagar 3rd block, Bangalore- 560011, have changed my name to RAJENDRA DEVENDRAPPA KITTUR, vide affidavit dated 27.06.2022 before Notary Neha Baddi, Bangalore. Henceforth I shall be known as RAJENDRA DEVENDRAPPA KITTUR only

I, CHANDRASHEKHARA K alias Chandrashekara K alias S/o-Kumar R/a-New Extn. Oochanahalli, Krishnarajapete Mandya Karnataka- 571426 Have Changed My Name to Chandan Gowda.K S/o-Kumar Vide Affidavit Dated:14-06-2022 & 14-07-2022, Before Notary B.A Lakshminarayana Rao Bengaluru.old Names are Abandoned and Waived

I, RAGHAVENDRA SHETTY, residing at No. Flat B-1108, 11th floor B block, RNS Shanthi Nivas Apt, Tumkur Road, Yeshwanthpura, Bangalore- 560022, have changed my name to RAGHAVENDRA PRABHAKAR SHETTY, vide affidavit dated 14.07.2022 before Notary Ratna N., Bangalore. Henceforth I shall be called RAGHAVENDRA PRABHAKAR SHETTY only.

I, SYED MAZHAR HUSSAIN, residing at Alipur Village, Gowribidanur Taluk, Chikkaballapur District, Karnataka State, have changed my minor daughter's name from SYEDA ARFA FATHIMA to ARFA FATHIMA vide affidavit dated 12.07.2022 before Notary HM Adinarayana Gowda, Gowribidanur.

I, SURABHI, residing at No. Flat B-1108, 11th floor B block, RNS Shanthi Nivas Apt, Tumkur Road, Yeshwanthpura, Bangalore- 560022, have changed my name to SURABHI R SHETTY, vide affidavit dated 14.07.2022 before Notary Ratna N., Bangalore. Henceforth I shall be called SURABHI R SHETTY only.

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

I, JAGADEESHA, Residing at No.552/89/5, 3rd Cross, Behind BBMP Office, Bellandur, Bengaluru-560103 have changed ny minor daughter's name from ANUSHKA JAGADISH to ANUSHKA JAGADEESHA and changed my name from JAGADISH to JAGADEESHA vide affidavit dated 12-07-22 before Notary K.V.Mani, Bangalore

I, PRAVEENA D.S, residing at No. 530 1st floor, 2nd A cross, 6th main 3rd block 3rd stage, Basaveshwaranagar, Bangalore- 560079, have changed my name to PRAVEEN RAO, vide affidavit dated 10.05.2022 before Notary B. Prasanna, Bangalore. Henceforth I shall be called PRAVEEN RAO only.

I, SHEENA Thomas, daughter of Mr.Thomas Thomas Residing at Shobha Hill View, Sunbeam 2098, Nagegowdanapalya, Bangalore South, Bengaluru 560062 do hereby change my name from Mrs. Sheena Thomas Roy to Ms. Sheena Thomas vide affidavit dated 11.07.2022. Sworn before notary Gangaraju B.N

BHARTI DE M/o JC672599M-Sub/Musin-SWARUPA NANDA DE, R/a Tanadighi, Gelia, Jaypur, Bankura, WB changed name from BHARTI DE to BHARATI DE notary K.V.Mani, Bangalore.

I, GEETHA RAI residing at No.686/2, 16th D Main, HAL 2nd Stage, Indira Nagar, Bangalore-560008 have changed my name to GEETHA PANDEY vide affidiavit 13/07/2022 sworn before notary R.Ravichandra Reddy, Bangalore.

14842271W SEP PATIL RAJENDRA BUDHA 2ATC Daughter name Records SANSKRITI RAJENDRA PATIL instead of SANSKRUTI RAJENDRA PATIL Notary KV Mani

14842148X SEP/MT TARAKESHWAR SHANDILYA 2ATC Son name Records SAMARTH TRIPATHY instead of SAMARTH TRIPATHI Notary KV Mani

SANKAR CHANDRA DE F/o JC672599M-Sub/Musin-SWARUPA NANDA DE, R/a Tanadighi, Gelia, Jaypur, Bankura, WB changed name from SANKAR CHANDRA DE to SHANKAR DE notary K.V.Mani, Bangalore.

Lost

LOST OF DOCUMENT
I, PRADEEP.J, R/o. No. 31, 1st Cross, Balappa Layout, Adugodi, Bangalore - 560 030. Have lost Sale Deed document No. 1532/84-85 located in the above address while shifting our residence.
Finders please contact: 88921 42482.

DH DECCAN HERALD ಪ್ರಜಾವಾಣಿ
Classifieds EDUCATION SPECIAL
For More Details Contact:
Jerry Louis : 9731810277
Vishal GM : 9845114560
080- 45557161 | 163 |164
Email : dhclassifieds@deccanherald.co.in
SPECIAL RATES FOR
Admission Notice,
Education Success
Congratulation Ads

ಭಾಷಾ ಮಸೂದೆ ಕರಡು: ಸಚಿವ ಜೆ.ಸಿ. ಮಾಧುಸ್ವಾಮಿ ಭರವಸೆ

'ಅಧಿವೇಶನದಲ್ಲಿ ಮಂಡನೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕನ್ನಡ, ಕನ್ನಡಿಗ ಮತ್ತು ಕರ್ನಾಟಕದ ಹಿತದೃಷ್ಟಿಯಿಂದ ತಯಾರಿಸಿರುವ 'ಕನ್ನಡ ಭಾಷಾ ಸಮಗ್ರ ಅಭಿವೃದ್ಧಿ ಮಸೂದೆ'ಯ ಕರಡನ್ನು ಮುಂಬರುವ ಅಧಿವೇಶನದಲ್ಲಿ ಮಂಡಿಸಲು ಅಗತ್ಯ ಕ್ರಮ ಕೈಗೊಳ್ಳಲಾಗುವುದು' ಎಂದು ಕಾನೂನು ಸಚಿವ ಜೆ. ಸಿ.ಮಾಧುಸ್ವಾಮಿ ತಿಳಿಸಿದರು.

ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಸಹಭಾಗಿತ್ವದಲ್ಲಿ ಕರ್ನಾಟಕ ಕಾನೂನು ಆಯೋಗ ರಚಿಸಿರುವ ಕನ್ನಡ ಭಾಷಾ ಸಮಗ್ರ ಅಭಿವೃದ್ಧಿ ಮಸೂದೆಯನ್ನು ಪ್ರಾಧಿಕಾರದ ಅಧ್ಯಕ್ಷ ಟಿ.ಎಸ್. ನಾಗಾಭರಣ ಹಾಗೂ ಆಯೋಗದ ನ್ಯಾ.ಎಸ್.ಆರ್. ಬನ್ನೂರಮಠ ಅವರಿಂದ ಗುರುವಾರ ಸ್ವೀಕರಿಸಿದರು. 'ನಮ್ಮ ಸರ್ಕಾರ ಸದಾ ನಾಡು-ನುಡಿಯ ಪರವಾಗಿರುತ್ತದೆ. ಕನ್ನಡಿಗರ ಹಿತ ಕಾಪಾಡಲು ಅಗತ್ಯ ಕ್ರಮ ಕೈಗೊಳ್ಳಲಾಗುವುದು. ಈ ಮಸೂದೆಯು ಆಡಳಿತ ಭಾಷೆಯ ಅನುಷ್ಠಾನಕ್ಕೆ ನೆರವಾಗುವುದರಿಂದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಗಮನಕ್ಕೆ ತಂದು, ಕ್ಯಾಬಿನೆಟ್‌ನಲ್ಲಿ ಅನುಮೋದನೆ ಪಡೆದು, ಅಧಿವೇಶನದಲ್ಲಿ ಮಂಡಿಸಲಾಗುವುದು' ಎಂದು ಭರವಸೆ ನೀಡಿದರು.

ಟಿ.ಎಸ್. ನಾಗಾಭರಣ ಹಾಗೂ ನ್ಯಾ.ಎಸ್.ಆರ್. ಬನ್ನೂರಮಠ ಅವರು 'ಕನ್ನಡ ಭಾಷಾ ಸಮಗ್ರ ಅಭಿವೃದ್ಧಿ ಮಸೂದೆ'ಯನ್ನು ಜೆ.ಸಿ. ಮಾಧುಸ್ವಾಮಿ ಅವರಿಗೆ ಹಸ್ತಾಂತರಿಸಿದರು. ಕರ್ನಾಟಕ ಕಾನೂನು ಆಯೋಗದ ಸದಸ್ಯರಾದ ನ್ಯಾ.ಅಶೋಕ ಜಿ. ನಿಜಗಣ್ಣವರ್, ಸದಸ್ಯ ಕಾರ್ಯದರ್ಶಿ ಆರ್.ಬಿ.ಧರ್ಮಗೌಡ ಹಾಗೂ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿ ಸಂತೋಷ ಹಾನಗಲ್ಲ ಇದ್ದಾರೆ

ಟಿ.ಎಸ್.ನಾಗಾಭರಣ, 'ಕನ್ನಡ, ಕನ್ನಡಿಗ, ಕರ್ನಾಟಕ ಎಂಬ ತ್ರಿವಳಿ ಮಂತ್ರದಡಿ ಕಾರ್ಯನಿರ್ವಹಿಸುತ್ತಿರುವ ಪ್ರಾಧಿಕಾರ, ಕನ್ನಡಿಗರ ಅಭ್ಯುದಯಕ್ಕಾಗಿ ಈ ಮಸೂದೆಯನ್ನು ತಯಾರಿಸಿದೆ. ರಾಜ್ಯದ ಎಲ್ಲೆಡೆ ಕನ್ನಡ ರಾರಾಜಿಸಬೇಕು. ಎಲ್ಲ ವಲಯಗಳಲ್ಲೂ ಕನ್ನಡಿಗರಿಗೆ ಪ್ರಥಮ ಆದ್ಯತೆ ದೊರೆಯಬೇಕು. ಈ ಆಶಯಗಳನ್ನು ಮಸೂದೆ ಸಾಕಾರಗೊಳಿಸಲಿದೆ' ಎಂದು ಹೇಳಿದರು.

ನ್ಯಾ.ಎಸ್.ಆರ್. ಬನ್ನೂರಮಠ, 'ಕರ್ನಾಟಕ ರಾಜಭಾಷೆ ಕಾಯ್ದೆ 1963, ಕರ್ನಾಟಕ ಸ್ಥಳೀಯ ಪ್ರಾಧಿಕಾರಗಳ (ಅಧಿಕೃತ ಭಾಷಾ) ಕಾಯ್ದೆ 1981, ಕನ್ನಡ ಭಾಷಾ ಕಲಿಕೆ ಕಾಯ್ದೆ 2015 ಹಾಗೂ ಕನ್ನಡ ಅನುಷ್ಠಾನಕ್ಕಾಗಿ ಶಾಸನಬದ್ಧ ನಿಕಾಯವಾಗಿ ಕನ್ನಡ ಅಭಿವೃದ್ಧಿ ಪ್ರಾಧಿಕಾರ ಇದ್ದಾಗಿಯೂ ಉದ್ದೇಶಿತ ಆಶಯದನ್ವಯ ಕನ್ನಡ ಅನುಷ್ಠಾನಗೊಂಡಿಲ್ಲ. ಆದ್ದರಿಂದ ಕನ್ನಡ ಭಾಷಾ ಸಮಗ್ರ ಅಭಿವೃದ್ಧಿ ಮಸೂದೆಯನ್ನು ತಯಾರಿಸಲಾಗಿದೆ' ಎಂದು ತಿಳಿಸಿದರು.

ಪಿಇಎಸ್ ವಿಶ್ವವಿದ್ಯಾಲಯ ನಡೆಸಿದ 'ಪಿಸ್ಯಾಟ್2022' ಪರೀಕ್ಷೆಯ ಟಾಪರ್‌ಗಳನ್ನು ವಿಶ್ವವಿದ್ಯಾಲಯದ ಕುಲಾಧಿಪತಿ ಎಂ.ಆರ್. ದೊರೆಸ್ವಾಮಿ ಅಭಿನಂದಿಸಿದರು. ವಿಶ್ವವಿದ್ಯಾಲಯದ ಕುಲಪತಿ ಜೆ.ಸೂರ್ಯಪ್ರಸಾದ್ ಹಾಗೂ ಕುಲಸಚಿವ ಡಾ.ಕೆ.ಎಸ್.ಶ್ರೀಧರ್ ಅವರ ಜತೆಗೆ ವಿದ್ಯಾರ್ಥಿಗಳಾದ (ನಿಂತವರು ಎಡದಿಂದ) ಆತ್ಮಕುರಿ ವೆಂಕಟ ಮಾಧವ ಶ್ರೀರಾಮ್, ನಿತಿನ್ ವೆಚಾ, ಸಿ.ಎಸ್. ಸಿದ್ಧಾರ್ಥ್, ಜತಿನ್ ವಿನೋದ್ ಕುಮಾರ್ ಇದ್ದಾರೆ

'ಸಿದ್ದರಾಮಯ್ಯ ಹಗರಣಗಳ ತನಿಖೆಗೆ ಸಿ.ಎಂ.ಗೆ ಪತ್ರ'

ರಾಮನಗರ: 'ಪೊಲೀಸ್ ನೇಮಕಾತಿ ಹಗರಣದ ಜೊತೆಗೆ ಸಿದ್ದರಾಮಯ್ಯ ಅವರು ಮುಖ್ಯಮಂತ್ರಿಯಾಗಿದ್ದಾಗ ನಡೆದ ಎಲ್ಲ ಹಗರಣಗಳ ತನಿಖೆಗೆ ಆಗ್ರಹಿಸಿ ಮುಖ್ಯಮಂತ್ರಿಗೆ ಇಂದೇ ಪತ್ರ ಬರೆಯಲಿದ್ದೇನೆ' ಎಂದು ಉನ್ನತ ಶಿಕ್ಷಣ ಸಚಿವ ಅಶ್ವತ್ಥನಾರಾಯಣ ಗುರುವಾರ ತಿಳಿಸಿದರು.

ಪತ್ರಕರ್ತರ ಜೊತೆ ಮಾತನಾಡಿದ ಅವರು, 'ಸಿದ್ದರಾಮಯ್ಯ ಭ್ರಷ್ಟಾಚಾರದ ಪಿತಾಮಹ. ಪಿಎಸ್ಐ ನೇಮಕಾತಿ ಹಗರಣ ಆರಂಭ ಆಗಿದ್ದೇ ಅವರ ಕಾಲದಲ್ಲಿ. ಅವರ ಅವಧಿಯಲ್ಲಿ ಯಾವ ಯಾವ ತನಿಖೆ ಹೇಗೆ ನಡೆದಿವೆ ಎಂಬುದು ಗೊತ್ತಿದೆ' ಎಂದರು.

ಸಾಂಕ್ರಾಮಿಕ ರೋಗ ನಿಯಂತ್ರಣಕ್ಕೆ ಸೂಚನೆ

ಬೆಂಗಳೂರು: 'ರಾಜ್ಯದ ವಿವಿಧೆಡೆ ಭಾರಿ ಮಳೆಯಾಗುತ್ತಿರುವುದರಿಂದ ಸಾಂಕ್ರಾಮಿಕ ರೋಗಗಳ ನಿಯಂತ್ರಣಕ್ಕೆ ಕಟ್ಟುನಿಟ್ಟಿನ ಕ್ರಮ ಕೈಗೊಂಡು, ಸ್ಥಳೀಯ ಮಟ್ಟದಲ್ಲಿ ಪರಿಸ್ಥಿತಿ ಬಗ್ಗೆ ಅಧ್ಯಯನ ನಡೆಸಬೇಕು' ಎಂದು ಆರೋಗ್ಯ ಸಚಿವ ಡಾ.ಕೆ. ಸುಧಾಕರ್ ಸೂಚಿಸಿದ್ದಾರೆ.

ಇಲಾಖೆ ಅಧಿಕಾರಿಗಳ ಜತೆಗೆ ಗುರುವಾರ ಸಭೆ ನಡೆಸಿದ ಅವರು, 'ಧಾರಾಕಾರ ಮಳೆಯಿಂದಾಗಿ ರಾಜ್ಯದ ವಿವಿಧೆಡೆ ಪ್ರವಾಹ ಪರಿಸ್ಥಿತಿ ನಿರ್ಮಾಣವಾಗಿದೆ. ಇದರಿಂದಾಗಿ ಸೊಳ್ಳೆಗಳಿಂದ ಹರಡುವ ಸಾಂಕ್ರಾಮಿಕ ರೋಗಗಳು ಸಮುದಾಯದ ಮಟ್ಟದಲ್ಲಿ ವ್ಯಾಪಿಸಿಕೊಳ್ಳುವ ಆತಂಕವಿದೆ. ಮಲೇರಿಯಾ, ಡೆಂಗಿ, ಚಿಕೂನ್‌ಗುನ್ಯಾ ಸೇರಿ ವಿವಿಧ ರೋಗಗಳು ಈ ವೇಳೆ ತೀವ್ರತೆ ಪಡೆದುಕೊಳ್ಳಬಹುದು. ಆದ್ದರಿಂದ ಜಿಲ್ಲಾಮಟ್ಟದಲ್ಲಿ ಆರೋಗ್ಯ ಸುರಕ್ಷತಾ ಕ್ರಮಗಳನ್ನು ಕೈಗೊಳ್ಳಬೇಕು' ಎಂದು ತಿಳಿಸಿದರು.

'ಪ್ರವಾಹ ಪೀಡಿತ ಅಥವಾ ಭಾರಿ ಮಳೆಯಾಗುತ್ತಿರುವ ಜಿಲ್ಲೆಗಳಲ್ಲಿ ಆರೋಗ್ಯ ತುರ್ತು ಪರಿಸ್ಥಿತಿ ನಿಭಾಯಿಸಲು ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದಲ್ಲಿ ತುರ್ತು ಸ್ಪಂದನಾ ತಂಡ (ರ್‍ಯಾಪಿಡ್ ರೆಸ್ಪಾನ್ಸ್ ಟೀಮ್) ಯಾವಾಗಲೂ ಸಿದ್ಧವಾಗಿರಬೇಕು. ಪ್ರಾಥಮಿಕ ಆರೋಗ್ಯ ಕೇಂದ್ರಗಳ ವೈದ್ಯಾಧಿಕಾರಿಗಳು ಸ್ಥಳೀಯ ಮಟ್ಟದಲ್ಲಿ ರೋಗಿಗಳ ಸಂಖ್ಯೆ ಹೆಚ್ಚಳ ಕುರಿತು ಕೂಡಲೇ ಅಧ್ಯಯನ ನಡೆಸಬೇಕು. ರೋಗಿಗಳ ಆರೈಕೆಗೆ ಸೂಕ್ತ ವ್ಯವಸ್ಥೆ ಮಾಡಿಕೊಳ್ಳಬೇಕು' ಎಂದು ಹೇಳಿದರು.

'ಎಲ್ಲ ಸರ್ಕಾರಿ ಆರೋಗ್ಯ ಕೇಂದ್ರಗಳಲ್ಲಿ ಹೊಸ ರೋಗಿಗಳ ದಾಖಲಾತಿ, ಚಿಕಿತ್ಸೆ ಹಾಗೂ ತಪಾಸಣೆಗೆ ಅಗತ್ಯ ವ್ಯವಸ್ಥೆ ಮಾಡಿಕೊಳ್ಳಬೇಕು' ಎಂದು ಸೂಚಿಸಿದರು.

ಕರ್ನಾಟಕ–ಗೋವಾ ಹೆದ್ದಾರಿ ಬಂದ್

ಮಳೆ ಬಿರುಸು, ಬೆಳೆಹಾನಿ ಭೀತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಳಗಾವಿ, ಶಿವಮೊಗ್ಗ, ಚಿಕ್ಕಮಗಳೂರು ಜಿಲ್ಲೆಗಳಲ್ಲಿ ಗುರುವಾರ ಮಳೆ ಇನ್ನಷ್ಟು ಬಿರುಸುಗೊಂಡಿದ್ದು, ನದಿ ಪಾತ್ರದ ಗ್ರಾಮಗಳಲ್ಲಿನ ಸಂಕಷ್ಟ ಇನ್ನಷ್ಟು ಹೆಚ್ಚಾಗಿದೆ. ಕರಾವಳಿಯ ಉಡುಪಿ, ದಕ್ಷಿಣ ಕನ್ನಡದಲ್ಲಿ ಮಳೆ ಅಬ್ಬರವು ತಗ್ಗಿದೆ. ವಿವಿಧ ಜಿಲ್ಲೆಗಳಲ್ಲಿ ಸಾವಿರಾರು ಎಕರೆ ಜಮೀನು ಜಲಾವೃತವಾಗಿದ್ದು, ಬೆಳೆಹಾನಿಯ ಭೀತಿ ಕೃಷಿಕರನ್ನು ಕಾಡುತ್ತಿದೆ.

ಬೆಳಗಾವಿ ಜಿಲ್ಲೆ ಖಾನಾಪುರ ತಾಲ್ಲೂಕಿನ ಭೀಮಗಡ ಅರಣ್ಯ ಪ್ರದೇಶದಲ್ಲಿ ಧಾರಾಕಾರ ಮಳೆಯಾಗಿದ್ದು, ಪರಿಣಾಮ ಮಂತುರ್ಗಾ ಸೇತುವೆ ಮೇಲೆ ನೀರು ಹರಿದಿದೆ. ಕರ್ನಾಟಕ–ಗೋವಾ ರಾಜ್ಯ ಹೆದ್ದಾರಿಯಲ್ಲಿ ಸುಮಾರು ಆರು ತಾಸು ಸಂಚಾರ ಬಂದ್ ಆಗಿತ್ತು. ರಾತ್ರಿಯಿಡೀ ಧಾರಾಕಾರ ಮಳೆಯಾಗಿದ್ದು, ಅಲಾತ್ರಿ ಹಳ್ಳದ ನೀರು ಸಿಂಧನೂರು- ಹೆಮ್ಮಡಗಾ ಅಂತರರಾಜ್ಯ ಹೆದ್ದಾರಿ ಮೇಲೆ ಉಕ್ಕಿತು. ಸಂಜೆ ವೇಳೆಗೂ ಒಂದು ಅಡಿಯಷ್ಟು ನೀರು ಸೇತುವೆ ಮೇಲೆ ಹರಿಯುತ್ತಿದೆ. ಆದರೂ ಅಪಾಯವನ್ನೂ ಲೆಕ್ಕಿಸದೇ ಶಾಲೆ ವಿದ್ಯಾರ್ಥಿಗಳು ಸೇರಿ ಸಾರ್ವಜನಿಕರು ಸೇತುವೆ ಮೇಲೆ ನಡೆದುಹೋಗುತ್ತಿದ್ದುದು ಕಂಡುಬಂದಿತು.

ತುಂಗಭದ್ರಾ ಜಲಾಶಯದಿಂದ ನದಿಗೆ ಗುರುವಾರ 1.41 ಲಕ್ಷ ಕ್ಯುಸೆಕ್ ನೀರು ಹರಿಸಿರುವುದರಿಂದ ಹಂಪಿಯ ರಾಮ–ಲಕ್ಷ್ಮಣ ದೇವಸ್ಥಾನ, ಅದಕ್ಕೆ ಹೊಂದಿಕೊಂಡಿರುವ ಸಾಲು ಮಂಟಪಗಳು, ಕರ್ಮ ಮಂಟಪ ಗುರುವಾರ ಮುಳುಗಡೆಯಾದವು.

ಉತ್ತರ ಕನ್ನಡದ ಜಿಲ್ಲೆಯಲ್ಲಿ ಧಾರಾಕಾರ ಮಳೆ ಜೊತೆಗೆ ಜೋರು ಗಾಳಿಯೂ ಇದೆ. ಹಳಿಯಾಳ ತಾಲ್ಲೂಕಿನಲ್ಲಿ ಕಾಳಿ ನದಿಗೆ ನಿರ್ಮಿಸಲಾಗಿರುವ ಬೊಮ್ಮನಹಳ್ಳಿ ಪಿಕಪ್ ಜಲಾಶಯ ಭರ್ತಿಯಾಗುವ ಹಂತದಲ್ಲಿದೆ.

ಧಾರವಾಡ ಜಿಲ್ಲೆಯಲ್ಲಿ ಧಾರಾಕಾರ ಮಳೆಯ ಪರಿಣಾಮ ಕಲಘಟಗಿ ತಾಲ್ಲೂಕಿನಲ್ಲಿರುವ 181 ಚದರ ಕಿ.ಮೀ ವಿಸ್ತೀರ್ಣದ ನೀರಸಾಗರ ಕೆರೆ ಸತತ ನಾಲ್ಕನೇ ವರ್ಷವೂ ಕೋಡಿ ಹರಿದಿದೆ.

ಶಿವಮೊಗ್ಗ ಜಿಲ್ಲೆಯ ಸಾಗರ ತಾಲ್ಲೂಕಿನಲ್ಲಿ ಸುಮಾರು 10 ಗ್ರಾಮಗಳಲ್ಲಿ ವರದೆಯ ಉಪನದಿ ಕನ್ನೊಳೆಯಲ್ಲಿ ನೆರೆಬಂದ ಕಾರಣ ಸಾವಿರಾರು ಎಕರೆ ಭತ್ತದ ಗದ್ದೆ ಮುಳುಗಡೆಯಾಗಿದೆ. ಗದ್ದೆಗಳು ಇದ್ದವು ಎಂಬುದರ ಕುರುಹು ಇಲ್ಲದಂತೆ ಜಲಾವೃತವಾಗಿವೆ. ಕೊಡಗು ಜಿಲ್ಲೆಯಲ್ಲಿ ಭಾರಿ ಮಳೆಯೊಂದಿಗೆ ಬಿರುಗಾಳಿ ಇದ್ದು, ಜನತೆ ತತ್ತರಿಸಿದರು. ಎರಡನೇ ದಿನವು ವಿದ್ಯುತ್ ವ್ಯತ್ಯಯವಾಗಿದ್ದು, ಸೋಮವಾರಪೇಟೆ ತಾಲ್ಲೂಕಿನಲ್ಲಿ ಮನೆಯೊಂದು ಕುಸಿದಿದ್ದು, ಶಿರಂಗಾಲದಲ್ಲಿ ಮರಬಿದ್ದು ಒಬ್ಬರು ಗಾಯಗೊಂಡರು.

ಲಕ್ಷ್ಮಣತೀರ್ಥ ನದಿ ಉಕ್ಕಿ ಹರಿಯುತ್ತಿದ್ದು, ಶ್ರೀಮಂಗಲ– ನಾಲ್ಕೇರಿ ಸೇತುವೆ ಹಾಗೂ ಭಾಗಮಂಡಲ–ನಾಪೋಕ್ಲು ರಸ್ತೆಯಲ್ಲಿ ಮತ್ತೆ ನೀರು ಹರಿಯುತ್ತಿದೆ. ಚಿಕ್ಕಮಗಳೂರು ಜಿಲ್ಲೆಯಲ್ಲಿ ಮೂಡಿಗೆರೆ ತಾಲ್ಲೂಕಿನ ಬಣಕಲ್ ಸಮೀಪದ ಸಬ್ಲಿಯ ಸರ್ಕಾರಿ ಪ್ರಾಥಮಿಕ ಶಾಲೆ ಗೋಡೆ ಕುಸಿದಿದೆ. ಕಳಸ ತಾಲ್ಲೂಕಿನ ಹೊರನಾಡು ಸಮೀದ ಸರ್ಕಾರಿ ಪ್ರೌಢಶಾಲೆ ಸಂಪರ್ಕ ರಸ್ತೆಯ ಬದಿ ಮಣ್ಣು ಕುಸಿದಿದೆ.

22ರಿಂದ ಪಿಯು ಉಪನ್ಯಾಸಕರ ಧರಣಿ

ಬೆಂಗಳೂರು: ಸರ್ಕಾರಿ ಪದವಿ ಪೂರ್ವ ಕಾಲೇಜುಗಳ ಉಪನ್ಯಾಸಕರ ವರ್ಗಾವಣೆ ಪ್ರಕ್ರಿಯೆ ತಕ್ಷಣ ಆರಂಭಿಸದಿದ್ದರೆ ಇದೇ 22ರಂದು ಪದವಿಪೂರ್ವ ಶಿಕ್ಷಣ ಇಲಾಖೆ ಮುಂದೆ ಧರಣಿ ನಡೆಸಲಾಗುವುದು ಎಂದು ಕರ್ನಾಟಕ ರಾಜ್ಯ ಪದವಿಪೂರ್ವ ಕಾಲೇಜುಗಳ ಉಪನ್ಯಾಸಕರ ಸಂಘ ಎಚ್ಚರಿಸಿದೆ.

'ವರ್ಗಾವಣೆ ಪ್ರಕ್ರಿಯೆ ಆರಂಭಿಸುವ ಕುರಿತು ಪ್ರಧಾನ ಕಾರ್ಯದರ್ಶಿ ಸೆಲ್ ವಕುಮಾರ್ ಅವರು ಪದವಿಪೂರ್ವ ಶಿಕ್ಷಣ ಇಲಾಖೆ ನಿರ್ದೇಶಕರ ಜತೆ ಸಭೆ ನಡೆಸಿ, ನಿರ್ಧಾರ ಪ್ರಕಟಿಸುವ ಭರವಸೆ ನೀಡಿದ್ದಾರೆ. ಅಧಿಕಾರಿಗಳ ಮೂಲಕ ಸಚಿವ ಬಿ.ಸಿ. ನಾಗೇಶ್ ಅವರ ಗಮನಕ್ಕೂ ತರಲಾಗಿದೆ. ಭರವಸೆ ಈಡೇರುವ ನಿರೀಕ್ಷೆಯಲ್ಲಿ ಇದ್ದೇವೆ' ಎಂದು ಸಂಘದ ಅಧ್ಯಕ್ಷ ಎ.ಎಚ್. ನಿಂಗೇಗೌಡ, ಪ್ರಧಾನ ಕಾರ್ಯದರ್ಶಿ ಶಿವರಾವ್ ಬಿ. ಮಾಲಿಪಾಟೀಲ್ ಮಾಹಿತಿ ನೀಡಿದ್ದಾರೆ.

'ಒಂದು ವಾರದ ಒಳಗೆ ಮೌಲ್ಯಮಾಪನ ಭತ್ಯೆಗಳು ಉಪನ್ಯಾಸಕರ ಖಾತೆಗೆ ಜಮೆ ಮಾಡುವ ಆಶ್ವಾಸನೆ ನೀಡಿದ್ದಾರೆ' ಎಂದರು.

ಹಳೆಯ ಯೋಜನೆಗೆ ಹೊಸ ಹೆಸರು • ಸ್ಟೀಲ್ ಬದಲು ಸಿಮೆಂಟ್ • ₹96 ಕೋಟಿ ಹೆಚ್ಚಳ

ಜೆ.ಸಿ.ರಸ್ತೆ: 'ಎಲಿವೇಟೆಡ್ ಕಾರಿಡಾರ್'

• ಆರ್. ಮಂಜುನಾಥ್

ಬೆಂಗಳೂರು: ನಗರದಲ್ಲಿ ದಶಕದಿಂದ ಚಾಲ್ತಿಯಲ್ಲಿರುವ ಜೆ.ಸಿ. ರಸ್ತೆ ಮೂಲಕ ಸಾಗುವ ಮಿನರ್ವ ವೃತ್ತದಿಂದ ಹಡ್ಸನ್ ವೃತ್ತದವರೆಗಿನ ಮೇಲುಸೇತುವೆ ನಿರ್ಮಾಣ ವಿಷಯಕ್ಕೆ ಮತ್ತೆ ಜೀವಬಂದಿದೆ. 'ಎಲಿವೇಟೆಡ್ ಕಾರಿಡಾರ್' ಎಂಬ ಹೊಸ ಹೆಸರೂ ಸಿಕ್ಕಿದೆ.

ಮುಖ್ಯಮಂತ್ರಿಯವರ ಅಮೃತ ನಗರೋತ್ಥಾನ ಯೋಜನೆಯಲ್ಲಿ ಬಿಬಿಎಂಪಿಗೆ ₹6 ಸಾವಿರ ಕೋಟಿ ಲಭ್ಯವಾಗುತ್ತಿದೆ. ಇದರಲ್ಲಿ ಹತ್ತಾರು ಬೃಹತ್ ಯೋಜನೆಗಳೂ ಸೇರಿದಂತೆ ವಾರ್ಡ್‌ವಾರು ಕಾಮಗಾರಿಗಳೂ ಸೇರಿವೆ.

'ಸ್ಟೀಲ್ ಮೇಲುಸೇತುವೆಗೆ ವಿರೋಧ ವ್ಯಕ್ತವಾಗಿತ್ತು. ಹೀಗಾಗಿ ಸಿಮೆಂಟ್ ಮೇಲುಸೇತುವೆಯನ್ನೇ ನಿರ್ಮಿಸಲು ನಿರ್ಧರಿಸಿ, ವಿಸ್ತೃತ ಯೋಜನಾ ವರದಿ ತಯಾರಿಸಲಾಗಿದೆ. ಹಿಂದೆ ತಯಾರಿಸಲಾಗಿದ್ದ ಡಿಪಿಆರ್‌ನಲ್ಲೇ ಕೆಲವು ಬದಲಾವಣೆಗಳನ್ನು ಮಾಡಿಕೊಳ್ಳಲಾಗಿದೆ. ಅಮೃತ ನಗರೋತ್ಥಾನ ಯೋಜನೆಯಲ್ಲಿ 'ಎಲಿವೇಟೆಡ್ ಕಾರಿಡಾರ್'ಗೆ ₹213 ಕೋಟಿ ಅನುದಾನ ನೀಡಲಾಗಿದೆ. ಕೆಲವೇ ದಿನಗಳಲ್ಲಿ ಟೆಂಡರ್ ಕರೆಯಲಾಗುತ್ತದೆ' ಎಂದು ಯೋಜನೆ ವಿಭಾಗ ಮುಖ್ಯ ಎಂಜಿನಿಯರ್ ಲೋಕೇಶ್ ತಿಳಿಸಿದರು.

2.5 ಕಿ.ಮೀ: 'ಮಿನರ್ವ ವೃತ್ತದಿಂದ ಜೆ.ಸಿ. ರಸ್ತೆ ಮಾರ್ಗವಾಗಿ ಹಡ್ಸನ್ ವೃತ್ತದವರೆಗೆ 'ಎಲಿವೇಟೆಡ್ ಕಾರಿಡಾರ್' ನಿರ್ಮಾಣವಾಗಲಿದೆ. ದ್ವಿಮುಖ ನಾಲ್ಕು ಪಥದ ಮೇಲುಸೇತುವೆ ಇದಾಗಿದೆ. ಇದರಿಂದ ವಾಹನ ದಟ್ಟಣೆ ಸಾಕಷ್ಟು ಪ್ರಮಾಣದಲ್ಲಿ ಕಡಿಮೆಯಾಗಲಿದೆ' ಎಂದರು.

ಜೆ.ಸಿ. ರಸ್ತೆ ಮೇಲುಸೇತುವೆ ಕಾಮಗಾರಿ 2009ರಲ್ಲಿಯೇ ಆರಂಭವಾಗಬೇಕಿತ್ತು. ಆಗ ಯೋಜನೆ ಮೊತ್ತ ₹86 ಕೋಟಿಯಾಗಿತ್ತು. ಪಾರಂಪರಿಕ ಕಟ್ಟಡಗಳ ಸೌಂದರ್ಯಕ್ಕೆ ಧಕ್ಕೆಯಾಗುತ್ತದೆ ಎಂದು ವಿರೋಧ ವ್ಯಕ್ತವಾಯಿತು. ಸುಮ್ಮನಾಗಿದ್ದ ಬಿಬಿಎಂಪಿ ಈ ಯೋಜನೆಗೆ ಮತ್ತೆ 2013ರಲ್ಲಿ ಚಾಲನೆ ನೀಡಿತ್ತು. ರಾಜ್ಯಮಟ್ಟದ ಉಸ್ತುವಾರಿ ಸಮಿತಿ, ಕೇಂದ್ರ ಮಂಜೂರು ಮತ್ತು ನಿರ್ವಹಣಾ ಸಮಿತಿ 2014ರಲ್ಲಿ ಯೋಜನೆಗೆ ಸಮ್ಮತಿ ಸೂಚಿಸಿದ್ದವು. ನಂತರ ಯೋಜನೆಯ ಬಗ್ಗೆ ಅಭಿಪ್ರಾಯ ನೀಡಲು ಭಾರತೀಯ ವಿಜ್ಞಾನ ಸಂಸ್ಥೆಯನ್ನು (ಐಐಎಸ್‌ಸಿ) ಕೋರಲಾಗಿತ್ತು. ಅವರ ವರದಿಯ ನಂತರ 2016ರ ನಗರೋತ್ಥಾನ ಯೋಜನೆಯಲ್ಲಿ ಸ್ಟೀಲ್ ಮೇಲು ಸೇತುವೆಗೆ ₹135 ಕೋಟಿಗೆ ಅನುಮೋದನೆ ನೀಡಲಾಗಿತ್ತು. ಸ್ಟೀಲ್ ಮೇಲು ಸೇತುವೆಗೆ ಅತ್ಯಂತ ವಿರೋಧ ವ್ಯಕ್ತವಾದ್ದರಿಂದ ಅದು ಸ್ಥಗಿತಗೊಂಡಿತ್ತು.

ದ್ವಿಮುಖ ಸಂಚಾರ, 4 ಪಥ

'ಎಲಿವೇಟೆಡ್ ಕಾರಿಡಾರ್'ನಲ್ಲಿ ದ್ವಿಮುಖ ಸಂಚಾರ ವ್ಯವಸ್ಥೆ ಇರುತ್ತದೆ. ನಾಲ್ಕು ಪಥಗಳನ್ನು ಇದು ಒಳಗೊಂಡಿರುತ್ತದೆ. ವಿ.ವಿ. ಪುರಂನಿಂದ ಬರುವ ವಾಹನಗಳು ಮಿನರ್ವ ವೃತ್ತದಲ್ಲಿ ಸೇತುವೆ ಹತ್ತಿ ಕೆ.ಜಿ. ರಸ್ತೆ ಮತ್ತು ಕಸ್ತೂರಬಾ ರಸ್ತೆಯ ಕಡೆಗೆ ಇಳಿಯಬಹುದು. ನೃಪತುಂಗ ರಸ್ತೆಯಿಂದ ಬರುವ ವಾಹನಗಳು ಹಡ್ಸನ್ ವೃತ್ತ ಬಳಿ ಮೇಲೇರಿ ಆರ್.ವಿ. ರಸ್ತೆ ಕಡೆಗೆ ಹೋಗಬಹುದು.



ಪ್ರಜಾವಾಣಿ ಗ್ರಾಫಿಕ್ಸ್: ಭಾವು ಪತ್ತಾರ್

ಸುದ್ದಿ 2 ನಿಮಿಷ

ವಿಶ್ವವಿದ್ಯಾಲಯಕ್ಕೆ ₹2.28 ಕೋಟಿ ವಂಚನೆ: ಎಫ್‌ಐಆರ್

ಬೆಂಗಳೂರು: 'ಬೆಂಗಳೂರು ವಿಶ್ವವಿದ್ಯಾಲಯದ ಕೆನರಾ ಬ್ಯಾಂಕ್ ಸ್ಕೂಲ್ ಆಫ್ ಮ್ಯಾನೇಜ್‌ಮೆಂಟ್ ಸ್ಟಡೀಸ್ ಮುಖ್ಯಸ್ಥರಾಗಿದ್ದ ಕೆ. ಜನಾರ್ದನಂ (61), ವಿಶ್ವವಿದ್ಯಾಲಯಕ್ಕೆ ₹ 2.28 ಕೋಟಿ ವಂಚಿಸಿದ್ದಾರೆ' ಎಂದು ಆರೋಪಿಸಿ ಕುಲಸಚಿವ ಡಾ. ಎಂ. ಕೊಟ್ರೇಶ್ ಅವರು ಜ್ಞಾನಭಾರತಿ ಠಾಣೆಗೆ ದೂರು ನೀಡಿದ್ದಾರೆ.

'2014ರ ಜನವರಿ 1ರಿಂದ 2019ರ ಡಿಸೆಂಬರ್ 31ರವರೆಗಿನ ಅವಧಿಯಲ್ಲಾದ ವಂಚನೆ ಬಗ್ಗೆ ಕುಲಸಚಿವ ಕೊಟ್ರೇಶ್ ದೂರು ನೀಡಿದ್ದಾರೆ. ಜನಾರ್ದನಂ ವಿರುದ್ಧ ಎಫ್‌ಐಆರ್ ದಾಖಲಿಸಿಕೊಂಡು, ತನಿಖೆ ಮುಂದುವರಿಸಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ವಿದ್ಯಾರ್ಥಿಗಳ ಶುಲ್ಕ, ತರಬೇತಿ ಕಾರ್ಯಕ್ರಮ ಸೇರಿ ವಿವಿಧ ರೀತಿಯಲ್ಲಿ ಸಂಗ್ರಹವಾಗಿದ್ದ ಹಣವನ್ನು ಜನಾರ್ದನಂ ದುರ್ಬಳಕೆ ಮಾಡಿಕೊಂಡು, ವಿಶ್ವವಿದ್ಯಾಲಯವನ್ನು ವಂಚಿಸಿದ್ದಾರೆ. ಇವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಿ' ಎಂಬುದಾಗಿ ಕುಲಸಚಿವ ದೂರಿನಲ್ಲಿ ಉಲ್ಲೇಖಿಸಿದ್ದಾರೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಬ್ಯಾಟರಾಯನಪುರ: ಕಸಾಪ ಚಟುವಟಿಕೆಗೆ ಚಾಲನೆ

ಯಲಹಂಕ: ಒಂದು ಭಾಷೆ, ಒಂದು ದೇಶ ಮತ್ತು ಒಂದು ಸಂಸ್ಕೃತಿಯ ನೆಪದಲ್ಲಿ ರಾಷ್ಟ್ರದ ಬಹುತ್ವ ಸಂಸ್ಕೃತಿಗೆ ಪೆಟ್ಟುಬೀಳುವ ಸಾಧ್ಯತೆಯಿದ್ದು, ಈ ನಿಟ್ಟಿನಲ್ಲಿ ನಮ್ಮ ಭಾಷೆಗಳು ಮೂಲೆಗುಂಪಾಗುವ ಆತಂಕ ಹೆಚ್ಚಾಗಿದೆ ಎಂದು ಶಾಸಕ ಕೃಷ್ಣಬೈರೇಗೌಡ ಕಳವಳ ವ್ಯಕ್ತಪಡಿಸಿದರು.

ಬ್ಯಾಟರಾಯನಪುರ ವಿಧಾನಸಭಾ ಕ್ಷೇತ್ರ, ಕನ್ನಡ ಸಾಹಿತ್ಯ ಪರಿಷತ್ ಘಟಕದ ವತಿಯಿಂದ ಕಾಫಿ ಬೋರ್ಡ್ ಬಡಾವಣೆಯಲ್ಲಿ ಆಯೋಜಿಸಿದ್ದ 2021ರಿಂದ 2026ರ ಅವಧಿಯ ಕಾರ್ಯಚಟುವಟಿಕೆಯ ಉದ್ಘಾಟನಾ ಸಮಾರಂಭದಲ್ಲಿ ಮಾತನಾಡಿದ ಅವರು, 'ಬಹುತ್ವ ಸಂಸ್ಕೃತಿ ಉಳಿದರೆ ಮಾತ್ರ ಈ ರಾಷ್ಟ್ರದ ಅಭಿವೃದ್ಧಿ ಸಾಧ್ಯ. ಈ ನಿಟ್ಟಿನಲ್ಲಿ ಕನ್ನಡ ನಾಡು-ನುಡಿ ಮತ್ತು ಸಂಸ್ಕೃತಿಯ ರಕ್ಷಣೆಗಾಗಿ ಯುವಜನರು ಎಚ್ಚೆತ್ತುಕೊಳ್ಳಬೇಕಾಗಿದೆ' ಎಂದರು.

ಬೆಂಗಳೂರು ನಗರಜಿಲ್ಲಾ ಕರ್ನಾಟಕ ಸಾಹಿತ್ಯ ಪರಿಷತ್ ಅಧ್ಯಕ್ಷ ಎಂ.ಪ್ರಕಾಶಮೂರ್ತಿ, ಬ್ಯಾಟರಾಯನಪುರ ವಿಧಾನಸಭಾ ಕ್ಷೇತ್ರ ಘಟಕದ ಅಧ್ಯಕ್ಷ ರೇಣುಕ ಹೆಗ್ಗಡೆ ಮಾತನಾಡಿದರು. ಪಾಲಿಕೆ ಮಾಜಿ ಸದಸ್ಯ ಪಿ.ವಿ. ಮಂಜುನಾಥ ಬಾಬು, ಮುಖಂಡರಾದ ಎನ್.ಎನ್.ಶ್ರೀನಿವಾಸಯ್ಯ, ಡಿ.ಬಿ. ಸುರೇಶ್ ಗೌಡ, ಜಯಪ್ರಕಾಶ್, ಉಮೇಶ್ ಮತ್ತಿತರರು ಉಪಸ್ಥಿತರಿದ್ದರು.

21 ದಿನ 'ಭಾರತ ಒಗ್ಗೂಡಿಸಿ ಯಾತ್ರೆ'

ಪ್ರಜಾವಾಣಿ ವಾರ್ತೆ

ನವದೆಹಲಿ: 'ಭಾರತ್ ಜೋಡೋ ಯಾತ್ರೆ' (ಭಾರತವನ್ನು ಒಗ್ಗೂಡಿಸಿ ಯಾತ್ರೆ) ಚಾಮರಾಜನಗರದ ಗುಂಡ್ಲುಪೇಟೆ ಮೂಲಕ ಕರ್ನಾಟಕವನ್ನು ಪ್ರವೇಶಿಸಲಿದ್ದು, ರಾಜ್ಯದಲ್ಲಿ 21 ದಿನ ಯಾತ್ರೆ ಸಂಚರಿಸಲಿದೆ ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ತಿಳಿಸಿದರು.

ಕನ್ಯಾಕುಮಾರಿಯಿಂದ ಕಾಶ್ಮೀರದವರೆಗೆ 'ಭಾರತ್ ಜೋಡೋ ಯಾತ್ರೆ'ಯನ್ನು ಅಕ್ಟೋಬರ್ 2ರಂದು ಆರಂಭಿಸುವುದಾಗಿ ರಾಜಸ್ಥಾನದಲ್ಲಿ ನಡೆದ ಚಿಂತನ ಶಿಬಿರದಲ್ಲಿ ಕಾಂಗ್ರೆಸ್ ಘೋಷಿಸಲಾಗಿತ್ತು. ಯಾತ್ರೆಗೆ ಅಂತಿಮ ರೂಪರೇಷೆಗಳನ್ನು ನೀಡುವ ಸಲುವಾಗಿ ಪಕ್ಷದ ಪ್ರಧಾನ ಕಾರ್ಯದರ್ಶಿಗಳು, ಪಕ್ಷದ ರಾಜ್ಯ ಘಟಕಗಳ ಅಧ್ಯಕ್ಷರ ಸಭೆ ಎಐಸಿಸಿ ಕಚೇರಿಯಲ್ಲಿ ಗುರುವಾರ ನಡೆಯಿತು. ಸಭೆಯ ಬಳಿಕ ಶಿವಕುಮಾರ್ ಅವರು ಸುದ್ದಿಗಾರರ ಜತೆಗೆ ಮಾತನಾಡಿದರು.

'ಮುಳಬಾಗಿಲು, ಹೊಸೂರು, ಚಾಮರಾಜನಗರ, ಮಂಗಳೂರು ಕಡೆಗಳಿಂದ ಈ ಯಾತ್ರೆ ರಾಜ್ಯ ಪ್ರವೇಶಿಸುವ ಅವಕಾಶ ಇತ್ತು. ಅಂತಿಮವಾಗಿ ಕೇರಳದ ವಯನಾಡು ಮಾರ್ಗವಾಗಿ ಚಾಮರಾಜನಗರ ಜಿಲ್ಲೆಯ ಗುಂಡ್ಲುಪೇಟೆ ಮೂಲಕ ರಾಜ್ಯ ಪ್ರವೇಶಿಸುವುದು ಎಂದು ತೀರ್ಮಾನವಾಗಿದೆ. ರಾಜ್ಯದಲ್ಲಿ ಪ್ರತಿದಿನ 20 ಕಿ.ಮೀ. ಪಾದಯಾತ್ರೆ ನಡೆಸಲು ಯೋಜಿಸಲಾಗಿದೆ. ಯಾತ್ರೆಯು ರಾಜ್ಯದಲ್ಲಿ 21 ದಿನ ಇರಲಿದೆ. ಬಳ್ಳಾರಿ ಮೂಲಕ ಆಂಧ್ರಪ್ರದೇಶಕ್ಕೆ ಸಾಗಿ ಅಲ್ಲಿಂದ ರಾಯಚೂರಿಗೆ ಬಂದು ತೆಲಂಗಾಣಕ್ಕೆ ಯಾತ್ರೆ ಹೋಗಲಿದೆ' ಎಂದರು.

'ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಆರಂಭದಿಂದ ಕೊನೆಯವರೆಗೂ ಪಾದಯಾತ್ರೆಯಲ್ಲಿ ಭಾಗಿಯಾಗಲಿದ್ದಾರೆ. ಅವರು ದಿನಕ್ಕೆ 40 ಕಿ.ಮೀ. ದೂರ ನಡೆಯಲು ಉತ್ಸುಕರಾಗಿದ್ದಾರೆ. ನಾವು ಬಳ್ಳಾರಿ ಪಾದಯಾತ್ರೆ ಹಾಗೂ ಮೇಕೆದಾಟು ಪಾದಯಾತ್ರೆಯ ಯಶಸ್ಸಿನ ಬಗ್ಗೆ ಸಭೆಯಲ್ಲಿ ಮಾಹಿತಿ ನೀಡಿದೆವು. ಬಳಿಕ ರಾಜ್ಯದಲ್ಲಿ ದಿನಕ್ಕೆ 20 ಕಿ.ಮೀ. ಪಾದಯಾತ್ರೆ ನಡೆಸಲು ತೀರ್ಮಾನಿಸಲಾಯಿತು. ರಾಜ್ಯದಲ್ಲಿ 510 ಕಿ.ಮೀ. ದೂರ ಯಾತ್ರೆ ನಡೆಸಲಾಗುವುದು' ಎಂದು ಅವರು ಮಾಹಿತಿ ನೀಡಿದರು.

ಅಕ್ಟೋಬರ್‌ಗೆ ಮುನ್ನವೇ ಯಾತ್ರೆ: ಅಕ್ಟೋಬರ್ 2ರಂದು ಯಾತ್ರೆ ಆರಂಭಿಸಲು ಈ ಹಿಂದೆ ಯೋಜಿಸಲಾಗಿತ್ತು. ಆದರೆ, ಅದಕ್ಕೆ ಮುನ್ನವೇ ಯಾತ್ರೆ ಆರಂಭಿಸುವ ಬಗ್ಗೆ ಗುರುವಾರದ ಸಭೆಯಲ್ಲಿ ಚರ್ಚಿಸಲಾಯಿತು. ಪ್ರದೇಶ ಕಾಂಗ್ರೆಸ್ ಸಮಿತಿಗಳು ಸಿದ್ಧತೆ ಅಗತ್ಯ ಸಿದ್ಧತೆ ಮಾಡಿಕೊಂಡ ಕೂಡಲೇ ಯಾತ್ರೆಯ ಆರಂಭದ ದಿನಾಂಕವನ್ನು ಪ್ರಕಟಿಸಲು ಸಭೆಯಲ್ಲಿ ತೀರ್ಮಾನಿಸಲಾಯಿತು.

'ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಸರ್ಕಾರ ಮತ್ತು ಬಿಜೆಪಿಯು ದೇಶದ ಪ್ರಜಾಪ್ರಭುತ್ವ, ಸಂವಿಧಾನ, ಹಾಗೂ ರಾಷ್ಟ್ರೀಯ ಸಂಸ್ಥೆಗಳ ಮೇಲೆ ಪದೇ ಪದೇ ದಾಳಿ ಮಾಡುತ್ತಿದೆ. ಹೀಗಾಗಿ, ಆದಷ್ಟು ಬೇಗ ಯಾತ್ರೆ ಆರಂಭಿಸಬೇಕು' ಎಂದು ಹಲವು ನಾಯಕರು ಸಭೆಯಲ್ಲಿ ಸಲಹೆ ನೀಡಿದರು.

ಯಾತ್ರೆಯು 3,500 ಕಿ.ಮೀ.ಗಳಷ್ಟು ದೂರ ಸಾಗಲಿದೆ. 12 ರಾಜ್ಯಗಳು ಮತ್ತು 2 ಕೇಂದ್ರಾಡಳಿತ ಪ್ರದೇಶಗಳ ಮೂಲಕ ಹಾದು ಹೋಗಲಿದೆ. ಯಾತ್ರೆಯ ಮಾರ್ಗದ ನಿರ್ದಿಷ್ಟ ವಿವರಗಳನ್ನು ಶೀಘ್ರದಲ್ಲೇ ಪ್ರಕಟಿಸಲು ಸಭೆಯಲ್ಲಿ ತೀರ್ಮಾನಿಸಲಾಯಿತು.

'ನನಗೆ ಯಾರೂ ಅಭಿಮಾನಿ ಇಲ್ಲ'

'ನನಗೆ ಯಾರೂ ಅಭಿಮಾನಿ ಇಲ್ಲ. ನನಗೆ ಯಾವ ಉತ್ಸವವೂ ಇಲ್ಲ' ಎಂದು ಡಿ.ಕೆ. ಶಿವಕುಮಾರ್ ಸ್ಪಷ್ಟಪಡಿಸಿದರು.

ಶಿವಕುಮಾರೋತ್ಸವ ನಡೆಸಬೇಕು ಎಂಬುದಾಗಿ ಅಭಿಮಾನಿಯೊಬ್ಬರು ಬರೆದ ಪತ್ರಕ್ಕೆ ಪ್ರತಿಕ್ರಿಯಿಸಿದ ಅವರು, 'ನನ್ನ ಸುದ್ದಿಗೆ ಯಾರೂ ಬರಬೇಡಿ. ಪಕ್ಷದ ಕೆಲಸಕ್ಕೆ ಹೋಗಿ. ಪಕ್ಷದ ಮೇಲೆ ಅಭಿಮಾನ ತೋರಿಸಿ. ಬಿಜೆಪಿಯನ್ನು ಕಿತ್ತೊಗೆದು ಪಕ್ಷವನ್ನು ಅಧಿಕಾರಕ್ಕೆ ತರುವುದೇ ಏಕೈಕ ಗುರಿ' ಎಂದರು.

'ನನ್ನದು ಯಾವುದೇ ಕಾರ್ಯಕ್ರಮ ಇಲ್ಲ. ನನಗೆ ಆ.15 ರ ಸ್ವಾತಂತ್ರ್ಯ ನಡಿಗೆ ಹಾಗೂ ಪ್ರತಿ ಜಿಲ್ಲೆಯಲ್ಲಿನ 75 ಕಿ.ಮೀ ಪಾದಯಾತ್ರೆ ಮತ್ತು ಭಾರತ ಜೋಡೋ ಯಾತ್ರೆ ಮಾತ್ರ ಇದೆ' ಎಂದರು.

ಲಾಲ್‌ಬಾಗ್: ಆಗಸ್ಟ್ 5ರಿಂದ 15ರ ವರೆಗೆ ಫಲಪುಷ್ಪ ಪ್ರದರ್ಶನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸ್ವಾತಂತ್ರ್ಯೋತ್ಸವದ ಅಂಗವಾಗಿ ತೋಟಗಾರಿಕೆ ಇಲಾಖೆ ಮತ್ತು ಮೈಸೂರು ಉದ್ಯಾನ ಕಲಾಸಂಘ ವತಿಯಿಂದ ಅಗಸ್ಟ್ 5ರಿಂದ 15ರ ವರೆಗೆ ಲಾಲ್‌ಬಾಗ್‌ನಲ್ಲಿ ಫಲಪುಷ್ಪ ಪ್ರದರ್ಶನ ಸ್ಪರ್ಧೆ ಹಾಗೂ ವಿವಿಧ ಸ್ಪರ್ಧೆಗಳನ್ನು ಆಯೋಜಿಸಲಾಗಿದೆ.

ಅಗಸ್ಟ್ 2ರಂದು ನಡೆಯುವ 'ಬಾಲ ನಟನಾಗಿ ಪುನೀತ್ ರಾಜಕುಮಾರ್ ಅಭಿನಯದ ನನ್ನಿಷ್ಟದ ಚಿತ್ರ' ಎಂಬ ವಿಷಯದ ಪ್ರಬಂಧ ಸ್ಪರ್ಧೆ 5-7ನೇ ತರಗತಿವರೆಗೆ ಅಧ್ಯಯನ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ನಡೆಯಲಿದೆ. 8ರಿಂದ 10ನೇ ತರಗತಿವರೆಗೆ ಅಧ್ಯಯನ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಪುನೀತ್ ರಾಜಕುಮಾರ್ ಅಭಿನಯದ 'ರಾಜಕುಮಾರ' ಚಿತ್ರದ ಆಶಯದ ಕುರಿತು ಪ್ರಬಂಧ ಸ್ಪರ್ಧೆ ನಡೆಯಲಿದೆ. ಆಗಸ್ಟ್ 1ರೊಳಗೆ ಪ್ರಬಂಧ ಸ್ಪರ್ಧೆಯಲ್ಲಿ ಪಾಲ್ಗೊಳ್ಳುವವರು ಹೆಸರು ನೋಂದಾಯಿಸಕೊಳ್ಳಬೇಕು.

ತೋಟಗಳ ಸ್ಪರ್ಧೆ ಜುಲೈ 20ರಿಂದ ಅಗಸ್ಟ್ 1ರ ವರೆಗೆ ನಡೆಯಲಿದೆ.

ಸಂಗ್ರಹ ಚಿತ್ರ

ಕುಂಡಗಳಲ್ಲಿ ಬೆಳೆದ ಗಿಡಗಳನ್ನು ಗಾಜಿನ ಮನೆಯ ಒಳಗೆ ಪ್ರದರ್ಶಿಸಲು ಅಗಸ್ಟ್ 3ರೊಳಗೆ ಆಸಕ್ತರು ಹೆಸರು ನೋಂದಣಿ ಮಾಡಿಕೊಳ್ಳಬೇಕು.

ಇಕೆಬಾನ, ತರಕಾರಿ ಕೆತ್ತನೆ, ಇಂಡಿಯನ್ ಫ್ಲೋರಲ್ ಆರ್ಟ್, ಡಚ್ ಮತ್ತು ಒಣ ಹೂವಿನ ಪ್ರದರ್ಶನ, ಜಾನೂರು ಆರ್ಟ್, ರಂಗೋಲಿ ಮತ್ತು ತಾಯ್ ಆರ್ಟ್ ಸ್ಪರ್ಧೆಗಳಲ್ಲಿ ಭಾಗವಹಿಸಲು ಅಗಸ್ಟ್ 6ರೊಳಗೆ ಹೆಸರು ನೋಂದಾಯಿಸಿಕೊಳ್ಳಬೇಕು.

ಡಾ. ರಾಜ್‌ಕುಮಾರ್ ಹಾಗೂ ಪುನೀತರಾಜಕುಮಾರ್ ಅವರ ಚಿತ್ರವನ್ನು ಸ್ಥಳದಲ್ಲೇ ಬಿಡಿಸುವ ಸ್ಪರ್ಧೆಯನ್ನು ಅಗಸ್ಟ್ 5ರ ಬೆಳಿಗ್ಗೆ 8ರಿಂದ ಆಯೋಜಿಸಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ಆರ್ಕಿಡ್ಸ್ ಶಾಲೆಗೆ ಬೀಗ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶಿಕ್ಷಣ ಇಲಾಖೆಯ ಅನುಮತಿ ಪಡೆಯದೆ ಮಕ್ಕಳನ್ನು ದಾಖಲಿಸಿಕೊಂಡ ಮಾಗಡಿ ರಸ್ತೆಯ ಆರ್ಕಿಡ್ಸ್ ಇಂಟರ್‌ನ್ಯಾಷನಲ್ ಶಾಲೆಗೆ ಗುರುವಾರ ಶಿಕ್ಷಣ ಇಲಾಖೆಯ ಅಧಿಕಾರಿಗಳು ಬೀಗ ಹಾಕಿದ್ದಾರೆ.

ಬೆಂಗಳೂರು ಉತ್ತರ ವಿಭಾಗದ ಬಿಇಒ ಮತ್ತು ಸಿಬ್ಬಂದಿ ಪೊಲೀಸ್ ಭದ್ರತೆಯೊಂದಿಗೆ ಶಾಲೆಗೆ ಆಗಮಿಸಿ ಬೀಗ ಹಾಕಿದ್ದಾರೆ.

ಅನಧಿಕೃತವಾಗಿ ಶಾಲೆ ಆರಂಭಿಸಿದ್ದ ಬಗ್ಗೆ ಬ್ಯಾಡರಹಳ್ಳಿ ಠಾಣೆಯಲ್ಲಿ ದೂರು ದಾಖಲಾಗಿತ್ತು. 104ಕ್ಕೂ ಹೆಚ್ಚು ವಿದ್ಯಾರ್ಥಿಗಳು ಈ ಶಾಲೆಯಲ್ಲಿ ಪ್ರವೇಶಾತಿ ಪಡೆದಿದ್ದರು. ಪೋಷಕರ ಆಯ್ಕೆಯಂತೆ ಸಮೀಪದ ಶಾಲೆಯಲ್ಲಿ ಪ್ರವೇಶಾತಿ ಕಲ್ಪಿಸಲು ಕ್ರಮಕೈಗೊಳ್ಳಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಹೈಕೋರ್ಟ್ ಆದೇಶ ಪ್ರಶ್ನಿಸಿ ಐಎಎಸ್ ಅಧಿಕಾರಿ ಸುಪ್ರೀಂ ಕೋರ್ಟ್‌ಗೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಬೆಂಗಳೂರು ನಗರ ಜಿಲ್ಲಾಧಿಕಾರಿ ಕಚೇರಿಯ ಉಪ ತಹಶೀಲ್ದಾರ್ ಜಾಮೀನು ಅರ್ಜಿಯ ವಿಚಾರಣೆ ವೇಳೆ ಹೈಕೋರ್ಟ್ ನ್ಯಾಯಮೂರ್ತಿಯವರು ನೀಡಿರುವ ಅಭಿಪ್ರಾಯ ಹಾಗೂ ಆದೇಶಗಳನ್ನು ಪ್ರಶ್ನಿಸಿ ಐಎಎಸ್ ಅಧಿಕಾರಿ ಜೆ.ಮಂಜುನಾಥ್ ಅವರು ಸುಪ್ರೀಂ ಕೋರ್ಟ್‌ನ ಮೊರೆ ಹೋಗಿದ್ದಾರೆ.

ವಕೀಲ ಸಂಜಯ್ ಎಂ.ನುಲಿ ಅವರ ಮೂಲಕ ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಿರುವ ಮಂಜುನಾಥ್, 'ನನ್ನ ವಿರುದ್ಧ ಪದೇ ಪದೇ ಅನಗತ್ಯವಾಗಿ ಟೀಕೆಗಳನ್ನು ಮಾಡಲಾಗಿದೆ. ನೈಸರ್ಗಿಕ ನ್ಯಾಯ ತತ್ವದಡಿ ವಾದ ಮಂಡಿಸಲು ನ್ಯಾಯಾಲಯ ಅವಕಾಶ ನೀಡಿಲ್ಲ' ಎಂದೂ ಹೇಳಿದ್ದಾರೆ.

ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಎನ್.ವಿ.ರಮಣ ನೇತೃತ್ವದ ಪೀಠದ ಎದುರು ಗುರುವಾರ ಈ ಅರ್ಜಿಯ ಬಗ್ಗೆ ಹಿರಿಯ ವಕೀಲ ಎಸ್.ನಾಗಮುತ್ತು ಪ್ರಸ್ತಾಪಿಸಿದರು. ಹೈಕೋರ್ಟ್ ನ್ಯಾಯಮೂರ್ತಿಯವರ ಅಭಿಪ್ರಾಯ ಹಾಗೂ ಆದೇಶದ ವಿರುದ್ಧ ಭ್ರಷ್ಟಾಚಾರ ನಿಗ್ರಹ ದಳದ ಮುಖ್ಯಸ್ಥ ಸೀಮಂತ್ ಕುಮಾರ್ ಸಿಂಗ್ ಸುಪ್ರೀಂ ಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿದ್ದಾರೆ. ಈ ಪ್ರಕರಣದಲ್ಲಿ ಕರ್ನಾಟಕ ಸರ್ಕಾರ ಸಹ ಸುಪ್ರೀಂ ಕೋರ್ಟ್ ಮೊರೆ ಹೋಗಿದೆ. ಈ ಎರಡು ಅರ್ಜಿಗಳ ವಿಚಾರಣೆಯ ವೇಳೆಗೆ ಮಂಜುನಾಥ್ ಅವರ ಅರ್ಜಿಯನ್ನೂ ಕೈಗೆತ್ತಿಕೊಳ್ಳಲು ಪೀಠ ಸಮ್ಮತಿ ಸೂಚಿಸಿತು.

'ಹೈಕೋರ್ಟ್ ನ್ಯಾಯಮೂರ್ತಿಯವರು ಅಧಿಕಾರ ವ್ಯಾಪ್ತಿ ಮೀರಿ ಅಭಿಪ್ರಾಯಗಳನ್ನು ನೀಡಿದ್ದಾರೆ. ಇಂತಹ ಅಭಿಪ್ರಾಯಗಳಿಂದ ನ್ಯಾಯಯುತ ತನಿಖೆ ಮೇಲೂ ಪರಿಣಾಮ ಬೀರುತ್ತದೆ' ಎಂದು ಮಂಜುನಾಥ್ ಅವರು ಅರ್ಜಿಯಲ್ಲಿ ಹೇಳಿದ್ದಾರೆ.

ಜಮೀನು ಮಾಲೀಕತ್ವದ ವ್ಯಾಜ್ಯಕ್ಕೆ ಸಂಬಂಧಿಸಿದ ಪ್ರಕರಣದಲ್ಲಿ ಅರ್ಜಿದಾರರ ಪರ ಆದೇಶ ನೀಡಲು ಬೆಂಗಳೂರು ನಗರ ಜಿಲ್ಲಾಧಿಕಾರಿ ಹುದ್ದೆಯಲ್ಲಿದ್ದ ಅವಧಿಯಲ್ಲಿ ಲಂಚ ಪಡೆದಿರುವ ಆರೋಪ ಎದುರಿಸುತ್ತಿರುವ ಜೆ. ಮಂಜುನಾಥ್ ಅವರನ್ನು ಭ್ರಷ್ಟಾಚಾರ ನಿಗ್ರಹ ದಳದ (ಎಸಿಬಿ) ಅಧಿಕಾರಿಗಳು ಜುಲೈ 4ರಂದು ಬಂಧಿಸಿದ್ದರು. ಅವರ ಜಾಮೀನು ಅರ್ಜಿಯನ್ನು ಸೆಷನ್ಸ್ ನ್ಯಾಯಾಲಯವು ಜುಲೈ 11ರಂದು ವಜಾ ಮಾಡಿತ್ತು. 'ಸ್ವಯಂ ಎಸಿಬಿಯೇ ಅತಿದೊಡ್ಡ ಭ್ರಷ್ಟರ ಕೂಪವಾಗಿದೆ. ಇದರ ಮುಖ್ಯಸ್ಥ ಎಡಿಜಿಪಿಯೇ ಕಳಂಕಿತ ಅಧಿಕಾರಿ' ಎಂಬ ಅಭಿಪ್ರಾಯ ವ್ಯಕ್ತಪಡಿಸಿದ ಕಾರಣಕ್ಕೆ ವರ್ಗಾವಣೆ ಬೆದರಿಕೆ ಬಂದಿದೆ ಎಂದು ಹೈಕೋರ್ಟ್ ನ್ಯಾಯಮೂರ್ತಿ ಎಚ್.ಡಿ. ಸಂದೇಶ್ ಹೇಳಿದ್ದರು.

ಈದ್ಗಾದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮ: ಸಂಸದ ಪಿ.ಸಿ. ಮೋಹನ್ ಮನವಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಾಮರಾಜಪೇಟೆ ಈದ್ಗಾ ಆಟದ ಮೈದಾನಕ್ಕೆ ಚಾಮರಾಜೇಂದ್ರ ಒಡೆಯರ್ ಹೆಸರಿಡಬೇಕು. ಈ ಮೈದಾನದಲ್ಲಿ ಸ್ವಾತಂತ್ರ್ಯ ದಿನಾಚರಣೆ ಸೇರಿದಂತೆ ಸಾಂಸ್ಕೃತಿಕ ಕಾರ್ಯಕ್ರಮ ನಡೆಸಲು ಅನುವು ಮಾಡಿಕೊಡಬೇಕು ಎಂದು ಬೆಂಗಳೂರು ಕೇಂದ್ರ ಕ್ಷೇತ್ರದ ಸಂಸದ ಪಿ.ಸಿ. ಮೋಹನ್ ಅವರು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಅವರಿಗೆ ಮನವಿ ಮಾಡಿದರು.

ಬಿಬಿಎಂಪಿ ಕೇಂದ್ರ ಕಚೇರಿಯಲ್ಲಿ ಮುಖ್ಯ ಆಯುಕ್ತರನ್ನು ಗುರುವಾರ ಭೇಟಿ ಮಾಡಿದ ಪಿ.ಸಿ.ಮೋಹನ್, 'ಚಾಮರಾಜಪೇಟೆಯ ಬಿಬಿಎಂಪಿ ಆಟದ ಮೈದಾನದ ವಿಷಯದಲ್ಲಿ ಕೆಲವರು ಸ್ವತ್ತಿಗಾಗಿ ಗೊಂದಲ ಸೃಷ್ಟಿಸುತ್ತಿದ್ದಾರೆ. ಇದು ಸಾರ್ವಜನಿಕರು ಹಾಗೂ ಮಕ್ಕಳು ಆಟವಾಡಲು ಇರುವಂತಹ ಪ್ರದೇಶ. ಸ್ಥಳೀಯರ ಒತ್ತಾಯದ ಮೇರೆಗೆ ಇದಕ್ಕೆ ಚಾಮರಾಜೇಂದ್ರ ಒಡೆಯರ್ ಹೆಸರಿಸಬೇಕು' ಎಂದು ಕೋರಿದರು.

ಚಾಮರಾಜಪೇಟೆ ಈದ್ಗಾ ಮೈದಾನದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಅನುವು ಮಾಡಿಕೊಡಬೇಕು ಎಂದು ಆಗ್ರಹಿಸಿ ಸಂಸದ ಪಿ.ಸಿ. ಮೋಹನ್ ಅವರು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಅವರಿಗೆ ಗುರುವಾರ ಮನವಿ ಸಲ್ಲಿಸಿದರು

'ಈ ಮೈದಾನದಲ್ಲಿ ಗಣರಾಜ್ಯೋತ್ಸವ, ಅಂಬೇಡ್ಕರ್ ಜಯಂತಿ, ಅಂತರರಾಷ್ಟ್ರೀಯ ಯೋಗ ದಿನ, ಸ್ವಾತಂತ್ರ್ಯ ದಿನಾಚರಣೆ, ಕನ್ನಡ ರಾಜ್ಯೋತ್ಸವ, ಶಿವರಾತ್ರಿ, ಗಣೇಶ, ದಸರಾ ಕಾರ್ಯಕ್ರಮಗಳಿಗೆ ಅನುಮತಿ ನೀಡಬೇಕು. ಸರ್ಕಾರಿ ಕಾರ್ಯಕ್ರಮಗಳು ಹಾಗೂ ಕ್ರೀಡಾಕೂಟಗಳಿಗೆ ಅವಕಾಶ ಮಾಡಿಕೊಡಬೇಕು' ಎಂದು ಮನವಿ ಮಾಡಿದರು.

ಸಮಾಲೋಚಿಸಿ ಕ್ರಮ: 'ಸಂಸದರು ಮತ್ತು ಸಂಘಟನೆಗಳವರು ಮೈದಾನದ ಬಗ್ಗೆ ಮಾಹಿತಿ ನೀಡಿ, ಕಾರ್ಯಕ್ರಮಗಳ ಆಚರಣೆಗೆ ಅವಕಾಶ ಮಾಡಿಕೊಡಲು ಕೇಳಿದ್ದಾರೆ. ಈ ಬಗ್ಗೆ ಸಮಾಲೋಚಿಸಿ ಕ್ರಮ ಕೈಗೊಳ್ಳಲಾಗುತ್ತದೆ' ಎಂದು ತುಷಾರ್ ಗಿರಿನಾಥ್ ಸುದ್ದಿಗಾರರಿಗೆ ತಿಳಿಸಿದರು.

ಸಂಕ್ಷಿಪ್ತ ಸುದ್ದಿ

ಕೆಂಗೇರಿ ವಿದ್ಯುತ್ ಚಿತಾಗಾರ ಸ್ಥಗಿತ

ಬೆಂಗಳೂರು: ಬಿಬಿಎಂಪಿಯ ರಾಜರಾಜೇಶ್ವರಿ ವಲಯದಲ್ಲಿರುವ ಕೆಂಗೇರಿ ವಿದ್ಯುತ್ ಚಿತಾಗಾರದಲ್ಲಿ ಮರು ವಿನ್ಯಾಸದ ಕಾಮಗಾರಿ ನಡೆಯುವುದರಿಂದ ಜುಲೈ 15ರಿಂದ ಅಕ್ಟೋಬರ್ 14ರವರೆಗೆ ಸ್ಥಗಿತಗೊಳ್ಳಲಿದೆ ಎಂದು ವಿದ್ಯುತ್ ವಿಭಾಗದ ಕಾರ್ಯಪಾಲಕ ಎಂಜಿನಿಯರ್ ತಿಳಿಸಿದ್ದಾರೆ.

ಅರ್ಜಿ ಆಹ್ವಾನ

ಬೆಂಗಳೂರು: ಬೆಂಗಳೂರು ಕೃಷಿ ವಿಶ್ವವಿದ್ಯಾಲಯವು ಕನ್ನಡದಲ್ಲಿ ಕೃಷಿ ಬರವಣಿಗೆ ಪ್ರೋತ್ಸಾಹಿಸಲು 'ಕನ್ನಡ ಕೃಷಿ ಪುಸ್ತಕ ಪ್ರಶಸ್ತಿ-2021'ರ ಪ್ರಶಸ್ತಿಗೆ ಅರ್ಜಿ ಆಹ್ವಾನಿಸಿದೆ.

2021ರಲ್ಲಿ ಪ್ರಥಮ ಮುದ್ರಣವಾಗಿ ಪ್ರಕಟಗೊಂಡಿರುವ ಕೃಷಿ ಸಂಬಂಧಿತ ಕನ್ನಡ ಪುಸ್ತಕಗಳನ್ನು ಬರೆದಿರುವ ಲೇಖಕರು ಅರ್ಜಿ ಸಲ್ಲಿಸಬಹುದು. ಪ್ರಶಸ್ತಿಯು ₹10,000 ನಗದು ಮತ್ತು ಪ್ರಶಸ್ತಿ ಫಲಕ ಒಳಗೊಂಡಿದೆ.

ಜುಲೈ 30ರೊಳಗೆ ತಮ್ಮ ಕೃತಿಯ ಮೂರು ಪ್ರತಿಗಳನ್ನು ಮುಖ್ಯಸ್ಥರು, ಕನ್ನಡ ಅಧ್ಯಯನ ವಿಭಾಗ, ಕೃಷಿ ವಿಶ್ವವಿದ್ಯಾಲಯ, ಜಿಕೆವಿಕೆ, ಬೆಂಗಳೂರು-560065 ವಿಳಾಸಕ್ಕೆ ಕಳುಹಿಸಬೇಕು ಎಂದು ಪ್ರಕಟಣೆಯಲ್ಲಿ ತಿಳಿಸಿದೆ. ಹೆಚ್ಚಿನ ಮಾಹಿತಿಗಾಗಿ http://uasbangalore.edu.in

ಹೆಬ್ಬಾಳ ಮೇಲ್ಸೇತುವೆ: 10 ಲೇನ್‌ಗೆ ವಿಸ್ತರಣೆ

ಬೆಂಗಳೂರು: ಹೆಬ್ಬಾಳ ಮೇಲ್ಸೇತುವೆಯಲ್ಲಿ ಸಂಚಾರ ಸುಗಮಗೊಳಿಸಲು 10 ಲೇನ್‌ಗೆ ವಿಸ್ತರಣೆ ಮಾಡಲಾಗುತ್ತದೆ ಎಂದು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ತಿಳಿಸಿದರು.

ವಿಸ್ತರಣೆ ಯೋಜನೆಗೆ ಮುಖ್ಯಮಂತ್ರಿ ಸಮ್ಮತಿ ಸೂಚಿಸಿದ್ದಾರೆ. ಯೋಜನೆ ತಯಾರಾಗಿದ್ದು, ಶೀಘ್ರವೇ ಟೆಂಡರ್ ಕರೆದು ಕಾಮಗಾರಿ ಆರಂಭಿಸಲಾಗುತ್ತದೆ ಎಂದು ಅವರು ಗುರುವಾರ ಸುದ್ದಿಗಾರರಿಗೆ ತಿಳಿಸಿದರು.

ವಿಳಂಬ: ವಿವರ ಕೋರಲಿರುವ ಸಿಂಡಿಕೇಟ್

ಬೆಂಗಳೂರು: ಕೆಲವು ಮಹತ್ವದ ವಿಷಯಗಳ ಬಗ್ಗೆ ನಿರ್ಧಾರ ಕೈಗೊಳ್ಳದೆ ವಿಳಂಬ ಧೋರಣೆ ಅನುಸರಿಸಿರುವ ಬಗ್ಗೆ ಬೆಂಗಳೂರು ವಿಶ್ವವಿದ್ಯಾಲಯದ ನಿವೃತ್ತ ಕುಲಪತಿ ಕೆ.ಆರ್. ವೇಣುಗೋಪಾಲ್ ಅವರಿಂದ ವಿವರ ಪಡೆಯಲು ಸಿಂಡಿಕೇಟ್ ನಿರ್ಣಯ ಕೈಗೊಂಡಿದೆ.

ಉನ್ನತ ಶಿಕ್ಷಣ ಇಲಾಖೆಯ ಪ್ರಧಾನ ಕಾರ್ಯದರ್ಶಿ ಅವರ ನಿರ್ದೇಶನ ಮೇರೆಗೆ ಈ ನಿರ್ಧಾರ ಕೈಗೊಳ್ಳಲಾಗಿದೆ. ಸಾರ್ವಜನಿಕ ಲೆಕ್ಕಪತ್ರ ಸಮಿತಿಯು ಸಹ ಈ ವಿಷಯಗಳ ಬಗ್ಗೆ ಆಕ್ಷೇಪ ವ್ಯಕ್ತಪಡಿಸಿತ್ತು.

ಖಾಸಗಿ ಬ್ಯಾಂಕ್‌ನಲ್ಲಿ ಖಾತೆ ತೆರೆದಿರುವ ಬಗ್ಗೆ ಮತ್ತು ಅಕ್ರಮವೆಸಗಿದ ಆರೋಪ ಎದುರಿಸುತ್ತಿದ್ದ ಕೆನರಾ ಬ್ಯಾಂಕ್ ಸ್ಕೂಲ್ ಆಫ್ ಮ್ಯಾನೇಜ್‌ಮೆಂಟ್ ಸ್ಟಡೀಸ್‌ನ ಮಾಜಿ ನಿರ್ದೇಶಕ ಪ್ರೊ. ಕೆ. ಜನಾರ್ದನಂ ಅವರ ವಿರುದ್ಧ ಕ್ರಮ ಕೈಗೊಳ್ಳುವ ಕುರಿತು ನಿರ್ಧಾರ ಕೈಗೊಂಡಿರಲಿಲ್ಲ ಎಂದು ಮೂಲಗಳು ತಿಳಿಸಿವೆ.

ನಟ, ಫ್ಯಾಷನ್ ವಿನ್ಯಾಸಕ ಕೊವಿಡ್ ಮಿತ್ತಲ್ ಗಿಡ ನೆಡುವ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಶ್ರೀ ಸಮೃದ್ಧಿ ಫೌಂಡೇಶನ್ ಅಧ್ಯಕ್ಷೆ ಭಾರತಿ ರಾಜೇಶ್, ವಾರ್ಡ್ ಅಧ್ಯಕ್ಷ ಪ್ರಸನ್ನ ಇದ್ದರು.

ಸರ್ಕಾರಿ ಶಾಲೆಯ ಆವರಣ ಸ್ವಚ್ಛತೆ

ಪ್ರಜಾವಾಣಿ ವಾರ್ತೆ

ಕೆ.ಆರ್.ಪುರ: ಹೊರಮಾವು ಸಮೀಪದ ಜಯಂತಿನಗರ ಸರ್ಕಾರಿ ಶಾಲೆಯ ಆವರಣ ಹಾಗೂ ಹೊರಮಾವು ಕೆರೆಯ ಅಂಗಳದಲ್ಲಿ ಶ್ರೀ ಸಮೃದ್ಧಿ ಫೌಂಡೇಶನ್ ಕಾರ್ಯಕರ್ತರು ಗಿಡ ನೆಡುವ ಮೂಲಕ ಕಾಲೇಜು ವಿದ್ಯಾರ್ಥಿಗಳಿಗೆ ಪರಿಸರದ ಪಾಠ ಹೇಳಿಕೊಟ್ಟರು.

ಶ್ರೀ ಸಮೃದ್ಧಿ ಫೌಂಡೇಶನ್ ತಂಡದ ಕಾರ್ಯಕರ್ತರು ಬೆಳಿಗ್ಗೆ 8 ಗಂಟೆಯಿಂದ ಜಯಂತಿನಗರ ಸರ್ಕಾರಿ ಶಾಲೆಯ ಆವರಣದಲ್ಲಿ ಸ್ವಚ್ಛತಾ ಕಾರ್ಯದಲ್ಲಿ ತೊಡಗಿ, ನಂತರ ಹೊರಮಾವು ಕೆರೆ ಹಾಗೂ ಶಾಲೆಯ ಆವರಣದಲ್ಲಿ ಇನ್ನೂರಕ್ಕೂ ಹೆಚ್ಚು ಗಿಡಗಳನ್ನು ನೆಟ್ಟು ಅವುಗಳನ್ನು ಪೋಷಿಸುವ ಹೊಣೆ ಹೊತ್ತರು.

ನಟ, ಫ್ಯಾಷನ್ ವಿನ್ಯಾಸಕ ಕೊವಿಡ್ ಮಿತ್ತಲ್ ಗಿಡ ನೆಡುವ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು. ಮಕ್ಕಳಿಗೆ ತರಗತಿಯಲ್ಲಿ ಮಾತ್ರ ಪರಿಸರದ ಪಾಠ ಹೇಳದೆ ಬಿಡುವಿನ ವೇಳೆಯಲ್ಲಿ ಪ್ರಾಯೋಗಿಕವಾಗಿ ಗಿಡ ನೆಡುವುದನ್ನು ಹಾಗೂ ಸಾರ್ವಜನಿಕ ಸ್ಥಳಗಳನ್ನು ಸುಂದರವಾಗಿಟ್ಟುಕೊಳ್ಳುವುದನ್ನು ರೂಢಿ ಮಾಡಿಸಬೇಕು ಎಂದರು.

ಶ್ರೀ ಸಮೃದ್ಧಿ ಫೌಂಡೇಶನ್ ಅಧ್ಯಕ್ಷೆ ಭಾರತಿ ರಾಜೇಶ್, 'ಹೊರಮಾವು ಕೆರೆ ಹಾಗೂ ಸರ್ಕಾರಿ ಶಾಲೆಯ ಆವರಣವನ್ನು ಸ್ವಚ್ಛಗೊಳಿಸಿ ಇನ್ನೂರಕ್ಕೂ ಹೆಚ್ಚು ಗಿಡಗಳನ್ನು ನೆಡಲಾಗಿದೆ' ಎಂದು ಹೇಳಿದರು.

ಇನ್ಫೋಸಿಸ್ ಸಂಸ್ಥಾಪಕ ಎನ್‌.ಆರ್‌.ನಾರಾಯಣಮೂರ್ತಿ ಅಭಿಮತ

'ಆವಿಷ್ಕಾರಗಳು ಪ್ರಗತಿಗೆ ಪೂರಕವಾಗಿರಲಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರದಲ್ಲಿ ದೇಶವು ಅದ್ವಿತೀಯ ಪ್ರಗತಿ ಸಾಧಿಸುತ್ತಿದೆ. ಈ ಕ್ಷೇತ್ರಗಳಲ್ಲಿ ನಡೆಯುವ ಆವಿಷ್ಕಾರಗಳು ದೇಶದ ಪ್ರಗತಿಗೆ ಪೂರಕವಾಗಿರಬೇಕು' ಎಂದು ಇನ್ಫೋಸಿಸ್ ಸಂಸ್ಥಾಪಕ ಎನ್.ಆರ್.ನಾರಾಯಣಮೂರ್ತಿ ತಿಳಿಸಿದರು.

ನಾರಾಯಣ ಮೂರ್ತಿ

ಇನ್ಫೋಸಿಸ್ ವಿಜ್ಞಾನ ಪ್ರತಿಷ್ಠಾನವು ಜಯನಗರದಲ್ಲಿ ಸ್ಥಾಪಿಸಿರುವ ನೂತನ ಕಚೇರಿಯನ್ನು ಆನ್‌ಲೈನ್ ವೇದಿಕೆಯ ಮೂಲಕ ಗುರುವಾರ ಉದ್ಘಾಟಿಸಿದ ಅವರು, 'ದುರ್ಬಲ ವರ್ಗದವರಿಗೆ ಅಗತ್ಯ ಸೌಲಭ್ಯ ಒದಗಿಸುವ ಜತೆಗೆ ಅಪೌಷ್ಟಿಕತೆ ಸೇರಿ ವಿವಿಧ ಸಮಸ್ಯೆಗಳಿಗೆ ಪರಿಹಾರ ಕಂಡುಕೊಂಡಾಗ ದೇಶ ಪ್ರಗತಿ ಹೊಂದಲಿದೆ. ಅನಾರೋಗ್ಯ, ಅಪೌಷ್ಟಿಕತೆ ಒಳಗೊಂಡಂತೆ ವಿವಿಧ ಸಮಸ್ಯೆಗಳ ವಿರುದ್ಧ ಹೋರಾಡಲು ಸಂಶೋಧಕ ಯೋಧರನ್ನು ಗುರುತಿಸಿ, ಪ್ರೋತ್ಸಾಹಿಸುವ ಕೆಲಸ ಆಗಬೇಕು' ಎಂದು ಹೇಳಿದರು.

ಉದ್ಘಾಟನೆಗೊಂಡ ಇನ್ಫೋಸಿಸ್ ವಿಜ್ಞಾನ ಪ್ರತಿಷ್ಠಾನದ ನೂತನ ಕಟ್ಟಡ
– ಪ್ರಜಾವಾಣಿ ಚಿತ್ರ

'ನಾವು ರಾಕೆಟ್ ಮತ್ತು ಉಪಗ್ರಹಗಳನ್ನು ಬಾಹ್ಯಾಕಾಶಕ್ಕೆ ಕಳುಹಿಸಿದ್ದೇವೆ. ಉಕ್ಕಿನ ಸ್ಥಾವರಗಳು, ವಿದ್ಯುತ್ ಸ್ಥಾವರಗಳು ಮತ್ತು ಬೃಹತ್ ಅಣೆಕಟ್ಟುಗಳನ್ನು ನಿರ್ಮಿಸಿದ್ದೇವೆ. ಕೋವಿಡ್ ಲಸಿಕೆಗಳನ್ನು ತಯಾರಿಸಿದ್ದೇವೆ. ಹೃದಯ ಮತ್ತು ಮೂತ್ರಪಿಂಡದ ಕಸಿ ನಡೆಸುತ್ತೇವೆ. ಆದರೂ ದೇಶದ ಎಲ್ಲ ಜನರಿಗೆ ಶಿಕ್ಷಣ, ಆರೋಗ್ಯ, ಆಹಾರ ಮತ್ತು ಆಶ್ರಯ ಒದಗಿಸುವ ವಿಚಾರದಲ್ಲಿ ಸಾಕಷ್ಟು ದೂರವಿದ್ದೇವೆ' ಎಂದು ತಿಳಿಸಿದರು.

'ಪ್ರತಿಷ್ಠಾನದ ನೂತನ ಕಟ್ಟಡವು ವೃತ್ತಿಪರರಿಗಾಗಿ ಕಚೇರಿಗಳನ್ನು ಹೊಂದಿದೆ. ಸಮ್ಮೇಳನ ಕೊಠಡಿಗಳು, 100 ಆಸನಗಳ ಸಭಾಂಗಣ ಸೇರಿ ಹಲವು ಸೌಲಭ್ಯಗಳನ್ನು ಒಳಗೊಂಡಿದೆ' ಎಂದು ತಿಳಿಸಿದರು.

ಬಹುಮಾನ ಸ್ಥಾಪನೆ

ಪ್ರತಿಷ್ಠಾನದ ಟ್ರಸ್ಟಿ ಕ್ರಿಸ್ ಗೋಪಾಲಕೃಷ್ಣನ್, 'ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರದಲ್ಲಿ ಆವಿಷ್ಕಾರ ನಡೆಸಲು ಬೆಂಗಳೂರಿನಲ್ಲಿ ಉತ್ತಮ ವಾತಾವರಣವಿದೆ. ಸಂಶೋಧಕರನ್ನು ಪ್ರೋತ್ಸಾಹಿಸಲು ಪ್ರತಿಷ್ಠಾನ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಿದೆ. ವಿಜ್ಞಾನ ಮತ್ತು ಸಂಶೋಧನೆಯಲ್ಲಿ ಆಸಕ್ತಿ ಹೊಂದಿರುವ ವಿದ್ಯಾರ್ಥಿಗಳು ಮತ್ತು ಶಿಕ್ಷಕರು ಪ್ರತಿಷ್ಠಾನದ ವಿವಿಧ ಯೋಜನೆಗಳಲ್ಲಿ ಪಾಲ್ಗೊಳ್ಳಬಹುದು. ಯುವ ಸಂಶೋಧಕರನ್ನು ಪ್ರೋತ್ಸಾಹಿಸಲು 2009ರಿಂದ ನೈಸರ್ಗಿಕ ವಿಜ್ಞಾನ, ಎಂಜಿನಿಯರಿಂಗ್ ಸೇರಿದಂತೆ ಐದು ಕ್ಷೇತ್ರಗಳಲ್ಲಿ ಬಹುಮಾನಗಳನ್ನು ಸ್ಥಾಪಿಸಿದ್ದೇವೆ' ಎಂದು ಎನ್.ಆರ್.ನಾರಾಯಣಮೂರ್ತಿ ಹೇಳಿದರು.

ಇಬ್ಬರು ಪ್ರಾಂಶುಪಾಲರ ಅಮಾನತು

ಬೆಂಗಳೂರು: ಬಿಷಪ್ ಕಾಟನ್ ಬಾಲಕರ ಶಾಲೆಯ ಪ್ರಾಂಶುಪಾಲ ಎಸ್. ಎಡ್ವಿನ್ ಕ್ರಿಸ್ಟೋಫರ್ ಮತ್ತು ಸೇಂಟ್ ಜಾನ್ಸ್ ಹೈಸ್ಕೂಲ್ ಪ್ರಾಂಶುಪಾಲರಾದ ಶಾಂತಾ ಸುಶೀಲಾ ಅವರನ್ನು ಅಮಾನತುಗೊಳಿಸಲಾಗಿದೆ.

ಕರ್ನಾಟಕ ಕೇಂದ್ರೀಯ ಡಿಯೊಸೆಸ್ ಈ ಕ್ರಮ ಕೈಗೊಂಡಿದೆ. ಆದರೆ, ಇಬ್ಬರು ಪ್ರಾಂಶುಪಾಲರ ವಿರುದ್ಧದ ಆರೋಪಗಳನ್ನು ಬಹಿರಂಗಪಡಿಸಿಲ್ಲ.

'ಇದು ಆಂತರಿಕ ವಿಷಯ' ಎಂದಷ್ಟೆ ಡಿಯೊಸೆಸ್ ತಿಳಿಸಿದೆ.

ಬಿಷಪ್ ಕಾಟನ್ ಬಾಲಕರ ಶಾಲೆಯ ಆಡಳಿತ ಮಂಡಳಿಯು ಗುರುವಾರ ಸಭೆ ನಡೆಸಿ ಈ ಬಗ್ಗೆ ಚರ್ಚೆ ನಡೆಸಿತು.

ಮೂವರು ಸದಸ್ಯರನ್ನು ಒಳಗೊಂಡ ಸಮಿತಿಯು ಪ್ರಾಂಶುಪಾಲರ ವಿರುದ್ಧದ ಆರೋಪಗಳ ಬಗ್ಗೆ ತನಿಖೆ ನಡೆಸುತ್ತಿದೆ ಎಂದು ಮೂಲಗಳು ತಿಳಿಸಿವೆ.

ಈ ವಿಷಯದಲ್ಲಿ ರಾಜ್ಯ ಸರ್ಕಾರ ಮಧ್ಯ ಪ್ರವೇಶಿಸಬೇಕು ಎಂದು ಕೆಲವರು ಒತ್ತಾಯಿಸಿದ್ದಾರೆ. ಅಮಾನತುಗೊಳಿಸಿರುವ ಬಗ್ಗೆ ತನಿಖೆ ನಡೆಸುವಂತೆ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಬಿ.ಸಿ. ನಾಗೇಶ್ ಅವರಿಗೆ ಮನವಿ ಸಲ್ಲಿಸಿದ್ದಾರೆ.

ಮನವಿಯನ್ನು ಪರಿಶೀಲಿಸಿ ಮುಂದಿನ ಕ್ರಮಕೈಗೊಳ್ಳಲಾಗುವುದು ಎಂದು ಸಚಿವರು ಪ್ರತಿಕ್ರಿಯಿಸಿದ್ದಾರೆ.

ಸ್ಮಾರ್ಟ್ ಆಗಿಯೇಬಿಡುವ ತವಕದಲ್ಲಿ ಶಿವಾಜಿನಗರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜನದಟ್ಟಣೆ ನಡುವೆ ಸದಾ ಗಿಜಿಗುಡುವ ಶಿವಾಜಿನಗರ ಈಗ ಸ್ಮಾರ್ಟ್ ಆಗುವ ತವಕದಲ್ಲಿದೆ. ಒಂದೆಡೆ ಸ್ಮಾರ್ಟ್ ಸಿಟಿ ಯೋಜನೆ, ಮತ್ತೊಂದೆಡೆ ಮೆಟ್ರೊ ರೈಲು ನಿಲ್ದಾಣ ಕಾಮಗಾರಿಗಳ ನಡುವೆ ಶಿವಾಜಿನಗರದಲ್ಲಿ ಸಂಚಾರವೇ ದುಸ್ತರವಾಗಿದೆ.

ವಿಧಾನಸೌಧದ ಕಡೆಯಿಂದ ಹೊರಟರೆ, ಬಾಳೆಕುಂದ್ರಿ ವೃತ್ತದಿಂದ ಶಿವಾಜಿನಗರಕ್ಕೆ ಹೋಗುವ ಮಾರ್ಗ ಈಗ ಬಂದ್ ಆಗಿದೆ. ಮೆಟ್ರೊ ರೈಲು ನಿಲ್ದಾಣ ಕಾಮಗಾರಿ ನಡೆಯುತ್ತಿರುವುದರಿಂದ ಈ ಮಾರ್ಗದಲ್ಲಿ ಏಕಮುಖ ಸಂಚಾರಕ್ಕೆ ಮಾತ್ರ ಅವಕಾಶ ಕಲ್ಪಿಸಲಾಗಿದೆ. ಇನ್‌ಫೆಂಟ್ರಿ ರಸ್ತೆ ಮೂಲಕವೇ ಸಾಗಿ ಶಿವಾಜಿನಗರ ತಲುಪಬೇಕಾದ ಅನಿವಾರ್ಯ ಇದೆ. ನಿಲ್ದಾಣ ಕಾಮಗಾರಿಯ ದೂಳು ಬಸ್ ನಿಲ್ದಾಣದ ಎದುರಿನ ರಸ್ತೆಯನ್ನೇ ಆವರಿಸಿಕೊಂಡಿದೆ. ಈ ರಸ್ತೆಯಲ್ಲಿನ ಅಂಗಡಿಗಳಲ್ಲಿ ವ್ಯಾಪಾರ–ವಹಿವಾಟು ಕುಸಿದಿದೆ.

ಇನ್ನು ರಸೆಲ್ ಮಾರುಕಟ್ಟೆ ಸುತ್ತಮುತ್ತಲ ಪ್ರದೇಶದಲ್ಲಿ ಎಲ್ಲೆಡೆ ಸ್ಮಾರ್ಟ್‌ಸಿಟಿ ಕಾಮಗಾರಿ ನಡೆಯುತ್ತಿದೆ. ಮಾರುಕಟ್ಟೆ ಎದುರಿಗಿದ್ದ ವಾಹನ ನಿಲುಗಡೆ ಸ್ಥಳವನ್ನು ಸುಂದರ ತಾಣವನ್ನಾಗಿ ಅಭಿವೃದ್ಧಿ ಪಡಿಸಲಾಗುತ್ತಿದೆ. ಜನ ಕುಳಿತು ವಿಶ್ರಾಂತಿ ಪಡೆಯುವ ಪ್ಲಾಜಾ ನಿರ್ಮಾಣವಾಗುತ್ತಿದೆ. ಎಚ್‌ಕೆಪಿ ರಸ್ತೆಯಲ್ಲಿ ವೈಟ್ ಟಾಪಿಂಗ್ ಕಾಮಗಾರಿ ನಡೆಯುತ್ತಿದೆ. ರಸೆಲ್ ಮಾರುಕಟ್ಟೆ ಸಂಪರ್ಕಿಸುವ ಪ್ರಮುಖ ರಸ್ತೆಗಳೇ 'ಅಧ್ವಾನ'ವಾಗಿವೆ. ಮಾರುಕಟ್ಟೆಗೆ ಸರಕು ಹೊತ್ತು ಬರುವ ವಾಹನಗಳ ತಿರುಗಾಟವೂ ಕಷ್ಟ ಸ್ಥಿತಿ ಇದೆ. 'ಸ್ಮಾರ್ಟ್ ಸಿಟಿ ಕಾಮಗಾರಿ ನಡೆಯುತ್ತಿರುವುದರಿಂದ ತೊಂದರೆ ಆಗಿದೆ. ತ್ವರಿತಗತಿಯಲ್ಲಿ ಕಾಮಗಾರಿ ನಡೆಯುತ್ತಿದ್ದು, ಪೂರ್ಣಗೊಳ್ಳುವ ತನಕ ಅಡಚಣೆ ಸಹಿಸಿಕೊಳ್ಳಬೇಕಿದೆ' ಎನ್ನುತ್ತಾರೆ ಸ್ಥಳೀಯರು.

ರಸೆಲ್ ಮಾರುಕಟ್ಟೆ ಮುಂಭಾಗ ಜನ ಕುಳಿತುಕೊಳ್ಳಲು ಪ್ಲಾಜಾ ನಿರ್ಮಿಸುತ್ತಿರುವುದು –ಪ್ರಜಾವಾಣಿ ಚಿತ್ರ

ಒಂದೂವರೆ ತಿಂಗಳಲ್ಲಿ ಕಾಮಗಾರಿ ಪೂರ್ಣ

ಮಳೆ ಬಂದರೆ ರಸೆಲ್ ಮಾರುಕಟ್ಟೆ ಮುಂಭಾಗ ನೀರು ತುಂಬಿ ಹೋಗುತ್ತಿತ್ತು. ರಾಜಕಾಲುವೆ ಮೇಲಿನ ನೀರಾವರಿ ಅವ್ಯವಸ್ಥಿತವಾಗಿ ನಿರ್ಮಿಸಿದ್ದರಿಂದ ಪ್ರವಾಹ ಪರಿಸ್ಥಿತಿ ಉಂಟಾಗುತ್ತಿತ್ತು. 50–60 ವರ್ಷಗಳಷ್ಟು ಹಳೆಯ ಪೈಪ್‌ಲೈನ್‌ಗಳನ್ನು ಬದಲಾಯಿಸಬೇಕಾಯಿತು. ಶೇ 90ರಷ್ಟು ಕಾಮಗಾರಿ ಪೂರ್ಣಗೊಂಡಿದ್ದು, ಒಂದೂವರೆ ತಿಂಗಳಲ್ಲಿ ಸುಂದರ ತಾಣವಾಗಲಿದೆ.

ರಿಜ್ವಾನ್ ಅರ್ಷದ್
ಶಿವಾಜಿನಗರ ಶಾಸಕ

ಶಿವಾಜಿನಗರ: 'ಜನಸ್ಪಂದನ' ನಾಳೆ

ಶಿವಾಜಿನಗರ ವಿಧಾನಸಭಾ ಕ್ಷೇತ್ರದ ಜನರ ಅಹವಾಲು ಆಲಿಸುವ ಸಲುವಾಗಿ 'ಪ್ರಜಾವಾಣಿ– ಡೆಕ್ಕನ್ ಹೆರಾಲ್ಡ್' ಪತ್ರಿಕಾ ಸಮೂಹವು ಶನಿವಾರ (ಜುಲೈ 16) ವಸಂತ ನಗರದ ತಿಮ್ಮಯ್ಯ ರಸ್ತೆಯ ಕಾವೇರಪ್ಪ ಬಡಾವಣೆಯ ಬಂಜಾರ ಭವನದಲ್ಲಿ 'ಜನಸ್ಪಂದನ' ಕಾರ್ಯಕ್ರಮ ಏರ್ಪಡಿಸಿದೆ.

ಈ ಕ್ಷೇತ್ರದ ಶಾಸಕ ರಿಜ್ವಾನ್ ಅರ್ಷದ್ ಹಾಗೂ ಬಿಬಿಎಂಪಿ, ಜಲಮಂಡಳಿ, ಬಿಡಿಎ, ಬೆಸ್ಕಾಂ, ಪೊಲೀಸ್ ಇಲಾಖೆಗಳ ಅಧಿಕಾರಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಿ ಸಾರ್ವಜನಿಕರ ಅಹವಾಲು ಆಲಿಸಲಿದ್ದಾರೆ. ಆಸಕ್ತರು ಬೆಳಿಗ್ಗೆ 9ರಿಂದ ಸ್ಥಳದಲ್ಲೇ ಹೆಸರು ನೋಂದಾಯಿಸಬಹುದು. ಮೊದಲು ನೋಂದಣಿ ಮಾಡಿಸಿದವರಿಗೆ ಆದ್ಯತೆ. ಬೆಳಿಗ್ಗೆ 10 ಗಂಟೆಗೆ ಕಾರ್ಯಕ್ರಮ ಆರಂಭವಾಗಲಿದೆ.

ಪದವಿ ಎರಡನೇ ವರ್ಷದ ವಿದ್ಯಾರ್ಥಿಗಳಿಗೆ ಹಣಕಾಸು ಮತ್ತು ಹೂಡಿಕೆ ವಿಷಯಗಳನ್ನು ಬೋಧಿಸುವ ಉದ್ದೇಶದಿಂದ ರಾಷ್ಟ್ರೀಯ ಷೇರು ವಿನಿಮಯದ ಎನ್‌ಎಸ್‌ಇ ಅಕಾಡೆಮಿ ಜತೆ ಬೆಂಗಳೂರು ವಿಶ್ವವಿದ್ಯಾಲಯವು ರಾಜ್ಯ ಉನ್ನತ ಶಿಕ್ಷಣ ಪರಿಷತ್ತಿನ ಸಹಯೋಗದಲ್ಲಿ ಗುರುವಾರ ಒಡಂಬಡಿಕೆ ಮಾಡಿಕೊಂಡಿತು. ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್‌ ಅಶ್ವತ್ಥನಾರಾಯಣ, ಉನ್ನತ ಶಿಕ್ಷಣ ಪರಿಷತ್ತಿನ ಉಪಾಧ್ಯಕ್ಷ ಪ್ರೊ. ಬಿ. ತಿಮ್ಮೇಗೌಡ, ಕಾರ್ಯನಿರ್ವಾಹಕ ನಿರ್ದೇಶಕ ಪ್ರೊ.ಗೋಪಾಲಕೃಷ್ಣ ಜೋಷಿ, ಬೆಂಗಳೂರು ವಿಶ್ವವಿದ್ಯಾಲಯದ ಕುಲಪತಿ ಪ್ರೊ. ಎಸ್‌.ಎಂ. ಜಯಕರ, ಕುಲಸಚಿವ ಪ್ರೊ. ಎಂ. ಕೊಟ್ರೇಶ್ ಇದ್ದರು.

ಪಠ್ಯ ಪರಿಷ್ಕರಣೆ ವಿರೋಧಿಸಿ ಜುಲೈ 17ರಂದು ತಿಪಟೂರು ಚಲೋ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರೋಹಿತ್ ಚಕ್ರತೀರ್ಥ ನೇತೃತ್ವದಲ್ಲಿ ಪರಿಷ್ಕರಿಸಿರುವ ಪಠ್ಯ ಪುಸ್ತಕಗಳನ್ನು ಹಿಂಪಡೆಯಬೇಕು ಎಂದು ಆಗ್ರಹಿಸಿ ಜುಲೈ 17ರಂದು 'ತಿಪಟೂರು ಚಲೋ' ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ ಎಂದು ಸಾಹಿತಿ ಎಲ್‌.ಎನ್ ಮುಕುಂದ್ ರಾಜ್ ಹೇಳಿದರು.

ಜಾಗೃತ ತಿಪಟೂರು ವೇದಿಕೆ ವತಿಯಿಂದ ಶಿಕ್ಷಣ ಸಚಿವರ ಮೂಲಸ್ಥಾನಕ್ಕೆ ಹೋಗಿ ಮರು ಪರಿಷ್ಕರಿಸಿರುವ ಪಠ್ಯ ಪುಸ್ತಕಗಳ ಬಗ್ಗೆ ಜನಜಾಗೃತಿ ಮೂಡಿಸಲಾಗುವುದು. ರೋಹಿತ್ ಚಕ್ರತೀರ್ಥ ಅವರು ಪರಿಷ್ಕರಣೆ ಮಾಡಿರುವ ಪಠ್ಯ ಪುಸ್ತಕಗಳನ್ನು ಕೂಡಲೇ ಹಿಂಪಡೆದು ಬರಗೂರು ರಾಮಚಂದ್ರಪ್ಪನವರ ನೇತೃತ್ವದಲ್ಲಿ ಪರಿಷ್ಕರಣೆ ಮಾಡಿರುವ ಪಠ್ಯಪುಸ್ತಕಗಳನ್ನು ವಿತರಣೆ ಮಾಡಬೇಕು ಎಂದು ಗುರುವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದರು.

ತಿಪಟೂರಿನಲ್ಲಿ ನಡೆಯುವ ಬಹಿರಂಗ ಸಭೆಯಲ್ಲಿ ನಾಡಗೀತೆ, ನಾಡಧ್ವಜಕ್ಕೆ ಅವಮಾನ ಮಾಡಿರುವ ರೋಹಿತ್ ಚಕ್ರತೀರ್ಥ ಅವರನ್ನು ಬಂಧಿಸಬೇಕು. ಶಿಕ್ಷಣ ಸಚಿವ ಬಿ.ಸಿ ನಾಗೇಶ್ ಅವರು ಸಚಿವ ಸ್ಥಾನಕ್ಕೆ ಕೂಡಲೇ ರಾಜೀನಾಮೆ ನೀಡಬೇಕು ಎಂದು ಆಗ್ರಹಿಸಲಾಗುವುದು ಎಂದು ತಿಳಿಸಿದರು.

ಕೈಗಾರಿಕಾ ತರಬೇತಿ ಕೇಂದ್ರಗಳಿಗೆ ಟೂಲ್ಸ್ ಕಿಟ್ ಖರೀದಿ ಅಕ್ರಮ

ಸಚಿವ ಅಶ್ವತ್ಥನಾರಾಯಣ ವಜಾಕ್ಕೆ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪರಿಶಿಷ್ಟ ಜಾತಿ ಮತ್ತು ಪಂಗಡದ ವಿದ್ಯಾರ್ಥಿಗಳಿಗೆ ವಿತರಿಸುವ ಟೂಲ್ಸ್ ಕಿಟ್ ಖರೀದಿ ಹಗರಣಕ್ಕೆ ಸಂಬಂಧಿಸಿದಂತೆ ರಾಜ್ಯದ ಜನರನ್ನು ವಂಚಿಸುತ್ತಿರುವ ಸಚಿವ ಸಿ.ಎನ್.ಅಶ್ವತ್ಥನಾರಾಯಣ ಕೂಡಲೇ ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಬೇಕು ಎಂದು ಆಮ್ ಆದ್ಮಿ ಪಕ್ಷ(ಎಎಪಿ) ಆಗ್ರಹಿಸಿದೆ.

ಇಂಟೆಲಿಕ್ ಸಿಸ್ಟಮ್ ಕಂಪನಿಯು ನಕಲಿ ದಾಖಲೆಗಳ ಮೂಲಕ ಕೈಗಾರಿಕಾ ತರಬೇತಿ ಕೇಂದ್ರಗಳಲ್ಲಿ ತರಬೇತಿ ಪಡೆಯುತ್ತಿರುವ ಪರಿಶಿಷ್ಟ ಜಾತಿ, ಪಂಗಡಗಳ 13 ಸಾವಿರ ವಿದ್ಯಾರ್ಥಿಗಳಿಗೆ ₹ 22 ಕೋಟಿ ವೆಚ್ಚದಲ್ಲಿ ಅಗತ್ಯ ಸಲಕರಣೆ ವಿತರಣೆಗೆ ಟೆಂಡರ್ ಪಡೆದುಕೊಂಡಿತ್ತು. ₹15.99 ಕೋಟಿಗೆ ಟೆಂಡರ್ ಅಂತಿಮಗೊಳಿಸಿ, 5.27 ಕೋಟಿ ಉಳಿತಾಯ ಮಾಡಿರುವುದಾಗಿ ಹೇಳುತ್ತಿರುವ ಸಚಿವರು ಕಮಿಷನ್ ಪಡೆಯಲು ಅರ್ಹತೆಯಿಲ್ಲದ ಕಂಪನಿಗೆ ಟೆಂಡರ್ ನೀಡಿದ್ದಾರೆ ಎಂದು ಎಎಪಿ ರಾಜ್ಯ ಘಟಕದ ಅಧ್ಯಕ್ಷ ಪೃಥ್ವಿ ರೆಡ್ಡಿ ಆರೋಪಿಸಿದರು.

'ಯಾವುದೇ ಕಂಪನಿ ಟೆಂಡರ್‌ನಲ್ಲಿ ಭಾಗವಹಿಸಲು ಕಳೆದ ಮೂರು ವರ್ಷಗಳಲ್ಲಿ ವಿವಿಧ ಇಲಾಖೆಗಳಿಗೆ ಶೇಕಡಾ 30ರಷ್ಟು ಸಾಮಗ್ರಿಗಳನ್ನು ಪೂರೈಸಿರಬೇಕು. ಆದರೆ ಇಂಟೆಲಿಕ್ ಸಿಸ್ಟಂ ಸಂಸ್ಥೆ ಶೇಕಡಾ 26.1ರಷ್ಟು ಸಾಮಗ್ರಿಗಳನ್ನಷ್ಟೆ ಪೂರೈಸಿರುವುದರಿಂದ ಅದರ ಟೆಂಡರ್ ತಿರಸ್ಕರಿಸಲಾಗಿತ್ತು. ಸಚಿವರ ಒತ್ತಡದಿಂದ ಬೋಗಸ್ ಕಂಪನಿಗೆ ಅನುಮತಿ ಕೊಡಲಾಗಿದೆ. ಇದು ಶೇ 40 ಕಮಿಷನ್‌ಗೆ ಸ್ಪಷ್ಟ ಉದಾಹರಣೆ ಅಲ್ಲವೇ?' ಎಂದರು.

ಇದೇ ಕಂಪನಿ ನಕಲಿ ಜಿಎಸ್‌ಟಿ ಬಿಲ್ ಸೃಷ್ಟಿಸಿ ಸಾಮಗ್ರಿ ಪೂರೈಸಿತ್ತು. ಜಿಎಸ್‌ಟಿ ಮಂಡಳಿಯವರೂ ನಕಲಿ ಬಿಲ್ ಎಂದು ದೃಢಪಡಿಸಿದ್ದರು ಎಂದೂ ಹೇಳಿದರು. ಪರಿಶಿಷ್ಟ ಜಾತಿ ಮತ್ತು ಪಂಗಡದ ವಿದ್ಯಾರ್ಥಿಗಳಿಗೆ ವಿತರಿಸುವ ಟೂಲ್ಸ್ ಕಿಟ್ ಖರೀದಿ ಹಗರಣ ಅನರ್ಹತೆ ಹೊಂದಿರುವ ಇಂಟೆಲಿಕ್ ಕಂಪನಿಗೆ ನೀಡಲಾಗಿದೆ. ಈ ಕುರಿತು ಸಮಗ್ರ ತನಿಖೆ ನಡೆಸಬೇಕು ಎಂದು ವಿಶ್ವ ಮಹಾಯೋಗಿ ವೇಮನ ಫೌಂಡೇಷನ್ ಅಧ್ಯಕ್ಷ ಶ್ರೀನಿವಾಸ್ ರೆಡ್ಡಿ ಸಹ ಆರೋಪಿಸಿದರು.

ನ್ಯಾಯಾಂಗ ತನಿಖೆಗೆ ಒತ್ತಾಯ

ಪದವಿ ವಿದ್ಯಾರ್ಥಿಗಳಿಗೆ ವಿತರಿಸಿರುವ ಲ್ಯಾಪ್‌ಟಾಪ್ ಹಗರಣದಲ್ಲೂ ಇಂಟೆಲಿಕ್ ಸಿಸ್ಟಮ್ಸ್ ಸಂಸ್ಥೆ ಭಾಗಿಯಾಗಿತ್ತು. ₹14 ಸಾವಿರಕ್ಕೆ ಸಿಗುತ್ತಿದ್ದ ಲ್ಯಾಪ್‌ಟಾಪ್‌ಗಳನ್ನು ₹24 ಸಾವಿರಕ್ಕೆ ಮಾರಾಟ ಮಾಡಿ ಸರ್ಕಾರದ ಬೊಕ್ಕಸಕ್ಕೆ ನೂರಾರು ಕೋಟಿ ನಷ್ಟ ಉಂಟು ಮಾಡಿದೆ. ಉಭಯ ಸದನಗಳಲ್ಲಿ ಈ ಬಗ್ಗೆ ಚರ್ಚೆಯಾಗಿದ್ದರೂ, ಇದುವರೆಗೆ ಯಾವುದೇ ಕ್ರಮ ಕೈಗೊಂಡಿಲ್ಲ. ಕೂಡಲೇ ಸಚಿವ ಸಿ.ಎನ್. ಅಶ್ವತ್ಥನಾರಾಯಣ ಅವರನ್ನು ಸಚಿವ ಸ್ಥಾನದಿಂದ ವಜಾಗೊಳಿಸಿ ನ್ಯಾಯಾಂಗ ತನಿಖೆ ನಡೆಸಬೇಕು. ಈ ಹಗರಣದ ಕುರಿತು ಸರ್ಕಾರ ಒಂದು ವಾರದೊಳಗೆ ಕಾನೂನು ಕ್ರಮ ಕೈಗೊಳ್ಳದಿದ್ದರೆ ಪ್ರತಿಭಟನೆ ಮಾಡಲಾಗುವುದು ಎಂದು ಎಚ್ಚರಿಕೆ ನೀಡಿದರು.

ಸಂಕ್ಷಿಪ್ತ ಸುದ್ದಿ

'ಸ್ವ–ನಿಧಿ ಮಹೋತ್ಸವ' 18ರಂದು

ಬೆಂಗಳೂರು: ಸ್ವಾತಂತ್ರ್ಯ ಅಮೃತ ಮಹೋತ್ಸವದ ಅಂಗವಾಗಿ ಬಿಬಿಎಂಪಿ ವತಿಯಿಂದ ಬೀದಿಬದಿ ವ್ಯಾಪಾರಿಗಳ 'ಸ್ವ–ನಿಧಿ ಮಹೋತ್ಸವ'ವನ್ನು ಜುಲೈ 18ರಂದು ಆಯೋಜಿಸಲಾಗಿದೆ.

ಬಿಬಿಎಂಪಿ ಕೇಂದ್ರ ಕಚೇರಿಯಲ್ಲಿರುವ ಡಾ. ರಾಜ್‌ಕುಮಾರ್ ಗಾಜಿನ ಮನೆಯಲ್ಲಿ ಮಹೋತ್ಸವ ಬೆಳಿಗ್ಗೆ 10ರಿಂದ ಸಂಜೆ 7ರವರೆಗೆ ನಡೆಯಲಿದ್ದು, ಬೀದಿಬದಿ ವ್ಯಾಪಾರಿಗಳು, ಅವರ ಕುಟುಂಬದವರಿಗಾಗಿ ಹಲವು ಸ್ಪರ್ಧೆಗಳನ್ನು ಆಯೋಜಿಸಲಾಗಿದೆ ಎಂದು ಬಿಬಿಎಂಪಿ ಕಲ್ಯಾಣ ವಿಭಾಗದ ವಿಶೇಷ ಆಯುಕ್ತ ಡಾ. ರಾಂಪ್ರಸಾದ್ ಮನೋಹರ್ ತಿಳಿಸಿದ್ದಾರೆ.

ಬೀದಿ ಬದಿ ವ್ಯಾಪಾರಿಗಳ ಮಕ್ಕಳ ಪ್ರತಿಭೆಯನ್ನು ಗುರುತಿಸಿ ಗೌರವಿಸಲಾಗುವುದು. ಸ್ವ-ನಿಧಿ ಯೋಜನೆ ಸದುಪಯೋಗ ಮಾಡಿಕೊಂಡಿರುವ ಫಲಾನುಭವಿಗಳು, 'ಮೈ ಭಿ ಡಿಜಿಟಲ್ ಹೂಂ' ಅಡಿಯಲ್ಲಿ ತೊಡಗಿಸಿಕೊಂಡಿರುವ ವ್ಯಾಪಾರಿಗಳನ್ನು ಪುರಸ್ಕರಿಸಲಾಗುವುದು ಎಂದರು.

ಸ್ವ-ನಿಧಿ ಯೋಜನೆಯಡಿ ಸಾಲ ಮೇಳ ಆಯೋಜನೆ ಮಾಡಲಾಗುತ್ತದೆ. ಅಲ್ಲದೆ, ಬೀದಿಬದಿ ವ್ಯಾಪಾರಿಗಳಿಂದ ತಯಾರಾದ ಆಹಾರ ಮಳಿಗೆಗಳಿರುತ್ತವೆ. ಸುಮಾರು 3 ಸಾವಿರ ಬೀದಿ ವ್ಯಾಪಾರಿಗಳು ಭಾಗವಹಿಸುವ ನಿರೀಕ್ಷೆ ಇದೆ ಎಂದರು.

ಆರೋಗ್ಯದ ಮಾಹಿತಿಗಾಗಿ 'ಹ್ಯಾಪಿಯೆಸ್ಟ್ ಹೆಲ್ತ್'

ಬೆಂಗಳೂರು: ಆರೋಗ್ಯ ಮತ್ತು ಯೋಗಕ್ಷೇಮದ ಕುರಿತು 'ಹ್ಯಾಪಿಯೆಸ್ಟ್ ಹೆಲ್ತ್' (https://www.happiesthealth.com/) ಡಿಜಿಟಲ್ ಪೋರ್ಟಲ್‌ನಲ್ಲಿ ತಜ್ಞವೈದ್ಯರ ಮೂಲಕ ಮಾಹಿತಿ ನೀಡಲಾಗುವುದು ಎಂದು ಸಂಸ್ಥೆಯ ಅಧ್ಯಕ್ಷ ಅಶೋಕ್ ಸೂಟ್ ಅವರು ಹೇಳಿದರು.

ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಉತ್ತಮ ಜ್ಞಾನ ಉತ್ತಮ ಆರೋಗ್ಯ' ಎಂಬ ಘೋಷವಾಕ್ಯದಡಿಯಲ್ಲಿ 'ಹ್ಯಾಪಿಯೆಸ್ಟ್ ಹೆಲ್ತ್' ಸ್ಥಾಪಿಸಲಾಗಿದೆ. ಸರಳ ಚಿಕಿತ್ಸೆಗಳ ಮೂಲಕ ಉತ್ತಮ ಆರೋಗ್ಯ ದಕ್ಕಿಸಿಕೊಡುವ ಉದ್ದೇಶ ಇದರದ್ದು. ಜಾಗತಿಕ ಸಂಶೋಧನಾ ಸಂಸ್ಥೆಗಳ ಸಹಯೋಗದಲ್ಲಿ ತಜ್ಞ ವೈದ್ಯರಿಂದ ವಿಷಯಗಳನ್ನು ಬರೆಸಿ, ಪ್ರಕಟಿಸಲಾಗುವುದು ಎಂದು ಹೇಳಿದರು.

ಸರಿಯಾದ ಚಿಕಿತ್ಸೆಗಳ ಕುರಿತು ವೈದ್ಯಕೀಯ ತಜ್ಞರೊಂದಿಗೆ ಸಂವಾದವನ್ನೂ ಏರ್ಪಡಿಸಲಾಗಿದೆ.

ಕಿಸಾನ್ ವೆಬ್‌ಸೈಟ್: ಕನ್ನಡದ ಆಯ್ಕೆಗೆ ಆಗ್ರಹ

ಬೆಂಗಳೂರು: 'ಪಿ.ಎಂ. ಕಿಸಾನ್' ವೆಬ್‌ಸೈಟ್‌ನಲ್ಲಿ ಕನ್ನಡದ ಆಯ್ಕೆಗೆ ಕೇಂದ್ರ ಸರ್ಕಾರ ಕೂಡಲೇ ಕ್ರಮವಹಿಸಬೇಕು' ಎಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಟಿ.ಎಸ್. ನಾಗಾಭರಣ ಅವರು ಆಗ್ರಹಿಸಿದ್ದಾರೆ.

ಈ ಬಗ್ಗೆ ಅವರು ಕೇಂದ್ರ ಕೃಷಿ ಇಲಾಖೆ ರಾಜ್ಯ ಸಚಿವೆ ಶೋಭಾ ಕರಂದ್ಲಾಜೆ ಅವರಿಗೆ ಪತ್ರ ಬರೆದಿದ್ದಾರೆ. 'ದೇಶದ ಎಲ್ಲ ಜನರನ್ನು ತಲುಪಬೇಕಾದ ಕೇಂದ್ರ ಸರ್ಕಾರದ ಯೋಜನೆಗಳ ಮಾಹಿತಿ ಪ್ರಾದೇಶಿಕ ಭಾಷೆಗಳಲ್ಲಿರಬೇಕು. ಆದರೆ, 'ಪಿ. ಎಂ. ಕಿಸಾನ್' ವೆಬ್‌ಸೈಟ್‌ನಲ್ಲಿ ಕನ್ನಡ ಭಾಷೆಯನ್ನು ಕಡೆಗಣಿಸಲಾಗಿದೆ. ಇದರಿಂದ ಇಲ್ಲಿನ ರೈತರಿಗೆ ಉಪಯುಕ್ತ ಮಾಹಿತಿಗಳು ತಲುಪುವುದಿಲ್ಲ' ಎಂದು ತಿಳಿಸಿದ್ದಾರೆ.

ಇನ್ನು ಮಧ್ಯಾಹ್ನವೂ ಉದ್ಯಾನಕ್ಕೆ ಪ್ರವೇಶ

ಬೆಂಗಳೂರು: ನಗರದಲ್ಲಿ ಉದ್ಯಾನಗಳಿಗೆ ಸಾರ್ವಜನಿಕರ ಪ್ರವೇಶದ ಸಮಯ ಬದಲಾವಣೆಯಾಗಿದೆ.

ಬಿಬಿಎಂಪಿ ವ್ಯಾಪ್ತಿಯ ಉದ್ಯಾನಗಳಲ್ಲಿ ವಾಯುವಿಹಾರಕ್ಕಾಗಿ ಬೆಳಿಗ್ಗೆ 5ರಿಂದ 10 ಹಾಗೂ ಸಂಜೆ 4ರಿಂದ ರಾತ್ರಿ 8ರವರೆಗೆ ಈವರೆಗೆ ಅವಕಾಶ ಇತ್ತು. ಇನ್ನು ಮುಂದೆ ಬೆಳಿಗ್ಗೆ 5ರಿಂದ ರಾತ್ರಿ 8ರ ವರೆಗೆ ಸಾರ್ವಜನಿಕರಿಗೆ ಉದ್ಯಾನಗಳ ಪ್ರವೇಶಕ್ಕೆ ಅವಕಾಶವಿರುತ್ತದೆ. ಆದರೆ, ಉದ್ಯಾನಗಳಲ್ಲಿ ಬೆಳಿಗ್ಗೆ 10ರಿಂದ ಮಧ್ಯಾಹ್ನ 1.30ರವರೆಗೆ ನಿರ್ವಹಣೆ ಕಾರ್ಯ ನಡೆಯುವ ಸಂದರ್ಭದಲ್ಲಿ ಸಾರ್ವಜನಿಕಿಗೆ ಪ್ರವೇಶ ಇರುವುದಿಲ್ಲ ಎಂದು ಬಿಬಿಎಂಪಿ ಮುಖ್ಯ ಆಯುಕ್ತರು ಆದೇಶ ಹೊರಡಿಸಿದ್ದಾರೆ.

ಗೋಡೆ ಕುಸಿದು ಕೂಲಿ ಕಾರ್ಮಿಕ ಸಾವು

ಸೊರಬ: ತಾಲ್ಲೂಕಿನ ಚಿಟ್ಟೂರು ಗ್ರಾಮದಲ್ಲಿ ಮನೆಯ ಗೋಡೆ ಕುಸಿದು ಕೂಲಿ ಕಾರ್ಮಿಕ ಅಶೋಕ (32) ಎಂಬುವವರು ಗುರುವಾರ ಮೃತಪಟ್ಟಿದ್ದಾರೆ.

ರಾತ್ರಿ ಕೂಲಿ ಕೆಲಸ ಮುಗಿಸಿ ಮನೆಗೆ ಬರುತ್ತಿರುವ ವೇಳೆ ಧಾರಾಕಾರವಾಗಿ ಮಳೆ ಸುರಿಯಲಾರಂಭಿಸಿತು. ಈ ವೇಳೆ ಗ್ರಾಮದ ಈರಪ್ಪ ಎಂಬುವವರ ಖಾಲಿ ಮನೆ ಹತ್ತಿರ ಆಶ್ರಯಕ್ಕಾಗಿ ಅಶೋಕ ನಿಂತುಕೊಂಡಿದ್ದಾಗ ಮನೆಯ ಗೋಡೆ ತಲೆಯ ಮೇಲೆ ಕುಸಿದು ಬಿದ್ದು ಸ್ಥಳದಲ್ಲೇ ಮೃತಪಟ್ಟಿದ್ದಾರೆ.

'ಸಿದ್ದರಾಮೋತ್ಸವ'ದಿಂದ ಕಾಂಗ್ರೆಸ್ ದುರ್ಬಲ: ಬಿಜೆಪಿ ವ್ಯಂಗ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾಂಗ್ರೆಸ್ ವರಿಷ್ಠ ಹಾಗೂ ಸಂಸದ ರಾಹುಲ್‌ಗಾಂಧಿ ಅವರು 'ಸಿದ್ದರಾಮೋತ್ಸವ'ದಲ್ಲಿ ಪಾಲ್ಗೊಳ್ಳುತ್ತಿರುವುದು ಕಾಂಗ್ರೆಸ್ ಪಕ್ಷ ದುರ್ಬಲವಾಗಿರುವುದರ ಸಂಕೇತ ಎಂದು ಬಿಜೆಪಿ ರಾಜ್ಯ ವಕ್ತಾರರೂ ಆಗಿರುವ ವಿಧಾನಪರಿಷತ್ ಸದಸ್ಯ ಛಲವಾದಿ ನಾರಾಯಣಸ್ವಾಮಿ ಅವರು ಹೇಳಿದ್ದಾರೆ.

'ವಿರೋಧಪಕ್ಷದ ನಾಯಕ ಸಿದ್ದರಾಮಯ್ಯ ಅವರ ಅಬ್ಬರದಲ್ಲಿ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಕೇವಲ ರಬ್ಬರ್ ಸ್ಟಾಂಪ್ ಆಗಿ ಉಳಿದಿದ್ದಾರೆ. ಆ ಪಕ್ಷದ ಇತರ ನಾಯಕರು ಸಿದ್ದರಾಮಯ್ಯ ಅವರನ್ನು ಕಂಡರೆ ಹೆದರುವ ಸ್ಥಿತಿ ಇದೆ. ಅವರನ್ನು ವಿರೋಧಿಸಿದರೆ ತಮ್ಮ ಭವಿಷ್ಯ ಸಂಕಷ್ಟಕ್ಕೆ ಸಿಲುಕಬಹುದು ಎಂಬ ಭೀತಿಯಲ್ಲಿದ್ದಾರೆ' ಎಂದು ಅವರು ಗುರುವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಸಿದ್ದರಾಮಯ್ಯ ನಾಯಕತ್ವ ದೇವರಾಜ ಅರಸು ಅವರನ್ನೂ ಮೀರಿಸಿದೆ ಎಂದು ಶಾಸಕ ಜಿ.ಪರಮೇಶ್ವರ ಹೇಳಿದ್ದಾರೆ. ಇದು ಹಾಲು ಕುಡಿದು ಮೂತಿ ಸುಟ್ಟುಕೊಂಡ ಬೀರಬಲ್ಲನ ಬೆಕ್ಕಿನ ಕಥೆಯಂತಿದೆ. ಪರಮೇಶ್ವರ ಅವರೂ ಸೇರಿದಂತೆ ಕಾಂಗ್ರೆಸ್‌ನ ಹಲವು ನಾಯಕರು ಮೂತಿ ಸುಟ್ಟ ಬೆಕ್ಕಿನಂತೆ ಹೆದರಿಕೊಂಡು ಸಿದ್ದರಾಮಯ್ಯ ಅವರ ಮುಖಸ್ತುತಿಯಲ್ಲಿ ತೊಡಗಿದ್ದಾರೆ ಎಂದು ವ್ಯಂಗ್ಯವಾಡಿದರು.

ಸಿದ್ದರಾಮೋತ್ಸವಕ್ಕೆ ಪ್ರತಿಯಾಗಿ ಶಿವಕುಮಾರೋತ್ಸವ ಮಾಡುವುದಾಗಿಯೂ ಆ ಪಕ್ಷದಲ್ಲಿ ಕೆಲವರು ಹೇಳುತ್ತಿದ್ದಾರೆ. ಕಾಂಗ್ರೆಸ್ ಹೈಕಮಾಂಡ್ ತನ್ನೆಲ್ಲ ಶಕ್ತಿಯನ್ನು ಕಳೆದುಕೊಂಡು ಸಿದ್ದರಾಮಯ್ಯ ಅವರಿಗೆ ಸಂಪೂರ್ಣವಾಗಿ ಶರಣಾಗಿದೆ. ಜನರ ಆಶೋತ್ತರಗಳನ್ನು ಈಡೇರಿಸಲು ಅದಕ್ಕೆ ಶಕ್ತಿಯೂ ಇಲ್ಲ ಎಂದು ವ್ಯಂಗ್ಯವಾಡಿದರು.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರರ ಕಚೇರಿ, ಕೆ.ಆರ್. ಪುರ ವಿಭಾಗ, ಹಳೆ ಮದ್ರಾಸ್ ರಸ್ತೆ, ಕೆ. ಆರ್ ಪುರ, ಬೆಂಗಳೂರು – 560 036.

ಸಂಖ್ಯೆ: ಕಾಪಾಅ/ಕೃರಾಪು/ಟೆಂಡರ್/04/2022–23 ದಿನಾಂಕ: 13.07.2022

ಅಲ್ಪಾವಧಿ ಟೆಂಡರ್‌ಗಾಗಿ ಆಹ್ವಾನ (ಐಎಫ್‌ಟಿ)

(ದ್ವಿಲಕೋಟೆ ಟೆಂಡರ್) (ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)

ಕಾರ್ಯಪಾಲಕ ಅಭಿಯಂತರರು, (ಕೆ.ಆರ್.ಪುರ), ಇವರು, ಬೃ.ಬೆಂ.ಮ.ಪಾಲಿಕೆ/ಕೆಪಿಡಬ್ಲ್ಯೂಡಿ/ಸಿಪಿಡಬ್ಲ್ಯೂಡಿ/ರೈಲ್ವೇಸ್/ಎಮ್‌ಇಎಸ್/ಯಾವುದೇ ರಾಜ್ಯ/ಕೇಂದ್ರ ಸರ್ಕಾರಿ ಸಂಸ್ಥೆಗಳಲ್ಲಿ ಸೂಕ್ತ ದರ್ಜೆಯಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಈ ಕೆಳಕಂಡ ಯಾವುದೇ ಅಥವಾ ಎಲ್ಲಾ ಕಾಮಗಾರಿಗಳಿಗಾಗಿ ಐಟಂ ದರದ ಟೆಂಡರುಗಳನ್ನು ಆಹ್ವಾನಿಸಿದ್ದಾರೆ.

ಕ್ರ ಸಂ	ಕಾಮಗಾರಿಗಳ ಹೆಸರು	ಕಾಮಗಾರಿಯ ಅಂದಾಜು ಮೊತ್ತ (₹.ಲಕ್ಷಗಳಲ್ಲಿ)	ಇಎಂಡಿ (₹. ಲಕ್ಷಗಳಲ್ಲಿ)
1.	**ವಾರ್ಡ್ ಸಂಖ್ಯೆ–25** ಹೊರಮಾವು ಮತ್ತು **ವಾರ್ಡ್ ಸಂಖ್ಯೆ–51** ವಿಜಿನಾಪುರದ ವಿವಿಧ ಬಡಾವಣೆಗಳು ಮತ್ತು ಸುತ್ತಮುತ್ತಲ ಪ್ರದೇಶಗಳಲ್ಲಿ ರಸ್ತೆಗಳು ಮತ್ತು ಚರಂಡಿಗಳನ್ನು ಸುಧಾರಣೆ ಮಾಡುವುದು. (3 ಕಾಮಗಾರಿಗಳನ್ನು ಒಳಗೊಂಡು) (ಪ್ಯಾಕೇಜ್–1) (1) ದಯಾನಂದ ಬಡಾವಣೆ, ಮುನಿನಂಜಪ್ಪ ಬಡಾವಣೆ, ಕೃಷ್ಣಾರೆಡ್ಡಿ ಬಡಾವಣೆ, ದಾಸಪ್ಪ ಬಡಾವಣೆ, ಯರ್‍ರಯ್ಯನಪಾಳ್ಯ, ಮುನೇಶ್ವರನಗರ & ಸುತ್ತಮುತ್ತಲ ಪ್ರದೇಶಗಳಲ್ಲಿ ಬಾಕಿ ಉಳಿದಿರುವ ರಸ್ತೆಗಳು. (2) ಬಿ.ಎಸ್.ವಿ. ರೆಡ್ಡಿ ಬಡಾವಣೆ, ಸಂತೋಷ್ ರೆಡ್ಡಿ ಬಡಾವಣೆ, ರಾಮಕೃಷ್ಣ ರೆಡ್ಡಿ ಬಡಾವಣೆ & ಅಂಚೆ ಕಚೇರಿ ರಸ್ತೆ, ಸರ್ ಎಂ.ವಿ.ನಗರ & ಸುತ್ತಮುತ್ತಲ ಪ್ರದೇಶಗಳಲ್ಲಿ ಬಾಕಿ ಉಳಿದಿರುವ ರಸ್ತೆಗಳು. (3) ಲಕ್ಷ್ಮಣಮೂರ್ತಿನಗರ, ಗುರುಮೂರ್ತಿ ರೆಡ್ಡಿ ಬಡಾವಣೆ, ಹಳೆ ಯೂಕೋ ಬ್ಯಾಂಕ್ ರಸ್ತೆ, ಕುವೆಂಪುನಗರ, ನಾಗಪ್ಪರೆಡ್ಡಿ ಬಡಾವಣೆ, ಕುಮಾರನ್ ಶಾಲೆ, ಆಕಳಪ್ಪ ಬಡಾವಣೆ, ಮುನಿಕಲ್ಲಪ್ಪ ಬಡಾವಣೆ ಮತ್ತು **ವಾರ್ಡ್ ಸಂಖ್ಯೆ–51**ರಲ್ಲಿ ಸುತ್ತಮುತ್ತಲ ಪ್ರದೇಶದಲ್ಲಿ ಬಾಕಿ ಉಳಿದ ರಸ್ತೆಗಳು.	1300.00	15.00
2.	**ವಾರ್ಡ್ ಸಂಖ್ಯೆ–25**ರ ಹೊರಮಾವುವಿನ ವಿವಿಧ ಬಡಾವಣೆಗಳು ಹಾಗೂ ಸುತ್ತಮುತ್ತಲ ಪ್ರದೇಶಗಳಲ್ಲಿ ಚರಂಡಿಗಳ ನಿರ್ಮಾಣ, ರಸ್ತೆ ಮತ್ತು ಚರಂಡಿಗಳಲ್ಲಿ ಅಳವಡಿಸಿರುವ ಕಾವೇರಿ ನೀರು ಸರಬರಾಜು ಮತ್ತು ಒಳಚರಂಡಿ ಮಾರ್ಗಗಳನ್ನು ಪುನಶ್ಚೇತನ ಮತ್ತು ರೀಸರ್ಪೇಸಿಂಗ್ ಮಾಡುವುದು.(3 ಕಾಮಗಾರಿಗಳನ್ನು ಒಳಗೊಂಡು) (ಪ್ಯಾಕೇಜ್–2) (1) ಹೊರಮಾವು, ಜಯರಾಮಪ್ಪ ಬಡಾವಣೆ, ಪಟೇಲ್ ಶಾಮಣ್ಣ ಬಡಾವಣೆ, ಮುನಿರಾಮಯ್ಯ ಬಡಾವಣೆ, ಹೊಯ್ಸಳನಗರ & ಸುತ್ತಮುತ್ತಲ ಪ್ರದೇಶದಲ್ಲಿ ಬಾಕಿ ಉಳಿದ ರಸ್ತೆಗಳು. (2) ಹೊರಮಾವು ಅಗರ, ಕಾವೇರಿನಗರ, ದಿವ್ಯ ಉನ್ನತಿ ಬಡಾವಣೆ, ಅಂಜನಾದ್ರಿ ಬಡಾವಣೆಯಲ್ಲಿ ಬಾಕಿ ಉಳಿದಿರುವ ಅಡ್ಡರಸ್ತೆಗಳು ಹಾಗೂ ಸುತ್ತಮುತ್ತಲ ಪ್ರದೇಶದಲ್ಲಿ ಬಾಕಿ ಉಳಿದಿರುವ ರಸ್ತೆಗಳು. (3) ಬಂಜಾರ ಎಕ್ಸ್‌ಟೆನ್ಸನ್, ಬಾಬುಸಾಪಾಳ್ಯ, ಪ್ರಕೃತಿ ಟೌನ್‌ಶಿಪ್, ಚೇಳಕೆರೆ, ಗೆದ್ದಲಹಳ್ಳಿ, ಹೆಚ್‌ಆರ್‌ಬಿಆರ್ ಬಡಾವಣೆ, ಅಗರ ಕೆರೆ ರಸ್ತೆ & ಸುತ್ತಮುತ್ತಲ ಪ್ರದೇಶದಲ್ಲಿ ಬಾಕಿ ಉಳಿದ ರಸ್ತೆಗಳು.	1200.00	15.00
3.	**ವಾರ್ಡ್ ಸಂಖ್ಯೆ–25**ರ ಹೊರಮಾವುವಿನ ವಿವಿಧ ಬಡಾವಣೆಗಳು ಹಾಗೂ ಸುತ್ತಮುತ್ತಲ ಪ್ರದೇಶಗಳಲ್ಲಿ ಚರಂಡಿಗಳ ನಿರ್ಮಾಣ, ರಸ್ತೆ ಮತ್ತು ಚರಂಡಿಗಳಲ್ಲಿ ಅಳವಡಿಸಿರುವ ಕಾವೇರಿ ನೀರು ಸರಬರಾಜು ಮತ್ತು ಒಳಚರಂಡಿ ಮಾರ್ಗಗಳನ್ನು ಪುನಶ್ಚೇತನ ಮತ್ತು ರೀಸರ್ಪೇಸಿಂಗ್ ಮಾಡುವುದು. (2 ಕಾಮಗಾರಿಗಳನ್ನು ಒಳಗೊಂಡು) (ಪ್ಯಾಕೇಜ್–3) (1) ರಾಮಸ್ವಾಮಿರೆಡ್ಡಿ ಬಡಾವಣೆ, ಹೇಮೇಗೌಡ ಬಡಾವಣೆ, ಡಿಫೆನ್ಸ್ ಎನ್‌ಕ್ಲೇವ್, ಕೊಲೋನ್ಯಾ ಸಂತ ಮರಿಯಾ ಬಡಾವಣೆ, ಮುನಿಸ್ವಾಮಪ್ಪ ಬಡಾವಣೆ, ಫೆರ್ನ್ಸ್ ಬಾಕಿ ಉಳಿಕೆ ರಸ್ತೆಗಳು & ಕೆ. ನಾರಾಯಣಪುರ ಗ್ರಾಮ ಎಕ್ಸ್‌ಟೆನ್ಸನ್ ಬಾಕಿ ಉಳಿಕೆ ಅಡ್ಡರಸ್ತೆಗಳು ಹಾಗೂ ಸುತ್ತಮುತ್ತಲ ಪ್ರದೇಶಗಳಲ್ಲಿ ಬಾಕಿ ಉಳಿಕೆ ರಸ್ತೆಗಳು. (2) ಗಣೇಶ ದೇವಸ್ಥಾನದ ರಸ್ತೆಗಳು, ಈಸ್ಟರ್ ಹಾರ್ಮೊನಿ ಮತ್ತು ನಗರೇಶ್ವರ ನಾಗೇನಹಳ್ಳಿ ಎಕ್ಸ್‌ಟೆನ್ಸನ್ ಬಾಕಿ ಉಳಿದ ಅಡ್ಡರಸ್ತೆಗಳು ಹಾಗೂ ಸುತ್ತಮುತ್ತಲ ಪ್ರದೇಶಗಳಲ್ಲಿ ಬಾಕಿ ಉಳಿದ ರಸ್ತೆಗಳು.	1000.00	15.00
4.	**ವಾರ್ಡ್ ಸಂಖ್ಯೆ–25**ರ ಹೊರಮಾವು ಮತ್ತು **ವಾರ್ಡ್ ಸಂಖ್ಯೆ–26**ರ ರಾಮಮೂರ್ತಿನಗರದಲ್ಲಿ ವಿವಿಧ ಬಡಾವಣೆಗಳು ಹಾಗೂ ಸುತ್ತಮುತ್ತಲ ಪ್ರದೇಶಗಳಲ್ಲಿ ಚರಂಡಿಗಳ ನಿರ್ಮಾಣ, ರಸ್ತೆ ಮತ್ತು ಚರಂಡಿಗಳಲ್ಲಿ ಅಳವಡಿಸಿರುವ ಕಾವೇರಿ ನೀರು ಸರಬರಾಜು ಮತ್ತು ಒಳಚರಂಡಿ ಮಾರ್ಗಗಳನ್ನು ಪುನಶ್ಚೇತನ ಮತ್ತು ರೀಸರ್ಪೇಸಿಂಗ್ ಮಾಡುವುದು. (2 ಕಾಮಗಾರಿಗಳನ್ನು ಒಳಗೊಂಡಂತೆ) (ಪ್ಯಾಕೇಜ್–4) (1) ಕೊತ್ತನೂರು ವ್ಯಾಯಾಮಶಾಲೆ ರಸ್ತೆ, ಉತ್ತನಳ್ಳಪ್ಪ ಬಡಾವಣೆ ಮತ್ತು ಕೆ.ಆರ್.ಸಿ. ರಸ್ತೆ, ದೊಡ್ಡಗುಬ್ಬಿ ಮುಖ್ಯರಸ್ತೆ ಮತ್ತು ಅಡ್ಡರಸ್ತೆಗಳು, ವೈಭವ ಬಡಾವಣೆ, ಶೆಟ್ಟಿ ಬಡಾವಣೆ, ಪಟೇಲ್ ರಾಮರೆಡ್ಡಿ ಬಡಾವಣೆ ಮತ್ತು ಕ್ಯಾಲಸನಹಳ್ಳಿ ಗ್ರಾಮ ಎಕ್ಸ್‌ಟೆನ್ಸನ್ ಬಾಕಿ ಉಳಿಕೆ ರಸ್ತೆಗಳು ಮತ್ತು ಬಿ.ಡಿ.ಎಸ್.ನಗರ ಸುತ್ತಮುತ್ತಲ ಪ್ರದೇಶದಲ್ಲಿ ಬಾಕಿ ಉಳಿದ ರಸ್ತೆಗಳು. (2) ಅಕ್ಷಯನಗರ 1ನೇ ಬ್ಲಾಕ್ ಮತ್ತು 2ನೇ ಬ್ಲಾಕ್, ಪಿ&ಟಿ ಬಡಾವಣೆ, ಕೌದೇನಹಳ್ಳಿ ರಸ್ತೆಗಳು ಮತ್ತು ಸುತ್ತಮುತ್ತಲ ಪ್ರದೇಶದಲ್ಲಿ ಬಾಕಿ ಉಳಿದ ರಸ್ತೆಗಳು.	1500.00	15.00
5.	**ವಾರ್ಡ್ ಸಂಖ್ಯೆ–26**ರ ರಾಮಮೂರ್ತಿನಗರಲ್ಲಿ ವಿವಿಧ ಬಡಾವಣೆಗಳು ಹಾಗೂ ಸುತ್ತಮುತ್ತಲ ಪ್ರದೇಶಗಳಲ್ಲಿ ರಸ್ತೆಗಳು ಮತ್ತು ಚರಂಡಿಗಳ ಸುಧಾರಣೆ, ಚರಂಡಿಗಳ ನಿರ್ಮಾಣ, ರಸ್ತೆ ಮತ್ತು ಚರಂಡಿಗಳಲ್ಲಿ ಅಳವಡಿಸಿರುವ ಕಾವೇರಿ ನೀರು ಸರಬರಾಜು ಮತ್ತು ಒಳಚರಂಡಿ ಮಾರ್ಗಗಳನ್ನು ಪುನಶ್ಚೇತನ ಮತ್ತು ರೀಸರ್ಪೇಸಿಂಗ್ ಮಾಡುವುದು. (3 ಕಾಮಗಾರಿಗಳನ್ನು ಒಳಗೊಂಡಿದೆ) (ಪ್ಯಾಕೇಜ್–5) (1) ಪಿ&ಟಿ ಬಡಾವಣೆ, ಕೌದೇನಹಳ್ಳಿ, ಶಾಂತಿ ಬಡಾವಣೆ, ಹೊಸ ಮಂಜುನಾಥ ಬಡಾವಣೆ ರಸ್ತೆಗಳು ಮತ್ತು ಸುತ್ತಮುತ್ತಲ ಪ್ರದೇಶದಲ್ಲಿ ಬಾಕಿ ಉಳಿದ ರಸ್ತೆಗಳು. (2) ಸರ್.ಎಂ.ವಿ.ನಗರ, ಹೊಸ ಮಂಜುನಾಥ ಬಡಾವಣೆ, ಆದಿತ್ಯ ಬಡಾವಣೆ, ಪ್ರಿಯದರ್ಶಿನಿ ಬಡಾವಣೆ, ಗಂಗೂಸ ಬಡಾವಣೆ, ಚಂದ್ರವಾಡ ಬಡಾವಣೆ, ವಿನಾಯಕ ಬಡಾವಣೆ & **ವಾರ್ಡ್ ಸಂಖ್ಯೆ–26**ರ ಸುತ್ತಮುತ್ತಲ ಪ್ರದೇಶಗಳಲ್ಲಿನ ರಸ್ತೆಗಳು. (3) ಎನ್.ಆರ್.ಐ. ಬಡಾವಣೆ, ಎಂ.ಆರ್. ರಿಚಸ್ ಗಾರ್ಡನ್ ಮತ್ತು ಎಕ್ಸ್‌ಟೆನ್ಸನ್ ಬಾಕಿ ಉಳಿದ ರಸ್ತೆಗಳು ಮತ್ತು **ವಾರ್ಡ್ ಸಂಖ್ಯೆ–26**ರ ಸುತ್ತಮುತ್ತಲ ಪ್ರದೇಶಗಳಲ್ಲಿನ ರಸ್ತೆಗಳು.	1500.00	15.00
6.	**ವಾರ್ಡ್ ಸಂಖ್ಯೆ–26**ರ ರಾಮಮೂರ್ತಿನಗರದಲ್ಲಿನ ವಿವಿಧ ಬಡಾವಣೆಗಳು ಹಾಗೂ ಸುತ್ತಮುತ್ತಲ ಪ್ರದೇಶಗಳಲ್ಲಿ ಚರಂಡಿಗಳ ನಿರ್ಮಾಣ, ರಸ್ತೆ ಮತ್ತು ಚರಂಡಿಗಳಲ್ಲಿ ಅಳವಡಿಸಿರುವ ಕಾವೇರಿ ನೀರು ಸರಬರಾಜು ಮತ್ತು ಒಳಚರಂಡಿ ಮಾರ್ಗಗಳನ್ನು ಪುನಶ್ಚೇತನ ಮತ್ತು ರೀಸರ್ಪೇಸಿಂಗ್ ಮಾಡುವುದು. (2 ಕಾಮಗಾರಿಗಳನ್ನು ಒಳಗೊಂಡಂತೆ) (ಪ್ಯಾಕೇಜ್–6). (1). ರಿಚ್ಚಸ್ ಗಾರ್ಡನ್, ಮಂಜುನಾಥನಗರ, ಬಂಜಾರ ಬಡಾವಣೆ, ಸಂಕಲ್ಪ ಬಡಾವಣೆ ಎಕ್ಸ್‌ಟೆನ್ಸನ್ ಬಾಕಿ ಉಳಿಕೆ ರಸ್ತೆಗಳು & ಕಲ್ಕೆರೆ ಗ್ರಾಮದ ಸುತ್ತಮುತ್ತಲ ಪ್ರದೇಶಗಳಲ್ಲಿನ ಬಾಕಿ ಉಳಿಕೆ ರಸ್ತೆಗಳು. (2). ಕೆ. ಚನ್ನಸಂದ್ರ ಗ್ರಾಮ ಮತ್ತು ಎಕ್ಸ್‌ಟೆನ್ಸನ್ ಬಾಕಿ ಉಳಿಕೆ ರಸ್ತೆಗಳು ಮತ್ತು ಸುತ್ತಮುತ್ತಲ ಪ್ರದೇಶದಲ್ಲಿನ ಬಾಕಿ ಉಳಿಕೆ ರಸ್ತೆಗಳು.	1000.00	15.00
7.	**ವಾರ್ಡ್ ಸಂಖ್ಯೆ–51**ರ ವಿಜಿನಾಪುರದಲ್ಲಿನ ವಿವಿಧ ಬಡಾವಣೆಗಳು ಹಾಗೂ ಸುತ್ತಮುತ್ತಲ ಪ್ರದೇಶಗಳಲ್ಲಿ ರಸ್ತೆಗಳು ಮತ್ತು ಚರಂಡಿಗಳನ್ನು ಸುಧಾರಣೆ ಮಾಡುವುದು. (2 ಕಾಮಗಾರಿಗಳನ್ನು ಒಳಗೊಂಡು) (ಪ್ಯಾಕೇಜ್–7). (1) ಕೊತ್ತನೂರು ವಿಜಿನಾಪುರ, ಅಂಬೇಡ್ಕರ್‌ನಗರ, ಮುತ್ತಮ್ಮ ಬಡಾವಣೆ, ಎಫ್‌ಸಿಐ ಉಗ್ರಾಣದ ಪ್ರದೇಶ, ಬೃಂದಾವನ ಬಡಾವಣೆ ಮತ್ತು ಸುತ್ತಮುತ್ತಲ ಪ್ರದೇಶದಲ್ಲಿನ ಬಾಕಿ ಉಳಿಕೆ ರಸ್ತೆಗಳು. (2) ಕಸ್ತೂರಿನಗರ, ಬಿ.ಡಿ.ಎ. ಬಡಾವಣೆ ಎನ್‌ಜಿಇಎಫ್ ಬಿ.ಡಿ.ಎ. ಬಡಾವಣೆಯ ಪೂರ್ವ ಭಾಗ, ಎಸ್.ಪಿ. ನಾಯ್ಡು ಬಡಾವಣೆ, ಆರ್.ಟಿ.ಓ ಕಚೇರಿ ಪ್ರದೇಶ ಮತ್ತು ಸುತ್ತಮುತ್ತಲ ಪ್ರದೇಶದಲ್ಲಿ ಬಾಕಿ ಉಳಿಕೆ ರಸ್ತೆಗಳು.	1000.00	15.00
8.	**ವಾರ್ಡ್ ಸಂಖ್ಯೆ–52**ರ ಕೆ.ಆರ್. ಪುರಂನ ಕೆ.ಆರ್.ಪುರ ಮತ್ತು ಭಟ್ಟರಹಳ್ಳಿಯ ವಿವಿಧ ಬಡಾವಣೆಗಳು ಹಾಗೂ ಸುತ್ತಮುತ್ತಲ ಪ್ರದೇಶಗಳಲ್ಲಿ ರಸ್ತೆಗಳು ಮತ್ತು ಚರಂಡಿಗಳನ್ನು ಸುಧಾರಣೆ ಮಾಡುವುದು. (ನಿಸರ್ಗ ಬಡಾವಣೆ, ಕೆ.ಆರ್.ಪುರಂ ಎಕ್ಸ್‌ಟೆನ್ಸನ್, ಪದವಿಪೂರ್ವ ಕಾಲೇಜು ರಸ್ತೆ, ಕೆ.ಆರ್.ಇನ್ ಹೋಟೆಲ್ ರಸ್ತೆ, ರವೀಂದ್ರ ಬಡಾವಣೆ, ಕೃಷ್ಣ ಚಿತ್ರಮಂದಿರ ರಸ್ತೆ, ಮುನಿಯಪ್ಪ ಬಡಾವಣೆ, ಶ್ರೀಕೃಷ್ಣ ದೇವರಾಯ ಬಡಾವಣೆ, ಗರುಡ ರಾಯಲ್ ಅಪಾರ್ಟ್‌ಮೆಂಟ್‌ನ ಎದುರು, ಶ್ರೀನಿವಾಸ ಬಡಾವಣೆ, ಶರಾವತಿ ಬಡಾವಣೆ, ಬೈರ್ಯಣ್ಣ ಬಡಾವಣೆ, ಆರ್‌ಎಂಎಸ್ ಕಾಲೋನಿ, ಬಸವನಪುರ ಅಡ್ಡರಸ್ತೆಗಳು ಇತ್ಯಾದಿ) (ಪ್ಯಾಕೇಜ್–8).	1000.00	15.00
9.	**ವಾರ್ಡ್ ಸಂಖ್ಯೆ–52**ರ ಕೆ.ಆರ್. ಪುರಂನ ತಂಬುಚೆಟ್ಟಿಪಾಳ್ಯ ಮತ್ತು ಆನಂದಪುರದ ವಿವಿಧ ಬಡಾವಣೆಗಳು ಹಾಗೂ ಸುತ್ತಮುತ್ತಲ ಪ್ರದೇಶಗಳಲ್ಲಿ ರಸ್ತೆಗಳು ಮತ್ತು ಚರಂಡಿಗಳನ್ನು ಸುಧಾರಣೆ ಮಾಡುವುದು. (ಪಾಪಣ್ಣ ಬಡಾವಣೆ, ಬಿ.ಇ.ಎಂ.ಎಲ್ ಬಡಾವಣೆ, ರಂಗಪ್ಪ ಗಾರ್ಡನ್, ಮಂಜುನಾಥ ಬಡಾವಣೆ, ಡಿಎನ್‌ಎಸ್ ಬಡಾವಣೆ, ಮಾರ್ಥಮ್ಮ ಬಡಾವಣೆ, ವೃದ್ಧಾಶ್ರಮ ಸುತ್ತಮುತ್ತಲ ಪ್ರದೇಶಗಳು, ಮಾನಮ್ಮ ಬಡಾವಣೆ, ಎಲ್‌ವಿಎಸ್ ಅಪಾರ್ಟ್‌ಮೆಂಟ್ ರಸ್ತೆಗಳು ಇತ್ಯಾದಿ). (ಪ್ಯಾಕೇಜ್–9)	1000.00	15.00
10.	**ವಾರ್ಡ್ ಸಂಖ್ಯೆ–52**ರ ಕೆ.ಆರ್.ಪುರ ಮತ್ತು ವಾರ್ಡ್ ಸಂಖ್ಯೆ–53ರ ಬಸವನಪುರ ವಾರ್ಡ್‌ಗಳ ವಿವಿಧ ಬಡಾವಣೆ ಮತ್ತು ಸುತ್ತಮುತ್ತ ಪ್ರದೇಶಗಳಲ್ಲಿ ಸ್ಮಶಾನ, ರಸ್ತೆಗಳು ಹಾಗೂ ಚರಂಡಿಗಳನ್ನು ಸುಧಾರಣೆ ಮಾಡುವುದು. (2 ಕಾಮಗಾರಿಗಳನ್ನು ಒಳಗೊಂಡಿದೆ). (ಪ್ಯಾಕೇಜ್–10). (1) **ವಾರ್ಡ್ ಸಂಖ್ಯೆ–52**ರ ಕೆ.ಆರ್.ಪುರಂನಲ್ಲಿ ಸ್ಮಶಾನ ಸುಧಾರಣೆ ಮತ್ತು ಸುತ್ತಮುತ್ತಲ ಪ್ರದೇಶಗಳಲ್ಲಿ ಸಂಬಂಧಿತ ಕಾಮಗಾರಿಗಳನ್ನು ಮಾಡುವುದು. (2) **ವಾರ್ಡ್ ಸಂಖ್ಯೆ–53**ರ ಬಸವನಪುರದ ಪ್ರಿಯದರ್ಶಿನಿ ಬಡಾವಣೆ, ಲಕ್ಷ್ಮೀಪುರ ಬಡಾವಣೆ, ವಿನಾಯಕ ಬಡಾವಣೆ ಮತ್ತು ನಳಪಾಕ ಹೋಟೆಲ್ ಸುತ್ತಮುತ್ತಲ ಪ್ರದೇಶಗಳು.	1000.00	15.00
11.	**ವಾರ್ಡ್ ಸಂಖ್ಯೆ–53** ಬಸವನಪುರದ ವಿವಿಧ ಬಡಾವಣೆಗಳು ಮತ್ತು ಸುತ್ತಮುತ್ತಲ ಪ್ರದೇಶಗಳಲ್ಲಿ ರಸ್ತೆಗಳು ಮತ್ತು ಚರಂಡಿಗಳನ್ನು ಸುಧಾರಣೆ ಮಾಡುವುದು. (2 ಕಾಮಗಾರಿಗಳನ್ನು ಒಳಗೊಂಡಂತೆ) (ಪ್ಯಾಕೇಜ್–11) (1). ಮುನೇಶ್ವರ ಬಡಾವಣೆ, ಸ್ವತಂತ್ರನಗರ ಮತ್ತು ದೊಡ್ಡಬಸವನಪುರದ ಸುತ್ತಮುತ್ತಲ ಪ್ರದೇಶಗಳು2) (2) ದೇವಸಂದ್ರ, ಕುವೆಂಪು ಬಡಾವಣೆ, ವಿಜಯ ಬ್ಯಾಂಕ್ ಕಾಲೋನಿ ಮತ್ತು ಕೃಷ್ಣನಗರ ಸುತ್ತಮುತ್ತಲ ಪ್ರದೇಶಗಳು.	1000.00	15.00
12.	**ವಾರ್ಡ್ ಸಂಖ್ಯೆ–53** ಬಸವನಪುರದ ಆರಿಜಿನ್ ಹಾರ್ಮೋನಿ ಬಡಾವಣೆ, ಸಮೃದ್ಧಿ ಬಡಾವಣೆ, ಭೂ ಸಮರ್ಥ ಬಡಾವಣೆ ಸುತ್ತಮುತ್ತಲ ಪ್ರದೇಶಗಳಲ್ಲಿ ಬೆಂಗಳೂರು ಜಲಮಂಡಳಿ ವತಿಯಿಂದ ಅಗೆದಿರುವ ರಸ್ತೆ ಭಾಗಗಳ ಪುನಶ್ಚೇತನ ಹಾಗೂ ರಸ್ತೆಗಳು ಮತ್ತು ಚರಂಡಿಗಳನ್ನು ಸುಧಾರಣೆ ಮಾಡುವುದು. (ಪ್ಯಾಕೇಜ್–12)	1000.00	15.00
13.	**ವಾರ್ಡ್ ಸಂಖ್ಯೆ–53** ಬಸವನಪುರದ ವಿವಿಧ ಬಡಾವಣೆಗಳು ಮತ್ತು ಸುತ್ತಮುತ್ತಲ ಪ್ರದೇಶಗಳಲ್ಲಿ ಬೆಂಗಳೂರು ಜಲಮಂಡಳಿ ವತಿಯಿಂದ ಅಗೆದಿರುವ ರಸ್ತೆ ಭಾಗಗಳ ಪುನಶ್ಚೇತನ ಹಾಗೂ ರಸ್ತೆಗಳು ಮತ್ತು ಚರಂಡಿಗಳನ್ನು ಸುಧಾರಣೆ ಮಾಡುವುದು. (2 ಕಾಮಗಾರಿಗಳನ್ನು ಒಳಗೊಂಡಂತೆ) (ಪ್ಯಾಕೇಜ್–13) (1) ಮೇಡಹಳ್ಳಿ ಸುತ್ತಮುತ್ತಲ ಪ್ರದೇಶಗಳು (2) ಅನ್ನಪೂರ್ಣೇಶ್ವರಿ ಬಡಾವಣೆ, ಫ್ರೆಂಡ್ಸ್ ಬಡಾವಣೆ, ನಾಗಾರ್ಜುನ ಬಡಾವಣೆ, ಸೀಗೇಹಳ್ಳಿ ಸುತ್ತಮುತ್ತಲ ಪ್ರದೇಶಗಳು.	1200.00	15.00
14.	**ವಾರ್ಡ್ ಸಂಖ್ಯೆ–55,** ದೇವಸಂದ್ರದ ವಿವಿಧ ಬಡಾವಣೆಗಳು ಮತ್ತು ಸುತ್ತಮುತ್ತಲ ಪ್ರದೇಶಗಳಲ್ಲಿ ರಸ್ತೆಗಳು ಹಾಗೂ ಚರಂಡಿಗಳನ್ನು ಸುಧಾರಣೆ ಮಾಡುವುದು. (2 ಕಾಮಗಾರಿಗಳನ್ನು ಒಳಗೊಂಡಂತೆ) (ಪ್ಯಾಕೇಜ್–14) (1) ವಿ.ಆರ್. ಮಾಲ್ ರಸ್ತೆ, ಎಂ.ಡಿ.ಪುರ ಪೊಲೀಸ್ ಠಾಣೆ ರಸ್ತೆ, ಬಿ.ಎನ್.ಪುರ ಮತ್ತು ಸಿಂಗಯ್ಯನಪಾಳ್ಯ ಸುತ್ತಮುತ್ತಲ ಪ್ರದೇಶಗಳು. (2) ಆರ್.ಆರ್.ದೇವಸ್ಥಾನದ ರಸ್ತೆ, ಗೀತಾ ಕ್ಲಿನಿಕ್ ರಸ್ತೆ, ಟೆಂಟ್ ರಸ್ತೆ, ಡೀಸೆಲ್ ಶೆಡ್ ರಸ್ತೆ, ಸಂಜಯನಗರ, ಮಹದೇವಪುರ ಬಂಡೆ ಸುತ್ತಮುತ್ತಲ ಪ್ರದೇಶಗಳು.	1000.00	15.00
15.	**ವಾರ್ಡ್ ಸಂಖ್ಯೆ–56,** ಎ. ನಾರಾಯಣಪುರದ ವಿವಿಧ ಬಡಾವಣೆಗಳು ಮತ್ತು ಸುತ್ತಮುತ್ತಲ ಪ್ರದೇಶಗಳಲ್ಲಿ ರಸ್ತೆಗಳು ಹಾಗೂ ಚರಂಡಿಗಳನ್ನು ಸುಧಾರಣೆ ಮಾಡುವುದು. (2 ಕಾಮಗಾರಿಗಳನ್ನು ಒಳಗೊಂಡಂತೆ) (ಪ್ಯಾಕೇಜ್–15) (1) ಉದಯನಗರ, ಐಟಿಐ ಬಡಾವಣೆ, ವಿಎಸ್‌ಆರ್ ಬಡಾವಣೆ, ಎ. ನಾರಾಯಣಪುರ ಗ್ರಾಮ, ಟ್ಯಾಗೋರ್ ರಸ್ತೆ, ಎನ್‌ಎಂಆರ್ ಬಡಾವಣೆ, ರಾಮಾಂಜಿನಪ್ಪ ಬಡಾವಣೆ, ಮೈತ್ರಿ ಶಾಲೆ, ಕೃಷ್ಣನಗರ, ಗುರುವಾರೆಡ್ಡಿ ಬಡಾವಣೆ ಮತ್ತು ಸುತ್ತಮುತ್ತಲ ಪ್ರದೇಶಗಳು. (2) ಶಿವಮಂದಿರ, ಎವರ್‌ಗ್ರೀನ್ ರಸ್ತೆ, ಪೈ ಬಡಾವಣೆ, ನೇತ್ರಾವತಿ ರಸ್ತೆ, ಕುವೆಂಪು ರಸ್ತೆ, ಕಾವೇರಿ ರಸ್ತೆ, ದರ್ಗಾಮೊಹಲ್, ಜ್ಯೋತಿಪುರ ಮತ್ತು ಸುತ್ತಮುತ್ತಲ ಪ್ರದೇಶ.	1000.00	15.00
16.	**ವಾರ್ಡ್ ಸಂಖ್ಯೆ–56,** ಎ.ನಾರಾಯಣಪುರದಲ್ಲಿ ರಸ್ತೆಗಳು ಮತ್ತು ಚರಂಡಿಗಳನ್ನು ಸುಧಾರಣೆ ಮಾಡುವುದು ಹಾಗೂ ಹನುಮಾನ್ ಉದ್ಯಾನವನದ ಸುತ್ತ ಕಾಂಪೌಂಡ್ ನಿರ್ಮಾಣ ಮಾಡುವುದು. (ಪ್ಯಾಕೇಜ್–16)	1000.00	15.00
17.	**ವಾರ್ಡ್ ಸಂಖ್ಯೆ–81,** ವಿಜ್ಞಾನನಗರದ ರಾಮಯ್ಯರೆಡ್ಡಿ ಕಾಲೋನಿ, ಎ, ಬಿ ಮತ್ತು ಸಿ ಸೆಕ್ಟರ್, ಕಾಳಪ್ಪ ಬಡಾವಣೆ, ವೀರಭದ್ರನಗರ, ತಲಕಾವೇರಿ ಬಡಾವಣೆ, ವಿಭೂತಿಪುರ, ಶಿವಶಕ್ತಿ ಕಾಲೋನಿ, ಶಿವಾನಂದನಗರ, ಜಗದೀಶನಗರ, ಬೃಂದಾವನ ಎಸ್ಟೇಟ್, ವಿಜ್ಞಾನ ನಗರ, ಕೆಂಪಣ್ಣ ರಸ್ತೆ, ಜ್ಯೋತಿನಗರ, ಸೈಯದ್ ಬ್ಲಾಕ್, ಎಲ್‌ಬಿಎಸ್ ನಗರ, ಖಾಸಿಂಸಾಬ್ ಬಡಾವಣೆ, ಗಫೂರ್ ಬಡಾವಣೆ, ವಿಶ್ವಜೀತ್ ಬಡಾವಣೆ ಮತ್ತು ಸುತ್ತಮುತ್ತಲ ಪ್ರದೇಶಗಳಲ್ಲಿ ರಸ್ತೆಗಳು ಮತ್ತು ಚರಂಡಿಗಳನ್ನು ಸುಧಾರಣೆ ಮಾಡುವುದು. (ಪ್ಯಾಕೇಜ್–17).	1000.00	15.00
18.	**ವಾರ್ಡ್ ಸಂಖ್ಯೆ–81,** ವಿಜ್ಞಾನನಗರದ ಬಿ.ಕೆ. ಅಬ್ಬಯ್ಯ ರೆಡ್ಡಿ ಬಡಾವಣೆ, ಸಾಯಿಬಾಬಾ ದೇವಸ್ಥಾನದ ರಸ್ತೆ, ಕೆ.ಜಿ.ಎಫ್ ಮುನಿರೆಡ್ಡಿ ಬಡಾವಣೆ, ಆಕಾಶ್‌ನಗರ, ನಂದಿನಿ ಬಡಾವಣೆ, ಎಸ್.ಆರ್.ಆರ್. ಬಡಾವಣೆ, ಗುರುರೆಡ್ಡಿ ಬಡಾವಣೆ, ಕೊಂಡಾರೆಡ್ಡಿ ಬಡಾವಣೆ, ಅಂಕಪ್ಪರೆಡ್ಡಿ, ರಂಗನಾಥ್ ಬಡಾವಣೆ, ವೆಂಕಟೇಶ್ವರ ಬಡಾವಣೆ, ಸರಸ್ವತಿನಗರ, ಶಿವಗಂಗಾ ಬಡಾವಣೆ, ಮಹದೇವಪುರ ಗ್ರಾಮ, ಪುಟ್ಟಪ್ಪ ಬಡಾವಣೆ, ಚಿನ್ನಪ್ಪ ಬಡಾವಣೆ, ಆಂಜನೇಯ ದೇವಸ್ಥಾನದ ರಸ್ತೆ ಮತ್ತು ಸುತ್ತಮುತ್ತಲ ಪ್ರದೇಶಗಳಲ್ಲಿ ರಸ್ತೆಗಳು ಮತ್ತು ಚರಂಡಿಗಳನ್ನು ಸುಧಾರಣೆ ಮಾಡುವುದು. (ಪ್ಯಾಕೇಜ್–18). .	1000.00	15.00
19.	ವಾರ್ಡ್ ಸಂಖ್ಯೆ–87ರ ಹೆಚ್‌ಎಎಲ್ ವಿಮಾನ ನಿಲ್ದಾಣ ವಾರ್ಡ್‌ನ ವಿವಿಧ ಬಡಾವಣೆಗಳು ಮತ್ತು ಸುತ್ತಮುತ್ತಲ ಪ್ರದೇಶಗಳಲ್ಲಿ ರಸ್ತೆಗಳು ಮತ್ತು ಚರಂಡಿಗಳನ್ನು ಸುಧಾರಣೆ ಮಾಡುವುದು. (2 ಕಾಮಗಾರಿಗಳನ್ನು ಒಳಗೊಂಡಂತೆ) (ಪ್ಯಾಕೇಜ್–19). (1) ರಮೇಶನಗರ, ವಿಭೂತಿಪುರ, ಅನ್ನಸಂದ್ರಪಾಳ್ಯ, ವಿನಾಯಕನಗರ ಮತ್ತು ಸುತ್ತಮುತ್ತಲ ಪ್ರದೇಶಗಳು. (2) ನೆಲ್ಲೂರುಪುರ, ರೆಡ್ಡಿಪಾಳ್ಯ, ಜ್ಯೋತಿನಗರ, ಅಂಬೇಡ್ಕರ್‌ನಗರ, ಜಗದೀಶನಗರ ಮತ್ತು ಸುತ್ತಮುತ್ತಲ ಪ್ರದೇಶಗಳು.	1000.00	15.00

ಟೆಂಡರ್ ವೇಳಾಪಟ್ಟಿ: (1) ಆರ್‌ಎಫ್‌ಪಿ ದಾಖಲೆಗಳನ್ನು ದಿನಾಂಕ: **18.07.2022**ರಿಂದ ಪಡೆಯಬಹುದು. (2) ಬಿಡ್ ಪೂರ್ವಭಾವಿ ಸಭೆಯನ್ನು ದಿನಾಂಕ: **22.07.2022**ರ ಬೆಳಿಗ್ಗೆ **11:30** ಗಂಟೆಗೆ ಕಾರ್ಯಪಾಲಕ ಅಭಿಯಂತರರ ಕಚೇರಿ, ಕೃ.ರಾ.ಪುರ ಇಲ್ಲಿ ನಡೆಸಲಾಗುವುದು. (3) ಭರ್ತಿ ಮಾಡಿದ ಟೆಂಡರ್ ದಾಖಲಾತಿಗಳನ್ನು ಸಲ್ಲಿಸಲು ಕೊನೆಯ ದಿನಾಂಕ: **28.07.2022**ರ ಸಂಜೆ **4:00** ಗಂಟೆಗೆ. (4) ತಾಂತ್ರಿಕ ಬಿಡ್‌ಗಳನ್ನು ದಿನಾಂಕ **30.07.2022**ರ ಸಂಜೆ **4:00** ಗಂಟೆಗೆ ಕಾರ್ಯಪಾಲಕ ಅಭಿಯಂತರರ ಕಚೇರಿ, ಕೆಆರ್ ಪುರ ವಿಭಾಗ ಇಲ್ಲಿ ತೆರೆಯಲಾಗುವುದು. ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಚೇರಿಯಿಂದ ಕೆಲಸದ ವೇಳೆಯಲ್ಲಿ ಅಥವಾ ವೆಬ್‌ಸೈಟ್ **https://eproc.karnataka.gov.in** ನಲ್ಲಿ ಪಡೆದುಕೊಳ್ಳಬಹುದಾಗಿದೆ.

ಕೋವಿಡ್-19 ಲಕ್ಷಣಗಳು ಇವೆಯೇ? ಸಂಪರ್ಕಿಸಿ, ಆಪ್ತಮಿತ್ರ ಸಹಾಯವಾಣಿ 14410.

ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಸಹಿ/–
ಕಾರ್ಯಪಾಲಕ ಅಭಿಯಂತರರು
ಕೆ.ಆರ್. ಪುರ ವಿಭಾಗ

ದಕ್ಷಿಣ ಭಾರತದ ಮೊದಲ ನ್ಯಾನೊ ಯೂರಿಯಾ ಉತ್ಪಾದನಾ ಘಟಕಕ್ಕೆ ಶಿಲಾನ್ಯಾಸ

ದೇವನಹಳ್ಳಿ ಬಳಿ ದ್ರವ ಯೂರಿಯಾ ಘಟಕ

ಪ್ರಜಾವಾಣಿ ವಾರ್ತೆ

ದೇವನಹಳ್ಳಿ (ಬೆಂಗಳೂರು ಗ್ರಾಮಾಂತರ ಜಿಲ್ಲೆ): ತಾಲ್ಲೂಕಿನ ನಾಗನಾಯಕನಹಳ್ಳಿಯಲ್ಲಿರುವ ಹೈ ಟೆಕ್ ಡಿಫೆನ್ಸ್ ಅಂಡ್ ಏರೊ ಸ್ಪೇಸ್ ಪಾರ್ಕ್‌ನಲ್ಲಿ ದಕ್ಷಿಣ ಭಾರತದ ಮೊದಲ ಇಫ್ಕೊ ನ್ಯಾನೊ ಯೂರಿಯಾ ದ್ರವ ಗೊಬ್ಬರ ಉತ್ಪಾದನಾ ಘಟಕಕ್ಕೆ ಗುರುವಾರ ಭೂಮಿಪೂಜೆ ನೆರವೇರಿಸಲಾಯಿತು.

ದೇಶದಲ್ಲಿಯೇ ಆರು ಕೋಟಿ ಬಾಟಲ್ ನ್ಯಾನೊ ದ್ರವ ಯೂರಿಯಾ ಉತ್ಪಾದನೆ ಮಾಡಲು ಸಿದ್ಧತೆ ನಡೆಯುತ್ತಿದೆ. ಇದು 20 ಲಕ್ಷ ಟನ್ ಯೂರಿಯಾ ಬ್ಯಾಗ್‌ಗಳಿಗೆ ಸಮ ಎಂದು ಕೇಂದ್ರ ರಸಾಯನಿಕ ಮತ್ತು ರಸಗೊಬ್ಬರ ಸಚಿವ ಮನಸುಖ್ ಮಾಂಡವಿಯಾ ಹೇಳಿದರು.

ಡ್ರೋನ್ ಮೂಲಕ ದ್ರವ ಯೂರಿಯಾ ಗೊಬ್ಬರ ಸಿಂಪಡಿಸಬಹುದಾಗಿದ್ದು, ಅದಕ್ಕಾಗಿ ಸಹಕಾರ ಸ್ಥಳೀಯ ಯುವಕರಿಗೆ ಡ್ರೋನ್ ಪೈಲೆಟ್ ತರಬೇತಿ ನೀಡಲಿದೆ ಎಂದರು.

ಭಾರತವು ನ್ಯಾನೊ ಯೂರಿಯಾ ಹಕ್ಕುಸ್ವಾಮ್ಯ ಪಡೆದುಕೊಂಡಿದ್ದು, ರೈತರಿಗೆ ಅತಿ ಕಡಿಮೆ ಬೆಲೆಗೆ ಯೂರಿಯಾ ದೊರೆಯಲಿದೆ. ನ್ಯಾನೊ ಯೂರಿಯಾ ಬಳಕೆಯಿಂದ ಮಣ್ಣಿನ ಆರೋಗ್ಯ, ಫಲವತ್ತತೆ ರಕ್ಷಣೆ ಜತೆಗೆ ಕೃಷಿ ಉತ್ಪನ್ನ ಪ್ರಮಾಣ ಹೆಚ್ಚಾಗಲಿದೆ ಎಂದು ಮಾಂಡವಿಯಾ ಅವರು ಹೇಳಿದರು.

ಮುಖ್ಯಾಂಶಗಳು

- ಯೂರಿಯಾ ಸಿಂಪಡಣೆಗಾಗಿ ಯುವಕರಿಗೆ ಡ್ರೋನ್ ಪೈಲಟ್ ತರಬೇತಿ
- ದ್ರವ ಗೊಬ್ಬರದಿಂದ ಕಡಿಮೆ ಪ್ರಮಾಣದ ಹಾನಿ: ಸಿ.ಎಂ
- ಸಮುದ್ರದ ನೀರಿನಿಂದ ಮಂಗಳೂರಿನಲ್ಲಿ ಅಮೋನಿಯಾ ಘಟಕ ಸ್ಥಾಪನೆ

ರಸಾಯನಿಕ ಗೊಬ್ಬರ ಕ್ಷೇತ್ರದಲ್ಲಿ ಇದೊಂದು ಕ್ರಾಂತಿಕಾರಿ ನಡೆ. ರಸಗೊಬ್ಬರ ಕ್ಷೇತ್ರದಲ್ಲಿ ಭಾರತ ಏಕಸ್ವಾಮ್ಯ ಸಾಧಿಸಲಿದೆ

ಬಸವರಾಜ ಬೊಮ್ಮಾಯಿ, ಮುಖ್ಯಮಂತ್ರಿ

ಅತಿಯಾದ ಕೀಟನಾಶಕ ಹಾಗೂ ರಸಗೊಬ್ಬರಗಳ ಬಳಕೆಯಿಂದ ಫಲವತ್ತಾದ ಭೂಮಿ ಸಾರಾಂಶ ಕಳೆದುಕೊಳ್ಳುತ್ತಿತ್ತು. ಆದರೆ ನ್ಯಾನೊ ಯೂರಿಯಾ ಬಳಕೆಯಿಂದ ಹಾನಿಯ ಪ್ರಮಾಣ ಕಡಿಮೆಯಾಗಲಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಹೇಳಿದರು.

‘ವಿಶ್ವ ವ್ಯಾಪಾರ ಸಂಘಟನೆ (ಡಬ್ಲ್ಯುಟಿಒ) ಕೃಷಿ ಒಪ್ಪಂದದಲ್ಲಿ ಕಾರ್ಪೊರೇಟ್ ಸಂಸ್ಥೆಗಳಿಗೆ ಅನುಕೂಲಕರವಾದ ರಸಗೊಬ್ಬರ ನೀತಿ ರೂಪಿಸಿತ್ತು. ಅದಕ್ಕೆ ಸಡ್ಡು ಹೊಡೆದ ಇಫ್ಕೊ ಸಂಸ್ಥೆ ನ್ಯಾನೊ ಯೂರಿಯಾವನ್ನು ಪ್ರಪಂಚಕ್ಕೆ ಪರಿಚಯಿಸಿದೆ. ಸಮುದ್ರದ ನೀರು ಬಳಸಿಕೊಂಡು ಅಮೋನಿಯಾ ಉತ್ಪಾದಿಸುವ ಘಟಕವನ್ನು ಮಂಗಳೂರಿನಲ್ಲಿ ಸ್ಥಾಪಿಸಲು ರಾಜ್ಯ ಸರ್ಕಾರ ಈಗಾಗಲೇ ಒಪ್ಪಂದಕ್ಕೆ ಸಹಿ ಹಾಕಿದೆ. ವಿಶ್ವದಲ್ಲಿ ಗಲ್ಫ್ ರಾಷ್ಟ್ರಗಳನ್ನು ಹೊರತು ಪಡಿಸಿದರೆ ನೀರು ಬಳಸಿಕೊಂಡು ಅಮೋನಿಯಾ ಉತ್ಪಾದಿಸಿದ ಕೀರ್ತಿ ನಮ್ಮದಾಗಲಿದೆ’ ಎಂದರು.

ಸಂಸದ ಬಿ.ಎನ್. ಬಚ್ಚೇಗೌಡ ಮಾತನಾಡಿ, ಇಫ್ಕೊ ಇಂಡಿಯನ್ ಫಾರ್ಮರ್ಸ್ ಫರ್ಟಿಲೈಸರ್ ಕೋ- ಆಪರೇಟಿವ್ ಲಿಮಿಟೆಡ್ ಕಂಪನಿಯು 1967 ರಿಂದಲೂ ರೈತರಿಗೆ ರಸಾಯನಿಕ ಗೊಬ್ಬರ ಸರಬರಾಜು ಮಾಡುತ್ತಿರುವ ವಿಶ್ವಮಾನ್ಯ ಸಂಸ್ಥೆಯಾಗಿದೆ. ಕಡಿಮೆ ದರದಲ್ಲಿ ದ್ರವರೂಪದ ಗೊಬ್ಬರ ಕೃಷಿಕರಿಗೆ ದೊರೆಯಲಿದೆ. ಇದು ದೇಶದ ರೈತರ ವರದಾನವಾಗಲಿದೆ. ನಾಗನಾಯಕಹಳ್ಳಿಯಲ್ಲಿ ಘಟಕ ಆರಂಭವಾಗುತ್ತಿರುವುದರಿಂದ ಸ್ಥಳೀಯರಿಗೆ ಉದ್ಯೋಗ ನೀಡಬೇಕು ಎಂದು ಒತ್ತಾಯಿಸಿದರು.

ರಸಾಯನಿಕ, ರಸಗೊಬ್ಬರ ಮತ್ತು ನವೀಕರಿಸಬಹುದಾದ ಇಂಧನಗಳ ರಾಜ್ಯ ಸಚಿವ ಭಗವಂತ್ ಖೂಬಾ, ಕೃಷಿ ಸಚಿವೆ ಶೋಭಾ ಕರಂದ್ಲಾಜೆ, ಸಂಸದ ಸದಾನಂದ ಗೌಡ, ಸಹಕಾರಿ ಸಚಿವ ಎಸ್. ಟಿ.ಸೋಮಶೇಖರ್, ವಿಧಾನ ಪರಿಷತ್ ಸದಸ್ಯ ಗೋವಿಂದರಾಜು, ನಾರಾಯಣಸ್ವಾಮಿ, ಕೋಲಾರ ಶಾಸಕ ಕೆ.ಶ್ರೀನಿವಾಸಗೌಡ, ಜಿಲ್ಲಾಧಿಕಾರಿ ಆರ್. ಲತಾ, ಕೆಐಎಡಿಬಿ ಅಧಿಕಾರಿ ಶಿವಶಂಕರ್, ಇಫ್ಕೊ ಅಧ್ಯಕ್ಷ ದಿಲೀಪ್ ಸಿಂಘಾನಿ, ಉಪಾಧ್ಯಕ್ಷ ಬಲ್ವೀರ್ ಸಿಂಗ್, ಎಂ.ಡಿ ಉದಯ್ ಶಂಕರ್ ಅವಸ್ಥಿ, ನಿರ್ದೇಶಕರಾದ ಕೆ.ಶ್ರೀನಿವಾಸ್ ಗೌಡ, ಎಂ.ಎನ್. ರಾಜೇಂದ್ರ ಕುಮಾರ್ ಉಪಸ್ಥಿತರಿದ್ದರು.

ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೇವನಹಳ್ಳಿ ಬಳಿಯ ನಾಗನಾಯಕನಹಳ್ಳಿಯಲ್ಲಿರುವ ಹೈ ಟೆಕ್ ಡಿಫೆನ್ಸ್ ಅಂಡ್ ಏರೊ ಸ್ಪೇಸ್ ಪಾರ್ಕ್ ನಲ್ಲಿ ಇಫ್ಕೊದ ನ್ಯಾನೊ ಯೂರಿಯಾ (ದ್ರವ) ಸ್ಥಾವರ ನಿರ್ಮಾಣಕ್ಕೆ ಗುರುವಾರ ಕೇಂದ್ರ ರಸಾಯನಿಕ ಮತ್ತು ರಸಗೊಬ್ಬರ ಸಚಿವ ಮನ್ಸುಖ್ ಮಾಂಡವಿಯಾ ಶಂಕು ಸ್ಥಾಪನೆ ನೆರವೇರಿಸಿದರು. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ರಸಾಯನಿಕ ಮತ್ತು ರಸಗೊಬ್ಬರ ಮತ್ತು ನವೀಕರಿಸಬಹುದಾದ ಇಂಧನಗಳ ರಾಜ್ಯ ಸಚಿವ ಭಗವಂತ್ ಖೂಬಾ, ರಾಜ್ಯ ಕೃಷಿ ಸಚಿವೆ ಶೋಭಾ ಕರಂದ್ಲಾಜೆ, ಸಂಸದರಾದ ಬಿ.ಎನ್ ಬಚ್ಚೇಗೌಡ, ಸಹಕಾರಿ ಸಚಿವ ಎಸ್.ಟಿ.ಸೋಮಶೇಖರ್, ವಿಧಾನ ಪರಿಷತ್ ಸದಸ್ಯ ಗೋವಿಂದರಾಜು, ನಾರಾಯಣಸ್ವಾಮಿ, ಕೋಲಾರ ಶಾಸಕ ಕೆ.ಶ್ರೀನಿವಾಸಗೌಡ ಹಾಜರಿದ್ದರು

ಕಳ್ಳತನ: ದಂಪತಿ ಸೇರಿ ಐವರ ಬಂಧನ

ಸಂಪಿಗೆಹಳ್ಳಿ ಠಾಣೆ ಪೊಲೀಸರಿಂದ ಆರೋಪಿಗಳ ಸೆರೆ • ₹17.35 ಲಕ್ಷ ಮೌಲ್ಯದ ಚಿನ್ನಾಭರಣ ಜಪ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಹಲವು ಮನೆಗಳಲ್ಲಿ ಕಳ್ಳತನ ಮಾಡುತ್ತಿದ್ದ ಆರೋಪದಡಿ ದಂಪತಿ ಸೇರಿ ಐವರನ್ನು ಸಂಪಿಗೆಹಳ್ಳಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

‘ಕಾಡುಗೊಂಡನಹಳ್ಳಿ ಬಾಗಲೂರು ಲೇಔಟ್‌ನ ಜಾನ್ ಪ್ರವೀಣ್ ಅಲಿಯಾಸ್ ಮೂಗು ಮಚ್ಚೆ (32), ಈತನ ಪತ್ನಿ ಆನಂದಿ (19), ಸ್ನೇಹಿತೆ ಧನಲಕ್ಷ್ಮಿ (36) ಹಾಗೂ ಕದ್ದ ಆಭರಣ ಖರೀದಿಸುತ್ತಿದ್ದ ಪಿಳ್ಳಣ್ಣ ಗಾರ್ಡನ್‌ನ ಭವರ್‌ಲಾಲ್ (18), ಚೇತನ್ ಚೌಧರಿ (29) ಎಂಬುವವರನ್ನು ಬಂಧಿಸಲಾಗಿದೆ. ಇವರಿಂದ ₹17.35 ಲಕ್ಷ ಮೌಲ್ಯದ ಚಿನ್ನಾಭರಣ ಹಾಗೂ ಬೆಳ್ಳಿ ಸಾಮಗ್ರಿ ಜಪ್ತಿ ಮಾಡಲಾಗಿದೆ’ ಎಂದು ಪೊಲೀಸರು ಹೇಳಿದರು.

‘ಸಂಪಿಗೆಹಳ್ಳಿ ಠಾಣೆ ವ್ಯಾಪ್ತಿಯಲ್ಲಿ ವಾಸವಿರುವ ನಿವಾಸಿಯೊಬ್ಬರ ಮನೆಯಲ್ಲಿ ಮೇ 5ರಂದು ರಾತ್ರಿ ಕಳ್ಳತನ ಆಗಿತ್ತು. ಬಾಗಿಲು ಬೀಗ ಮುರಿದು ಒಳನುಗ್ಗಿದ್ದ ಕಳ್ಳರು, ಚಿನ್ನಾಭರಣ ಹಾಗೂ ನಗದು ಕದ್ದೊಯ್ದಿದ್ದರು. ಈ ಬಗ್ಗೆ ಪ್ರಕರಣ ದಾಖಲಾಗಿತ್ತು. ತನಿಖೆ ಕೈಗೊಂಡಾಗ ಆರೋಪಿಗಳ ಸುಳಿವು ಸಿಕ್ಕಿತ್ತು’ ಎಂದು ತಿಳಿಸಿದರು.

ಮನೆ ಗುರುತಿಸಿ ಕಳ್ಳತನ: ‘ಆರೋಪಿ ಜಾನ್ ಪ್ರವೀಣ್ ಹಾಗೂ ಪತ್ನಿ ಆನಂದಿ, ನಗರದಲ್ಲಿ ಸುತ್ತಾಡಿ ಮನೆಗಳನ್ನು ಗುರುತಿಸಿ ಕಳ್ಳತನ ಮಾಡುತ್ತಿದ್ದರು. ಇದಕ್ಕೆ ಧನಲಕ್ಷ್ಮಿ ಸಹಕರಿಸುತ್ತಿದ್ದರು’ ಎಂದು ಪೊಲೀಸರು ಹೇಳಿದರು.

‘ರಾಮಮೂರ್ತಿನಗರ, ವಿದ್ಯಾರಣ್ಯಪುರ ಸೇರಿ ವಿವಿಧ ಠಾಣೆ ವ್ಯಾಪ್ತಿಯಲ್ಲೂ ಆರೋಪಿಗಳು ಕಳ್ಳತನ ಮಾಡಿರುವ ಮಾಹಿತಿ ಇದೆ. ಕದ್ದ ವಸ್ತುಗಳನ್ನು ಮಾರುತ್ತಿದ್ದ ಆರೋಪಿಗಳು, ಅದರಿಂದ ಬಂದ ಹಣದಲ್ಲಿ ಐಷಾರಾಮಿ ಜೀವನ ನಡೆಸುತ್ತಿದ್ದರು’ ಎಂದೂ ತಿಳಿಸಿದರು.

ಆರೋಪಿಗಳಿಂದ ಜಪ್ತಿ ಮಾಡಲಾದ ಚಿನ್ನಾಭರಣ

ಅಪರಾಧ ಸುದ್ದಿ

ಮೈಸೂರಿಗೆ ಸಾಗಿಸುತ್ತಿದ್ದ ರಕ್ತಚಂದನ ಜಪ್ತಿ

ಬೆಂಗಳೂರು: ಅಕ್ರಮವಾಗಿ ರಕ್ತ ಚಂದನ ಸಾಗಿಸುತ್ತಿದ್ದ ಆರೋಪಿ ಚೇಮಲ್ ಚಂಚುರಾಜ್ (30) ಎಂಬುವವರನ್ನು ಕೆಂಗೇರಿ ಪೊಲೀಸರು ಬಂಧಿಸಿದ್ದಾರೆ.

‘ಆಂಧ್ರಪ್ರದೇಶದ ಅನ್ನಮಯ್ಯ ಜಿಲ್ಲೆಯ ನಿವಾಸಿ ಚೇಮಲ್, ತನ್ನೂರಿನಿಂದ ಮೈಸೂರಿಗೆ ರಕ್ತಚಂದನ ಸಾಗಿಸುತ್ತಿದ್ದ. ಈತನಿಂದ ₹ 3.15 ಲಕ್ಷ ಮೌಲ್ಯದ 4 ರಕ್ತಚಂದನದ ತುಂಡುಗಳನ್ನು ಜಪ್ತಿ ಮಾಡಲಾಗಿದೆ’ ಎಂದು ಪೊಲೀಸರು ಹೇಳಿದರು.

‘ಆರೋಪಿಯು ತನ್ನ ಸ್ನೇಹಿತರಿಬ್ಬರ ಜೊತೆ ಟೊಯೊಟಾ ಇಟಿಯೋಸ್ ಕಾರಿನಲ್ಲಿ ಮೈಸೂರು ರಸ್ತೆಯಲ್ಲಿ ಜುಲೈ 14ರಂದು ಹೊರಟಿದ್ದ. ಮಾರ್ಗಮಧ್ಯೆ ತಪಾಸಣೆಗೆಂದು ಸಿಬ್ಬಂದಿ ಕಾರು ತಡೆದಿದ್ದರು. ಪೊಲೀಸರನ್ನು ಕಂಡ ಆರೋಪಿಯ ಸ್ನೇಹಿತರು ಸ್ಥಳದಿಂದ ಓಡಿಹೋದರು. ಚೇಮಲ್ ಮಾತ್ರ ಸಿಕ್ಕಿಬಿದ್ದ.’

‘ಸ್ನೇಹಿತ ಶ್ರೀನಿವಾಸ್ ಹಾಗೂ ಇತರರ ಜೊತೆ ಸೇರಿ ರಕ್ತಚಂದನವನ್ನು ಮೈಸೂರಿಗೆ ಕೊಂಡೊಯ್ಯಲಾಗುತ್ತಿದೆಂದು ಆರೋಪಿ ಹೇಳಿಕೆ ನೀಡಿದ್ದಾರೆ. ಇದೇ ರೀತಿಯಲ್ಲೇ ಹಲವು ಬಾರಿ ರಕ್ತಚಂದನ ಸಾಗಿಸಿರುವ ಮಾಹಿತಿ ಇದೆ. ತಲೆಮರೆಸಿಕೊಂಡಿರುವ ಆರೋಪಿಗಳಿಗಾಗಿ ಹುಡುಕಾಟ ನಡೆದಿದೆ’ ಎಂದೂ ತಿಳಿಸಿದರು.

ಆರೋಪಿಯಿಂದ ಜಪ್ತಿ ಮಾಡಲಾದ ರಕ್ತಚಂದನ

ಸುಪಾರಿ ಕೊಟ್ಟು ಜ್ಯೋತಿಷಿ ಸುಲಿಗೆ

ಬೆಂಗಳೂರು: ಜ್ಯೋತಿಷಿ ಎಚ್.ಆರ್. ಪ್ರಮೋದ್ ಮನೆಗೆ ನುಗ್ಗಿ ಸುಲಿಗೆ ಮಾಡಿದ್ದ ಪ್ರಕರಣದಲ್ಲಿ, ಅವರ ಆಪ್ತ ಸಹಾಯಕಿ (ಪಿ.ಎ) ಮೇಘನಾ (27) ಸೇರಿ ಆರು ಮಂದಿಯನ್ನು ಕೆಂಗೇರಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

‘ಜುಲೈ 9ರಂದು ಬೆಳಿಗ್ಗೆ ಜ್ಯೋತಿಷಿ ಮನೆಗೆ ನುಗ್ಗಿದ್ದ ದುಷ್ಕರ್ಮಿಗಳು ಚಾಕು ತೋರಿಸಿ ಬೆದರಿಸಿದ್ದರು. ಕೈ–ಕಾಲು ಕಟ್ಟಿ ಹಾಕಿ ಚಿನ್ನಾಭರಣ ಹಾಗೂ ನಗದು ಸುಲಿಗೆ ಮಾಡಿಕೊಂಡು ಪರಾರಿಯಾಗಿದ್ದರು’ ಎಂದು ಪೊಲೀಸರು ಹೇಳಿದರು.

‘ಜ್ಯೋತಿಷಿ ನೀಡಿದ್ದ ದೂರು ಆಧರಿಸಿ ತನಿಖೆ ಕೈಗೊಂಡಾಗ, ಮೇಘನಾ ಕೈವಾಡವಿರುವ ಮಾಹಿತಿ ಲಭ್ಯವಾಯಿತು. ಇವರನ್ನು ತಮಿಳುನಾಡಿನಲ್ಲಿ ಬಂಧಿಸಿ ನಗರಕ್ಕೆ ಕರೆತಂದು ವಿಚಾರಿಸಲಾಯಿತು. ಉಳಿದ ಆರೋಪಿಗಳೂ ಸಿಕ್ಕಿಬಿದ್ದರು’ ಎಂದೂ ತಿಳಿಸಿದರು.

ಮಸೀದಿ ಅಧ್ಯಕ್ಷ ಪಟ್ಟಕ್ಕಾಗಿ ಮಾಜಿ ಕಾರ್ಪೊರೇಟರ್ ಕೊಲೆ

ಬೆಂಗಳೂರು: ಚಾಕು ಇರಿತದಿಂದ ಗಾಯಗೊಂಡಿದ್ದ ಮಾಜಿ ಕಾರ್ಪೊರೇಟರ್ ಅಯೂಬ್ ಖಾನ್ (48) ಚಿಕಿತ್ಸೆಗೆ ಸ್ಪಂದಿಸದೇ ಬುಧವಾರ ರಾತ್ರಿ ಅಸುನೀಗಿದ್ದು, ಇವರ ಕೊಲೆ ಪ್ರಕರಣ ಸಂಬಂಧ ಅಣ್ಣನ ಮಗ ಮತೀನ್ ವಿರುದ್ಧ ಎಫ್‌ಐಆರ್ ದಾಖಲಾಗಿದೆ.

‘ಜುಲೈ 13ರಂದು ರಾತ್ರಿ 7.25ರ ಸುಮಾರಿಗೆ ನಮಾಜ್ ಮುಗಿಸಿ ಮನೆಗೆ ಹೊರಟಿದ್ದ ಅಯೂಬ್ ಖಾನ್ ಅವರಿಗೆ ಆರೋಪಿ ಮತೀನ್ ಚಾಕುವಿನಿಂದ ಇರಿದು ಪರಾರಿಯಾಗಿದ್ದಾನೆ. ಗಾಯಗೊಂಡಿದ್ದ ಅಯೂಬ್ ಅವರನ್ನು ಸ್ಥಳೀಯರು ಆಸ್ಪತ್ರೆಗೆ ದಾಖಲಿಸಿದ್ದರು. ಏಷಿಯನ್ ಆಸ್ಪತ್ರೆಗೆ ಅಯೂಬ್ ಅವರನ್ನು ಕರೆದೊಯ್ದು ಪ್ರಾಥಮಿಕ ಚಿಕಿತ್ಸೆ ಕೊಡಿಸಿ, ವಿಕ್ಟೋರಿಯಾ ಆಸ್ಪತ್ರೆಗೆ ಸ್ಥಳಾಂತರಿಸಲಾಗಿತ್ತು. ರಾತ್ರಿ 12.10ರ ಸುಮಾರಿಗೆ ಅವರು ಮೃತರಾಗಿದ್ದಾರೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

ಅಧ್ಯಕ್ಷ ಪಟ್ಟಕ್ಕಾಗಿ ಕೊಲೆ: ಅಯೂಬ್ ಕೊಲೆ ಸಂಬಂಧ ಅವರ ಪತ್ನಿ ನಾಜಿಮಾ ಖಾನಂ ದೂರು ನೀಡಿದ್ದು, ‘ಪತಿ ಅಯೂಬ್, ಟಿಪ್ಪು ನಗರದ ಖುದಾವತ್ ಮಸೀದಿ ಅಧ್ಯಕ್ಷರಾಗಿದ್ದರು. ಅಧ್ಯಕ್ಷ ಪಟ್ಟವನ್ನು ತನಗೆ ಬಿಟ್ಟುಕೊಡುವಂತೆ ಮತೀನ್ ಒತ್ತಾಯಿಸುತ್ತಿದ್ದ. ಇದೇ ವಿಚಾರವಾಗಿ ಪತಿ ಜೊತೆ ಹಲವು ಬಾರಿ ಜಗಳ ಮಾಡಿದ್ದ. ನನ್ನ ಮಗನ ಕೊಲೆಗೂ ಯತ್ನಿಸಿದ್ದ. ಅಧ್ಯಕ್ಷ ಪಟ್ಟ ತನಗೆ ಸಿಗುತ್ತಿಲ್ಲವೆಂಬ ಕಾರಣಕ್ಕೆ ಮತೀನ್, ನನ್ನ ಪತಿಯನ್ನು ಕೊಲೆ ಮಾಡಿದ್ದಾನೆ’ ಎಂದು ತಿಳಿಸಿದ್ದಾರೆ. ಮತೀನ್ ವಿರುದ್ಧ ಪ್ರಕರಣ ದಾಖಲಿಸಲಾಗಿದೆ.

ಸುದ್ದಿ 2 ನಿಮಿಷ

ಆಟೊದಲ್ಲಿ ಹತ್ತಿಸಿಕೊಂಡು ಸುಲಿಗೆ: ಆರೋಪಿಗಳ ಬಂಧನ

ಬೆಂಗಳೂರು: ವ್ಯಕ್ತಿಯೊಬ್ಬರನ್ನು ಆಟೊದಲ್ಲಿ ಹತ್ತಿಸಿಕೊಂಡು ಸುಲಿಗೆ ಮಾಡಿದ್ದ ಮೂವರು ಆರೋಪಿಗಳನ್ನು ಬೆಳ್ಳಂದೂರು ಠಾಣೆ ಪೊಲೀಸರು ಬಂಧಿಸಿದ್ದಾರೆ.

‘ರಾಮಮೂರ್ತಿನಗರ ಮಂಜುನಾಥ್ ಲೇಔಟ್‌ನ ಎಂ. ಅರವಿಂದ್, ಎಂ. ಸುಬ್ರಮಣಿ (24) ಹಾಗೂ ಕೆ.ಆರ್.ಪುರ ದೇವಸಂದ್ರದ ಎಂ. ವಿಜಯ್ (22) ಬಂಧಿತರು. ಇವರಿಂದ ₹ 75 ಸಾವಿರ ನಗದು, ಮೊಬೈಲ್, ಬೆಳ್ಳಿ ಸಾಮಗ್ರಿ ಹಾಗೂ ಆಟೊ ಜಪ್ತಿ ಮಾಡಲಾಗಿದೆ’ ಎಂದು ಪೊಲೀಸರು ಹೇಳಿದರು.

‘ಸರ್ಜಾಪುರ ರಸ್ತೆಯ ಕಾರ್ಮೆಲ್ ರಾಮ್ ರಸ್ತೆಯಲ್ಲಿ ನಿಂತಿದ್ದ ದೂರುದಾರರನ್ನು ಆರೋಪಿಗಳು ಆಟೊದಲ್ಲಿ ಹತ್ತಿಸಿಕೊಂಡಿದ್ದರು. ಸ್ವಲ್ಪ ದೂರಕ್ಕೆ ಹೋಗುತ್ತಿದ್ದಂತೆ ಚಾಕು ತೋರಿಸಿ ಬೆದರಿಸಿ, ದೊಣ್ಣೆಯಿಂದ ಹೊಡೆದಿದ್ದರು. ಮೊಬೈಲ್ ಕಸಿದುಕೊಂಡು ವ್ಯಾಲೆಟ್ ಮೂಲಕ ಹಣ ವರ್ಗಾಯಿಸಿಕೊಂಡು ಪರಾರಿಯಾಗಿದ್ದರು.’

‘ಸುಲಿಗೆ ಬಗ್ಗೆ ಪ್ರಕರಣ ದಾಖಲಾಗುತ್ತಿದ್ದಂತೆ ತನಿಖೆ ಕೈಗೊಂಡು ಆರೋಪಿಗಳನ್ನು ಬಂಧಿಸಲಾಗಿದೆ. ಇದೇ ಆರೋಪಿಗಳು, ಹಲವು ಕೃತ್ಯದಲ್ಲಿ ಭಾಗಿಯಾಗಿದ್ದ ಮಾಹಿತಿ ಲಭ್ಯವಾಗಿದೆ’ ಎಂದೂ ತಿಳಿಸಿದರು.

ಬಾಡಿ ಮಸಾಜ್ ಸೋಗಿನಲ್ಲಿ ಕಳ್ಳತನ: ಮಹಿಳೆ ಬಂಧನ

ಬೆಂಗಳೂರು: ಬಾಡಿ ಮಸಾಜ್ ಹಾಗೂ ಸ್ವಚ್ಛತೆ ಕೆಲಸ ಮಾಡುವುದಾಗಿ ಹೇಳಿ ಮನೆಯೊಂದಕ್ಕೆ ಹೋಗಿ ಕಳ್ಳತನ ಮಾಡಿದ್ದ ಆರೋಪದಡಿ ಅಕ್ಕಿಮ್ ಮಣಿ ಅಲಿಯಾಸ್ ಲಕ್ಷ್ಮಿ (35) ಅವರನ್ನು ಮಾರತ್ತಹಳ್ಳಿ ಪೊಲೀಸರು ಬಂಧಿಸಿದ್ದಾರೆ.

‘ಆಂಧ್ರಪ್ರದೇಶದ ಅನಂತಪುರ ಜಿಲ್ಲೆಯ ಲಕ್ಷ್ಮಿ, ಪದೇಪದೇ ಅಪರಾಧ ಕೃತ್ಯ ಎಸಗುತ್ತಿದ್ದರು. ಇವರಿಂದ ₹ 13 ಲಕ್ಷ ಮೌಲ್ಯದ 271 ಗ್ರಾಂ ಚಿನ್ನಾಭರಣ ಜಪ್ತಿ ಮಾಡಲಾಗಿದೆ’ ಎಂದು ಪೊಲೀಸರು ಹೇಳಿದರು.

‘ಮನೆ ಕೆಲಸ ಮಾಡುವುದಾಗಿ ಹೇಳಿ ಆರೋಪಿಯು ಮಾಲೀಕರನ್ನು ಪರಿಚಯ ಮಾಡಿಕೊಳ್ಳುತ್ತಿದ್ದರು. ಮನೆಯೊಳಗೆ ಹೋಗಿ ಸ್ವಲ್ಪ ಹೊತ್ತು ಕೆಲಸ ಮಾಡಿ, ಚಿನ್ನಾಭರಣ ಹಾಗೂ ನಗದು ಇರುವ ಜಾಗವನ್ನು ತಿಳಿದುಕೊಳ್ಳುತ್ತಿದ್ದರು. ಮನೆಯಲ್ಲಿದ್ದ ಮಹಿಳೆಯರ ಮೈ ಮೇಲಿನ ಆಭರಣ ಗಮನಿಸುತ್ತಿದ್ದರು. ಕೆಲ ಹೊತ್ತಿನ ನಂತರ ಕಳ್ಳತನ ಮಾಡಿಕೊಂಡು ಪರಾರಿಯಾಗುತ್ತಿದ್ದರು. ರಾಜಾಜಿನಗರ, ಕೆ.ಆರ್. ಪುರ ಠಾಣೆ ವ್ಯಾಪ್ತಿಯಲ್ಲೂ ಆರೋಪಿ ಕೃತ್ಯ ಎಸಗಿರುವ ಮಾಹಿತಿ ಲಭ್ಯವಾಗಿದೆ’ ಎಂದು ತಿಳಿಸಿದರು.

ಸ್ನಾನಕ್ಕೆ ಕಳುಹಿಸಿ ಪರಾರಿ: ‘ಮಾರತ್ತಹಳ್ಳಿ ಠಾಣೆ ವ್ಯಾಪ್ತಿಯ ಇಸ್ರೊ ಲೇಔಟ್ ಮನೆಯೊಂದಕ್ಕೆ ಜುಲೈ 9ರಂದು ಹೋಗಿದ್ದ ಆರೋಪಿ ಲಕ್ಷ್ಮಿ, ಮನೆ ಸ್ವಚ್ಛತೆ ಕೆಲಸ ಮಾಡುವುದಾಗಿ ಹೇಳಿದ್ದರು. ಮನೆಯಲ್ಲಿದ್ದ ಮಹಿಳೆ ಆರೋಪಿ ಮಾತು ನಂಬಿ ಕೆಲಸ ಮಾಡಲು ಸೂಚಿಸಿದ್ದರು’ ಎಂದು ಪೊಲೀಸರು ಹೇಳಿದರು.

‘ಮಸಾಜ್ ಮಾಡುವುದಾಗಿಯೂ ಹೇಳಿದ್ದ ಆರೋಪಿ, ಮಹಿಳೆ ಚಿನ್ನದ ಸರ ಬಿಚ್ಚಿಸಿದ್ದರು. ಮಸಾಜ್ ನಂತರ ಮಹಿಳೆಯನ್ನು ಸ್ನಾನಕ್ಕೆ ಕಳುಹಿಸಿದ್ದರು. ನಂತರ ಚಿನ್ನದ ಸರದ ಸಮೇತ ಪರಾರಿಯಾಗಿದ್ದರು. ಈ ಬಗ್ಗೆ ಪ್ರಕರಣ ದಾಖಲಾಗುತ್ತಿದ್ದಂತೆ, ಆರೋಪಿಯನ್ನು ಬಂಧಿಸಲಾಗಿದೆ’ ಎಂದೂ ತಿಳಿಸಿದರು.

ಮೈಸೂರು ರೇಸ್

ಅಶ್ವ ಮಗಧೀರ ಗೆಲ್ಲುವ ನಿರೀಕ್ಷೆ

ಮೈಸೂರು ಕೋಲ್ಟ್ಸ್ ಟ್ರಯಲ್ ಸ್ಟೇಕ್ಸ್ ಶುಕ್ರವಾರದ ಮೈಸೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಅಶ್ವ ಮಗಧೀರ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 1.00ಕ್ಕೆ ಪ್ರಾರಂಭವಾಗಲಿರುವ ದಿನದ ಒಂಬತ್ತು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1ನೇ ರೇಸ್: ವರ್ಜೀನಿಯಾ ಕ್ವೀನ್ 14, ಕಂಟ್ರೆಸ್ ಡಿಲೈಟ್ 10, ಸೇಂಟ್ ಲೂಸಿಯಾ 3
2ನೇ ರೇಸ್: ಮಿಲಾಸ್ 9, ಸ್ಮಾರ್ಟ್ ಕ್ಯಾಡಿಲಾಕ್ 4, ಮೀಡೊ ಫ್ಲವರ್ 8
3ನೇ ರೇಸ್: ಮೋರ್ಗನೈಟ್ 2, ಡೀನ್ಸ್ ಗಾಲ್ 3, ಬಟನ್‌ವುಡ್ 6
4ನೇ ರೇಸ್: ವೈಲ್ಡ್ ಸ್ಪೆಲ್ 1, ಗೋಲ್ಡ್ ಕ್ರೆಸ್ಟ್ 3, ಚೆರೋಕಿ ಮೂನ್ 10
5ನೇ ರೇಸ್: ಗ್ರೇಟ್ ಹೋಪ್ 5, ಲೈಕ್ ಮೈ ಡ್ಯಾಡಿ 8, ಕೊಯೊಟೆ ಗರ್ಲ್ 11
6ನೇ ರೇಸ್: ಬ್ರನ್‌ಹಿಲ್ಡ್ 10, ಆಲ್ ಗ್ರೇಟ್ ಫ್ರೆಂಡ್ಸ್ 4, ಡ್ರುಸಿಲ್ಲಾ 11
7ನೇ ರೇಸ್: ಅಶ್ವ ಮಗಧೀರ 1, ಸ್ಟಿಲ್ ಐ ರೈಸ್ 2, ವಂಡರ್‌ಫುಲ್ 6
8ನೇ ರೇಸ್: ಪ್ರೈಸ್‌ಲೆಸ್ ಗೋಲ್ಡ್ 2, ತೈಮೂರ್ 1, ಚಾರ್ಶಿ 8
9ನೇ ರೇಸ್: ಬ್ಲಾಕ್ ಕಾಫಿ 2, ನೋಟೊರಿಟಿ 4, ರಿದ್ಮಿಕ್ 11

ಉತ್ತಮ ಬೆಟ್: ಪ್ರೈಸ್‌ಲೆಸ್ ಗೋಲ್ಡ್

ಜಾಕ್‌ಪಾಟ್	1ನೇ ಟ್ರಿಬಲ್	2ನೇ ಟ್ರಿಬಲ್	3ನೇ ಟ್ರಿಬಲ್
5,6,7,8,9	1,2,3	4,5,6	7,8,9

ಪಿಸ್ತೂಲ್ ಮಾರಲು ಬಂದವರ ಸೆರೆ

ಬೆಂಗಳೂರು: ಪಿಸ್ತೂಲ್ ಮಾರಲೆಂದು ಬಿಹಾರದಿಂದ ನಗರಕ್ಕೆ ಬಂದಿದ್ದ ಆರೋಪಿ ಪವನ್ ಪಾಸ್ವಾನ್ (20) ಎಂಬುವವರನ್ನು ಹೆಬ್ಬಾಳ ಪೊಲೀಸರು ಬಂಧಿಸಿದ್ದಾರೆ.

‘ಬಿಹಾರದ ಮೋತಿಹಾರಿ ಜಿಲ್ಲೆಯ ಪವನ್ ಕೆಲ ದಿನಗಳ ಹಿಂದೆಯಷ್ಟೇ ನಗರಕ್ಕೆ ಬಂದಿದ್ದ. ಎಲೆಕ್ಟ್ರಾನಿಕ್ ಸಿಟಿ ಬಳಿ ವಾಸವಿದ್ದ. ಈತನಿಂದ ನಾಡ ಪಿಸ್ತೂಲ್ ಹಾಗೂ 6 ಜೀವಂತ ಗುಂಡುಗಳನ್ನು ಜಪ್ತಿ ಮಾಡಲಾಗಿದೆ’ ಎಂದು ಪೊಲೀಸರು ಹೇಳಿದರು.

‘ಪ್ರಕರಣದಲ್ಲಿ ಆರೋಪಿ ಜೊತೆ ಬಾಲಕನೊಬ್ಬ ಸಿಕ್ಕಿಬಿದ್ದಿದ್ದಾನೆ. ಆತನನ್ನು ವಶಕ್ಕೆ ಪಡೆದು ಬಾಲ ನ್ಯಾಯ ಕಾಯ್ದೆ ಪ್ರಕಾರ ಕ್ರಮ ಜರುಗಿಸಲಾಗಿದೆ’ ಎಂದರು.

ವಸತಿಗೃಹ - ಖಾಸಗಿ ಕ್ಷಣ: ಹಣಕ್ಕಾಗಿ ಕೊಲೆ

ಬೆಂಗಳೂರು: ಮಾರತ್ತಹಳ್ಳಿ ಠಾಣೆ ವ್ಯಾಪ್ತಿಯ ವಸತಿಗೃಹವೊಂದರಲ್ಲಿ ಜುಲೈ 7ರಂದು ನಡೆದಿದ್ದ ರಾಜಗೋಪಾಲ್ (28) ಕೊಲೆ ಪ್ರಕರಣ ಭೇದಿಸಿರುವ ಪೊಲೀಸರು, ಆರೋಪಿ ತಮಿಳುವಣ್ಣನ್ (32) ಎಂಬುವವರನ್ನು ಬಂಧಿಸಿದ್ದಾರೆ.

ನಾಲ್ಕು ವರ್ಷಗಳ ಪರಿಚಯ: ‘ಚೆನ್ನೈನ ರಾಜಗೋಪಾಲ್ ಹಾಗೂ ತಮಿಳುವಣ್ಣನ್ ನಾಲ್ಕು ವರ್ಷಗಳಿಂದ ಪರಿಚಿತರು. ಸಲಿಂಗಿಗಳಾಗಿದ್ದ ಇವರಿಬ್ಬರು ಆಗಾಗ ಭೇಟಿಯಾಗಿ ಖಾಸಗಿ ಕ್ಷಣ ಕಳೆಯುತ್ತಿದ್ದರು. ವರ್ಷದ ಹಿಂದೆಯಷ್ಟೆ ತಮಿಳುವಣ್ಣನ್‌ಗೆ ಮದುವೆಯಾಗಿತ್ತು. ಅದರ ಬಳಿಕವೂ ಈತ ರಾಜಗೋಪಾಲ್ ಜೊತೆ ಸಲುಗೆ ಮುಂದುವರಿಸಿದ್ದ. ಇದು ಗೊತ್ತಾಗುತ್ತಿದ್ದಂತೆ ಪತ್ನಿ ಜಗಳ ಮಾಡಿ, ತವರು ಮನೆಗೆ ಹೋಗಿದ್ದಳು. ನಂತರ ಇವರಿಬ್ಬರು ಬೆಂಗಳೂರಿಗೆ ಬಂದಿದ್ದರು’ ಎಂದು ಮೂಲಗಳು ತಿಳಿಸಿವೆ.

ಕೊಠಡಿಯಲ್ಲಿ ಕೊಲೆ: ‘ರಾಜಗೋಪಾಲ್ ಹಾಗೂ ತಮಿಳುವಣ್ಣನ್ ಜುಲೈ 4ರಂದು ವಸತಿಗೃಹವೊಂದರಲ್ಲಿ ಖಾಸಗಿ ಕ್ಷಣ ಕಳೆದ ಬಳಿಕ, ಆರ್ಥಿಕ ತೊಂದರೆ ಇರುವುದಾಗಿ ಹೇಳಿದ್ದ ರಾಜ ಗೋಪಾಲ್ ಹಣ ನೀಡುವಂತೆ ಕೋರಿದ್ದ. ಅಷ್ಟಕ್ಕೆ ಸಿಟ್ಟಾದ ತಮಿಳು ವಣ್ಣನ್, ರಾಜಗೋಪಾಲ್ ಪ್ರಜ್ಞೆ ತಪ್ಪಿ ಬೀಳುವಂತೆ ಹಲ್ಲೆ ಮಾಡಿ ಸ್ಥಳದಿಂದ ಪರಾರಿಯಾಗಿದ್ದ. ಬಳಿಕ ರಾಜ ಗೋಪಾಲ್ ಮೃತಪಟ್ಟಿದ್ದ’ ಎಂದೂ ಮೂಲಗಳು ತಿಳಿಸಿವೆ.

ಸುಲಿಗೆ: ಆರೋಪಿಗಳ ಬಂಧನ

ಬೆಂಗಳೂರು: ವ್ಯಕ್ತಿಯೊಬ್ಬರನ್ನು ಆಟೊದಲ್ಲಿ ಹತ್ತಿಸಿಕೊಂಡು ಸುಲಿಗೆ ಮಾಡಿದ್ದ ಮೂವರು ಆರೋಪಿಗಳನ್ನು ಬೆಳ್ಳಂದೂರು ಠಾಣೆ ಪೊಲೀಸರು ಬಂಧಿಸಿದ್ದಾರೆ.

‘ರಾಮಮೂರ್ತಿನಗರ ಮಂಜುನಾಥ್ ಲೇಔಟ್‌ನ ಎಂ. ಅರವಿಂದ್, ಎಂ. ಸುಬ್ರಮಣಿ (24) ಹಾಗೂ ಕೆ.ಆರ್.ಪುರ ದೇವಸಂದ್ರದ ಎಂ. ವಿಜಯ್ (22) ಬಂಧಿತರು. ಇವರಿಂದ ₹ 75 ಸಾವಿರ ನಗದು, ಮೊಬೈಲ್, ಬೆಳ್ಳಿ ಸಾಮಗ್ರಿ ಹಾಗೂ ಆಟೊ ಜಪ್ತಿ ಮಾಡಲಾಗಿದೆ’ ಎಂದು ಪೊಲೀಸರು ಹೇಳಿದರು.

‘ಸರ್ಜಾಪುರ ರಸ್ತೆಯ ಕಾರ್ಮೆಲ್ ರಾಮ್ ರಸ್ತೆಯಲ್ಲಿ ನಿಂತಿದ್ದ ದೂರುದಾರರನ್ನು ಆರೋಪಿಗಳು ಆಟೊದಲ್ಲಿ ಹತ್ತಿಸಿಕೊಂಡಿದ್ದರು. ಸ್ವಲ್ಪ ದೂರಕ್ಕೆ ಹೋಗುತ್ತಿದ್ದಂತೆ ಚಾಕು ತೋರಿಸಿ, ಮೊಬೈಲ್ ಕಸಿದುಕೊಂಡು ವ್ಯಾಲೆಟ್ ಮೂಲಕ ಹಣ ವರ್ಗಾಯಿಸಿಕೊಂಡಿದ್ದರು. ಈ ಪ್ರಕರಣ ದಾಖಲಾಗುತ್ತಿದ್ದಂತೆ ತನಿಖೆ ಕೈಗೊಂಡು ಆರೋಪಿಗಳನ್ನು ಬಂಧಿಸಲಾಗಿದೆ. ಇವರು, ಇನ್ನೂ ಹಲವು ಕೃತ್ಯದಲ್ಲಿ ಭಾಗಿಯಾಗಿದ್ದರು’ ಎಂದೂ ತಿಳಿಸಿದರು.

ನೈಋತ್ಯ ರೈಲ್ವೆ

ಇ–ಟೆಂಡರ್ ಸೂಚನೆ ಸಂ. SBC_Yard_Remodelling ದಿನಾಂಕ: 09.07.2022

ಇ–ಟೆಂಡರು ಸೂಚನೆ ಸಂ. SBC_Yard_Remodelling, ದಿನಾಂಕ: 17.06.2022 ರ ಅಡಿಯಲ್ಲಿ 13.07.2022 ರಂದು ಮುಕ್ತಾಯಗೊಳ್ಳಲಿರುವ ಟೆಂಡರ್‌ಅನ್ನು ರದ್ದುಗೊಳಿಸಲಾಗಿದೆ ಮತ್ತು ಈ ಕೆಳಗಿನಂತೆ ಮತ್ತೊಮ್ಮೆ ಆಹ್ವಾನಿಸಲಾಗಿದೆ.

ಕಾಮಗಾರಿಯ ಹೆಸರು	ಅಂದಾಜು ಮೌಲ್ಯ
ಬೆಂಗಳೂರು ವಿಭಾಗದಲ್ಲಿನ ಬೆಂಗಳೂರು ಸಿಟಿ ನಿಲ್ದಾಣ (ಎಸ್‌ಬಿಸಿ)ದ ಯಾರ್ಡಿನ ಬದಲಾವಣೆಯ ಕೆಲಸಕ್ಕೆ ಸಂಬಂಧಿಸಿದಂತೆ ಎಲೆಕ್ಟ್ರಾನಿಕ್, ಹೊರಾಂಗಣ ಸಿಗ್ನಲಿಂಗ್ ಮತ್ತು ದೂರಸಂಪರ್ಕ ವ್ಯವಸ್ಥೆಯೊಂದಿಗಿರುವ ಇಂಟರ್ ಲಾಕಿಂಗ್ ಪೂರೈಕೆ ಹಾಗೂ ಬೆಂಗಳೂರು ದಂಡು, ಯಶವಂತಪುರ ಮತ್ತು ನಾಯಂಡಹಳ್ಳಿ ನಿಲ್ದಾಣಗಳಲ್ಲಿ ಸಂಪರ್ಕಿತ ಬದಲಾವಣೆ ಕೆಲಸಗಳನ್ನು ಕೈಗೊಳ್ಳುವುದು.	ರೂ. 12,98,93,343.96

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 01.08.2022, 11:00 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

ಉಪ ಮುಖ್ಯ ಸಿಗ್ನಲ್ & ದೂರಸಂಪರ್ಕ ಇಂಜಿನಿಯರ್/ನಿರ್ಮಾಣ, ಬೆಂಗಳೂರು ದಂಡು

PUB/225/AAD/PRB/SWR/2022-23

S.W.Railways SWRRLY SWRRLY

ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ

ನಂ.49, ಪರಿಸರ ಭವನ, ಚರ್ಚ್ ಸ್ಟ್ರೀಟ್, ಬೆಂಗಳೂರು – 560 001.
ದೂ.080–25586520/25589112 ಫ್ಯಾಕ್ಸ್ : 080–25886321
ಇ-ಮೇಲ್: ho@kspcb.gov.in ವೆಬ್‌ಸೈಟ್: https://kspcb.karnataka.gov.in

ಸಂ. ಕರಾಮಾನಿಮಂ/11/ಬಿಎಲ್‌ಡಿ/2022/2526 ದಿನಾಂಕ: 12/07/2022

ಟೆಂಡರ್‌ಗೆ ಆಹ್ವಾನ (ಅಲ್ಪಾವಧಿಯ ಟೆಂಡರ್)

1ನೇ ಕರೆ

(ಇ–ಪ್ರೊಕ್ಯೂರ್‌ಮೆಂಟ್ ಪ್ಲಾಟ್‌ಫಾರ್ಮ್ www.eproc.karnataka.gov.in ಮೂಲಕ)

ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು (KSPCB) ಸದಸ್ಯ ಕಾರ್ಯದರ್ಶಿಯವರ ಮೂಲಕ ಅರ್ಹ ಟೆಂಡರ್‌ದಾರರಿಂದ ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪ್ಲಾಟ್‌ಫಾರ್ಮ್ www.eproc.karnataka.gov.in ಮುಖಾಂತರ ಕೆಳಗಿನ ಕೆಲಸಕ್ಕಾಗಿ ಟೆಂಡರ್‌ಗಳನ್ನು ಆಹ್ವಾನಿಸುತ್ತದೆ.

ಕಾಮಗಾರಿಯ ಹೆಸರು: ಪರಿಸರ ಭವನ, ಚರ್ಚ್ ಸ್ಟ್ರೀಟ್, ಬೆಂಗಳೂರಿನಲ್ಲಿರುವ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಗೆ ಹೌಸ್ ಕೀಪಿಂಗ್ (1 ವರ್ಷ). ಕಾಮಗಾರಿಯ ಅಂದಾಜು ಮೌಲ್ಯ: **ರೂ. 42.41 ಲಕ್ಷಗಳು**. ಟೆಂಡರ್ ವೆಚ್ಚ, ಇಎಂಡಿ ಇತ್ಯಾದಿ, ಎಲ್ಲಾ ಪಾವತಿಗಳನ್ನು ಇ–ಪಾವತಿ ವಿಧಾನದಲ್ಲಿ ಮಾತ್ರ ಮಾಡಬೇಕು.

ಹೆಚ್ಚಿನ ವಿವರಗಳಿಗಾಗಿ, ದಯವಿಟ್ಟು ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ http://www.eproc.karnataka.gov.in ಗೆ ಭೇಟಿ ನೀಡಿ.

ಸಹಿ/–
ಸದಸ್ಯ ಕಾರ್ಯದರ್ಶಿ

“ಪ್ಲಾಸ್ಟಿಕ್ ಬಳಕೆ ನಿಲ್ಲಿಸಿ, ಪರಿಸರ ಹಾನಿ ತಪ್ಪಿಸಿ”

DIPR/CP/1366/GREENFMC/2022-23

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

PUBLIC NOTICE

This is to notify the public that we have been engaged by our client to investigate the right, title and interest of Vaishnavi Infrastructure & Properties LLP, a limited liability partnership incorporated under the Limited Liability Partnership Act, 2008 having its registered office at No. 2/2, Walton Road, Off Vittal Mallya Road, Bangalore - 560001 who is the owner to the entire Second Floor and Third Floor in the office building known as **“Vaishnavi Sovereign”** constructed on the land bearing Survey No. 84/1 situated at Bellandur Village, Varthur Hobli, Bangalore East Taluk **(‘Land’)** along with proportionate undivided share of right, title and interest in the Land and morefully described in the Schedule below and referred to as the **“Schedule Property”.**

NOTICE is hereby given to all persons having any claim, demand, benefit, share, right, title or interest of any nature whatsoever upon or in respect of the Schedule Property or any part thereof by way of inheritance, exchange, share, sale, transfer, assignment, devise, bequest, charge, mortgage, let, lease, lien, licence, gift, trust, tenancy, sub-tenancy, easement, in way, possession or encumbrance, development rights, howsoever or otherwise in any manner whatsoever, that he/she/they should within **ten (10) days** from the date of publication of this notice, notify the undersigned in writing of his/her/their share or claim, with all supporting documents to us at the address mentioned below.

In case no such notice is received by us within ten (10) days from the date of publication of this notice, it shall be deemed that the title of Vaishnavi Infrastructure & Properties LLP in respect of the Schedule Property is clear, marketable and free from encumbrance/s of any kind whatsoever. Claims or alleged interest, if any, which are not received within ten (10) days from the date of publication of this notice shall be deemed to have been waived and disregarded for all intents and purposes and shall not be binding on our client.

SCHEDULE

Description of the Schedule Property - All that piece and parcel of office space measuring an aggregate extent of 58,388 square feet of super built-up area comprising of 29,194 square feet of super built-up area being the entire Second Floor **(Second Floor Office Space)** and 29,194 square feet of super built-up area being the entire Third Floor **(Third Floor Office Space)** inclusive of the proportionate common area, utility area etc., in the office building known as **“Vaishnavi Sovereign”** together with (i) 11,824 square feet, undivided share of right, title and interest proportionate to the Second Floor Office Space and (ii) 11,824 square feet undivided share of right, title and interest proportionate to the Third Floor Office Space in the land bearing Survey No. 84/1 measuring 1 Acre situated at Bellandur Village, Varthur Hobli, Bangalore East Taluk, Bangalore District **(Land)** along with the exclusive right to use 66 (sixty six) numbers of designated car parking area and proportionate undivided interest in the terrace area of the office building known as Vaishnavi Sovereign. The Land has been duly converted as per the Revised Official Memorandum bearing No. ALN(V-2) (P)SR/55/2018-19 dated 24.05.2019 issued by the Deputy Commissioner Bangalore District from residential to industrial (hightech) purpose and the said Land is bounded on its : **East by :** Road/ Property owned by Srinivasa Reddy/Private property; **West by :** Private property; **North by :** Land in Sy No. 84/1 belonging to Vivek L and land belonging to private property and **South by :** Private property.

N.K. Dilip/S. Raghu Nandana
Tatva Legal Bangalore, Advocates
4th Floor, Phoenix Pinnacle,
No. 46, Ulsoor Road, Bengaluru 560 042.

Date : 15.07.2022

ಕಾರ್ಯನಿರ್ವಾಹಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ, ಕೋಲಾರ ವಿಭಾಗ, ಕೋಲಾರ-563101. ದೂ: 08152-222022

ಫ್ಯಾಕ್ಸ್: 08152-227443 ಇ-ಮೇಲ್: eepwdkolar07@gmail.com

ವೆಬ್‌ಸೈಟ್: www.kpwd.gov.in, e-portal: http://eproc.karnataka.gov.in

ಇ–ಟೆಂಡರ್ ಪ್ರಕಟಣೆ– ಕೆಡಬ್ಲ್ಯು –3&4

ಟೆಂಡರ್ ಮುಂದೂಡಿಕಾ ಪ್ರಕಟಣೆ ಸಂಖ್ಯೆ: 4–2/ 2022–23 ದಿನಾಂಕ: 08.07.2022

ಉಲ್ಲೇಖ: 1) ಟೆಂಡರ್ ಪ್ರಕಟಣೆ ಸಂಖ್ಯೆ. 4/ 2022–23 ದಿನಾಂಕ: 4.5.2022. 2) ಟೆಂಡರ್ ಮುಂದೂಡಿಕಾ ಪ್ರಕಟಣೆ ಸಂಖ್ಯೆ. 4–1/ 2022–23 ದಿನಾಂಕ: 13.6.2022.

ಕೋಲಾರ ಜಿಲ್ಲೆ ಮುಳಬಾಗಿಲು ತಾಲ್ಲೂಕು ವ್ಯಾಪ್ತಿಯಲ್ಲಿ ಲೆಕ್ಕಶೀರ್ಷಿಕೆ: 5054–ರಾಜ್ಯ ಹೆದ್ದಾರಿ ಮತ್ತು ಜಿಲ್ಲಾ ಮುಖ್ಯ ರಸ್ತೆ ಸುಧಾರಣೆಗಳು ಅಡಿಯಲ್ಲಿ ಟೆಂಡರ್ ಕರೆಯಲಾಗಿದ್ದು, ಕಾಮಗಾರಿಗಳಿಗೆ ಟೆಂಡರ್‌ಗಿಟ್ಟ ಮೊತ್ತ: ಕನಿಷ್ಠ **ರೂ. 75.00 ಲಕ್ಷಗಳು**. ಗರಿಷ್ಠ: **ರೂ. 400.00 ಲಕ್ಷಗಳು**. ಇ.ಎಂ.ಡಿ ಮೊತ್ತ: ಕನಿಷ್ಠ **ರೂ. 1.50 ಲಕ್ಷಗಳು**. ಗರಿಷ್ಠ: **ರೂ. 6.00 ಲಕ್ಷಗಳು**. ಕಾಲಾವಧಿ: ಕನಿಷ್ಠ 6 ತಿಂಗಳು: ಗರಿಷ್ಠ 11 ತಿಂಗಳು ನಿರ್ವಹಿಸಲು ನೋಂದಾಯಿತ ಗುತ್ತಿಗೆದಾರರಿಂದ ಇ– ಪ್ರಕ್ಯೂರ್‌ಮೆಂಟ್ ಅನ್ವಯ ಟೆಂಡರ್ ಆಹ್ವಾನಿಸಲಾಗಿದೆ. ಗುತ್ತಿಗೆದಾರರು ಕೆಡಬ್ಲ್ಯು–3&4ರ ಟೆಂಡರ್ ಡಾಕ್ಯುಮೆಂಟ್‌ಗಳನ್ನು ಕರ್ನಾಟಕ ರಾಜ್ಯದ ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ **(Viz., http://eproc.karnataka.gov.in)** ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿರುತ್ತದೆ.

ಭರ್ತಿ ಮಾಡಿದ ಟೆಂಡರ್‌ಗಳನ್ನು ಆನ್‌ಲೈನ್ ಮುಖಾಂತರ ಕರ್ನಾಟಕ ರಾಜ್ಯದ ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ **ದಿನಾಂಕ: 11.08.2022** ರಂದು ಸಂಜೆ **16.00** ಗಂಟೆ ಒಳಗೆ ಅಪ್‌ಲೋಡ್ ಮಾಡಬಹುದಾಗಿರುತ್ತದೆ. ಸ್ವೀಕೃತವಾದ ಟೆಂಡರ್‌ಗಳನ್ನು **ದಿನಾಂಕ: 12.08.2022 ರಂದು ಸಂಜೆ 16.30 ಗಂಟೆಯ** ನಂತರ ಇ–ಪ್ರಕ್ಯೂರ್‌ಮೆಂಟ್‌ನಲ್ಲಿ ತೆರೆಯಲಾಗುವುದು. ಕಾಮಗಾರಿಗಳಿಗೆ ಸಂಬಂಧಿಸಿದಂತೆ ಹೆಚ್ಚಿನ ವಿವರಗಳಿಗೆ ಹಾಗೂ ಸದರಿ ಟೆಂಡರ್ ಅಧಿಸೂಚನೆಯ ವಿವರಗಳನ್ನು ಪಡೆಯಲು ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ **(Viz., http://eproc. karnataka.gov.in)** ನಲ್ಲಿ ಸಂಪರ್ಕಿಸಬಹುದಾಗಿದೆ. ಹಾಗೂ ಈ ಕಛೇರಿಯ ಕೆಲಸದ ವೇಳೆಯಲ್ಲಿ ಹೆಚ್ಚಿನ ವಿವರಗಳನ್ನು ಪಡೆಯಲು ಸಹಾ ಕೋರಲಾಗಿದೆ.

ಸಹಿ/–ಕಾರ್ಯನಿರ್ವಾಹಕ ಇಂಜಿನಿಯರ್,
ಲೋ.ಇ. ಕೋಲಾರ ವಿಭಾಗ, ಕೋಲಾರ.

ವಾ.ಸಾ.ಸಂ.ಇ./ಕೋಲಾರ/ಆರ್.ಓ.ಸಂಖ್ಯೆ 183/ಎಂಸಿಎ/2022–23

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ಸರ್ಕಾರ
ಮುದ್ರಣ, ಲೇಖನ ಸಾಮಗ್ರಿ ಮತ್ತು ಪ್ರಕಟಣೆಗಳ ನಿರ್ದೇಶಕರ ಕಾರ್ಯಾಲಯ
ಸರ್ಕಾರಿ ಕೇಂದ್ರ ಮುದ್ರಣಾಲಯ, 8ನೇ ಮೈಲಿ, ಆರ್.ವಿ. ಕಾಲೇಜ್ ಅಂಚೆ, ಮೈಸೂರು ರಸ್ತೆ, ಬೆಂಗಳೂರು–560059 ಫೋನ್ : 080–28484515/080–28484518

ಅಧಿಸೂಚನೆ ಸಂಖ್ಯೆ: ಡಿಪಿಎಸ್46ಪಿಯುಆರ್(ಸಿ)2021–22/ಸಿಬಿಎಲ್‌ಎಸ್ ದಿನಾಂಕ: 13.07.2022

ಸಂಕ್ಷಿಪ್ತ ಟೆಂಡರ್ ಅಧಿಸೂಚನೆ
(ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ)

ಪ್ರಿಂಟರ್ ಕನ್ಸ್ಯೂಮಬಲ್ಸ್‌ಗಳ ಸಂಗ್ರಹಣೆಗಾಗಿ ದರಗುತ್ತಿಗೆ ಆಧಾರದ ಮೇರೆಗೆ ಆನ್‌ಲೈನ್ ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಟೆಂಡರ್‌ನ ಅಂದಾಜು ಮೊತ್ತ ರೂ.48.20 ಲಕ್ಷಗಳಾಗಿರುತ್ತದೆ ಹಾಗೂ ಟೆಂಡರ್‌ನಲ್ಲಿ ಇ.ಎಂ.ಡಿ.ಯು ಈ ಕೆಳಕಂಡಂತೆ ವಿವರಿಸಿದೆ.

Sl. No	Group No.	Description	EMD Rs. (in Lakhs)
1	Group A	Canon	0.05
2	Group B	HP	0.50
3	Group C	Konica Minolta	1.75
4	Group E	Toshiba	0.06
5	Group F	Ricoh	0.05

ಟೆಂಡರ್ ಸಲ್ಲಿಸಲು ಕಡೆಯ ದಿನಾಂಕ: 28.07.2022, 17.30 ಗಂಟೆ. ಮಾಹಿತಿಯನ್ನು https://eproc.karnataka.gov.in ರಲ್ಲಿ ಪಡೆಯಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಮೇಲ್ಕಂಡ ಕಛೇರಿಯನ್ನು ಸಂಪರ್ಕಿಸಬಹುದಾಗಿದೆ.

ಸಹಿ/–
ನಿರ್ದೇಶಕರು

ವಾ.ಸಾ.ಸಂ.ಇ/ವಾಪ್ರ/1374/ಆಕಾರ್/22–23

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಅಭಿಮತ



ಸುಭಾಷಿತ

ಪಡೆಯುವಷ್ಟನ್ನೇ ಪಡೆದರೆ ತೃಪ್ತಿ. ಅದಕ್ಕಿಂತಲೂ ಹೆಚ್ಚಿಗೆ ಪಡೆದರೆ ಹೊರೆ, ದುಃಖ.

-ರವೀಂದ್ರನಾಥ ಟ್ಯಾಗೋರ್

ಅಮರನಾಥ ಯಾತ್ರೆ ಸುರಕ್ಷತೆ ಕಲ್ಪಿಸುವಲ್ಲಿ ವೈಫಲ್ಯ

ಅಮರನಾಥನ ದರ್ಶನಕ್ಕೆ ತೆರಳಿದ್ದ ಯಾತ್ರಿಕರಲ್ಲಿ ಕೆಲವರು ಹಿಂದಿನ ವಾರ ನೈಸರ್ಗಿಕ ವಿಕೋಪಕ್ಕೆ ಸಿಲುಕಿ ಮೃತಪಟ್ಟಿದ್ದಾರೆ. ಇದು, ಇಂತಹ ಯಾತ್ರೆಗಳ ಸಂದರ್ಭದಲ್ಲಿ ಉಂಟಾಗುವ ಜನಜಂಗುಳಿಯು ತಂದಿಡಬಹುದಾದ ಅಪಾಯ ಎಷ್ಟು ಎಂಬುದನ್ನು ತೋರಿಸಿದೆ. ಅದಕ್ಕಿಂತ ಹೆಚ್ಚಾಗಿ, ಮನುಷ್ಯನ ಜೀವದ ಬಗ್ಗೆ ಅಧಿಕಾರಸ್ಥರಲ್ಲಿ ಇರುವ ಕಾಳಜಿ ಎಷ್ಟರಮಟ್ಟಿನದು ಎಂಬುದನ್ನೂ ಇದು ತೋರಿಸಿಕೊಟ್ಟಿದೆ. ಕಾಶ್ಮೀರದಲ್ಲಿರುವ ಅಮರನಾಥನ ದರ್ಶನಕ್ಕೆ ದೇಶದ ಎಲ್ಲೆಡೆಯಿಂದ ಯಾತ್ರಿಕರು ಹೋಗುತ್ತಾರೆ. ಆಸ್ತಿಕರಲ್ಲಿ ಹಲವರು ಈ ಯಾತ್ರೆಗಾಗಿ ಹಂಬಲಿಸುವುದಿದೆ. ಯಾತ್ರೆ ಶುರುವಾದ ನಂತರದಲ್ಲಿ ಸಂಭವಿಸಿದ ಭಾರಿ ಮಳೆ ಹಾಗೂ ಅದರ ಪರಿಣಾಮವಾಗಿ ಉಂಟಾದ ನೆರೆಯಲ್ಲಿ ಯಾತ್ರಿಕರ ಡೇರೆಗಳು ಕೊಚ್ಚಿಹೋದವು ಎಂದು ವರದಿಯಾಗಿದೆ. ಇದರಿಂದಾಗಿ ಕನಿಷ್ಠ 15 ಜನ ಮೃತಪಟ್ಟು, ಹಲವರು ಗಾಯಗೊಂಡಿದ್ದಾರೆ. ನಾಪತ್ತೆಯಾಗಿದ್ದ ಕೆಲವರು ನಂತರ ಪತ್ತೆಯಾಗಿದ್ದಾರೆ, ಅವರು ಸುರಕ್ಷಿತವಾಗಿದ್ದಾರೆ ಎಂಬ ವರದಿಗಳು ಇವೆ. ಅಮರನಾಥನ ನೆಲೆಯು ಬಹಳ ಎತ್ತರದ ಪ್ರದೇಶದಲ್ಲಿದೆ, ಅಲ್ಲಿಗೆ ತಲುಪಬೇಕು ಎಂದಾದರೆ ದುರ್ಗಮ ಹಾದಿಯನ್ನು ಕ್ರಮಿಸಬೇಕು. ಹಲವು ಕಾರಣಗಳಿಂದಾಗಿ ಮೂರು ವರ್ಷಗಳಿಂದ ರದ್ದಾಗಿದ್ದ ಯಾತ್ರೆಯು ಈ ಬಾರಿ ಮತ್ತೆ ಶುರುವಾಗಿದೆ.

ಯಾವುದೇ ಯಾತ್ರೆ, ಧಾರ್ಮಿಕ ಕಾರ್ಯಕ್ರಮಗಳಲ್ಲಿ ಅಗತ್ಯ ಸುರಕ್ಷತಾ ಕ್ರಮಗಳನ್ನು ಕೈಗೊಳ್ಳುವುದು ಆಡಳಿತ ವ್ಯವಸ್ಥೆಯ ಹೊಣೆ

ಈಗ ಆಗಿರುವ ದುರಂತವನ್ನು 'ನೈಸರ್ಗಿಕ ವಿಕೋಪ' ಎಂದಷ್ಟೇ ಹೇಳಿ ಸುಮ್ಮನಿರುವುದು ಸರಿಯಲ್ಲ. ಜಮ್ಮು ಮತ್ತು ಕಾಶ್ಮೀರದ ಲೆಫ್ಟಿನೆಂಟ್ ಗವರ್ನರ್ ಮನೋಜ್ ಸಿನ್ಹಾ ಮತ್ತು ಕೇಂದ್ರಾಡಳಿತ ಪ್ರದೇಶದ ಆಡಳಿತ ಯಂತ್ರವು ಈ ಜೀವಹಾನಿಯ ಹೊಣೆ ಹೊರಬೇಕು. ವಾತಾವರಣವು ತೀರಾ ವಿಷಮವಾಗಿದ್ದಾಗ, ಪರಿಸ್ಥಿತಿ ಹೇಗಾಗುತ್ತದೆ ಎಂಬುದು ಖಚಿತವಾಗಿಲ್ಲದಿದ್ದಾಗ ಯಾತ್ರೆಗೆ ಅವಕಾಶ ಮಾಡಿಕೊಟ್ಟಿದ್ದು ತಪ್ಪು. ಯಾತ್ರೆಯ ಅವಧಿಯು ವರ್ಷದಿಂದ ವರ್ಷಕ್ಕೆ ಬೇರೆ ಬೇರೆ ಆಗಿರುತ್ತದೆ. ತೀರಾ ಸೀಮಿತವಾದ ಪ್ರದೇಶವೊಂದರಲ್ಲಿ ಎಷ್ಟು ಮಳೆ ಆಗಬಹುದು ಎಂಬುದನ್ನು ಹೇಳಲು ಹವಾಮಾನ ಕೇಂದ್ರಕ್ಕೆ ಸಾಧ್ಯವಾಗುವುದಿಲ್ಲ ಎಂದು ಹವಾಮಾನ ಇಲಾಖೆಯ ಶ್ರೀನಗರದ ಅಧಿಕಾರಿಗಳು ಹೇಳಿದ್ದಾರೆ. ಅಲ್ಲದೆ, ತೀರಾ ದುರ್ಗಮವಾದ ಪ್ರದೇಶಗಳಲ್ಲಿ ಆಗುವ ಮಳೆಯ ಪ್ರಮಾಣ ಎಷ್ಟೆಂಬುದನ್ನು ಅಳೆಯಲು ವ್ಯವಸ್ಥೆ ಇಲ್ಲ ಎಂದೂ ಅವರು ತಿಳಿಸಿದ್ದಾರೆ. ಅಮರನಾಥ ಗುಹೆಯ ಸುತ್ತ ನೀರ್ಗಲ್ಲುಗಳು ಇವೆ. ಹವಾಮಾನ ಬದಲಾವಣೆಯ ಕಾರಣದಿಂದಾಗಿ ಅಲ್ಲಿನ ವಾತಾವರಣ ವಿಷಮಗೊಳ್ಳುವ ಸಾಧ್ಯತೆ ಇದ್ದೇ ಇರುತ್ತದೆ. ಅಧಿಕಾರಿಗಳು ಯಾತ್ರೆಯ ಯೋಜನೆ ಸಿದ್ಧಪಡಿಸುವಾಗ ಹವಾಮಾನದ ಬದಲಾವಣೆಗಳನ್ನು ಲೆಕ್ಕಕ್ಕೆ ತೆಗೆದುಕೊಂಡಿಲ್ಲ. ಹಿಂದಿನ ವರ್ಷ ಹಠಾತ್ ನೆರೆ ಸೃಷ್ಟಿಯಾದ ಪ್ರದೇಶಗಳಲ್ಲಿ ಡೇರೆ ಹಾಕಲು ಅವಕಾಶ ಕೊಡಲಾಯಿತು. ಹವಾಮಾನ ಕೇಂದ್ರಗಳನ್ನು ಅಮರನಾಥ ಯಾತ್ರೆಯ ಹಾದಿಯುದ್ದಕ್ಕೂ ಹೆಚ್ಚಿನ ಸಂಖ್ಯೆಯಲ್ಲಿ ಸ್ಥಾಪಿಸುವ ಅಗತ್ಯವನ್ನು ಆಡಳಿತ ವ್ಯವಸ್ಥೆಯು ಗಂಭೀರವಾಗಿ ಪರಿಗಣಿಸಲಿಲ್ಲ. ಯಾತ್ರಿಕರ ಪ್ರತೀ ತಂಡದ ಜೊತೆ ವಿಕೋಪ ನಿರ್ವಹಣಾ ತಂಡವನ್ನು ಕಳುಹಿಸುವ ಕೆಲಸವೂ ಆಗಲಿಲ್ಲ. ತಜ್ಞರ ಸಮಿತಿಯು ಶಿಫಾರಸು ಮಾಡಿದ್ದ ಸಂಖ್ಯೆಗಿಂತ ಹೆಚ್ಚು ಯಾತ್ರಿಕರಿಗೆ ಅವಕಾಶ ಕೊಡಲಾಯಿತು.

ದೇಶದಲ್ಲಿ ಸಾಮಾಜಿಕ ಹಾಗೂ ಧಾರ್ಮಿಕ ಕಾರ್ಯಕ್ರಮಗಳನ್ನು, ಯಾತ್ರೆಗಳನ್ನು ಸ್ಥಳೀಯ ಹವಾಮಾನಕ್ಕೆ ಅನುಗುಣವಾಗಿ ಯೋಜಿಸಲಾಗುತ್ತದೆ. ಆದರೆ, ಹವಾಮಾನ ಬದಲಾವಣೆ ಹಾಗೂ ಅನಿರೀಕ್ಷಿತ ಸಂದರ್ಭಗಳು ಎದುರಾಗುವುದನ್ನು ಪರಿಗಣಿಸಿ, ಇಂತಹ ಕಾರ್ಯಕ್ರಮಗಳನ್ನು ಯೋಜಿಸಬೇಕಾದ ಅಗತ್ಯ ಈಗ ಇದೆ. ಯಾವುದೇ ಯಾತ್ರೆ, ಧಾರ್ಮಿಕ ಕಾರ್ಯಕ್ರಮ ನಡೆಯಲಿ, ಅಲ್ಲಿ ಅಗತ್ಯ ಸುರಕ್ಷತಾ ಕ್ರಮಗಳು ಇರುವಂತೆ ನೋಡಿಕೊಳ್ಳುವುದು ಆಡಳಿತ ವ್ಯವಸ್ಥೆಯ ಹೊಣೆ. ಹವಾಮಾನ ಮುನ್ಸೂಚನೆ ವ್ಯವಸ್ಥೆಯನ್ನು ಎಲ್ಲೆಡೆಯೂ ಬಲಪಡಿಸಬೇಕು. ಅದರಲ್ಲೂ ಮುಖ್ಯವಾಗಿ, ಹವಾಮಾನ ವೈಪರೀತ್ಯಗಳು ತೀವ್ರವಾಗಿರುವ ಕಡೆಗಳಲ್ಲಿ ಇವು ಆದ್ಯತೆಯ ಮೇಲೆ ಆಗಬೇಕು. ಅಗತ್ಯ ಮೂಲಸೌಕರ್ಯ ಹಾಗೂ ಸಾರಿಗೆ ಸೌಲಭ್ಯ ಇರಬೇಕು. ಉಗ್ರರ ಚಟುವಟಿಕೆಗಳ ನಡುವೆಯೂ ಅಮರನಾಥ ಯಾತ್ರೆಯನ್ನು ಯಶಸ್ವಿಯಾಗಿ ಆಯೋಜಿಸಿ ಕೇಂದ್ರ ಸರ್ಕಾರವನ್ನು, ಬಹುಶಃ ಇಡೀ ವಿಶ್ವವನ್ನು ಮೆಚ್ಚಿಸುವ ಉದ್ದೇಶವನ್ನು ಕಾಶ್ಮೀರದ ಆಡಳಿತ ಯಂತ್ರ ಹೊಂದಿತ್ತು. ಆದರೆ, ಅದು ಯಾತ್ರಿಕರ ಸುರಕ್ಷತೆಯನ್ನು ಖಾತರಿಪಡಿಸುವಲ್ಲಿ ವಿಫಲವಾಯಿತು.

ದಿನದ ಟ್ವೀಟ್

ಅರ್ಥವಾಗದ ಅರ್ಥಶಾಸ್ತ್ರ !

ಅಮೆರಿಕದಲ್ಲಿ ಕೋವಿಡ್ ಸಾಂಕ್ರಾಮಿಕದ ಬಳಿಕ ಜನರು ಉತ್ತೇಜನದ ರೂಪದಲ್ಲಿ 1200 ಡಾಲರ್, 1400 ಡಾಲರ್ ಮತ್ತು 600 ಡಾಲರ್ ಪಡೆದಿದ್ದಾರೆ. ಈ ಹಣವನ್ನು 'ಸೃಷ್ಟಿಸಿ' ವಿತರಿಸಲಾಗಿದೆ. ಭಾರತದಲ್ಲಿ ಜನರಿಗೆ ಇಂತಹ ಯಾವುದೇ ಕೊಡುಗೆ ಲಭ್ಯವಾಗಲಿಲ್ಲ. ಆದರೆ ಅವರು ಈಗ ಹಣದುಬ್ಬರದ ಕಾರಣ ಶೇ 4-5ರಷ್ಟು ಅಗೋಚರ ತೆರಿಗೆಯನ್ನು ಕಟ್ಟುತ್ತಿದ್ದಾರೆ. ಯಾರೊಬ್ಬರೂ ಈ ಬಗ್ಗೆ ಮಾತನಾಡುವುದಿಲ್ಲ, ಏಕೆಂದರೆ ಜನರಿಗೆ ಅರ್ಥಶಾಸ್ತ್ರ ಅರ್ಥವಾಗುವುದಿಲ್ಲ.

ಅಕ್ಷತ್ ಶ್ರೀವಾಸ್ತವ, ಉದ್ಯಮಿ, ಶಿಕ್ಷಕ

ಕಿಡಿನುಡಿ

ಎಷ್ಟೊಂದು ನಿರಾಶಾದಾಯಕ: ಸಂಸತ್ತಿನಲ್ಲಿ ಅಸಂಸದೀಯ ಪದಗಳು ಇನ್ನು ಮುಂದೆ ಇರುವುದಿಲ್ಲವೇ? ಹಾಗಾದರೆ ಅದು ಇನ್ನು ಮುಂದೆ ಕರುಣಾಳುಗಳು ಹಾಗೂ ಒಳ್ಳೆಯವರಿಂದ ತುಂಬಿರುವ ಶಿಶುವಿಹಾರದಂತೆ ಆಗಲಿದೆ! ಎಂಥ ದುರಂತ. ಅಂದಹಾಗೆ, ಮೈಕ್ರೊಫೋನ್‌ಗಳನ್ನು ಎಸೆಯಲು, ಪ್ರಾದೇಶಿಕ ಭಾಷೆಗಳಲ್ಲಿ ನಿಂದಿಸಲು ಅವರಿಗೆ ಅವಕಾಶ ನೀಡಲಾಗುವುದೇ? ಏಕೆಂದರೆ ಅವುಗಳನ್ನು ನಿಷೇಧಿಸಿದಂತೆ ಕಾಣುತ್ತಿಲ್ಲ!

ಸುಹೇಲ್ ಸೇಠ್, ಉದ್ಯಮಿ

25 ವರ್ಷಗಳ ಹಿಂದೆ

ಮಂಗಳವಾರ, 15-7-1997

• ವೀರಪ್ಪನ್ ಜೀವರಕ್ಷಣೆಗೆ ಸರ್ಕಾರ ಒಪ್ಪಿಗೆ

ಬೆಂಗಳೂರು, ಜುಲೈ 14– ಒಂಬತ್ತು ಮಂದಿ ಅರಣ್ಯ ಸಿಬ್ಬಂದಿಯನ್ನು ಅಪಹರಿಸಿ ಅವರನ್ನು ಒತ್ತೆಯಾಳಾಗಿ ಇಟ್ಟುಕೊಂಡಿರುವ ಕುಖ್ಯಾತ ನರಹಂತಕ–ಕಾಡುಗಳ್ಳ ವೀರಪ್ಪನ್ ವಿಧಿಸಿರುವ ಷರತ್ತಿನಂತೆ ಆತನ ಶರಣಾಗತಿಯನ್ನು ಒಪ್ಪಿಕೊಂಡು, ಜೀವ ರಕ್ಷಣೆ ಮಾಡಲು ರಾಜ್ಯ ಸರ್ಕಾರ ಸಮ್ಮತಿಸಿದೆ.

ವೀರಪ್ಪನ್ ವಿಚಾರದಲ್ಲಿ ರಾಜ್ಯ ಸರ್ಕಾರ ಕೈಗೊಂಡಿರುವ ಈ ತೀರ್ಮಾನಕ್ಕೆ ತಮಿಳುನಾಡು ಸರ್ಕಾರವೂ ಒಪ್ಪಿಗೆ ಸೂಚಿಸಿದೆ ಎಂದು, ಇಂದು ನಡೆದ ರಾಜ್ಯ ಸಚಿವ ಸಂಪುಟ ಸಭೆಯ ನಂತರ ಕಾನೂನು ಮತ್ತು ವಾರ್ತಾ ಸಚಿವ ಎಂ.ಸಿ.ನಾಣಯ್ಯ ಅವರು ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ವೀರಪ್ಪನ್ ಜೀವಕ್ಕೆ ರಕ್ಷಣೆ ನೀಡಲು ಸರ್ಕಾರ ಕೈಗೊಂಡಿರುವ ತೀರ್ಮಾನ ಪೊಲೀಸ್ ಅಧಿಕಾರಿಗಳ ವಲಯದಲ್ಲಿ ತೀವ್ರ ಅಸಮಾಧಾನ, ಆಕ್ರೋಶಕ್ಕೆ ಕಾರಣವಾಗಿದೆ.

ಸರ್ಕಾರದ ಈ ನಿರ್ಧಾರ ಪೊಲೀಸರ ನೈತಿಕ ಸ್ಥೈರ್ಯ ಹೆಚ್ಚಿಸುವಲ್ಲಿ ಸಹಾಯಕಾರಿಯಾಗಿಲ್ಲ ಎಂಬುದು ಪೊಲೀಸ್ ಅಧಿಕಾರಿಗಳ ಸ್ಪಷ್ಟ ಅಭಿಪ್ರಾಯ.

• ರಾಷ್ಟ್ರಪತಿ ಚುನಾವಣೆ ಶೇಕಡ 95 ಮತದಾನ

ನವದೆಹಲಿ, ಜುಲೈ 14 (ಪಿಟಿಐ)– ದೇಶದ 11ನೇ ರಾಷ್ಟ್ರಪತಿಯ ಆಯ್ಕೆಗಾಗಿ ಇಂದು ದೇಶದಾದ್ಯಂತ ನಡೆದ ಚುನಾವಣೆಯಲ್ಲಿ ಶೇಕಡ 95ರಷ್ಟು ಮತದಾನವಾಗಿದೆ.

ಎಲ್ಲ ಪ್ರಮುಖ ರಾಜಕೀಯ ಪಕ್ಷಗಳು ಉಪರಾಷ್ಟ್ರಪತಿ ಕೆ.ಆರ್.ನಾರಾಯಣನ್ ಅವರಿಗೆ ಬೆಂಬಲ ಸೂಚಿಸಿರುವ ಹಿನ್ನೆಲೆಯಲ್ಲಿ ಅವರು ಅತ್ಯುನ್ನತ ಹುದ್ದೆಗೆ ಆಯ್ಕೆಯಾಗುವುದು ಖಚಿತವಾಗಿದೆ.

50 ವರ್ಷಗಳ ಹಿಂದೆ

ಶನಿವಾರ, 15-7-1972

• ಬೇರೆ ಭೂಮಿ ಇದ್ದವರಿಗೆ ಗೇರು ಸಾಗುವಳಿಗೆ ಜಮೀನು ಮಂಜೂರಾತಿ ಪ್ರತಿಬಂಧಿಸಿ ಕ್ರಮ

ಬೆಂಗಳೂರು, ಜುಲೈ 14– ಬೇರೆ ಜಮೀನು ಇದ್ದವರಿಗೆ ಗೇರು ಸಾಗುವಳಿಗೆ ಜಮೀನು ಮಂಜೂರು ಮಾಡುವುದನ್ನು ನಿರ್ಬಂಧಿಸಲು ಭೂ ಹಂಚಿಕೆ ನಿಯಮಗಳಲ್ಲಿ ಸೂಕ್ತ ತಿದ್ದುಪಡಿ ಮಾಡುವ ವಿಚಾರ ಸರ್ಕಾರದ ಪರಿಶೀಲನೆಯಲ್ಲಿದೆ.

ಪ್ರಸಕ್ತ ಭೂ ಹಂಚಿಕೆ ನಿಯಮಗಳ ಪ್ರಕಾರ, ಬೇರೆ ಜಮೀನು ಇದ್ದವರಿಗೆ ಒಟ್ಟು 10 ಹೆಕ್ಟೇರುಗಳಿಗೆ ಮೀರದಂತೆ ಗೇರು ಸಾಗುವಳಿಗೆ ಜಮೀನನ್ನು ಮಂಜೂರು ಮಾಡಬಹುದು.

ಈ ವಿಷಯವನ್ನು ವಿಧಾನಸಭೆಯಲ್ಲಿ ಕಂದಾಯ ಸಚಿವ ಶ್ರೀ ಎನ್.ಹುಚ್ಚಮಾಸ್ತಿಗೌಡ ಅವರು ಶ್ರೀ ಕಾಗೋಡು ತಿಮ್ಮಪ್ಪ ಅವರಿಗೆ ತಿಳಿಸಿದರು.

• ರಾಜ್ಯ ಸರ್ಕಾರದಿಂದ ಅರಮನೆ, ಜಮೀನಿನ ಕ್ರಯ

ಬೆಂಗಳೂರು, ಜುಲೈ 14– ಮೈಸೂರಿನ ಮಾಜಿ ಮಹಾರಾಜರಿಗೆ ಸೇರಿದ ಬೆಂಗಳೂರು ಅರಮನೆ ಹಾಗೂ 600 ಎಕರೆ ಭೂಮಿ, ಮೈಸೂರಿನಲ್ಲಿರುವ ಪ್ಯಾಲೆಸ್ ಕಚೇರಿ ಹಾಗೂ 800 ಎಕರೆ ಜಮೀನನ್ನು ರಾಜ್ಯ ಸರ್ಕಾರ ಕೊಳ್ಳಲಿದೆ.

ಇಂದು ಬೆಳಿಗ್ಗೆ ನಡೆದ ವಿಧಾನ ಮಂಡಲದ ಕಾಂಗ್ರೆಸ್ ಪಕ್ಷದ ಸಭೆಯಲ್ಲಿ ಸರ್ಕಾರದ ಈ ಆಲೋಚನೆಯನ್ನು ಮುಖ್ಯಮಂತ್ರಿ ಶ್ರೀ ದೇವರಾಜ ಅರಸು ಅವರು ತಿಳಿಸಿದರು. ಈ ಬಗ್ಗೆ ಚರ್ಚೆ ನಡೆದು ಸರ್ಕಾರದ ಈ ಸಲಹೆಯನ್ನು ಪಕ್ಷ ಒಪ್ಪಿತು.

ಜಾಗತಿಕ ವಿದ್ಯಮಾನಗಳ ಜೊತೆ ಬೆಸೆದುಕೊಂಡಿದೆ ದೇಶದ ಕರೆನ್ಸಿಯ ಮೌಲ್ಯ

ರೂಪಾಯಿ: ಏಕೆ ಈ ಕುಸಿತ?

ವಿಶ್ಲೇಷಣೆ

ಅನುಜ್ ಚೌಧರಿ

ಅಮೆರಿಕದ ಡಾಲರ್ ಎದುರು ಕುಸಿಯುತ್ತಲೇ ಇರುವ ರೂಪಾಯಿ ಮೌಲ್ಯವು ಗುರುವಾರದ ಕೊನೆಗೆ ₹ 79.99ಕ್ಕೆ ತಲುಪಿದೆ. ಈ ವರ್ಷದ ಆರಂಭದಲ್ಲಿ ಇದ್ದ ಮಟ್ಟಕ್ಕೆ ಹೋಲಿಸಿದರೆ ರೂಪಾಯಿ ಮೌಲ್ಯವು ಡಾಲರ್ ಎದುರು ಶೇಕಡ 7.05ರಷ್ಟು ಕುಸಿದಿದೆ. ವರ್ಷದ ಆರಂಭದಲ್ಲಿ ರೂಪಾಯಿ ಮೌಲ್ಯವು ₹ 74.31 ಆಗಿತ್ತು. ಹೀಗಿದ್ದರೂ, ರೂಪಾಯಿಯು ಯೂರೊ, ಪೌಂಡ್ ಮತ್ತು ಯೆನ್‌ಗಿಂತ ಉತ್ತಮ ಸ್ಥಿತಿಯಲ್ಲಿದೆ. ಈ ಮೂರು ಕರೆನ್ಸಿಗಳು ಡಾಲರ್ ಎದುರು ಕ್ರಮವಾಗಿ ಶೇ 11.86ರಷ್ಟು, ಶೇ 12.14ರಷ್ಟು ಮತ್ತು ಶೇ 18.88ರಷ್ಟು ಕುಸಿದಿವೆ. ರೂಪಾಯಿ ಮೌಲ್ಯ ಕುಸಿದಿರುವುದಕ್ಕೆ ಹಲವು ಕಾರಣಗಳು ಇವೆ.

ಈ ವರ್ಷದಲ್ಲಿ ಡಾಲರ್ ಸೂಚ್ಯಂಕವು ಸರಿಸುಮಾರು ಶೇ 13ರಷ್ಟು ಏರಿಕೆ ಕಂಡಿದೆ. ರಷ್ಯಾ–ಉಕ್ರೇನ್ ಯುದ್ಧದ ಪರಿಣಾಮ ಹಾಗೂ ಜಾಗತಿಕ ಆರ್ಥಿಕ ಸ್ಥಿತಿಯ ಮುನ್ನೋಟ ಅಷ್ಟೇನೂ ಚೆನ್ನಾಗಿಲ್ಲದ ಕಾರಣ, ಹೂಡಿಕೆದಾರರು ಸುರಕ್ಷಿತ ಹೂಡಿಕೆ ಆಯ್ಕೆಗಳನ್ನು ಅರಸುತ್ತಿದ್ದಾರೆ. 2022ರಲ್ಲಿ ಜಾಗತಿಕ ಆರ್ಥಿಕ ಬೆಳವಣಿಗೆ ದರವು ಶೇ 3.6ರಷ್ಟು ಇರಲಿದೆ ಎಂದು ಅಂತರರಾಷ್ಟ್ರೀಯ ಹಣಕಾಸು ನಿಧಿ (ಐಎಂಎಫ್) ಅಂದಾಜಿಸಿದೆ. ಜಾಗತಿಕ ಮಟ್ಟದಲ್ಲಿ ಹೆಚ್ಚಿರುವ ಹಣದುಬ್ಬರ, ಬಡ್ಡಿ ದರ ಹೆಚ್ಚಾಗುತ್ತಿರುವುದು, ರಷ್ಯಾ ಮೇಲಿನ ನಿರ್ಬಂಧಗಳು ಜಾಸ್ತಿಯಾಗುತ್ತಿರುವುದು, ಚೀನಾದಲ್ಲಿ ಆರ್ಥಿಕ ಬೆಳವಣಿಗೆಯ ವೇಗ ತಗ್ಗುತ್ತಿರುವ ಕಾರಣಗಳಿಂದಾಗಿ ಆರ್ಥಿಕ ಹಿಂಜರಿತ ಶುರುವಾಗುವ ಸಾಧ್ಯತೆಯನ್ನು ಐಎಂಎಫ್ ಅಲ್ಲಗಳೆದಿಲ್ಲ.

ಅಮೆರಿಕದ ಡಾಲರ್, ಜಾಗತಿಕ ಮಟ್ಟದಲ್ಲಿ ಮೀಸಲು ಕರೆನ್ಸಿ ಇದ್ದಂತೆ. ಈಗ ಜಾಗತಿಕ ಆರ್ಥಿಕ ಹಿಂಜರಿತದ ಭೀತಿಯು ಅಮೆರಿಕದ ಡಾಲರ್ ಮೌಲ್ಯವರ್ಧನೆಗೆ ನೆರವಾಗುತ್ತಿದೆ. ಅಮೆರಿಕದ ಟ್ರೆಷರಿ ಬಾಂಡ್‌ಗಳು ಹಣಕಾಸು ಜಗತ್ತಿನಲ್ಲಿ ಅತ್ಯಂತ ಸುರಕ್ಷಿತ ಹೂಡಿಕೆ ಉತ್ಪನ್ನಗಳು ಎಂದು ಪರಿಗಣಿತವಾಗಿವೆ.

ವಿಶ್ವಬ್ಯಾಂಕ್ ಹೇಳಿರುವಂತೆ, ಚೀನಾದ ಒಟ್ಟು ಆಂತರಿಕ ಉತ್ಪಾದನೆಯ (ಜಿಡಿಪಿ) ಬೆಳವಣಿಗೆಯು ಕೋವಿಡ್ ಸಂಬಂಧಿತ ನಿರ್ಬಂಧಗಳ ಕಾರಣದಿಂದಾಗಿ ಈ ವರ್ಷ ಶೇ 0.80ರಷ್ಟು ತಗ್ಗುವ ಸಾಧ್ಯತೆ ಇದೆ. ಚೀನಾವು ಕೋವಿಡ್ ವಿಚಾರದಲ್ಲಿ ಕಠಿಣ ನಿಲುವು ತಳೆದಿದೆ. ಹೀಗಾಗಿ, ಅದು ನಿರ್ಬಂಧಗಳು ಮತ್ತು ಲಾಕ್‌ಡೌನ್ ಮೊರೆ ಹೋಗುತ್ತಿದೆ. ಈ ಕ್ರಮಗಳು ಮುಂದಿನ ವರ್ಷದವರೆಗೂ ಮುಂದುವರಿಯಬಹುದು.

ಅಮೆರಿಕದ ಕೇಂದ್ರೀಯ ಬ್ಯಾಂಕ್ ಆಗಿರುವ ಫೆಡರಲ್ ರಿಸರ್ವ್, ಹಣದುಬ್ಬರ ಏರಿಕೆಯನ್ನು ನಿಯಂತ್ರಿಸುವ ಉದ್ದೇಶದಿಂದ ಬಿಗಿಯಾದ ಆರ್ಥಿಕ ನಿಲುವು ತಳೆಯುತ್ತಿದೆ. ಹಣದುಬ್ಬರವು ಅಮೆರಿಕದಲ್ಲಿ ಆದಾಯ–ವೇತನ ಏರಿಕೆಯ ಪ್ರಯೋಜನವನ್ನು ಅಳಿಸಿಹಾಕಿದೆ. ಫೆಡರಲ್ ರಿಸರ್ವ್ ಬಡ್ಡಿ ದರ ಹೆಚ್ಚಿಸುತ್ತಿದೆ. ಅದು ಬಡ್ಡಿ ದರವನ್ನು ಈಗಾಗಲೇ ಶೇ 1.50ರಷ್ಟು ಜಾಸ್ತಿ ಮಾಡಿದೆ. ವರ್ಷಾಂತ್ಯದ ವೇಳೆಗೆ ಬಡ್ಡಿ ದರವನ್ನು ಶೇ 3.40ಕ್ಕೆ ಏರಿಸುವ ನಿರೀಕ್ಷೆ ಇದೆ. ಹಣದುಬ್ಬರವು ತಕ್ಷಣಕ್ಕೆ ಕಡಿಮೆ ಆಗಲಿಕ್ಕಿಲ್ಲ ಎಂಬ ವಿಚಾರವಾಗಿ ಅಲ್ಲಿನ ನೀತಿ ನಿರೂಪಕರು ಕಳವಳ ಹೊಂದಿದ್ದಾರೆ ಎಂಬುದನ್ನು ಫೆಡರಲ್ ರಿಸರ್ವ್ ಸಭೆಯ ನಡಾವಳಿ ತೋರಿಸಿದೆ.

ಜಾಗತಿಕ ಮಾರುಕಟ್ಟೆಯಲ್ಲಿ ಸರಕುಗಳ ಬೆಲೆಯು ಹಲವು ವರ್ಷಗಳ ಗರಿಷ್ಠ ಮಟ್ಟಕ್ಕೆ ಏರಿಕೆ ಕಂಡಿದೆ. ಕೋವಿಡ್–19ರಿಂದಾಗಿ ಪೂರೈಕೆ ವ್ಯವಸ್ಥೆಯಲ್ಲಿ ಉಂಟಾದ ಅಡ್ಡಿಗಳು, ಉಕ್ರೇನ್–ರಷ್ಯಾ ಯುದ್ಧದ ಕಾರಣದಿಂದಾಗಿ ಆ ಅಡ್ಡಿಗಳು ಇನ್ನಷ್ಟು ತೀವ್ರಗೊಂಡಿದ್ದು, ಚೀನಾದಲ್ಲಿನ ನಿರ್ಬಂಧಗಳು ಈ ಬಗೆಯ ತೊಡಕುಗಳನ್ನು ಮತ್ತಷ್ಟು ಹೆಚ್ಚಿಸಿರುವುದು ಬೆಲೆ ಏರಿಕೆಗೆ ಕಾರಣಗಳು. ಡಬ್ಲ್ಯುಟಿಐ ಕಚ್ಚಾ ತೈಲವು ಪ್ರತೀ ಬ್ಯಾರೆಲ್‌ಗೆ 130 ಡಾಲರ್‌ಗೂ ಏರಿಕೆ ಆಗಿತ್ತು.

ರಷ್ಯಾದ ತೈಲದ ಮೇಲೆ ಹೇರಿರುವ ಆರ್ಥಿಕ ನಿರ್ಬಂಧಗಳ ಪರಿಣಾಮವಾಗಿ ಮತ್ತು ರಷ್ಯಾ ದೇಶವು ಯುರೋಪಿನ ಕೆಲವು ದೇಶಗಳಿಗೆ ಅನಿಲ ಪೂರೈಕೆ ತಡೆಹಿಡಿದಿರುವ ಪರಿಣಾಮವಾಗಿ ಯುರೋಪಿನಲ್ಲಿ ಇಂಧನ ಕೊರತೆ ತೀವ್ರವಾಗಿದೆ. ಯುರೋಪ್‌ನಲ್ಲಿ ಆರ್ಥಿಕ ಹಿಂಜರಿತ ಎದುರಾಗುವ ಸಾಧ್ಯತೆ ಇದೆ.

ಸರಕುಗಳ ಬೆಲೆ ಹೆಚ್ಚಾಗಿರುವುದು, ಜಗತ್ತಿನ ಎಲ್ಲೆಡೆ ಹಣದುಬ್ಬರ ಪ್ರಮಾಣ ತೀವ್ರ ಹೆಚ್ಚಾಗಲು ಕಾರಣವಾಗಿದೆ. ಭಾರತದಲ್ಲಿ ಗ್ರಾಹಕ ಬೆಲೆ ಸೂಚ್ಯಂಕ ಆಧಾರಿತ ಚಿಲ್ಲರೆ ಹಣದುಬ್ಬರ ದರವು ಜೂನ್‌ನಲ್ಲಿ ಶೇ 7.01ಕ್ಕೆ ತಲುಪಿದೆ. ಇದು ಆರ್‌ಬಿಐ ನಿಗದಿ ಮಾಡಿಕೊಂಡಿರುವ ಮಿತಿಗಿಂತ (ಶೇ 4) ಜಾಸ್ತಿ. ಜಗತ್ತಿನ ಹಲವು ಪ್ರಮುಖ ದೇಶಗಳು ಹಣದುಬ್ಬರದ ವಿರುದ್ಧ ಸೆಣಸುತ್ತಿವೆ. ಅಮೆರಿಕ ಮತ್ತು ಬ್ರಿಟನ್‌ನಲ್ಲಿ ಹಣದುಬ್ಬರ ಪ್ರಮಾಣವು ನಾಲ್ಕು ದಶಕಗಳ ಗರಿಷ್ಠ ಮಟ್ಟವನ್ನು ತಲುಪಿದೆ. ಯೂರೊ ವಲಯದಲ್ಲಿಯೂ ಹಣದುಬ್ಬರ ಜಾಸ್ತಿಯಾಗಿದೆ. ಅರ್ಥ ವ್ಯವಸ್ಥೆಯ ಚೇತರಿಕೆಯ ಬಗ್ಗೆ ಮೂಡಿರುವ ಕಳವಳವು ಗ್ರಾಹಕರ ವಿಶ್ವಾಸವನ್ನು ಕುಗ್ಗಿಸಿದೆ.

ವಿದೇಶಿ ಸಾಂಸ್ಥಿಕ ಹೂಡಿಕೆದಾರರು 2021ರ ಅಕ್ಟೋಬರ್‌ನಿಂದ ದೇಶದ ಷೇರು ಮಾರುಕಟ್ಟೆಗಳಿಂದ ಹಣವನ್ನು ನಿರಂತರವಾಗಿ ಹಿಂದಕ್ಕೆ ಪಡೆಯುತ್ತಿದ್ದಾರೆ. ಅವರು ಒಟ್ಟು ₹ 2.89 ಲಕ್ಷ ಕೋಟಿ ಬಂಡವಾಳ ಹಿಂಪಡೆದಿದ್ದಾರೆ. ಜೂನ್ ತಿಂಗಳಿನಲ್ಲೇ ಅವರು ₹58 ಸಾವಿರ ಕೋಟಿ ಹಿಂಪಡೆದಿದ್ದಾರೆ. 2020ರ ಮಾರ್ಚ್‌ನಲ್ಲಿ ಲಾಕ್‌ಡೌನ್ ಜಾರಿಯಾದ ನಂತರ ಅವರು ತಿಂಗಳೊಂದರಲ್ಲಿ ಹಿಂಪಡೆದಿರುವ ಅತಿದೊಡ್ಡ ಮೊತ್ತ ಇದು. ಅಮೆರಿಕದಲ್ಲಿ ಬಡ್ಡಿ ದರ ಹೆಚ್ಚಾಗುತ್ತಿರುವುದು ಹಾಗೂ ರಿಸ್ಕ್ ಹೆಚ್ಚಿರುವ ಹೂಡಿಕೆ ಬೇಡ ಎಂಬ ಮನೋಭಾವವೇ ಹೂಡಿಕೆ ಹಿಂದಕ್ಕೆ ಪಡೆಯುತ್ತಿರುವುದಕ್ಕೆ ಮುಖ್ಯ ಕಾರಣ.

ದೇಶದ ಷೇರು ಮಾರುಕಟ್ಟೆಗಳಲ್ಲಿನ ವಾತಾವರಣ ಕೂಡ ತೇಜಿ ಇಲ್ಲ. ಷೇರು ಮಾರುಕಟ್ಟೆ ಸೂಚ್ಯಂಕಗಳು 2021ರ ಅಕ್ಟೋಬರ್‌ನಲ್ಲಿ ಕಂಡಿದ್ದ ದಾಖಲೆಯ ಗರಿಷ್ಠ ಮಟ್ಟದಿಂದ ಕೆಳಗಿಳಿದಿವೆ. ಸೂಚ್ಯಂಕಗಳು ಗರಿಷ್ಠ ಮಟ್ಟದಲ್ಲಿ ಇದ್ದಾಗ ಹೂಡಿಕೆದಾರರು ಲಾಭ ಗಳಿಕೆಯ ಉದ್ದೇಶದಿಂದ ಷೇರುಗಳನ್ನು ಮಾರಾಟ ಮಾಡಿದ್ದು ಹಾಗೂ ಜಾಗತಿಕ ಷೇರುಪೇಟೆಗಳಲ್ಲಿ ತೇಜಿ ವಹಿವಾಟು ಇಲ್ಲದಿರುವುದು ಸೂಚ್ಯಂಕಗಳ ಇಳಿಕೆಗೆ ಕಾರಣ.

ಸದ್ಯದ ಪರಿಸ್ಥಿತಿಯಲ್ಲಿ ರೂಪಾಯಿ ಮೌಲ್ಯವು ಅಮೆರಿಕದ ಡಾಲರ್ ಎದುರು ಇನ್ನಷ್ಟು ಕಡಿಮೆಯಾಗಲಿದೆ. ಫೆಡರಲ್ ರಿಸರ್ವ್‌ನ ಬಿಗಿ ಹಣಕಾಸು ನೀತಿ, ಜಾಗತಿಕ ಮಟ್ಟದಲ್ಲಿನ ಹಿಂಜರಿತ, ರಿಸ್ಕ್ ಇರುವ ಹೂಡಿಕೆಗಳು ಬೇಡ ಎಂದು ಹೂಡಿಕೆದಾರರಿಗೆ ಅನಿಸಿರುವುದು ಮತ್ತು ದೇಶದಲ್ಲಿ ಹೆಚ್ಚಿರುವ ಹಣದುಬ್ಬರವು ಡಾಲರ್ ಮೌಲ್ಯವನ್ನು ಹೆಚ್ಚಿನ ಮಟ್ಟದಲ್ಲಿ ಇರಿಸಲಿವೆ.

ಹೀಗಿದ್ದರೂ, ಆರ್‌ಬಿಐ ಹಾಗೂ ಕೇಂದ್ರ ಸರ್ಕಾರ ಕೈಗೊಂಡಿರುವ ಕೆಲವು ಕ್ರಮಗಳಿಂದಾಗಿ ರೂಪಾಯಿ ಮೌಲ್ಯವು ತೀರಾ ಕುಸಿಯಲಿಕ್ಕಿಲ್ಲ. ವಿದೇಶಿ ವಿನಿಮಯ ಮಾರುಕಟ್ಟೆಯಲ್ಲಿ ಆರ್‌ಬಿಐ ಆಗಾಗ ಮಧ್ಯಪ್ರವೇಶ ಮಾಡಿದೆ. ಆದರೆ, ಹಾಗೆ ಮಧ್ಯಪ್ರವೇಶ ಮಾಡಿರುವುದು ರೂಪಾಯಿ ಮೌಲ್ಯ ಕುಸಿತದ ವೇಗ ತಡೆಯಲು ಮಾತ್ರ. ಅಂತರರಾಷ್ಟ್ರೀಯ ವಹಿವಾಟುಗಳನ್ನು ರೂಪಾಯಿ ಮೂಲಕ ನಡೆಸಲು ಬೇಕಿರುವ ವ್ಯವಸ್ಥೆಯನ್ನು ಆರ್‌ಬಿಐ ಈಚೆಗೆ ರೂಪಿಸಿದೆ. ಭಾರತದಿಂದ ಆಗುವ ರಫ್ತಿಗೆ ಒತ್ತು ನೀಡಿ ಜಾಗತಿಕ ಮಟ್ಟದಲ್ಲಿ ವಹಿವಾಟು ಹೆಚ್ಚಿಸುವ ಉದ್ದೇಶ ಆರ್‌ಬಿಐಗೆ ಇದೆ. ಈಚಿನ ಕೆಲವು ತಿಂಗಳುಗಳಲ್ಲಿ ಭಾರತಕ್ಕೆ ಚಿನ್ನದ ಆಮದು ಹೆಚ್ಚಾಗಿ ಡಾಲರ್‌ಗೆ ಬೇಡಿಕೆ ಜಾಸ್ತಿ ಆಗಿತ್ತು. ಇದನ್ನು ತಡೆಯಲು ಕೇಂದ್ರವು ಚಿನ್ನದ ಮೇಲಿನ ಆಮದು ಸುಂಕವನ್ನು ಹೆಚ್ಚಿಸಿದೆ. ರೂಪಾಯಿ ಮೌಲ್ಯವು ಅಲ್ಪಾವಧಿಯಲ್ಲಿ ಅಮೆರಿಕದ ಡಾಲರ್ ಎದುರು ₹ 78ರಿಂದ 81ರ ಮಟ್ಟದಲ್ಲಿ ವಹಿವಾಟು ನಡೆಸುವ ಅಂದಾಜು ಇದೆ.

ಅಮೆರಿಕದ ಫೆಡರಲ್ ರಿಸರ್ವ್ ಬಡ್ಡಿ ದರವನ್ನು ಒಂದಿಷ್ಟು ಹೆಚ್ಚಿಸಿದ ನಂತರ ತನ್ನ ಬಿಗಿ ಹಣಕಾಸು ನೀತಿಯನ್ನು ಬದಲಾಯಿಸಿ, 'ಕಾದುನೋಡುವ ತಂತ್ರ'ದ ಮೊರೆ ಹೋದರೆ ರೂಪಾಯಿಯ ಗತಿ ಬದಲಾಗಬಹುದು. ಕೋವಿಡ್‌ನಿಂದಾಗಿ ಚೀನಾದ ಅರ್ಥ ವ್ಯವಸ್ಥೆಗೆ ಆಗಿರುವ ನಷ್ಟ ಒಂದಿಷ್ಟು ಸರಿಹೋದರೆ, ರಷ್ಯಾ–ಉಕ್ರೇನ್ ಯುದ್ಧಕ್ಕೆ ರಾಜತಾಂತ್ರಿಕ ಪರಿಹಾರವೊಂದು ಸಿಕ್ಕರೆ, ಆಗ ಕೂಡ ರೂಪಾಯಿಗೆ ಅಷ್ಟಿಷ್ಟು ಪ್ರಯೋಜನ ಆಗುತ್ತದೆ.

ಲೇಖಕ: ಶೇರ್‌ಖಾನ್ ಬ್ರೋಕರೇಜ್ ಸಂಸ್ಥೆಯ ಸಂಶೋಧನಾ ವಿಶ್ಲೇಷಕ

ಚುರುಮುರಿ

ಸಿಂಹ ಗರ್ಜನೆ!

• ಗುರು ಪಿ.ಎಸ್.

'ವ್ಹಾವ್... ಸೂಪರ್ಬ್...' ನಿರ್ಮಾಣ ಹಂತದಲ್ಲಿರುವ ಸಂಸತ್ ಭವನದ ಕಟ್ಟಡದ ಮೇಲೆ ಅನಾವರಣಗೊಂಡಿರುವ ರಾಷ್ಟ್ರಲಾಂಛನದಲ್ಲಿನ ಹೊಸ ಸಿಂಹವನ್ನ ನೋಡ್ತಿದ್ದಂತೆ ರೋಮಾಂಚನವಾಯಿತು. ಅಲ್ಲಿ ಗರ್ಜಿಸುತ್ತಿರುವ ಸಿಂಹದಂತೆಯೇ, ಪ್ರೌಡ್ ಫೀಲಿಂಗ್‌ನಲ್ಲಿ ನಾನೂ ಎದೆಯುಬ್ಬಿಸಿ ಕುಳಿತೆ. 'ನೋಡೇ ಆ ಸಿಂಹಾನ, ಹೇಗ್ ಗರ್ಜಿಸ್ತಿದೆ ಅಂತಾ... ನೋಡ್ತಿರು, ನಮ್ ದೇಶ ಇನ್ನು ಎಲ್ಲೋ ಹೋಗಿ ನಿಲ್ಲುತ್ತೆ'.

'ದೇಶ ಎಲ್ಲಾದರೂ ನಿಂತ್ಕೊಳ್ಳಿ, ಮೊದ್ಲು ನೀವ್ ಎದ್ ನಿಂತ್ಕೊಳ್ರಿ...' ಗದರಿದಳು ಹೆಂಡ್ತಿ.

'ನೀನೊಂಥರಾ ನಿರಾಶಾವಾದಿ. ಯಾವುದನ್ನೂ ಸಂಭ್ರಮಿಸಲ್ಲ' ಗೊಣಗಿದೆ.

'ಎರಡು ತಿಂಗಳಿಂದ ಮನೆ ಬಾಡಿಗೆ ಕಟ್ಟಿಲ್ಲ. ಮೊದಲು ಕಟ್ಟಿ ಮರ್ಯಾದೆ ಉಳಿಸ್ಕೊಳ್ರಿ'.

'ದೇಶದ ಬಗ್ಗೆ ಮಾತಾಡೋವಾಗ, ಈ ಥರ ಸಿಲ್ಲಿ ಮ್ಯಾಟರ್ ಹೇಳಿ, ನನ್ನ ಮೂಡ್ ಆಫ್ ಮಾಡ್ತಿಯಾ ನೋಡು, ವಿರೋಧ ಪಕ್ಷದವರಂಗೆ ಮೊಸರಲ್ಲಿ ಕಲ್ಲು ಹುಡುಕೋದು ಜಾಸ್ತಿ ನೀನು'.

'ಮೊಸರು ಅಂದ ತಕ್ಷಣ ನೆನಪಾಯ್ತು. ಅದಕ್ಕೂ ಜಿಎಸ್‌ಟಿ ಹಾಕ್ತಿರೋದ್ರಿಂದ ರೇಟ್ ಜಾಸ್ತಿ ಆಗಿದೆ. ಹಾಲು, ಮೊಸರಿನವಳಿಗೆ ಸಾವಿರ ರೂಪಾಯಿ ಕೊಡಬೇಕು' ಎಂದಳು.

'ಇದೆಲ್ಲ ಇದ್ದದ್ದೇ. ನಮ್ಮ ನವಭಾರತವೂ ಇನ್ಮೇಲೆ ಹಾಗೇ ಗರ್ಜಿಸಬಹುದು. ಸಂಭ್ರಮಿಸು...'

'ನಿಮ್ ಸಂಭ್ರಮಕ್ಕಿಷ್ಟು... ಊರಲ್ಲಿ ಜೋರು ಮಳೆ ಬಂದು ಬೆಳೆ ಕೊಚ್ಕೊಂಡು ಹೋಗಿದೆಯಂತೆ, ಸರ್ಕಾರದವರು ನೋಡಿದ್ರೆ ಯಾರೂ ಕೇರ್ ಮಾಡ್ತಿಲ್ಲ, ವಿರೋಧ ಪಕ್ಷದವ್ರು ನೋಡಿದ್ರೆ ಯಾವುದೋ ಉತ್ಸವ ಅಂತ ಓಡಾಡ್ತಾವ್ರಂತೆ, ನಿಮ್ಮಣ್ಣ ಫೋನ್ ಮಾಡಿದ್ದ'.

ಸಿಂಹ ಗರ್ಜನೆಯ ಫೀಲಿಂಗ್ ಕುಗ್ಗತೊಡಗಿತು. 'ಬೆಳೆ ಹಾಳಾಗೋದೆಲ್ಲ ಮಾಮೂಲಿ... ದೇಶದ ಬಗ್ಗೆ ಮಾತಾಡು...' ಅಳುಕುತ್ತಲೇ ಹೇಳಿದೆ.

'ಅಪ್ಪ ಪುಣ್ಯಾತ್ಮ, ರಾಷ್ಟ್ರಲಾಂಛನದ ಬಗ್ಗೆ ನನಗೂ ಗೌರವ ಇದೆ. ದೇಶಭಕ್ತಿ ಪ್ರದರ್ಶನದ ವಸ್ತುವಲ್ಲ. ರಾಷ್ಟ್ರಗೀತೆಯನ್ನ ಜೋರಾಗಿ ಹಾಡೋಕಾದ್ರೂ ಹೊಟ್ಟೇಲಿ ಕೂಳಿರಬೇಕಲ್ಲ. ಸಿಲಿಂಡರ್ ತಂದವನಿಗೆ 30 ರೂಪಾಯಿ ಸೇರಿ, 1,090 ರೂಪಾಯಿ ಕೊಟ್ಟು, ಯಾರ್ಯಾರಿಗೆ ಜೈ ಅಂತಿಯೋ ಅನ್ಕೊಂಡು ಕೂತ್ಕೊ...' ಸಿಲಿಂಡರ್ ಬಿಲ್ಲು ಮುಂದಿಟ್ಟಳು ಪತ್ನಿ. ಸಿಂಹದಂತೆ ಗರ್ಜಿಸ್ತಿದ್ದವನು, ಕುನ್ನಿಯಂತಾಗಿಬಿಟ್ಟೆ!

ಸಂಗತ

ಪ್ರಶ್ನೆಗಳು ಬೇಡವಾದ ಹೊತ್ತಿನಲ್ಲಿ...

ಧರ್ಮ ಮತ್ತು ದೇವರ ಹೆಸರಿನಲ್ಲಿ ನಡೆಯುತ್ತಿರುವ ರಾಜಕೀಯವು ಹಲವು ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳಲಾಗದ ಸಂದರ್ಭ ಸೃಷ್ಟಿಸುವಲ್ಲಿ ಸಫಲವಾಗುತ್ತಿದೆ

• ಎಚ್.ಕೆ.ಶರತ್

'ವಿಜ್ಞಾನದಿಂದ ನೀವು ಇದುವರೆಗೂ ಕಲಿತಿರುವುದೇನು' ಎಂಜಿನಿಯರಿಂಗ್ ಓದಿನ ವೇಳೆ ಈ ಪ್ರಶ್ನೆಯನ್ನು ಅಧ್ಯಾಪಕರೊಬ್ಬರು ವಿದ್ಯಾರ್ಥಿಗಳತ್ತ ತೂರಿದ್ದರು. ಈ ಅನಿರೀಕ್ಷಿತ ಪ್ರಶ್ನೆಗೆ ನಮ್ಮ ಕಡೆಯಿಂದ ಸೂಕ್ತ ಉತ್ತರ ದೊರಕದೇ ಹೋದಾಗ, ಕೊನೆಗೆ ಅವರೇ 'ವಿಜ್ಞಾನ ನಮಗೆ ಪ್ರಶ್ನಿಸುವುದನ್ನು ಕಲಿಸುತ್ತದೆ. ಪ್ರಶ್ನಿಸದೆ ಯಾವುದನ್ನೂ ಒಪ್ಪಿಕೊಳ್ಳಬೇಡ ಎಂಬ ಸಲಹೆ ನೀಡುತ್ತದೆ. ವಿಜ್ಞಾನ ಮತ್ತು ತಂತ್ರಜ್ಞಾನದ ವಿದ್ಯಾರ್ಥಿಗಳಾದ ನೀವು ಪ್ರಶ್ನಿಸುವ ಮನೋಭಾವ ಬೆಳೆಸಿಕೊಳ್ಳುವ ಮೂಲಕ ವಿಜ್ಞಾನಕ್ಕೆ ಗೌರವ ಸಲ್ಲಿಸಬೇಕು' ಎಂದು ನಮಗೆಲ್ಲರಿಗೂ ತಿಳಿಸಿದ್ದರು.

ಅದರ ಜೊತೆಗೆ 'ಧಾರ್ಮಿಕ ಪಠ್ಯಗಳಿಗೂ ವಿಜ್ಞಾನದ ಪಠ್ಯಗಳಿಗೂ ಇರುವ ವ್ಯತ್ಯಾಸವೇನು ಹೇಳಿ' ಎಂದು ಮತ್ತೊಂದು ಪ್ರಶ್ನೆ ಹರಿಯಬಿಟ್ಟಿದ್ದರು. ಅದಕ್ಕೂ ನಮ್ಮಿಂದ ಉತ್ತರ ಬಾರದೇ ಹೋದಾಗ, ಅವರೇ 'ಧಾರ್ಮಿಕ ಪಠ್ಯದಲ್ಲಿರುವುದೆಲ್ಲ ಅಂತಿಮ ಸತ್ಯವೆಂದು ಜನ ನಂಬುತ್ತಾರೆ ಅಥವಾ ಹಾಗೆಂದು ನಂಬಿಸಲಾಗುತ್ತದೆ. ಆದರೆ ವಿಜ್ಞಾನದಲ್ಲಿ ಅಂತಿಮ ಸತ್ಯವೆಂಬುದೇ ಇಲ್ಲ. ಅದುವರೆಗೂ ನಿರೂಪಿತವಾಗಿರುವ ವೈಜ್ಞಾನಿಕ ವಿವರಣೆಯನ್ನು ಅದು ಹಾಗಲ್ಲ ಹೀಗೆ ಎಂದು ಯಾರಾದರೂ ಪ್ರಯೋಗಗಳ ಮೂಲಕ ಸಾಬೀತುಪಡಿಸಿದರೆ, ವೈಜ್ಞಾನಿಕ ಸತ್ಯವೆಂಬುದು ಕೂಡ ಬದಲಾವಣೆಗೆ ಒಳಪಡುತ್ತದೆ. ಅದೇ ಧಾರ್ಮಿಕ ಪಠ್ಯವು ಎಂದೋ ಯಾರೋ ಹೇಳಿರುವುದನ್ನೇ ಅಂತಿಮ ಸತ್ಯವೆಂದು ನಂಬಿಕೊಳ್ಳುವ ಅನಿವಾರ್ಯ ಸೃಷ್ಟಿಸುತ್ತದೆ' ಎಂದು ವಿವರಿಸಿದ್ದರು.

ಕೊನೆಗೆ 'ಪ್ರಶ್ನೆಗಳು ಮತ್ತು ಬದಲಾವಣೆಗೆ ತನ್ನನ್ನು ತೆರೆದುಕೊಂಡಿರುವ ವಿಜ್ಞಾನ ಮತ್ತು ಪ್ರಶ್ನೆಗಳನ್ನು ಸಹಿಸದ ಹಾಗೂ ಬದಲಾವಣೆಗೆ ತೆರೆದುಕೊಳ್ಳದ ಧರ್ಮ ಇವೆರಡರಲ್ಲಿ ಯಾವುದು ಮನುಕುಲಕ್ಕೆ ಸೂಕ್ತವೆಂದು ನೀವೇ ನಿರ್ಧರಿಸಿ' ಎಂದಿದ್ದರು.

ಧಾರ್ಮಿಕ ಭಾವನೆಗಳ ನೆಪ ಮುಂದಿಟ್ಟುಕೊಂಡು ಜನ ಬಡಿದಾಡುತ್ತಿರುವ ವರ್ತಮಾನವನ್ನು ಗಮನಿಸಿದರೆ, ಅಂದು ಅಧ್ಯಾಪಕರು ನಮ್ಮೆದುರು ಮಂಡಿಸಿದ್ದ ಆಯ್ಕೆಗಳಲ್ಲಿ ಧರ್ಮವೇ ಸೂಕ್ತವೆಂದು ಬಹುತೇಕರು ನಿರ್ಧರಿಸಿಬಿಟ್ಟರೇನೊ ಎನ್ನುವ ಅನುಮಾನ ಕಾಡದಿರದು. ಶೈಕ್ಷಣಿಕ ಪಠ್ಯದ ಭಾಗವಾಗಿ ವಿಜ್ಞಾನವನ್ನು ಓದುವ ಮತ್ತು ಬೋಧಿಸುವ ಅದೆಷ್ಟು ವಿದ್ಯಾರ್ಥಿಗಳು ಹಾಗೂ ಶಿಕ್ಷಕರು ಪ್ರಶ್ನಿಸುವ, ಪ್ರಶ್ನಿಸುವವರನ್ನು ಗೌರವಿಸುವ ಮನೋಭಾವ ಹೊಂದಿದ್ದಾರೆ? ಸಾಮಾಜಿಕ ಜಾಲತಾಣಗಳು ಮತ್ತು ವೈಯಕ್ತಿಕ ಮಾತುಕತೆಗಳಲ್ಲಿ ಹೊರಹೊಮ್ಮತೊಡಗಿರುವ ಧಾರ್ಮಿಕ ದ್ವೇಷದ ನಂಜಿನ ತೀವ್ರತೆಯನ್ನು ಗಮನಿಸಿದರೆ, ವಿಜ್ಞಾನದ ಓದು ಇವರ ಮೇಲೆ ಯಾವುದೇ ಪರಿಣಾಮ ಬೀರಿರುವ ಸೂಚನೆ ಸಿಗಲಾರದು.

ಧರ್ಮ ಮತ್ತು ದೇವರ ಹೆಸರಿನಲ್ಲಿ ನಡೆಯುತ್ತಿರುವ ರಾಜಕೀಯವು ಧರ್ಮ ಮತ್ತು ದೇವರು ಪ್ರಭಾವಶಾಲಿಯೋ ಅವುಗಳ ಅನುಯಾಯಿಗಳು ಪ್ರಭಾವಶಾಲಿಗಳೋ ಎನ್ನುವ ಪ್ರಶ್ನೆಗೆ ಸೂಕ್ತ ಉತ್ತರ ಕಂಡುಕೊಳ್ಳಲಾಗದ ಸಂದರ್ಭ ಸೃಷ್ಟಿಸುವಲ್ಲಿ ಸಫಲವಾಗುತ್ತಿದೆ. ದೇವರು ಭಕ್ತರನ್ನು ಕಾಪಾಡಬೇಕೋ ಭಕ್ತರೇ ದೇವರನ್ನು ಕಾಪಾಡಬೇಕೋ? ಧರ್ಮವು ಅನುಯಾಯಿಗಳನ್ನು ರಕ್ಷಿಸುವುದೋ ಅನುಯಾಯಿಗಳೇ ಧರ್ಮವನ್ನು ರಕ್ಷಿಸಬೇಕೋ ತಿಳಿಯದಾಗಿದೆ.

ನಮ್ಮನ್ನು ಬಾಧಿಸುತ್ತಿರುವ ಆರ್ಥಿಕ ಮತ್ತು ಸಾಮಾಜಿಕ ಸಮಸ್ಯೆಗಳೆಲ್ಲವನ್ನೂ ಬದಿಗಿರಿಸಿ ನಾವಿಂದು ಹೆಚ್ಚೆಚ್ಚು ಚರ್ಚಿಸತೊಡಗಿರುವ ದೇವರು ಮತ್ತು ಧರ್ಮದ ಕುರಿತಾದ ವಿಚಾರಗಳನ್ನು ಒಂದಿಷ್ಟು ಸಂಯಮದಿಂದ ಅವಲೋಕಿಸತೊಡಗಿದರೆ, ದೇವರು ಮತ್ತು ಧರ್ಮವನ್ನು ಮನುಷ್ಯರೇ ರಕ್ಷಿಸಬೇಕೆಂಬ ನಿಲುವಿಗೆ ನಮ್ಮನ್ನು ಜೋತು ಬೀಳಿಸುವ ರಾಜಕೀಯದ ದರ್ಶನವಾಗಲಿದೆ. ಯಾರೋ ಏನೋ ಹೇಳಿದ ಮಾತ್ರಕ್ಕೆ ಧಕ್ಕೆಯಾಗುವಷ್ಟು ದೇವರು-ಧರ್ಮ ದುರ್ಬಲವೇ? ಟೀಕೆಗಳನ್ನು ಜೀರ್ಣಿಸಿಕೊಳ್ಳುವ ವ್ಯವಧಾನವು ಧರ್ಮ ಮತ್ತು ದೇವರಿಗೆ ಇಲ್ಲವೋ ಅಥವಾ ಇದು ಅನುಯಾಯಿಗಳು ಸೃಷ್ಟಿಸುತ್ತಿರುವ ಬಿಕ್ಕಟ್ಟೋ? ಧಾರ್ಮಿಕ ವಿಷಯಗಳು ಇಂದು ನಮಗೆ ನೆಮ್ಮದಿ ಕರುಣಿಸುತ್ತಿವೆಯೇ ಅಥವಾ ಕೆಡಿಸುತ್ತಿವೆಯೇ ಎಂಬುದನ್ನು ಅವಲೋಕಿಸಬೇಕಿದೆ.



ಪ್ರಶ್ನೆಗಳನ್ನು ಎದುರಿಸಲು ಸಿದ್ಧರಿಲ್ಲದ ಜನನಾಯಕರೇ ಧಾರ್ಮಿಕ ವಿಚಾರಗಳನ್ನು ಮುಂದು ಮಾಡಿ ಜನಬೆಂಬಲ ದಕ್ಕಿಸಿಕೊಳ್ಳುತ್ತಿರುವುದು ಏನನ್ನು ಸೂಚಿಸುತ್ತದೆ? ಪರೋಕ್ಷವಾಗಿ ಇವರೂ ದೇವರು ಮತ್ತು ಧರ್ಮದಂತೆ ತಾವು ಕೂಡ ಪ್ರಶ್ನಾತೀತ ಎನ್ನುವ ಸಂದೇಶ ರವಾನಿಸತೊಡಗಿದ್ದಾರೆಯೇ? ಪ್ರಶ್ನೆಗಳು ಮತ್ತು ಪ್ರಶ್ನಿಸುವವರನ್ನು ಸಹಿಸದ ಸಮಾಜದ ಚಲನೆ ಯಾವ ದಿಕ್ಕಿನತ್ತ ತಿರುಗಬಹುದು? ಅಂದು ನಮಗೆ ಅಧ್ಯಾಪಕರೊಬ್ಬರು ಕೇಳಿದ ಪ್ರಶ್ನೆಗಳನ್ನೇ ಇಂದಿನ ಅಧ್ಯಾಪಕರೂ ತಮ್ಮ ವಿದ್ಯಾರ್ಥಿಗಳಿಗೆ ಕೇಳಬಹುದೆ?

ಧಾರ್ಮಿಕ ಶಿಕ್ಷಣದ ಮೂಲಕ ಮಕ್ಕಳಲ್ಲಿ ಮೌಲ್ಯಗಳನ್ನು ಅಳವಡಿಸಲು ಹೊರಟಿರುವುದಾಗಿ ಬಿಂಬಿಸಿಕೊಳ್ಳುವವರು, ಅಸಲಿಗೆ ಬಿತ್ತುತ್ತಿರುವುದು ಪ್ರಶ್ನಿಸದೇ ಒಪ್ಪಿಕೊಳ್ಳುವ ಮನಃಸ್ಥಿತಿಯ ಬೀಜಗಳನ್ನಲ್ಲವೇ? ಪ್ರಶ್ನೆಗಳನ್ನು ಎತ್ತುವ ಮೂಲಕ ನೀವು ಕಲಿಯುತ್ತಿರುವ ವಿಜ್ಞಾನಕ್ಕೆ ಗೌರವ ಸಲ್ಲಿಸಿ ಎಂದು ಆತ್ಮವಂಚನೆ ಇಲ್ಲದೆ ಹೇಳಬಹುದಾದ ಶಿಕ್ಷಕರು ನಮ್ಮಲ್ಲಿ ಎಷ್ಟಿದ್ದಾರೆ?

ಪ್ರಶ್ನೆಗಳು ಬೇಡವಾದ ಹೊತ್ತಿನಲ್ಲಿ, ಆಡುವ ಮಾತಿನಲ್ಲೆಲ್ಲ ಧಾರ್ಮಿಕ ಭಾವನೆಗಳು ಇಣುಕುವುದು, ಮನಸ್ಸುಗಳು ಕೆರಳುವುದು, ಕೊಲೆಗಳಾಗುವುದು ಎಲ್ಲವೂ ಸಹಜವಲ್ಲವೇ? ಮನುಷ್ಯರನ್ನು ಕೊಲ್ಲುವುದೂ ಸಹಜವೇ ಆದ ಸಮಾಜದ ನಿರ್ಮಾಣ ಶಿಕ್ಷಣದ ಆದ್ಯತೆಯೇ? ಹಾಗಲ್ಲದಿದ್ದರೆ ಪ್ರಶ್ನೆಗಳು ಮತ್ತು ಪ್ರಶ್ನಿಸುವವರ ಪರವಾಗಿ ನಿಲ್ಲುವ ಸ್ಥೈರ್ಯ ಶಿಕ್ಷಿತರಲ್ಲಿ ಮೈಗೂಡಬೇಕಿತ್ತಲ್ಲವೇ?

ವಾಚಕರ ವಾಣಿ

ಸರ್ಕಾರಕ್ಕೆ ಸಕಾಲಿಕ ನಿರ್ದೇಶನ

ಭ್ರಷ್ಟಾಚಾರ ನಿಗ್ರಹ ದಳದಂತಹ ಸಂಸ್ಥೆಗಳಿಗೆ ಕಳಂಕಿತ ಅಧಿಕಾರಿಗಳನ್ನು ನೇಮಿಸಬಾರದು ಎಂದು ರಾಜ್ಯ ಸರ್ಕಾರಕ್ಕೆ ಹೈಕೋರ್ಟ್ ನೀಡಿರುವ ನಿರ್ದೇಶನ ಸಕಾಲಿಕವಾಗಿದೆ. ಪಿಎಸ್‌ಐ ನೇಮಕಾತಿ ಹಗರಣವು ಪೊಲೀಸ್ ಇಲಾಖೆಯಲ್ಲಿ ನಡೆದಿರುವ ಭ್ರಷ್ಟಾಚಾರದ ಆಳ ಮತ್ತು ಅಗಲದ ಬಗ್ಗೆ ಕ್ಷಕಿರಣ ಬೀರುತ್ತದೆ. ಮುಖ್ಯಮಂತ್ರಿಯಾಗಿದ್ದ ರಾಮಕೃಷ್ಣ ಹೆಗಡೆ ಅವರ ದೂರದೃಷ್ಟಿಯಿಂದಾಗಿ 80ರ ದಶಕದಲ್ಲಿ, ಆಡಳಿತದಲ್ಲಿ ಭ್ರಷ್ಟಾಚಾರವನ್ನು ನಿಗ್ರಹಿಸಲು ಲೋಕಾಯುಕ್ತ ಸಂಸ್ಥೆಯನ್ನು ಸ್ಥಾಪಿಸಲಾಯಿತು. ನ್ಯಾಯಮೂರ್ತಿಗಳಾದ ಎನ್. ವೆಂಕಟಾಚಲ ಮತ್ತು ಸಂತೋಷ ಹೆಗ್ಡೆ ಅವರ ನೇತೃತ್ವದಲ್ಲಿ ಲೋಕಾಯುಕ್ತ ಅಚ್ಚರಿಪಡುವಷ್ಟು ಕೆಲಸ ಮಾಡಿತು. ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರವು ಲೋಕಾಯುಕ್ತಕ್ಕೆ ಬಲ ತುಂಬುವ ಬದಲು ಅದಕ್ಕೆ ಪರ್ಯಾಯವಾಗಿ ಭ್ರಷ್ಟಾಚಾರ ನಿಗ್ರಹ ದಳವನ್ನು ಸ್ಥಾಪಿಸಿತು. ಈ ದಳವೇ ಈಗ ಭ್ರಷ್ಟಾಚಾರದ ಕೂಪವಾಗಿದೆ ಎಂದು ಹೈಕೋರ್ಟ್ ನ್ಯಾಯಮೂರ್ತಿ ಸಂದೇಶ್ ಅವರು ಇತ್ತೀಚೆಗೆ ನೇರವಾಗಿ ಹೇಳಿದ್ದಾರೆ. ತನಿಖಾ ಸಂಸ್ಥೆಗಳೇ ಭ್ರಷ್ಟಾಚಾರದ ಕೂಪಗಳಾದರೆ ಅವುಗಳಿಂದ ಏನನ್ನು ತಾನೇ ನಿರೀಕ್ಷಿಸಲು ಸಾಧ್ಯ?

ಕೆ.ವಿ.ವಾಸು, ಮೈಸೂರು

ಕುವೆಂಪು ಬರಹ: ಹಕ್ಕುಸ್ವಾಮ್ಯ ಮುಕ್ತವಾಗಲಿ

ಕುವೆಂಪು ಅವರ ಪುಸ್ತಕಗಳು ಎಲ್ಲರಿಗೂ ಸುಲಭವಾಗಿ ದೊರಕುವಂತೆ ಮಾಡುವುದು ತೀರಾ ಅಗತ್ಯವಾಗಿ ಮಾಡಬೇಕಾದ ಕೆಲಸ ಎಂದು ಕೆಲ ಲೇಖಕರು ಪತ್ರ ಬರೆದಿರುವುದಕ್ಕೆ (ವಾ.ವಾ., ಜುಲೈ 11) ಕುವೆಂಪು ಪ್ರತಿಷ್ಠಾನದ ಸಮಕಾರ್ಯದರ್ಶಿ ಕಡಿದಾಳ್ ಪ್ರಕಾಶ್ ಅವರು ಕುವೆಂಪು ಅವರ ಸಾಹಿತ್ಯದ ಹಕ್ಕುಸ್ವಾಮ್ಯ ಪ್ರತಿಷ್ಠಾನಕ್ಕಿಲ್ಲ ಎಂದು ಪ್ರತಿಕ್ರಿಯಿಸಿದ್ದಾರೆ (ವಾ.ವಾ., ಜುಲೈ 14). ಕುವೆಂಪು ಅವರ ಸಾಹಿತ್ಯ ಎಲ್ಲರಿಗೂ ಸುಲಭವಾಗಿ ದೊರೆಯುವಂತೆ ಮಾಡುವ ದಾರಿ, ಅವರ ಬರಹಗಳನ್ನು ಹಕ್ಕುಸ್ವಾಮ್ಯದಿಂದ ಮುಕ್ತಗೊಳಿಸುವುದು.

ಸರ್ಕಾರ ಮನಸ್ಸು ಮಾಡಿದರೆ ಕುವೆಂಪು ಅವರ ಸಮಗ್ರ ಬರಹಗಳ ಹಕ್ಕುಸ್ವಾಮ್ಯವನ್ನು ಪಡೆದುಕೊಂಡು ಅವರ ಬರಹಗಳು ಎಲ್ಲರಿಗೂ ದೊರೆಯುವಂತೆ ಮಾಡಬಹುದು. ತಮಿಳುನಾಡಿನಲ್ಲಿ ಸುಬ್ರಮಣ್ಯ ಭಾರತಿ ಅವರ ಸಾಹಿತ್ಯ ಕೃತಿಗಳ ಹಕ್ಕುಸ್ವಾಮ್ಯವನ್ನು ಅಲ್ಲಿನ ಸರ್ಕಾರ ಪಡೆದು ಅವರ ಎಲ್ಲಾ ಬರಹಗಳನ್ನು 1950ರಲ್ಲಿಯೇ ಜನಸಾಮಾನ್ಯರಿಗೆ ಸುಲಭವಾಗಿ ದೊರೆಯುವಂತೆ ಮಾಡಿದೆ. ಈ ಬಗ್ಗೆ ಎ.ಆರ್.ವೆಂಕಟಾಚಲಪತಿ ಅವರು 'Who Owns that Song? The Battle for Subramania Bharati's Copyright' ಎನ್ನುವ ಸ್ವಾರಸ್ಯಕರ ಮಾಹಿತಿಯುಳ್ಳ ಪುಸ್ತಕ ಬರೆದಿದ್ದಾರೆ. ಸುಬ್ರಮಣ್ಯ ಅವರ ಕವನ ಮತ್ತು ಇತರ ಬರಹಗಳನ್ನು ನಾಟಕ, ಸಿನಿಮಾ ಹಾಗೂ ಇತರ ಕ್ಷೇತ್ರಗಳಲ್ಲಿ ಬಳಸಲು ಮತ್ತು ಸುಲಭವಾಗಿ ಓದುಗರಿಗೆ ತಲುಪಿಸಲು ಕಾಪಿರೈಟ್ ಸಮಸ್ಯೆಯಿಂದಾಗಿ ಸಾಧ್ಯವಾಗದಿದ್ದಾಗ, ಅಲ್ಲಿನ ಲೇಖಕರು 1944ರಲ್ಲಿ ಈ ಸಂಬಂಧ ನಿರ್ಣಯವೊಂದನ್ನು ಅಂಗೀಕರಿಸಿದರು. ನಂತರ ಸರ್ಕಾರದ ಮೇಲೆ ನಿರಂತರ ಒತ್ತಡ ತಂದು ಅವರ ಎಲ್ಲಾ ಕೃತಿಗಳು 1950ರಲ್ಲಿ ಸಾರ್ವಜನಿಕರಿಗೆ ಮುಕ್ತವಾಗಿ ಸಿಗುವಂತೆ ಮಾಡುವಲ್ಲಿ ಯಶಸ್ವಿಯಾದರು. ನಮ್ಮ ಸರ್ಕಾರ ಕೂಡ ಹೀಗೇ ಮಾಡಬಹುದು.

ವಸಂತರಾಜು ಎನ್., ತಲಕಾಡು

ವ್ಯಕ್ತಿ ಸ್ವಾತಂತ್ರ್ಯಕ್ಕೆ ಧಕ್ಕೆ ತರುವ ಆದೇಶ

ಸರ್ಕಾರಿ ನೌಕರರು ಕಚೇರಿಯಲ್ಲಿ ಜೀನ್ಸ್ ಮತ್ತು ಟೀ ಶರ್ಟ್ ಧರಿಸುವಂತಿಲ್ಲ ಎಂದು ಉತ್ತರಪ್ರದೇಶದ ಭದೋಹಿ ಜಿಲ್ಲೆಯ ಜಿಲ್ಲಾಧಿಕಾರಿ ಆದೇಶ ಹೊರಡಿಸಿರುವುದನ್ನು (ಪ್ರ.ವಾ., ಜುಲೈ 13) ತಿಳಿದು ಆಶ್ಚರ್ಯದ ಜೊತೆಗೆ ಬೇಸರವಾಯಿತು. ಆಹಾರ, ಉಡುಗೆ ತೊಡುಗೆ ಹಾಗೂ ಸಂಸ್ಕೃತಿಯು ಎಲ್ಲರ ಆಯ್ಕೆಯ ಹಕ್ಕು ಮತ್ತು ಸ್ವಾತಂತ್ರ್ಯ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ವ್ಯಕ್ತಿಸ್ವಾತಂತ್ರ್ಯವನ್ನು ಎತ್ತಿ ಹಿಡಿಯಬೇಕೇ ವಿನಾ ಅದಕ್ಕೆ ಧಕ್ಕೆ ತರುವಂತೆ ನಡೆದುಕೊಳ್ಳಬಾರದು.

ರಿಯಾಝ್ ಅಹ್ಮದ್, ರೋಣ

ನಮ್ಮ ಭಾಷೆ ಉಳಿಯದಿದ್ದರೆ...

ಶಿಕ್ಷಣವು ಕನ್ನಡ ಮಾಧ್ಯಮದಲ್ಲಿ ನಡೆಯಬೇಕೋ ಇಂಗ್ಲಿಷ್ ಮಾಧ್ಯಮದಲ್ಲೋ ಎನ್ನುವ ಗೊಂದಲ ಮತ್ತೆ ಮುನ್ನೆಲೆಗೆ ಬಂದಿದೆ. ಕಲಿಕೆಯ ಹಿಂದೆ ಇರಬೇಕಾದ ವೈಜ್ಞಾನಿಕತೆಯ ಬಗ್ಗೆ ಇರುವ ಕಳವಳಕಾರಿ ಕೊರತೆ ಮತ್ತು ಇಂಗ್ಲಿಷ್ ಬಗ್ಗೆ ಇರುವ ಆಕರ್ಷಣೆ, ಭ್ರಮೆಗಳ ನಡುವಿನ ತಿಕ್ಕಾಟವಿದು. ಬ್ರಿಟಿಷರು ತಮ್ಮ ಕುಟಿಲೋಪಾಯದ ಮೂಲಕ ದೇಶದಲ್ಲಿ ಇಂಗ್ಲಿಷ್ ಮಾಧ್ಯಮವನ್ನು ಹೇರುವುದಕ್ಕೂ ಮೊದಲು ನಮ್ಮಲ್ಲಿದ್ದ ಶಿಕ್ಷಣ ವ್ಯವಸ್ಥೆಯನ್ನು ಮಹಾತ್ಮ ಗಾಂಧಿ 'ಬ್ಯೂಟಿಫುಲ್ ಟ್ರೀ' ಎಂದು ಕರೆದಿದ್ದರು. ಆ ಕಾಲದ ಶಿಕ್ಷಣ ವ್ಯವಸ್ಥೆಯನ್ನು ಆಳವಾಗಿ ಅಧ್ಯಯನ ಮಾಡಿರುವ ಗಾಂಧಿವಾದಿ ಚಿಂತಕ ಧರ್ಮಪಾಲ್ ಕೂಡ ತಮ್ಮ ಕೃತಿಗೆ ಇದೇ ಹೆಸರನ್ನಿಟ್ಟಿದ್ದಾರೆ.

ವಿದೇಶಿ ಕಂಪನಿಗಳಲ್ಲಿ ಚಾಕರಿ ಮಾಡುವಂಥ ಒಂದು ವರ್ಗವನ್ನು ಸೃಷ್ಟಿಸಿರುವುದನ್ನೇ ದೊಡ್ಡ ಸಾಧನೆ ಎಂದು ಹೇಳಿಕೊಂಡು ನಾವು ಬೀಗುತ್ತಿದ್ದೇವೆ. ಇಂಗ್ಲಿಷ್ ಮಾಧ್ಯಮ ಶಿಕ್ಷಣದಿಂದ ಆಗುತ್ತಿರುವ ಈ ನೆಲದ ಪ್ರತಿಭೆಯ ಪೋಲು ಮತ್ತು ಅಪವ್ಯಯಗಳನ್ನು ಯಾರೂ ಲೆಕ್ಕಕ್ಕೆ ತೆಗೆದುಕೊಳ್ಳದೇ ಇರುವುದು ದಿಗ್ಭ್ರಮೆ ಹುಟ್ಟಿಸುವಂಥ ಸಂಗತಿ. ನಮ್ಮ ಶಿಕ್ಷಣ ನಮ್ಮ ಭಾಷೆಯಾದ ಕನ್ನಡದಲ್ಲೇ ನಡೆಯಬೇಕು. ಇದರ ಜತೆಗೆ ಇಂಗ್ಲಿಷ್ ಸೇರಿದಂತೆ ಹತ್ತಾರು ಭಾಷೆಗಳನ್ನು 'ಕಮ್ಯುನಿಕೇಟಿವ್' ಆಗಿ ಚೆನ್ನಾಗಿ ಕಲಿಸಬೇಕು. 'ವಸಾಹತುಶಾಹಿ ಆಡಳಿತದ ವಿಷವರ್ತುಲದಲ್ಲಿದ್ದ ದೇಶಗಳಲ್ಲಿ ತಾಂಡವವಾಡುತ್ತಿರುವ ಇಂಗ್ಲಿಷ್ ಭಾಷೆಯು ಒಂದು ಕಲ್ಚರ್ ಬಾಂಬ್ ಇದ್ದಂತೆ' ಎಂಬ ಲೇಖಕ ಗೂಗಿ ವಾ ಥಿಯೋಂಗ್‌ನ ಮಾತು ನಮಗೆ ಎಚ್ಚರಿಕೆಯ ಗಂಟೆಯಾಗಬೇಕು. ನಮ್ಮ ಭಾಷೆ ಉಳಿಯದಿದ್ದರೆ ನಮ್ಮ ಸಾಹಿತ್ಯ, ಸಂಸ್ಕೃತಿ, ಮೌಲ್ಯಪ್ರಜ್ಞೆ ಯಾವುದಕ್ಕೂ ಉಳಿಗಾಲವಿಲ್ಲ.

ಬಿ.ಎಸ್.ಜಯಪ್ರಕಾಶ ನಾರಾಯಣ, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete.
© All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ವಿಶ್ವ ಆರ್ಥಿಕ ವೇದಿಕೆ ವರದಿ

ಲಿಂಗ ಸಮಾನತೆ
ದಾರಿ ಇನ್ನೂ ಬಹಳ ದೂರ

ಜಾಗತಿಕ ಲಿಂಗ ಸಮಾನತೆಯ ಅಂತರದ ರ‍್ಯಾಂಕಿಂಗ್‌ನಲ್ಲಿ ಭಾರತವು 135ನೇ ಸ್ಥಾನದಲ್ಲಿದೆ. ಉದ್ಯೋಗ, ಶಿಕ್ಷಣ, ರಾಜಕೀಯದಲ್ಲಿ ಮಹಿಳೆಯರಿಗೆ ಇರುವ ಅವಕಾಶಗಳು, ಪುರುಷರಿಗೆ ಇರುವ ಅವಕಾಶಗಳಿಗಿಂತ ತೀರಾ ಕಡಿಮೆ ಇದೆ. ಈ ಕ್ಷೇತ್ರಗಳಲ್ಲಿ ಪುರುಷರಿಗೆ ದೊರೆಯುತ್ತಿರುವ ಅವಕಾಶಗಳು ಮತ್ತು ಮಹಿಳೆಯರಿಗೆ ಲಭ್ಯವಿರುವ ಅವಕಾಶಗಳ ನಡುವಣ ವ್ಯತ್ಯಾಸವನ್ನೇ 'ಲಿಂಗ ಸಮಾನತೆಯ ಅಂತರ' ಎನ್ನಲಾಗುತ್ತದೆ. ವಿಶ್ವದ 146 ದೇಶಗಳನ್ನು ಅಧ್ಯಯನಕ್ಕೆ ಒಳಪಡಿಸಿ ಈ ರ‍್ಯಾಂಕಿಂಗ್ ಅನ್ನು ಸಿದ್ಧಪಡಿಸಲಾಗಿದೆ. ಈ ಪಟ್ಟಿಯಲ್ಲಿ ಭಾರತವು ಕೊನೆಯಿಂದ 12ನೇ ಸ್ಥಾನದಲ್ಲಿದೆ. ಮಹಿಳೆಯರಿಗೆ ಹೆಚ್ಚು ಅವಕಾಶಗಳು ಇಲ್ಲದೇ ಇರುವ ಕಾರಣ ಭಾರತವು, ಈ ರ‍್ಯಾಂಕಿಂಗ್ ಪಟ್ಟಿಯಲ್ಲಿ ಪಾತಾಳದಲ್ಲಿದೆ

ರ‍್ಯಾಂಕ್	ಮೊದಲ ಹನ್ನೆರಡು ರ‍್ಯಾಂಕ್ ಪಡೆದ ದೇಶಗಳು
1	ಐಸ್‌ಲ್ಯಾಂಡ್
2	ಫಿನ್ಲೆಂಡ್
3	ನಾರ್ವೆ
4	ನ್ಯೂಜಿಲೆಂಡ್
5	ಸ್ವೀಡನ್
6	ರುವಾಂಡ
7	ನಿಕರಾಗುವ
8	ನಮೀಬಿಯಾ
9	ಐರ್ಲೆಂಡ್
10	ಜರ್ಮನಿ
11.	ಲಿಥುವೇನಿಯಾ
12.	ಕೋಸ್ಟರಿಕಾ

ರ‍್ಯಾಂಕ್	ಕೊನೆಯ ಹನ್ನೆರಡು ರ‍್ಯಾಂಕ್ ಪಡೆದ ದೇಶಗಳು
146	ಅಫ್ಗಾನಿಸ್ತಾನ
145	ಪಾಕಿಸ್ತಾನ
144	ಕಾಂಗೊ
143	ಇರಾನ್
142	ಛಾಡ್
141	ಮಾಲಿ
140	ಅಲ್ಜೀರಿಯಾ
139	ಒಮಾನ್
138	ಬೆನಿನ್
137	ಕತಾರ್
136	ಮೊರಾಕ್ಕೊ
135	ಭಾರತ

143
ಆರ್ಥಿಕ ಚಟುವಟಿಕೆಯಲ್ಲಿ ಮಹಿಳೆ ಮತ್ತು ಪುರುಷರಿಗೆ ಇರುವ ಅವಕಾಶಗಳ ಅಂತರದಲ್ಲಿ ಭಾರತದ ರ‍್ಯಾಂಕ್

48
ರಾಜಕೀಯ ಕ್ಷೇತ್ರದಲ್ಲಿ ಮಹಿಳೆ ಮತ್ತು ಪುರುಷರಿಗೆ ಇರುವ ಅವಕಾಶಗಳ ಅಂತರದಲ್ಲಿ ಭಾರತದ ರ‍್ಯಾಂಕ್

107
ಶಿಕ್ಷಣದಲ್ಲಿ ಮಹಿಳೆ ಮತ್ತು ಪುರುಷರಿಗೆ ಇರುವ ಅವಕಾಶಗಳ ಅಂತರದಲ್ಲಿ ಭಾರತದ ರ‍್ಯಾಂಕ್

ಕಡೆಯ ಸ್ಥಾನದಲ್ಲಿ ದಕ್ಷಿಣ ಏಷ್ಯಾ

ಜಾಗತಿಕವಾಗಿ ಎಂಟು ಪ್ರಾದೇಶಿಕ ವಲಯಗಳ ಪೈಕಿ ದಕ್ಷಿಣ ಏಷ್ಯಾ ವಿಭಾಗವು ಲಿಂಗ ಸಮಾನತೆ ಸಾಧಿಸುವ ಪ್ರಯತ್ನದಲ್ಲಿ ಕೊನೆಯ ಸ್ಥಾನದಲ್ಲಿದೆ. ಮೊದಲ ಸ್ಥಾನದಲ್ಲಿರುವ ಉತ್ತರ ಅಮೆರಿಕ ವಿಭಾಗ ಶೇ 76.9ರಷ್ಟು ಪ್ರಗತಿ ದಾಖಲಿಸಿದ್ದರೆ, ದಕ್ಷಿಣ ಏಷ್ಯಾದ ಪ್ರಗತಿ ಶೇ 62.4ರಷ್ಟು ಮಾತ್ರ. ಶಿಕ್ಷಣ, ಆರೋಗ್ಯ, ರಾಜಕೀಯ ಸಬಲೀಕರಣ ಹಾಗೂ ಆರ್ಥಿಕ ಪಾಲ್ಗೊಳ್ಳುವಿಕೆ ವಿಭಾಗಗಳಲ್ಲಿ ದಕ್ಷಿಣ ಏಷ್ಯಾ ಶೇಕಡ ನೂರರಷ್ಟು ಸುಧಾರಣೆ ಕಾಣಲು ಇನ್ನೂ 197 ವರ್ಷ ಸಮಯ ಹಿಡಿಯುತ್ತದೆ ಎಂದು ವರದಿ ವಿಶ್ಲೇಷಿಸಿದೆ. ಈ ನಾಲ್ಕೂ ವಲಯಗಳ ಪ್ರಗತಿಯ ನಡುವೆ ಬಹಳ ಅಂತರವಿದೆ. ಶಿಕ್ಷಣ ಮತ್ತು ಆರೋಗ್ಯದ ಅಂಶಗಳಲ್ಲಿ ಶೇ 90ಕ್ಕಿಂತ ಹೆಚ್ಚು ಶ್ರೇಯಾಂಕ ಸಿಕ್ಕಿದೆ. ಆದರೆ, ಆರ್ಥಿಕ ಪಾಲ್ಗೊಳ್ಳುವಿಕೆಯಲ್ಲಿ (ಶೇ 35.7) ರಾಜಕೀಯ ಸಬಲೀಕರಣದಲ್ಲಿ (ಶೇ 26.2) ಕ್ರಾಂತಿಕಾರಕ ಸುಧಾರಣೆ ಆಗಬೇಕಿದೆ.

ಸುಧಾರಿಸದ ಭಾರತ ಸ್ಥಿತಿಗತಿ

ದಕ್ಷಿಣ ಏಷ್ಯಾ ವಲಯದಲ್ಲಿ ಒಂಬತ್ತು ದೇಶಗಳಿದ್ದು, ಇವುಗಳಲ್ಲಿ ಭಾರತದ ರ‍್ಯಾಂಕ್ 6ನೇಯದ್ದು. ಭಾರತದ ನಂತರದ ಸ್ಥಾನಗಳಲ್ಲಿ ಇರಾನ್, ಪಾಕಿಸ್ತಾನ ಹಾಗೂ ಅಫ್ಗಾನಿಸ್ತಾನ ದೇಶಗಳಿವೆ. ಬಾಂಗ್ಲಾದೇಶ ಹಾಗೂ ನೇಪಾಳ ಮೊದಲ ಎರಡು ಶ್ರೇಯಾಂಕ ಪಡೆದಿವೆ. ರಾಜಕೀಯ ಹಾಗೂ ಆರ್ಥಿಕ ಬಿಕ್ಕಟ್ಟು ಎದುರಿಸುತ್ತಿರುವ ಶ್ರೀಲಂಕಾವು ಲಿಂಗ ಸಮಾನತೆ ವಿಚಾರದಲ್ಲಿ ಭಾರತಕ್ಕಿಂತ ಉತ್ತಮ ಸ್ಥಿತಿಯಲ್ಲಿದ್ದು ಮೂರನೇ ರ‍್ಯಾಂಕ್ ಗಳಿಸಿದೆ. ಭೂತಾನ್ ಹಾಗೂ ಮಾಲ್ದೀವ್ಸ್ ಸಹ ಭಾರತಕ್ಕಿಂತ ಉತ್ತಮ ಸ್ಥಿತಿಯಲ್ಲಿವೆ ಎಂದು ವರದಿ ಹೇಳಿದೆ. ಬಾಂಗ್ಲಾ ಹಾಗೂ ನೇಪಾಳ ಶೇ 69ರಷ್ಟು ಲಿಂಗ ಸಮಾನತೆ ಸಾಧಿಸಿವೆ. ಪ್ರಾದೇಶಿಕವಾಗಿ ಹಾಗೂ ಜಾಗತಿಕವಾಗಿ ಕೊನೆಯ ಸ್ಥಾನದಲ್ಲಿರುವ ಅಫ್ಗಾನಿಸ್ತಾನದಲ್ಲಿ ಶೇ 43.5ರಷ್ಟು ಲಿಂಗ ಸಮಾನತೆಯಷ್ಟೇ ಸಾಧ್ಯವಾಗಿದೆ.

ದಕ್ಷಿಣ ಏಷ್ಯಾದಲ್ಲಿ ಲಿಂಗ ಸಮಾನತೆ

ದೇಶ	ಪ್ರಾದೇಶಿಕ ರ‍್ಯಾಂಕ್	ಜಾಗತಿಕ ರ‍್ಯಾಂಕ್
ಬಾಂಗ್ಲಾದೇಶ	1	71
ನೇಪಾಳ	2	96
ಶ್ರೀಲಂಕಾ	3	110
ಮಾಲ್ದೀವ್ಸ್	4	117
ಭೂತಾನ್	5	126
ಭಾರತ	6	135
ಇರಾನ್	7	143
ಪಾಕಿಸ್ತಾನ	8	145
ಅಫ್ಗಾನಿಸ್ತಾನ	9	146

ನಾಯಕತ್ವ: ತಯಾರಿಕೆ, ಮೂಲಸೌಕರ್ಯ ವಲಯದಲ್ಲಿ ಮಹಿಳೆಯರು ಹಿಂದೆ

ಜಾಗತಿಕವಾಗಿ ಪ್ರಮುಖ ಉದ್ಯಮಗಳಲ್ಲಿ ಮಹಿಳೆಯರ ಪಾಲ್ಗೊಳ್ಳುವಿಕೆ ಪ್ರಮಾಣ ಎಷ್ಟಿದೆ ಎಂಬುದನ್ನು ವರದಿ ವಿಶ್ಲೇಷಿಸಿದೆ. ಯಾವ ಕ್ಷೇತ್ರದಲ್ಲೂ ಮಹಿಳೆಯರ ಪಾಲ್ಗೊಳ್ಳುವಿಕೆ ಶೇ 50ರನ್ನು ದಾಟಿಲ್ಲ ಎಂಬುದರ ಮೇಲೆ ವರದಿ ಬೆಳಕು ಚೆಲ್ಲಿದೆ. ಸರ್ಕಾರೇತರ ಸಂಸ್ಥೆ, ಶಿಕ್ಷಣ, ವೈಯಕ್ತಿಕ ಸೇವೆ ಮತ್ತು ಆರೈಕೆ ಕ್ಷೇತ್ರಗಳಲ್ಲಿ ಗಮನಾರ್ಹ ಮಟ್ಟದಲ್ಲಿದೆ. ಆದರೆ, ಮೂಲಸೌಕರ್ಯ, ತಯಾರಿಕೆ ವಲಯಗಳಲ್ಲಿ ಶೇ 20ರಷ್ಟೂ ಪಾಲ್ಗೊಳ್ಳುವಿಕೆ ಕಂಡುಬಂದಿಲ್ಲ. ಇಂಧನ, ಪೂರೈಕೆ ವ್ಯವಸ್ಥೆ ಮತ್ತು ಸಾರಿಗೆಯಂತಹ ರಂಗಗಳಲ್ಲೂ ಹೆಚ್ಚಿನ ಹಿನ್ನಡೆ ಕಂಡುಬಂದಿದೆ ಎಂದು ದತ್ತಾಂಶಗಳು ಹೇಳುತ್ತವೆ.

ವಲಯವಾರು ನಾಯಕತ್ವ ಪ್ರಮಾಣ (ಶೇಕಡವಾರು)

ವಲಯ	ಮಹಿಳೆ	ಪುರುಷ
ಸರ್ಕಾರೇತರ ಸಂಸ್ಥೆ	47	53
ಶಿಕ್ಷಣ	46	54
ವೈಯಕ್ತಿಕ ಸೇವೆ ಮತ್ತು ಆರೈಕೆ	45	55
ಆರೋಗ್ಯ ಮತ್ತು ಶುಶ್ರೂಷೆ	42	58
ಸರ್ಕಾರಿ, ಸಾರ್ವಜನಿಕ ವಲಯ	40	60
ಮಾಧ್ಯಮ ಮತ್ತು ಸಂವಹನ	37	63
ಗ್ರಾಹಕವಸ್ತುಗಳ ತಯಾರಿಕೆ	34	66
ವೃತ್ತಿಪರ ಸೇವೆ	32	68
ಪ್ರಯಾಣ	32	68
ಗ್ರಾಹಕವಸ್ತುಗಳ ವ್ಯಾಪಾರ	32	68
ಹಣಕಾಸು ಸೇವೆ	30	70
ಮನರಂಜನೆ	29	71
ರಿಯಲ್ ಎಸ್ಟೇಟ್	29	71
ತಂತ್ರಜ್ಞಾನ	24	76
ಕೃಷಿ	23	77
ಪೂರೈಕೆ ವ್ಯವಸ್ಥೆ ಮತ್ತು ಸಾರಿಗೆ	21	79
ಇಂಧನ	20	80
ತಯಾರಿಕೆ	19	81
ಮೂಲಸೌಕರ್ಯ	16	84

ಭಾರತದ ರಾಜಕೀಯದಲ್ಲಿ ಲಿಂಗ ತಾರತಮ್ಯ

ಪುರುಷರ ಪಾಲ್ಗೊಳ್ಳುವಿಕೆಗೆ ಹೋಲಿಸಿದರೆ ಮಹಿಳೆಯರಿಗೆ ಇರುವ ಅವಕಾಶಗಳ ಪ್ರಮಾಣ | ಮಹಿಳೆ ಮತ್ತು ಪುರುಷರಿಗೆ ಇರುವ ಅವಕಾಶಗಳ ನಡುವಣ ಅಂತರದ ಪ್ರಮಾಣ

ಶಾಸನಸಭೆಯ ಸದಸ್ಯತ್ವ
29.80% 70.20%

ಸಚಿವ ಸ್ಥಾನ
18.18% 81.82%

- ರಾಜಕೀಯದಲ್ಲಿ ಪುರುಷರಿಗೆ ಇರುವ ಅವಕಾಶ ಮತ್ತು ಸ್ಥಾನಗಳಿಗೆ ಹೋಲಿಸಿದರೆ, ಮಹಿಳೆಯರಿಗೆ ಇರುವ ಅವಕಾಶ ತೀರಾ ಕಡಿಮೆ
- ಸಂಸತ್ತು ಮತ್ತು ವಿಧಾನಸಭೆಗಳಲ್ಲಿ ಮಹಿಳೆಯರ ಭಾಗವಹಿಸುವಿಕೆ ಶೇ 30ಕ್ಕಿಂತಲೂ ಕಡಿಮೆ ಇದೆ. ಪುರುಷರಿಗೆ ಇರುವಷ್ಟೇ ಅವಕಾಶವನ್ನು ಪಡೆಯಲು ಮಹಿಳೆಯರು ಶೇ 70ಕ್ಕಿಂತಲೂ ಹೆಚ್ಚು ಇರುವ ಅಂತರವನ್ನು ದಾಟಬೇಕಿದೆ
- ಸಚಿವ ಸ್ಥಾನಗಳಲ್ಲಿ ಮಹಿಳೆಯರು ಮತ್ತು ಪುರುಷರಿಗೆ ಇರುವ ಅವಕಾಶಗಳ ನಡುವಣ ಅಂತರ ಶೇ 80ಕ್ಕಿಂತಲೂ ಹೆಚ್ಚು. ಸಚಿವ ಸಂಪುಟದಲ್ಲಿ ಶೇ 81ರಷ್ಟು ಪುರುಷರು ಇದ್ದರೆ, ಮಹಿಳೆಯರ ಪ್ರಮಾಣ ಶೇ 19ರಷ್ಟು ಮಾತ್ರ

ಆರ್ಥಿಕತೆಯಲ್ಲಿ ಮಹಿಳೆಯರ ಪಾಲ್ಗೊಳ್ಳುವಿಕೆ

ಉದ್ಯೋಗಾವಕಾಶ
49.14% 50.86%

ಹಿರಿಯ ಅಧಿಕಾರಿಗಳ ಹುದ್ದೆ
35.29% 64.71%

ತಾಂತ್ರಿಕ ಹುದ್ದೆಗಳು
65.77% 34.23%

- ಭಾರತದ ಪುರುಷರಲ್ಲಿ 100 ಮಂದಿಗೆ ಉದ್ಯೋಗಾವಕಾಶವಿದ್ದರೆ, ಮಹಿಳೆಯರಲ್ಲಿ 49 ಮಂದಿಗಷ್ಟೇ ಉದ್ಯೋಗದ ಅವಕಾಶವಿದೆ
- ಹಿರಿಯ ಅಧಿಕಾರಿಗಳ ಹುದ್ದೆಗಳಲ್ಲಿ ಮಹಿಳೆಯರ ಭಾಗವಹಿಸುವಿಕೆ ಪ್ರಮಾಣ ತೀರಾ ಕಡಿಮೆ ಇದೆ. ಮಹಿಳೆಯರ ಪ್ರಮಾಣವು ಶೇ 36ರಷ್ಟು ಮಾತ್ರ ಇದೆ
- ಬೇರೆಲ್ಲಾ ಹುದ್ದೆಗಳಿಗೆ ಹೋಲಿಸಿದರೆ, ತಾಂತ್ರಿಕ ಹುದ್ದೆಗಳಲ್ಲಿ ಮಹಿಳೆಯರ ಭಾಗವಹಿಸುವಿಕೆ ಉತ್ತಮವಾಗಿದೆ. ಆದರೆ ಪುರುಷರಿಗೆ ಸಮಾನವಾದಷ್ಟೇ ಅವಕಾಶವನ್ನು ಪಡೆಯಲು ಮಹಿಳೆಯರು ಇನ್ನೂ ಶೇ 34ರಷ್ಟು ಅಂತರವನ್ನು ದಾಟಬೇಕಿದೆ

ಶಿಕ್ಷಣದಲ್ಲಿ ಸಮಾನ ಅವಕಾಶ

ಸಾಕ್ಷರತೆ
100%

ಪ್ರಾಥಮಿಕ ಶಿಕ್ಷಣ
100%

ಪ್ರೌಢ ಶಿಕ್ಷಣ
99.62% 0.38%

ಉನ್ನತ ಶಿಕ್ಷಣ
100%

- ಶಿಕ್ಷಣದಲ್ಲಿ ಮಹಿಳೆಯರ ಭಾಗವಹಿಸುವಿಕೆ ಪುರುಷರಿಗಿಂತ ಉತ್ತಮವಾಗಿದೆ. ಶಿಕ್ಷಣದಲ್ಲಿ ಪುರುಷರೇ ಮಹಿಳೆಯರಿಗಿಂತ ಹಿಂದೆ ಇದ್ದಾರೆ
- ಪ್ರೌಢ ಶಿಕ್ಷಣದಲ್ಲಿ ಮಾತ್ರ ಮಹಿಳೆಯರು, ಪುರುಷರಿಗಿಂತ ಶೇ 0.38ರಷ್ಟು ಹಿಂದೆ ಇದ್ದಾರೆ

ಪ್ರಜಾವಾಣಿ **ಪ್ರಜಾಧ್ವನಿ** ಜನರ ಮನದಾಳದ ಮಾತು

ಕಳೆದ ಬಾರಿಯ ಪ್ರಶ್ನೆಯ ಜನಾಭಿಪ್ರಾಯ
ಅಲ್ಲ 54%
ಹೌದು 46%

ಕರ್ನಾಟಕದ ಬರಹಗಾರರಿಗೆ ಬರುತ್ತಿರುವ ಬೆದರಿಕೆ ಪತ್ರಗಳು ವಾಕ್ ಸ್ವಾತಂತ್ರ್ಯದ ಮೇಲೆ ಕರಿನೆರಳು ಬೀರುತ್ತವೆಯೇ?

ನಿಮ್ಮ ಅನಿಸಿಕೆ ಹೌದು ಆಗಿದ್ದರೆ PVA, ಇಲ್ಲ ಆಗಿದ್ದರೆ PVB ಎಂದು ಟೈಪ್ ಮಾಡಿ ಇಂದು ಸಂಜೆ 5ರೊಳಗೆ 92460 44440ಗೆ SMS ಮಾಡಿ



ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ 172

ಸತಿಯನ್ನು ಹೀಯಾಳಿಸಿದ ದಕ್ಷಬ್ರಹ್ಮ

ಸತೀದೇವಿಯು ತನ್ನ ತಂದೆ ದಕ್ಷಬ್ರಹ್ಮ ನಡೆಸುತ್ತಿದ್ದ ಯಜ್ಞಶಾಲೆಗೆ ಬರುತ್ತಾಳೆ. ಅವಳ ತಾಯಿ ಪ್ರೀತಿಯಿಂದ ಬರಮಾಡಿಕೊಳ್ಳುತ್ತಾಳೆ. ಅಲ್ಲಿದ್ದ ಅಕ್ಕತಂಗಿಯರೂ ಆದರದಿಂದ ಎದುರ್ಗೊಳ್ಳುತ್ತಾರೆ. ಆದರೆ ತಂದೆ ಮಾತ್ರ ಸತೀದೇವಿಯನ್ನು ನೋಡಿದರೂ ಆದರಿಸಲಿಲ್ಲ. ದಕ್ಷನ ಭಯದಿಂದ ಯಜ್ಞಕ್ಕೆ ಬಂದಿದ್ದವರೂ ಸತೀದೇವಿಯನ್ನು ನೋಡಿದರೂ ನೋಡದವರಂತೆ ದೂರ ಉಳಿಯುತ್ತಾರೆ.

ಯಾಗದಲ್ಲಿ ಇಂದ್ರ ಮೊದಲಾದ ದೇವತೆಗಳಿಗೆ ಹವಿರ್ಭಾಗವನ್ನು ಕಲ್ಪಿಸಿದ್ದನ್ನು ಕಾಣುತ್ತಾಳೆ. ಆದರೆ ತನ್ನ ಪತಿ ಶಂಕರನಿಗೆ ಭಾಗವನ್ನು ಕಲ್ಪಿಸಿಯೇ ಇರುವುದಿಲ್ಲ. ಇದನ್ನು ನೋಡಿ ಸತಿಗೆ ತುಂಬಾ ಕೋಪಬಂದು ತನ್ನ ತಂದೆಯನ್ನು 'ಎಲೈ ತಂದೆಯೇ, ಶಂಕರನು ಪರಮಮಂಗಳ ಸ್ವರೂಪನು. ಅವನಿಂದ ಈ ಜಗತ್ತೆಲ್ಲವೂ ಪವಿತ್ರವಾಗಿರುವುದು. ಇಂತಹ ಶಂಕರನನ್ನು ನೀನು ಯಜ್ಞಕ್ಕೆ ಏಕೆ ಆಹ್ವಾನಿಸಲಿಲ್ಲ?' ಎಂದು ಪ್ರಶ್ನಿಸುತ್ತಾಳೆ.

ಇದಕ್ಕೆ ದಕ್ಷಬ್ರಹ್ಮ ಉತ್ತರಿಸದೆ ತಿರಸ್ಕಾರಭಾವದಿಂದ ಮುಖ ಕೊಂಕಿಸುತ್ತಾನೆ. ಇದರಿಂದ ಮತ್ತಷ್ಟು ಕೋಪಗೊಂಡ ಸತೀದೇವಿ ಯಜ್ಞಕ್ಕೆ ಆಗಮಿಸಿದ ಬ್ರಹ್ಮ, ವಿಷ್ಣು, ಇಂದ್ರ ಮೊದಲಾದ ದೇವತೆಗಳು ಮತ್ತು ಋಷಿಮುನಿಗಳನ್ನು ಮೂದಲಿಸುತ್ತಾಳೆ. ಯಾಗ ಸಭಾಂಗಣಕ್ಕೆ ನುಗ್ಗಿ ಆಹ್ವಾನಿತರನ್ನೆಲ್ಲ ಸತೀದೇವಿ ಅಪಮಾನಿಸುತ್ತಿದ್ದಾಳೆ ಎಂದು ಕುಪಿತನಾದ ದಕ್ಷಬ್ರಹ್ಮ, 'ಎಲೈ ಸತಿ, ನಿನ್ನ ಮಾತುಗಳನ್ನು ನಿಲ್ಲಿಸು. ನೀನು ಇಲ್ಲಿಂದ ಹೊರಟುಹೋಗು. ನಾನು ನಿನ್ನನ್ನು ಆಹ್ವಾನಿಸಿಲ್ಲ. ನಿನ್ನ ಪತಿ ಅಮಂಗಳರೂಪನು. ಆದ್ದರಿಂದಲೇ ಆತನನ್ನು ಶುಭಕರವಾದ ಯಜ್ಞಕ್ಕೆ ಕರೆಯಲಿಲ್ಲ. ತಿಳಿವಳಿಕೆಯಿಲ್ಲದೆ ಬಂದ ನೀನು ಆಹ್ವಾನಿತ ಗಣ್ಯರನ್ನು ಅಪಮಾನಿಸುತ್ತಿದ್ದೀಯಾ? ಅವನನ್ನು ಕೆಲವರು ಶಿವ(ಮಂಗಳರೂಪ)ನೆಂದು ಕರೆಯುತ್ತಾರೆ. ವಾಸ್ತವದಲ್ಲಿ ಅವನು ಕುಲಗೋತ್ರಗಳಿಲ್ಲದವನು. ವೇದಮಾರ್ಗಕ್ಕೆ ಬಹಿಷ್ಕೃತನು. ಭೂತ ಪ್ರೇತ ಪಿಶಾಚಿಗಳಿಗೆ ಅಧಿಪತಿಯಾದವನು. ಅವನು ಅಪವಿತ್ರನಾದವನು. ಆದಕಾರಣ ಅವನನ್ನು ದೇವಋಷಿಗಳು ಸೇರಿ ನಡೆಸುವಂತಹ ಈ ಯಜ್ಞಕ್ಕೆ ನಾನು ಕರೆಯಲಿಲ್ಲ. ನನ್ನ ತಂದೆ ಬ್ರಹ್ಮನ ಮಾತಿಗೆ ಮರುಳಾಗಿ ನಿನ್ನನ್ನು ಆ ಮೂಢನಾದ ರುದ್ರನಿಗೆ ಮದುವೆ ಮಾಡಿಕೊಟ್ಟೆ ಅಷ್ಟೆ' ಎಂದು ಶಿವನನ್ನು ಹೀಯಾಳಿಸುತ್ತಾನೆ.

ಆಗ ಮತ್ತಷ್ಟು ಕೋಪಗೊಂಡ ಸತೀದೇವಿ 'ದುರ್ಬುದ್ಧಿಯುಳ್ಳ ತಂದೆಯೇ, ಶಿವನನ್ನು ಸಾಮಾನ್ಯದೇವನೆಂದು ತಿಳಿದು ಹೀಗೆ ತಿರಸ್ಕಾರಭಾವದಿಂದ ಮಾತನಾಡುತ್ತಿರುವೆ. ನೀನೊಬ್ಬ ಪರಮನೀಚ. ದೇವತೆಗಳೂ ಮಹೇಶ್ವರನನ್ನು ಪೂಜಿಸಿ, ಗೌರವಿಸುತ್ತಾರೆ. ಇಂತಹ ನನ್ನ ಪತಿ ಪರಮೇಶ್ವರನ ಮಹಿಮೆ ನಿನಗೆ ತಿಳಿದಿಲ್ಲವೇ' -ಎಂದು ತಂದೆ ದಕ್ಷಬ್ರಹ್ಮನನ್ನು ಪ್ರಶ್ನಿಸಿ, ವಿಷ್ಣು, ಬ್ರಹ್ಮರತ್ತ ತಿರುಗಿ, 'ಎಲೈ, ವಿಷ್ಣು ಬ್ರಹ್ಮ ಮೊದಲಾದ ದೇವತೆಗಳೆ ಮತ್ತು ಮುನಿಗಳೆ, ತಮ್ಮ ಪ್ರಭುವಾದ ಶಿವನನ್ನು ಬಿಟ್ಟು ಯಜ್ಞಕ್ಕೆ ಹೇಗೆ ಬಂದರಿ?' ಎಂದು ಕೇಳುತ್ತಾಳೆ.

ಸತೀದೇವಿಗೆ ಉತ್ತರಿಸಲಾಗದೆ ಎಲ್ಲರೂ ತಲೆತಗ್ಗಿಸುತ್ತಾರೆ. ಮೌನವಾಗಿ ಕುಳಿತ ಅವರ ವರ್ತನೆ ಸತೀದೇವಿಗೆ ಮತ್ತಷ್ಟು ಕೋಪ ತರಿಸುತ್ತದೆ. ಅನೇಕ ವಿಧವಾಗಿ ಅಲ್ಲಿ ಸೇರಿರುವರೆಲ್ಲರನ್ನೂ ನಿಂದಿಸುತ್ತಾಳೆ. ಆಗ ದಕ್ಷಬ್ರಹ್ಮ ರೋಷಾವಿಷ್ಟನಾಗಿ ಶಿವನನ್ನು ಮತ್ತಷ್ಟು ಹೀನಾಯವಾಗಿ ನಿಂದಿಸಿ, ಯಾಗಶಾಲೆಯಿಂದ ಹೊರಹೋಗುವಂತೆ ಸತಿಗೆ ಸೂಚಿಸುತ್ತಾನೆ.

ಇದರಿಂದ ಸತೀದೇವಿಗೆ ಅಪಮಾನವಾದಂತಾಗುತ್ತದೆ. 'ಪತಿ ಪರಮೇಶ್ವರನು ಬೇಡವೆಂದರೂ, ಹಠ ಮಾಡಿ ತಂದೆಯ ಯಜ್ಞಶಾಲೆಗೆ ಬಂದೆ. ಈಗ ಅಪಮಾನಿತಳಾಗಿ ಶಂಕರನ ಬಳಿಗೆ ಹೇಗೆ ಹೋಗಲಿ? ಶಿವನು ಅಲ್ಲಿ ಏನಾಯಿತೆಂದು ಕೇಳಿದರೆ, ಏನೆಂದು ಉತ್ತರಿಸಲಿ' ಎಂದು ಚಿಂತಾಕ್ರಾಂತಳಾಗುತ್ತಾಳೆ.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ದೇವಸ್ಥಾನವೊಂದರ ಎದುರು ಯುವಕರ ಗುಂಪಿನ ಮೇಲೆ ಪೊಲೀಸರು ಲಾಠಿ ಪ್ರಹಾರ ಮಾಡುತ್ತಿರುವ ವಿಡಿಯೊವೊಂದು ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದೆ. ಕೋಲ್ಕತ್ತದ ದೇವಸ್ಥಾನವೊಂದರ ಎದುರು ನಡೆದ ಘಟನೆಯ ವಿಡಿಯೊ ಇದಾಗಿದೆ. ಕಾಂವಡ್ ಯಾತ್ರಾರ್ಥಿಗಳ ಮೇಲೆ ಪಶ್ಚಿಮ ಬಂಗಾಳ ಪೊಲೀಸರು ಲಾಠಿ ಪ್ರಹಾರ ನಡೆಸಿದ್ದಾರೆ ಎಂಬ ವಿವರಣೆಯನ್ನು ಈ ವಿಡಿಯೊ ಜೊತೆ ನೀಡಲಾಗಿದೆ. ಯುವಕರು ಹೊಡೆಸಿಕೊಳ್ಳುತ್ತಿರುವ ಮತ್ತು ಮಹಿಳೆಯರು ಪೊಲೀಸರ ಬಳಿ ಕ್ಷಮೆ ಯಾಚಿಸುತ್ತಿರುವುದು ಈ ವಿಡಿಯೊದಲ್ಲಿ ಕಂಡುಬರುತ್ತದೆ.

ವಿಡಿಯೊ ಜೊತೆ ನೀಡಲಾಗಿರುವ ಮಾಹಿತಿ ಸುಳ್ಳು ಎಂದು 'ಇಂಡಿಯಾ ಟುಡೆ' ಫ್ಯಾಕ್ಟ್‌ಚೆಕ್ ಪ್ರಕಟಿಸಿದೆ. 'ಬಿಜೆಪಿ ಬೆಂಗಾಲ್' ಎಂಬ ಟ್ವಿಟರ್ ಖಾತೆಯು ಈ ವಿಡಿಯೊವನ್ನು 2021ರ ಆಗಸ್ಟ್ 16ರಂದು ಪೋಸ್ಟ್ ಮಾಡಿದೆ. 'ಕೋಲ್ಕತ್ತದ ಭೂತನಾಥ ದೇವಾಲಯದಲ್ಲಿ ಶಿವಭಕ್ತರ ಮೇಲೆ ಲಾಠಿ ಪ್ರಹಾರ ಮಾಡಲಾಗಿದೆ' ಎಂಬ ವಿವರಣೆಯನ್ನು ವಿಡಿಯೊ ಜೊತೆ ನೀಡಿದೆ. ಪಶ್ಚಿಮ ಬಂಗಾಳ ಸರ್ಕಾರವು 2021ರ ಆಗಸ್ಟ್ 31ರ ವರೆಗೆ ಕೋವಿಡ್ ನಿರ್ಬಂಧ ಹೇರಿತ್ತು. ಕೋವಿಡ್ ನಿಯಮಗಳನ್ನು ಉಲ್ಲಂಘಿಸಿ ಜನರು ದೇವಸ್ಥಾನದ ಬಳಿ ಸೇರಿದ್ದರಿಂದ ಪೊಲೀಸರು ಲಾಠಿ ಪ್ರಹಾರ ನಡೆಸಿದ್ದರು ಎಂದು ಇಂಡಿಯಾ ಟುಡೆ ವಿವರಿಸಿದೆ.

ಗುಂಡಣ್ಣ



ಬೆರಗಿನ ಬೆಳಕು

ಗುರುರಾಜ ಕರಜಗಿ

ಕ್ಷೇತ್ರ ವಾಸ

ಯಾತ್ರಿಕರು ನಾವು, ದಿವ್ಯಕ್ಷೇತ್ರವೀ ಲೋಕ
ಸತ್ರದಲಿ ನೇಮದಿಂದಿರಲಿಕೆಡೆಯುಂಟು
ರಾತ್ರಿ ಮೂರಾಯ್ತು ಹೊರಡೆನೆ ತೆರಳಿದೊಡೆ ಪಾರು
ಪತ್ಯದವ ಮೆಚ್ಚುವನು - ಮಂಕುತಿಮ್ಮ || 672 ||

ಪದ-ಅರ್ಥ: ಸತ್ರ = ಛತ್ರ, ನೇಮದಿಂದಿರಲಿಕೆಡೆಯುಂಟು = ನೇಮದಿಂದ + ಇರಲಿಕೆ + ಎಡೆಯುಂಟು (ಅವಕಾಶವುಂಟು), ಮೂರಾಯ್ತು = ಮೂರು + ಆಯ್ತು, ಹೊರಡೆನೆ = ಹೊರಡು + ಎನೆ.

ವಾಚ್ಯಾರ್ಥ: ನಾವು ಯಾತ್ರಿಕರು. ಈ ಲೋಕ ದಿವ್ಯಕ್ಷೇತ್ರ. ಇಲ್ಲಿಯ ಛತ್ರದಲ್ಲಿ ನೇಮದಿಂದ ಇರಲು ಅವಕಾಶವಿದೆ. ವಸತಿಯ ಮೂರು ರಾತ್ರಿಗಳು ಮುಗಿದೊಡನೆ ಪಾರುಪತ್ಯದವನ ಸೂಚನೆಯಂತೆ ಹೊರಟುಬಿಟ್ಟರೆ ಆತ ಮೆಚ್ಚುತ್ತಾನೆ.

ವಿವರಣೆ: ಒಂದು ಸ್ಥಳ ದಿವ್ಯಕ್ಷೇತ್ರವಾಗುವುದು ಹೇಗೆ? ಅಲ್ಲಿಯ ಜನರ ಬದುಕಿನ ದಿವ್ಯತೆಯಿಂದ, ಜನಮಾನಸದಿಂದ, ಭುವಿಯ ಪುಣ್ಯದಿಂದ, ಆಗಾಗ ಕಾಲದಲ್ಲಿ ತೂರಿಬರುವ ಮಹಾನ್ ವ್ಯಕ್ತಿಗಳ ಜೀವನ ಸಾಧನೆಯಿಂದ. ಅಲ್ಲೊಂದೆಡೆಗೆ ರಾಮ, ಮತ್ತೊಂದೆಡೆಗೆ ಕೃಷ್ಣ, ಮತ್ತೆ ಬೇರೆಡೆಗೆ ಬುದ್ಧ, ಮಹಾವೀರರು, ಗಾರ್ಗಿ, ಮೈತ್ರೇಯಿಯರು, ಇನ್ನೊಂದು ಸ್ಥಳದಲ್ಲಿ ಏಸುಕ್ರಿಸ್ತ, ಪ್ರವಾದಿಗಳು, ಮತ್ತೆ ಬೇರೆ ಬೇರೆ ಸ್ಥಳಗಳಲ್ಲಿ ಆಚಾರ್ಯತ್ರಯರು, ಶ್ರೀರಾಮಕೃಷ್ಣ, ಝರತುಷ್ಟ, ಲಾವೋತ್ಸೆ, ಬಸವಣ್ಣ, ಮೀರಾ, ದಾಸರು ಇವರೆಲ್ಲ ನೆಲೆನಿಂತು ತಮ್ಮ ಬದುಕಿನ ಸುಗಂಧವನ್ನು ಹರಡಿದ್ದು ಈ ನೆಲದಲ್ಲಿ. ಅದಕ್ಕೇ ಈ ಲೋಕ ಒಂದು ದಿವ್ಯಕ್ಷೇತ್ರವೂ ಹೌದು, ತೀರ್ಥಕ್ಷೇತ್ರವೂ ಹೌದು.

ಇನ್ನೊಂದು ವಿಷಯ. ಮೇಲೆ ಹೇಳಿದ ಯಾವ ದಿವ್ಯಚೇತನಗಳೂ ಇಂದು ದೇಹದಿಂದ ಇಲ್ಲ, ಅವರೆಲ್ಲ ಒಂದು ಕಾಲಕ್ಕೆ ಸಂದು, ತಮ್ಮ ಕರ್ತವ್ಯಗಳನ್ನು ಮುಗಿಸಿ ಮರೆಯಾದವರು. ಹಾಗೆಂದರೆ, ಈ ದಿವ್ಯಲೋಕದಲ್ಲಿ ಯಾರೂ, ಎಷ್ಟೇ ಪ್ರಭಾವಶಾಲಿಗಳಾಗಿದ್ದರೂ ಶಾಶ್ವತವಾಗಿ ಇರುವಂತಿಲ್ಲ. ಆದ್ದರಿಂದ ಇದೊಂದು ಛತ್ರ ಇದ್ದ ಹಾಗೆ. ಇಲ್ಲಿ ಜನ ಬಂದು ನಿಯಮಿತ ಅವಧಿಗೆ ಇದ್ದು ಹೋಗಬಹುದು. ಆದರೆ ಯಾವುದನ್ನೂ ನನ್ನದು ಎನ್ನುವಂತಿಲ್ಲ. ಇರುವಷ್ಟು ಕಾಲ ಛತ್ರದ ವಸ್ತುಗಳನ್ನು ಬಳಸಬಹುದು. ಅವುಗಳನ್ನು ತೆಗೆದುಕೊಂಡು ಹೋಗುವುದು ಸಾಧ್ಯವಿಲ್ಲ. ಅಷ್ಟೇ ಅಲ್ಲ, ಈ ಛತ್ರದಲ್ಲಿ ಬದುಕಿದಾಗ ಅಲ್ಲಿಯ ನಿಯಮಗಳಂತೆ ವಾಸಿಸಬೇಕು. ಅದು ಕೇವಲ ಮೂರು ದಿನದ ವಾಸವಾದ್ದರಿಂದ, ನಮಗೆ ಕೊಟ್ಟ ವಸ್ತುಗಳನ್ನು ಸರಿಯಾಗಿ, ಜತನದಿಂದ ಬಳಸಬೇಕು. ಅಲ್ಲಿಯ ಜನರೊಂದಿಗೆ ಸಜ್ಜನಿಕೆಯಿಂದ ವ್ಯವಹರಿಸಬೇಕು. ಸ್ಥಳವನ್ನು, ಸುತ್ತಲಿನ ಜನರ ಮನಸ್ಸನ್ನು ಕೊಳಕು ಮಾಡಬಾರದು. ಹೀಗೆ ಬದುಕಿದರೆ ಮಾತ್ರ ಅಲ್ಲಿಯ ಯಜಮಾನ ನಿಮ್ಮನ್ನು ಇರಗೊಡುತ್ತಾನೆ. ಅದಲ್ಲದೆ, ನಮಗೆ ಗೊತ್ತು ಮಾಡಿದ ಅವಧಿ ಮುಗಿದ ತಕ್ಷಣ, ಯಜಮಾನ ಸೂಚನೆ ಕೊಟ್ಟ ಕೂಡಲೆ ತಕರಾರು ಮಾಡದೆ, ಕೊಸರಾಡದೆ ಛತ್ರವನ್ನು ಖಾಲಿಮಾಡಿ ಹೊರಡಬೇಕು.

ಕಗ್ಗ ಇಂತಹ ಸುಂದರ ಪ್ರತಿಮೆಯೊಂದಿಗೆ ಮನುಷ್ಯನ ಬದುಕು ಪ್ರಪಂಚದಲ್ಲಿ ಹೇಗಿರಬೇಕು ಎಂಬುದನ್ನು ತಿಳಿಸುತ್ತದೆ. ಪ್ರಪಂಚ ಯಾರದೂ ಅಲ್ಲ. ನಾವಿಲ್ಲಿ ಯಾತ್ರಿಕರಂತೆ ಒಂದಷ್ಟು ದಿನ ಬಂದು ಇದ್ದು ಹೋಗುತ್ತೇವೆ. ಆದರೆ ಇರುವಾಗ ಸಂಸ್ಕಾರಗಳನ್ನು ಪಡೆದು, ಸುಸಂಸ್ಕೃತರಾಗಿ, ತಮ್ಮ ಜೀವನವನ್ನು ಉತ್ತಮಪಡಿಸಿಕೊಳ್ಳುತ್ತ, ಪ್ರಪಂಚಕ್ಕೂ ಕೊಡುಗೆಯನ್ನು ಕೊಡುತ್ತ ಬದುಕಿ, ಜೀವಿತಾವಧಿ ಮುಗಿದೊಡನೆ, ಕೊರಗದೆ, ನಗುನಗುತ್ತ ತೆರಳಿದರೆ, ಈ ಜಗದ ಪಾರುಪತ್ಯದಾರ, ಭಗವಂತ, ಮೆಚ್ಚುತ್ತಾನೆ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಶುಕ್ರವಾರ ಜುಲೈ 15, 2022

ಶ್ರೀ ಶುಭಕೃತ್ ನಾಮ ಸಂವತ್ಸರ ಉತ್ತರಾಯಣ ಗ್ರೀಷ್ಮ ಋತು ತಿಥಿ: ಆಷಾಢ ಕೃಷ್ಣ ದ್ವಿತೀಯ ಗಂ. 16-40 ನಕ್ಷತ್ರ: ಶ್ರವಣ ಗಂ. 17-32 ಯೋಗ: ಪ್ರೀತಿ ಗಂ. 24-21, ಕರಣ: ತೈತಿಲ ಗಂ. 06-26, ಮಿಥುನ ಮಾಸದ 30 ನೇ ದಿನ.
ರಾಹುಕಾಲ : ಬೆಳಿಗ್ಗೆ 10:30 – 12:00
ಸೂರ್ಯೋದಯ : 06-14 ಸೂರ್ಯಾಸ್ತ : 06-58
ಮುಸ್ಲಿಂ ದಿನಾಂಕ : 15 ಜುಲ್‌ಹಿಜಾನ್
ಅದೃಷ್ಟ ಸಂಖ್ಯೆ : 3, 12

ಮೇಷ : ಯಶಸ್ಸಿನ ಹಾದಿಯಲ್ಲಿದ್ದೀರಿ. ನಿಮ್ಮ ಈ ಯಶಸ್ಸಿಗೆ ಕಾರಣರಾದವರನ್ನು ಜೊತೆಯಲ್ಲಿಯೆ ಇರಿಸಿಕೊಳ್ಳಿ. ಕಾಫಿ ಮತ್ತು ಕಾಳುಮೆಣಸಿನ ರಫ್ತು ವಹಿವಾಟು ಹೆಚ್ಚಲಿದೆ. ಕಿರಿಯರಿಗೆ ನಿಮ್ಮ ಮಾರ್ಗದರ್ಶನದ ಅವಶ್ಯಕತೆ ಇದೆ.

ವೃಷಭ : ಪಾಲುದಾರಿಕೆಯಿಂದ ಹೊರ ಬರುವ ನಿಮ್ಮ ಚಿಂತನೆ ಸೂಕ್ತವಾದುದೆ ಆಗಿದೆ. ಕೆಲಸಗಳು ತೀವ್ರಗತಿಯಲ್ಲಿ ಸಾಗುತ್ತಿರುವುದು ತುಸು ಸಂತಸವೆನಿಸುವುದು. ಮಾನಸಿಕವಾಗಿ ಹೆಚ್ಚು ದೃಢರಾಗಿರುವಿರಿ.

ಮಿಥುನ : ಜಾಣ್ಮೆಯಿಂದ ಅವಕಾಶವನ್ನು ಬಳಸಿಕೊಂಡಲ್ಲಿ ಅಧಿಕಾರ ಪಡೆದುಕೊಳ್ಳುವುದು ಕಷ್ಟದ ಕೆಲಸವೇನಲ್ಲ. ಸುತ್ತಲು ನಡೆಯುತ್ತಿರುವ ವಿದ್ಯಮಾನಗಳ ಬಗೆಗೆ ಅರಿತಿರುವುದು ಒಳ್ಳೆಯದು. ಮಾತು ಮಿತವಾಗಿ ಮತ್ತು ಸತ್ಯವಾಗಿರಲಿ.

ಕರ್ಕಾಟಕ : ಹಣಕಾಸು ನಿರ್ವಹಣೆಯ ವಿಚಾರದಲ್ಲಿ ನಿಮ್ಮ ಹೆಂಡತಿಯ ಕುಶಲಮತಿಯು ಉಪಯೋಗಕ್ಕೆ ಬರುತ್ತದೆ. ಹಿಡಿತಕ್ಕೆ ಸಿಕ್ಕಿರುವ ಕೆಲಸಗಳನ್ನು ವೃಥಾ ಚಿಂತಿಸದೆ ಕಾರ್ಯರೂಪಕ್ಕೆ ತನ್ನಿ.

ಸಿಂಹ : ರಾಜಕೀಯದಲ್ಲಿ ಪ್ರವರ್ಧಮಾನಕ್ಕೆ ಬರುತ್ತಿರುವ ನಿಮಗೆ ಸದ್ಯದ ಪರಿಸ್ಥಿತಿ ನಿಮಗನುಕೂಲಕರವಾಗಿದೆ. ವೈಯುಕ್ತಿಕ ವಿಷಯಗಳನ್ನು ಆಪ್ತರಾದವರಲ್ಲಿ ಹಂಚಿಕೊಳ್ಳಲು ಸಮಯ ಕೂಡಿ ಬಂದಿದೆ.

ಕನ್ಯಾ : ನಿಮ್ಮಲ್ಲಿರುವ ಆತ್ಮಸ್ಥೈರ್ಯ ಹಾಗೂ ದೇವರ ಮೇಲಿರುವ ಶ್ರದ್ಧ ಭಕ್ತಿ ನಂಬಿಕೆಯಿಂದಾಗಿ ಸಮಸ್ಯೆಗಳನ್ನು ಧೈರ್ಯವಾಗಿ ಎದುರಿಸಿ ಪರಿಹರಿಸಿಕೊಳ್ಳುವಿರಿ. ಸಾಲ ಪಡೆಯುವ ಯೋಚನೆ ಕೈ ಬಿಡುವುದು ಉತ್ತಮ.

ತುಲಾ : ಫ್ಯಾಕ್ಟರಿ ಕೆಲಸಗಾರರಿಗೆ ವಿಶೇಷ ಭತ್ಯೆಯಲ್ಲಿ ಹೆಚ್ಚಳವಾಗಲಿದೆ. ಷೇರು ಕೊಳ್ಳುವಾಗ ಎಚ್ಚರ ವಹಿಸಿ. ಬಟ್ಟೆ ವ್ಯಾಪಾರಿಗಳಿಗೆ ಲಾಭಾಂಶ ಹೆಚ್ಚುತ್ತದೆ. ಕುಟುಂಬದ ಹಿಂದಿನ ವಿಚಾರ ತಿಳಿಯಲು ದಾಯಾದಿಗಳಿಂದ ಅನುಕೂಲ.

ವೃಶ್ಚಿಕ : ಇತರರ ಮಾತಿಗೆ ಕಿವಿಗೊಡದೆ ನಿಮ್ಮಂತೆ ನೀವಿರುವುದು ಕಷ್ಟವೆಂದು ಅನಿಸಿದರೂ ಅದೇ ಒಳ್ಳೆಯದು. ರಾಸಾಯನಿಕ ವಸ್ತುಗಳ ಮಾರಾಟಗಾರರಿಗೆ ಅಧಿಕ ಮಟ್ಟದ ಲಾಭ. ಮಗನ ವಿದ್ಯಾಭ್ಯಾಸದ ಕಡೆ ಗಮನ ಹರಿಸಿ.

ಧನು : ಮೇಲಧಿಕಾರಿಗಳ ಒತ್ತಾಯದ ಕೆಲಸಗಳಿಗೆ ಸಮರ್ಪಕವಾಗಿ ಉತ್ತರ ನೀಡುವಲ್ಲಿ ಯಶಸ್ವಿಯಾಗುವಿರಿ. ಬ್ಯಾಂಕ್ ನೌಕರರು ವರ್ಗಾವಣೆಗೆ ಪ್ರಯತ್ನ ಮಾಡುವುದು ಸರಿಯಲ್ಲ. ಗಣ್ಯ ವ್ಯಕ್ತಿಗಳ ಪರಿಚಯವಾಗಲಿದೆ.

ಮಕರ : ಸಹೋದ್ಯೋಗಿಗಳು ಹೆಚ್ಚಿನ ರೀತಿಯಲ್ಲಿ ನಿಮ್ಮೊಂದಿಗೆ ಸಹಕರಿಸಲಿದ್ದಾರೆ. ಕಾರ್ಖಾನೆಯಲ್ಲಿ ರಾತ್ರಿ ಪಾಳಿ ಕೆಲಸವನ್ನು ಬದಲಾಯಿಸಿಕೊಳ್ಳುವ ಪ್ರಯತ್ನವನ್ನು ನಡೆಸಬಹುದು. ಬಹು ದಿನದ ಆಸೆಯೊಂದು ನೆರವೇರಲಿದೆ.

ಕುಂಭ : ಕಬ್ಬಿಣ ಕೆಲಸ ಮಾಡುವವರು ಕಾಳಜಿ ವಹಿಸಿ. ವಿದ್ಯಾರ್ಥಿಗಳು ಹೆಚ್ಚಿನ ಅಭ್ಯಾಸ ನಡೆಸುವುದು ಅಗತ್ಯವಿದೆ. ಸತ್ಕಾರ್ಯಗಳಿಂದಾಗಿ ಮನೆಯಲ್ಲಿ ಸಡಗರವಿರುವುದು. ವಿವೇಕಯುಕ್ತವಾದ ನಡುವಳಿಕೆ ಪ್ರಯೋಜನ ನೀಡುತ್ತದೆ.

ಮೀನ : ದಂಡ ಕಟ್ಟುವಂತಹ ತಪ್ಪುಗಳು ನಿಮ್ಮಿಂದ ನಡೆದಾವು, ಜಾಗ್ರತರಾಗಿರಿ. ದೈಹಿಕವಾಗಿ ಬಲಾಢ್ಯರಾಗಿರುವ ನಿಮಗೆ ಮಾನಸಿಕವಾಗಿ ಹೊಡೆತ ಬೀಳುವ ಸಂಭವವಿದೆ. ತಪ್ಪಿಸಿಕೊಳ್ಳಲು ಗುರು ಅನುಗ್ರಹ ಪಡೆಯುವುದು ಉತ್ತಮ.

ಪದಬಂಧ 5019

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
2. ಬಾಲ ಹಿಡಿದುಕೊಂಡಿರುವವ ಹಿಂಬಾಲಕ! (5)
4. ಪೋಲಕ ಧರಿಸಿದವಳ ಕೆನ್ನೆ! (3)
5. ವಿದ್ಯೆಯೊಡನೆ ಇರಬೇಕಾದ ನಮ್ರತೆ (3)
9. ಗೋಡೆಯಲ್ಲಿ ಕೊರೆಯುವ ಕಿಂಡಿ (2)
10. ಮುಳ್ಳುಗಳ ನಡುವೆ ಬಿರಿಯುವ ಪುಷ್ಪ (3)
11. ರಂಧ್ರ ಉಲ್ಟಾ ಕಾಣುತ್ತಿದೆಯಲ್ಲಾ! (2)
12. ನವೆ ಈ ರೀತಿ ಬಂದಿದೆ (3)
15. ತೀರದ ಹತ್ತಿರವಿರುವ ಗುಡಿಸಲು (3)
16. ಹಕ್ಕಿಗಳ ಗುಂಪು (5)

ಮೇಲಿಂದ ಕೆಳಕ್ಕೆ
1. ಮೂಗಿನಿಂದ ಸುರಿಯುವ ಶ್ಲೇಷ್ಮ (3)
2. ಬಾಗಿಲಲ್ಲಿ ಸಿಕ್ಕಿಕೊಂಡಿರುವ ಲಾಂಗೂಲ! (2)
3. ಅಂಗವಿಕಲನಲ್ಲಿಯೇ ಕವಿತೆ ಬರೆಯುವವ ಅಡಗಿದ್ದಾನಲ್ಲಾ! (2)
4. ಕಿವಿಯಿಂದ ಕಿವಿಗೆ ಹರಡುವ ಮಾತು (5)
6. ಈತ ನರಕಾಧಿತಿಯ ಆಳು (5)
7. ಬೆರಳಿಗೆ ಇಡುವ ಆಭರಣ (3)
8. ವಿಶ್ವಾಸ ಈ ರೀತಿ ಬಂದಿದೆ (3)
13. ತಪಸೀಲು ನೋಡಿದಾಗಲೇ ಈ ತಪಸ್ಸು! (2)
14. ಸಂಗ ದೊರೆತಾಗಿನ ಘಟನೆ! (3)
15. ಕುಟಿಲ ಬುದ್ಧಿಯವನ ವಂಶ (2)



5018ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಸ್ಥಿರ 3.ಪ್ರತೀಕ
5.ಸಮರ 7.ರಸಭಂಗ
9.ಗಡಿಗೆ 10.ಸಮೀಪ
11.ರಣರಂಗ 13.ಚರಟ
15.ರಪಣ 16.ರುಜು

ಮೇಲಿಂದ ಕೆಳಕ್ಕೆ:
2.ರಭಸ 3.ಪ್ರಹಾರ
4.ಕರ್ಪೂರ 6.ಮಜ್ಜಿಗೆ
8.ಗಣಪ 9.ಗಗರ
10.ಸಮೀರ 12.ಗಹ್ವರ
13.ಚರಣ 14.ಟಗರು

ಸುಡೊಕು 5405

		7		6			1	2
	8		5		2	3		
6				4		7		8
	7				9			
5		9		1			3	7
	6		7					4
2		3	8		4			
		6		2				9
8	1		6		7	4		3

ಆಡುವುದು ಹೇಗೆ?
ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5404 ಸುಡೊಕು

8	7	9	4	6	1	2	5	3
2	4	3	9	8	5	7	6	1
6	5	1	2	7	3	4	8	9
7	9	2	1	5	8	3	4	6
4	3	8	7	9	6	1	2	5
5	1	6	3	4	2	9	7	8
3	2	5	6	1	4	8	9	7
1	6	7	8	2	9	5	3	4
9	8	4	5	3	7	6	1	2

ಬೆಳಗಾವಿ: 11 ಕ್ಲಸ್ಟರ್ ವ್ಯಾಪ್ತಿಯಲ್ಲಿನ ಶಾಲೆಗಳಿಗೆ ಇಂದು ರಜೆ ಘೋಷಣೆ ● ಕೊಡಗು ಜಿಲ್ಲೆಯ ವಿವಿಧೆಡೆ ವಿದ್ಯುತ್ ಕಡಿತ

ಧಾರಾಕಾರ ಮಳೆ: ವಿವಿಧೆಡೆ ಸಂಚಾರ ವ್ಯತ್ಯಯ

ಪ್ರಜಾವಾಣಿ ವಾರ್ತೆ

ಖಾನಾಪುರ (ಬೆಳಗಾವಿ ಜಿಲ್ಲೆ): ತಾಲ್ಲೂಕಿನ ಭೀಮಗಡ ಅರಣ್ಯ ಪ್ರದೇಶದಲ್ಲಿ ಸುರಿದ ಮಳೆಯಿಂದಾಗಿ ಮಂತುರ್ಗಾ ಸೇತುವೆ ಮೇಲೆ ನೀರು ಹರಿದಿದೆ. ಇದರಿಂದ ಕರ್ನಾಟಕ–ಗೋವಾ ರಾಜ್ಯ ಹೆದ್ದಾರಿ ಸಂಚಾರ ಗುರುವಾರ ಸಂಜೆ 5ರವರೆಗೂ ಬಂದ್ ಆಗಿತ್ತು.

ಅರಣ್ಯದಲ್ಲಿ ಬುಧವಾರ ರಾತ್ರಿಯಿಡೀ ಮಳೆ ಸುರಿಯಿತು. ಸಿಂಧನೂರು–ಹೆಮ್ಮಡಗಾ ಅಂತರರಾಜ್ಯ ಹೆದ್ದಾರಿ ಭಾಗಶಃ ಮುಳುಗಿ ಸಂಚಾರ ಬಂದ್ ಆಗಿತ್ತು. ಸಂಜೆ ವೇಳೆಗೆ ಇಳಿಮುಖವಾದ ನಂತರ ವಾಹನ ಸಂಚಾರ ಮತ್ತೆ ಆರಂಭವಾಯಿತು.

ತಾಲ್ಲೂಕಿನಲ್ಲಿ ನಿರಂತರವಾಗಿ ಮಳೆ ಸುರಿಯುತ್ತಿದ್ದು ಮುಂಜಾಗ್ರತೆಯಾಗಿ ಲೋಂಡಾ, ಗುಂಜಿ ಮತ್ತು ಜಾಂಬೋಟಿ ಹೋಬಳಿ ವ್ಯಾಪ್ತಿಯ 11 ಕ್ಲಸ್ಟರ್‌ಗಳ ವ್ಯಾಪ್ತಿಯಲ್ಲಿ ಪ್ರಾಥಮಿಕ, ಪ್ರೌಢಶಾಲೆಗಳಿಗೆ 15ರಂದು ರಜೆ ಘೋಷಿಸಲಾಗಿದೆ. 30 ಸಣ್ಣ ಸೇತುವೆಗಳು ಮುಳುಗಿವೆ. 50ಕ್ಕೂ ಹೆಚ್ಚು ಹಳ್ಳಿಗಳಲ್ಲಿ ವಿದ್ಯುತ್ ವ್ಯತ್ಯಯವಾಗಿದೆ.

ಧಾರವಾಡ ಜಿಲ್ಲೆಯಲ್ಲಿ ಮಲೆನಾಡು ಪ್ರದೇಶಗಳಾದ ಅಳ್ನಾವರ ಹಾಗೂ ಕಲಘಟಗಿ ಭಾಗದಲ್ಲಿ ಉತ್ತಮ ಮಳೆಯಾಗಿದೆ. ಅಳ್ನಾವರದ ಕಂಬಾರಗಣವಿ ಗ್ರಾಮದ ಕಿರು ಸೇತುವೆ ಜಲಾವೃತಗೊಂಡು, ಗ್ರಾಮಕ್ಕೆ ಸಂಪರ್ಕ ಕಡಿತಗೊಂಡಿದೆ.

ಕೊಡಗು ಜಿಲ್ಲೆಯ ಮಾಯಮುಡಿ, ಬಾಳೆಲೆ ರಸ್ತೆಯಲ್ಲಿ ಮರ ಬಿದ್ದಿರುವುದು

ತಗ್ಗಲಿದೆ ಮಳೆ

ಬೆಂಗಳೂರು: ಕರಾವಳಿ, ಮಲೆನಾಡು ಸೇರಿದಂತೆ ರಾಜ್ಯಾದ್ಯಂತ ಮುಂದಿನ ನಾಲ್ಕು ದಿನಗಳ ಅವಧಿಯಲ್ಲಿ ಮಳೆಯ ತೀವ್ರತೆ ತಗ್ಗಲಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

ಮುಂದಿನ 48 ಗಂಟೆಗಳು ರಾಜ್ಯದ ಬಹುತೇಕ ಕಡೆ ಮಳೆಯಾಗಲಿದೆ. ಕೊಡಗು, ಚಿಕ್ಕಮಗಳೂರು ಹಾಗೂ ಶಿವಮೊಗ್ಗ ಜಿಲ್ಲೆಗೆ ಶುಕ್ರವಾರ 'ಆರೆಂಜ್ ಅಲರ್ಟ್' ಘೋಷಿಸಲಾಗಿದೆ. ಬೆಳಗಾವಿ, ಉತ್ತರ ಕನ್ನಡ, ಉಡುಪಿ, ದಕ್ಷಿಣ ಕನ್ನಡ ಹಾಗೂ ಹಾಸನ ಜಿಲ್ಲೆಗೆ 'ಯೆಲ್ಲೊ ಅಲರ್ಟ್' ನೀಡಲಾಗಿದೆ. ಇದೇ 14ರ ವೇಳೆಗೆ ದಕ್ಷಿಣ ಕನ್ನಡ, ಉಡುಪಿ ಹಾಗೂ ಉತ್ತರ ಕನ್ನಡ ಹೊರತುಪಡಿಸಿ, ಉಳಿದ ಜಿಲ್ಲೆಗಳಲ್ಲಿ ಮಳೆ ಕಡಿಮೆಯಾಗಲಿದೆ. ಈ ಮೂರು ಜಿಲ್ಲೆಗಳಲ್ಲಿ ಮಳೆ ಮುಂದುವರಿಯಲಿದೆ.

ವಿಡಿಯೊ ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ
ಪ್ರಜಾವಾಣಿ ವಿಡಿಯೊ

ಶಿವಮೊಗ್ಗ ಜಿಲ್ಲೆಯಲ್ಲಿ ಭದ್ರಾ, ತುಂಗಾ, ಶರಾವತಿ, ವರದಾ, ಕುಮದ್ವತಿ ನದಿಗಳು ಅಪಾಯದ ಮಟ್ಟ ಮೀರಿ ಹರಿಯುತ್ತಿವೆ. ಭದ್ರಾ ಜಲಾಶಯದ ಇದೇ ಮೊದಲ ಬಾರಿಗೆ ಜುಲೈ ತಿಂಗಳಲ್ಲಿಯೇ ನೀರು ಹರಿಸಲಾಗಿದೆ.

ಹೊಸಪೇಟೆ ವರದಿ: ತುಂಗಭದ್ರಾ ಜಲಾಶಯದಿಂದ ಗುರುವಾರ 1.41 ಲಕ್ಷ ಕ್ಯುಸೆಕ್ ನೀರು ಹರಿಸಿದ್ದು, ರಾಮಲಕ್ಷ್ಮಣ ದೇವಸ್ಥಾನ, ಸಾಲು ಮಂಟಪಗಳು, ಕರ್ಮ ಮಂಟಪ ಮುಳುಗಿವೆ.

ಕಲಬುರಗಿ ವರದಿ: ಕಲಬುರಗಿ, ಯಾದಗಿರಿ, ಬೀದರ್, ರಾಯಚೂರು, ಕೊಪ್ಪಳ ಜಿಲ್ಲೆಯ ವಿವಿಧೆಡೆ ತುಂತುರು ಮಳೆಯಾಗಿದೆ. ಕೊಪ್ಪಳ ಜಿಲ್ಲೆಯ ಗಂಗಾವತಿ ತಾಲ್ಲೂಕಿನ ಆನೆಗೊಂದಿ ವ್ಯಾಪ್ತಿಯ ಗ್ರಾಮಗಳಲ್ಲಿ ಬಾಳೆ ಹೊಲಗಳಲ್ಲಿ ನೀರು ಆವರಿಸಿಕೊಂಡಿದೆ.

ಕೊಡಗು ಜಿಲ್ಲೆಯಲ್ಲಿ ಬುಧವಾರ ರಾತ್ರಿ, ಗುರುವಾರ ದಿನವಿಡೀ ಬಿರುಗಾಳಿಗೆ ಜನ ತತ್ತರಿಸಿದರು. ವಿವಿಧೆಡೆ ವಿದ್ಯುತ್ ಸಂಪರ್ಕ ವ್ಯತ್ಯಯವಾಗಿದೆ. ವಾಹನಗಳಲ್ಲಿ ಗ್ರಾಮೀಣ ವಿದ್ಯಾರ್ಥಿಗಳು ಶಾಲೆ, ಕಾಲೇಜುಗಳಿಗೆ ತೆರಳಲು ಪರದಾಡಿದರು. ವಿವಿಧೆಡೆ ಮರ ಉರುಳಿದ್ದು, ಸಂಚಾರ ವ್ಯತ್ಯಯಗೊಂಡಿತ್ತು.

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆಆರ್‌ಎಸ್*	124.80	123.80	71,413	86,454
ಹಾರಂಗಿ	2,859	2,854	15,020	15,000
ಕಬಿನಿ	2,284	2,283	34,200	38,000
ಹೇಮಾವತಿ	2,922	2,920.30	33,164	35,350
ಲಿಂಗನಮಕ್ಕಿ	1,819	1,787.30	56,138	-
ಸೂಪಾ (ಮೀ)	564	534.60	32,388	-
ವಾಣಿ	595	580.70	9,606	-
ತುಂಗಭದ್ರಾ(ಅಡಿ)	1,633	1,631.24	1,18,183	1,14,823
ಮಲಪ್ರಭಾ	2,079.50	2,061.00	12,393	194
ಘಟಪ್ರಭಾ	2,175	2,127.70	18,576	119
ಭದ್ರಾ	186	183.2	43,051	40,000
ಆಲಮಟ್ಟಿ (ಮೀ)	519.60	517.28	1,21,472	1,25,000
ನಾರಾಯಣಪುರ (ಮೀ)	492.25	491.24	1,30,00	1,33,188

*ನೆಲಮಟ್ಟದಿಂದ

ಮಳೆ: ಎಲ್ಲಿ, ಎಷ್ಟು?

ಸೆಂಟಿ ಮೀಟರ್‌ಗಳಲ್ಲಿ	
ಶಿವಮೊಗ್ಗ ಜಿಲ್ಲೆ	
ಯಡೂರು	21.7
ಹುಲಿಕಲ್	21.6
ಮಾಸ್ತಿಕಟ್ಟೆ	21.2
ಬೆಳಗಾವಿ ಜಿಲ್ಲೆ	
ಕಣಕುಂಬಿ	15.2
ಉತ್ತರ ಕನ್ನಡ ಜಿಲ್ಲೆ	
ಕೊಡಸಳ್ಳಿ	12
ಕದ್ರಾ	10.3
ಸೂಪಾ	9.1
ಕೊಡಗು ಜಿಲ್ಲೆ	
ಬೆಟ್ಟದಹಳ್ಳಿ	20
ಭಾಗಮಂಡಲ	16
ಚೌಡ್ಲು	12
ಟಿ.ಶೆಟ್ಟಿಗೇರಿ	14
ಚಿಕ್ಕಮಗಳೂರು ಜಿಲ್ಲೆ	
ಕಿಗ್ಗಾ	20.5
ಹೊಸಕೆರೆ	17.3
ಕಮ್ಮರಡಿ	15.5
ಕೊಟ್ಟಿಗೆಹಾರ	15.4

ಸುದ್ದಿ 2 ನಿಮಿಷ

ಟ್ವೀಟ್‌ಗೆ ರಿಟ್ವೀಟ್ ಮೂಲಕವೇ ಉತ್ತರ: ಆನಂದ್ ಸಿಂಗ್

ಹೊಸಪೇಟೆ (ವಿಜಯನಗರ): 'ಪಂಪಾ ಸರೋವರ ನಮ್ಮ ರಾಜ್ಯದಲ್ಲಿದೆ' ಎಂದು ಟ್ವೀಟ್ ಮಾಡಿರುವ ಗುಜರಾತ್ ಪ್ರವಾಸೋದ್ಯಮ ಇಲಾಖೆಗೆ, ನಮ್ಮ ಇಲಾಖೆಯ ರಿಟ್ವೀಟ್ ಮೂಲಕವೇ ಉತ್ತರಿಸಲಿದೆ ಎಂದು ಪ್ರವಾಸೋದ್ಯಮ ಸಚಿವ ಆನಂದ್ ಸಿಂಗ್ ಹೇಳಿದರು.

ತುಂಗಭದ್ರಾ ಜಲಾಶಯಕ್ಕೆ ಗುರುವಾರ ಬಾಗಿನ ಸಮರ್ಪಿಸಿದ ನಂತರ ಮಾಧ್ಯಮದವರ ಪ್ರಶ್ನೆಗೆ ಮೇಲಿನಂತೆ ಪ್ರತಿಕ್ರಿಯಿಸಿದರು.

'ಅಂಜನೇಯನ ಜನ್ಮಸ್ಥಳ ತಿರುಮಲ, ಪಂಪಾ ಸರೋವರ ಗುಜರಾತ್ ನಲ್ಲಿದೆ' ಎಂದು ಹೇಳಿ ವಿವಾದ ಸೃಷ್ಟಿಸುತ್ತಿರುವ ಬಗ್ಗೆ ಮಾಧ್ಯಮದವರ ಪ್ರಶ್ನೆಗೆ ಈ ಮಾತು ಹೇಳಿದರು.

'ಜಾಲತಾಣಗಳಲ್ಲಿ ಬರುವ ವಿಚಾರಗಳಿಗೆ ನಾನು ಹೆಚ್ಚು ಪ್ರತಿಕ್ರಿಯಿಸುವುದಿಲ್ಲ. ಪಂಪಾ ಸರೋವರ ಹಂಪಿ ಹತ್ತಿರವಿರುವುದು ಎಲ್ಲರಿಗೂ ಗೊತ್ತಿದೆ. ಗುಜರಾತ್ ಪ್ರವಾಸೋದ್ಯಮ ಇಲಾಖೆ ಟ್ವೀಟ್ ಮಾಡಿರುವುದರಿಂದ ರಿಟ್ವೀಟ್ ಮೂಲಕ ಉತ್ತರಿಸುತ್ತೇವೆ' ಎಂದು ಅವರು ಹೇಳಿದರು.

ಬಿಜೆಪಿಯನ್ನು ಅಧಿಕಾರಕ್ಕೆ ತಂದಿದ್ದಕ್ಕೆ ಪಶ್ಚಾತಾಪ: ಪ್ರಮೋದ್ ಮುತಾಲಿಕ್

ಹೊಸಪೇಟೆ (ವಿಜಯನಗರ): 'ಬಿಜೆಪಿಯನ್ನು ಬೆಂಬಲಿಸಿ ಅಧಿಕಾರಕ್ಕೆ ತಂದಿದ್ದಕ್ಕೆ ಈಗ ಪಶ್ಚಾತಾಪವಾಗುತ್ತಿದೆ' ಎಂದು ಶ್ರೀರಾಮ ಸೇನೆ ರಾಷ್ಟ್ರೀಯ ಅಧ್ಯಕ್ಷ ಪ್ರಮೋದ್ ಮುತಾಲಿಕ್ ಬೇಸರ ವ್ಯಕ್ತಪಡಿಸಿದರು.

'ಹಿಂದೂಗಳ ಪಕ್ಷ ಅಂದುಕೊಂಡು ಆ ಪಕ್ಷವನ್ನು ಬೆಂಬಲಿಸಿ ಅಧಿಕಾರಕ್ಕೆ ತರಲು ಶ್ರಮಿಸಿದ್ದೆವು. ಎಲ್ಲ ಹಿಂದೂಗಳ ಪರಿಶ್ರಮದಿಂದ ಬಿಜೆಪಿ ಅಧಿಕಾರಕ್ಕೆ ಬಂದಿದೆ. ಆದರ್ಶ, ಬಡ ಹಿಂದೂಗಳ ಸಂಕಷ್ಟಕ್ಕೆ ಸ್ಪಂದಿಸುತ್ತಾರೆ ಎಂಬ ಭರವಸೆ ಇತ್ತು. ಆದರೆ, ಬಿಜೆಪಿ ದಾರಿ ತಪ್ಪಿದೆ. ಹಿಂದೂಗಳಿಗೆ ಅನ್ಯಾಯವಾಗುತ್ತಿದ್ದರೂ ಏನು ಮಾಡುತ್ತಿಲ್ಲ. ಹಿಂದೂ ಕಾರ್ಯಕರ್ತರ ಹತ್ಯೆ ತಡೆಯುತ್ತಿಲ್ಲ' ಎಂದು ಗುರುವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ದೂರಿದರು.

'ಹರ್ಷನ ಹತ್ಯೆ ನಡೆದು ಹಲವು ತಿಂಗಳಾಗಿವೆ. ಬಂಧಿತರಿಗೆ ಬೇಗ ಶಿಕ್ಷೆ ಕೊಡುವುದನ್ನು ಬಿಟ್ಟು ಜೈಲಿನಲ್ಲಿ ಬಿರಿಯಾನಿ ಕೊಟ್ಟು ಸಾಕುತ್ತಿದ್ದಾರೆ. ಬಿಜೆಪಿ ಸರ್ಕಾರ ಕತ್ತೆ ಕಾಯ್ತಾ ಇದೆಯಾ? ಗೃಹ ಸಚಿವರು ಸರಿ ಇಲ್ಲ' ಎಂದು ಟೀಕಿಸಿದರು.

ಮಳೆ: ಕಾಂಪೌಂಡ್ ಕುಸಿದು ಮೂವರ ಸಾವು

ಅಹಮದಾಬಾದ್/ಹೈದರಾಬಾದ್/ಮುಂಬೈ/ಪುಣೆ (ಪಿಟಿಐ): ಮಹಾರಾಷ್ಟ್ರ, ಗುಜರಾತ್, ತೆಲಂಗಾಣ ಹಾಗೂ ಕೇರಳದಲ್ಲಿ ಮಳೆ ಮುಂದುವರಿದಿದ್ದು, ಹಲವೆಡೆ ಭೂಕುಸಿತ ಉಂಟಾಗಿದೆ. ಹಲವರು ಮಳೆ ನೀರಿನಲ್ಲಿ ಕೊಚ್ಚಿಕೊಂಡು ಹೋಗಿದ್ದಾರೆ. ರಸ್ತೆಗಳು ಜಲಾವೃತಗೊಂಡಿರುವುದರಿಂದ ವಾಹನ ಸಂಚಾರ ಅಸ್ತವ್ಯಸ್ತಗೊಂಡಿದೆ.

ಅಹಮದಾಬಾದ್‌ನ ಹೊರವಲಯದಲ್ಲಿರುವ ಒಗ್ನಾಜ್ ಪ್ರದೇಶದಲ್ಲಿ ಫಾರ್ಮ್‌ಹೌಸ್‌ವೊಂದರ ಕಾಂಪೌಂಡ್ ಶೆಡ್ ಮೇಲೆ ಕುಸಿದುಬಿದ್ದಿದ್ದರಿಂದ ಮೂವರು ಮೃತಪಟ್ಟಿದ್ದಾರೆ.

'ಮೃತರನ್ನು ಶೀತಲ್ ಥಂಗಾ (16), ವನಿತಾ ಮಿಥಿಯಾ (19) ಹಾಗೂ ಅಸ್ಮಿತಾ ಸಗೋದ್ (22) ಎಂದು ಗುರುತಿಸಲಾಗಿದೆ. ರಿಂಕು ಮಿಥಿಯಾ (19) ಮತ್ತು ಕವಿತಾ ಥಂಗಾ (35) ಎಂಬುವರು ಗಂಭೀರವಾಗಿ ಗಾಯಗೊಂಡಿದ್ದಾರೆ' ಎಂದು ಅಧಿಕಾರಿಯೊಬ್ಬರು ಮಾಹಿತಿ ನೀಡಿದ್ದಾರೆ.

ತೆಲಂಗಾಣದ ಕುಮುರಂ ಭೀಮ್ ಆಸೀಫಾಬಾದ್ ಜಿಲ್ಲೆಯಲ್ಲಿ ರಕ್ಷಣಾ ಕಾರ್ಯದಲ್ಲಿ ತೊಡಗಿದ್ದ ಇಬ್ಬರು ನೀರು ಪಾಲಾಗಿದ್ದಾರೆ.

ತೆಲಂಗಾಣದಲ್ಲಿ 19 ಸಾವಿರಕ್ಕೂ ಅಧಿಕ ಮಂದಿಯನ್ನು ಪ್ರವಾಹ ಪೀಡಿತ ಪ್ರದೇಶಗಳಿಂದ ಸ್ಥಳಾಂತರಿಸಲಾಗಿದೆ.

ಮಹಾರಾಷ್ಟ್ರದ ನಾಗಪುರದ ಗಡಚಿರೌಲಿ ಜಿಲ್ಲೆಯ ಹಲವೆಡೆ ಪ್ರವಾಹ ಸ್ಥಿತಿ ನಿರ್ಮಾಣವಾಗಿದೆ. 29 ಗ್ರಾಮಗಳಿಂದ 3 ಸಾವಿರಕ್ಕೂ ಅಧಿಕ ನಾಗರಿಕರನ್ನು ಸ್ಥಳಾಂತರಿಸಲಾಗಿದೆ.

ಜಮ್ಮು ಮತ್ತು ಕಾಶ್ಮೀರದ ರಿಯಾಸಿ ಜಿಲ್ಲೆಯ ಥಿಲ್ಲು–ಕಲದ್ ಗ್ರಾಮದಲ್ಲಿ ಭೂಕುಸಿತ ಉಂಟಾಗಿದ್ದು, ಮೊಹಮ್ಮದ್ ಶಫಿ (65) ಹಾಗೂ ಅವರ ಮಗ ಅಬ್ದುಲ್ ರಶೀದ್ (30) ಮೃತಪಟ್ಟಿದ್ದಾರೆ.

- ಮಳೆಯಿಂದಾಗಿ ಊಟಿಯ ಹಲವೆಡೆ ಮರಗಳು ಉರುಳಿ ಸಂಚಾರ ಅಸ್ತವ್ಯಸ್ತ. ಚಳಿಯ ವಾತಾವರಣ ಸೃಷ್ಟಿ.
- ಮಹಾರಾಷ್ಟ್ರದ ತಾನ್ಸಾ ಜಲಾಶಯ ಭರ್ತಿ.
- ಮಹಾರಾಷ್ಟ್ರದ ಪಾಲ್ಘರ್‌ನಲ್ಲಿ ಭಾರಿ ಮಳೆ. ಮುಂಬೈ–ಅಹಮದಾಬಾದ್ ಹೆದ್ದಾರಿಯಲ್ಲಿ ಸಂಚಾರ ದಟ್ಟಣೆ.

ಕುಲು ಜಿಲ್ಲೆಯ ನಿರ್ಮಂಡ್‌ನಲ್ಲಿ ಗುರುವಾರ ಸಂಭವಿಸಿದ ಭೂಕುಸಿತದಲ್ಲಿ ವಾಹನ ನುಜ್ಜುಗುಜ್ಜಾಗಿದ್ದು, ಹಲವು ವಾಹನಗಳಿಗೆ ಹಾನಿಯಾಗಿದೆ – ಪಿಟಿಐ ಚಿತ್ರ

ಸುಳ್ಳು ಪತ್ತೆ ಮಾಡಿ: ಸಿದ್ದರಾಮಯ್ಯ

ಕಲಬುರಗಿ: 'ಪಿಎಸ್‌ಐ ನೇಮಕಾತಿ ಅಕ್ರಮದಲ್ಲಿ ಸಿಐಡಿ ಅಧಿಕಾರಿಗಳು ಬಂಧಿಸಿರುವ ನೇಮಕಾತಿ ವಿಭಾಗದ ಎಡಿಜಿಪಿಯಾಗಿದ್ದ ಅಮ್ರಿತ್ ಪೌಲ್ ಅವರನ್ನು ಸುಳ್ಳು ಪತ್ತೆ ಪರೀಕ್ಷೆಗೆ ಒಳಪಡಿಸಬೇಕು. ಆಗ ಈ ಅಕ್ರಮದಲ್ಲಿ ಯಾರೆಲ್ಲ ರಾಜಕಾರಣಿಗಳು ಶಾಮೀಲಾಗಿದ್ದಾರೆ ಎಂಬುದು ಗೊತ್ತಾಗಲಿದೆ' ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ತಿಳಿಸಿದರು. 'ಅಕ್ರಮದಲ್ಲಿ ಹಲವು ಸಚಿವರು, ಅವರ ಆಪ್ತರು ಶಾಮೀಲಾದ ಬಗ್ಗೆ ಸಂದೇಹಗಳಿವೆ. ಈ ಪ್ರಕರಣ ಮುಚ್ಚಿ ಹಾಕಲು ಪ್ರಯತ್ನಿಸಬಾರದು' ಎಂದರು.

ಗುಲಬರ್ಗಾ ವಿದ್ಯುಚ್ಛಕ್ತಿ ಸರಬರಾಜು ಕಂಪನಿ ನಿಯಮಿತ
(ಸಂಪೂರ್ಣ ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)
ಪ್ರಧಾನ ಕಚೇರಿ, ರೇಲ್ವೆ ಸ್ಟೇಷನ್ ಮುಖ್ಯ ರಸ್ತೆ, ಕಲಬುರಗಿ–585 102, ದೂ: 08472–256900
ಸಂಖ್ಯೆ: ಜೆಸ್ಕಾಂ/ಮುಅ/ಅಅ/ಕಾನಿಅ(ವಿ)/ಎಮ್‌ಆರ್‌ಟಿ–ಎಲ್‌ಡಿಸಿ/ಸಕಾನಿಅ(ಕ)/2022–23/19066–80 ದಿ:13/07/2022
ಅಲ್ಪಾವಧಿ ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ವಿಧಾನದ ಮೂಲಕ)
ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಈ ಕೆಳಗೆ ವಿವರಿಸಿದ ಅಲ್ಪಾವಧಿ ಟೆಂಡರನ್ನು ಕರೆಯಲಾಗಿದೆ.
1) ಟೆಂಡರ್ ಸಂಖ್ಯೆ : **ಜೆಸ್ಕಾಂ/ಮುಅ/ಅಅ/ಕಾನಿಅ(ವಿ)/ಎಮ್‌ಆರ್‌ಟಿ–ಎಲ್‌ಡಿಸಿ/ಸಕಾನಿಅ(ಕ)/2022–23/ ಎಮ್‌ಆರ್‌ಟಿ–04/12–07–2022,** 2) ವಿವರಣೆ : ಗುವಿಸಕಂನಿ ವ್ಯಾಪ್ತಿಯ ವಿವಿಧ 33/11 ಕೆವಿ ವಿದ್ಯುತ್ ಉಪಕೇಂದ್ರಗಳಲ್ಲಿರುವ ವಿಫಲಗೊಂಡ 10 ಸಂಖ್ಯೆಗಳು 5 ಎಮ್‌ವಿಎ ವಿದ್ಯುತ್ ಪರಿವರ್ತಕಗಳನ್ನು ಶೇಕಡಾವಾರು ಆಧಾರದ ಮೇಲೆ ಎರಡು ವರ್ಷಗಳ ದರ ಒಪ್ಪಂದದ ಪ್ರಕಾರ ದುರಸ್ತಿ ಕೈಗೊಳ್ಳುವ ಕುರಿತು.
ಹೆಚ್ಚಿನ ವಿವರಗಳಿಗಾಗಿ www.eproc.karnataka.gov.in ಅಂತರ್ಜಾಲದಲ್ಲಿ ದಿನಾಂಕ: **15–07–2022** ರಂದು ಅಥವಾ ನಂತರ ಪಡೆಯಬಹುದು.
ಸಹಿ/– ಮುಖ್ಯ ಅಭಿಯಂತರರು (ವಿದ್ಯುತ್),
ಕಾರ್ಯ, ನಿಗಮ ಕಚೇರಿ, ಗುವಿಸಕಂನಿ, ಕಲಬುರಗಿ
ವಾ.ಸಾ.ಸಂ.ಇ/ಕಲಬುರಗಿ/368/ಎಂ.ಸಿ&ಎ/2022–23

ಡಿ. ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)
ದೇವರಾಜ ಅರಸು ಭವನ, 4ನೇ ಮಹಡಿ, ನಂ. 16–ಡಿ, ಮಿಲ್ಲರ್ ಟ್ಯಾಂಕ್ ಬೆಡ್ ಏರಿಯಾ, ವಸಂತನಗರ, ಬೆಂಗಳೂರು – 560 052.
ಸಂಖ್ಯೆ: ದೇಹಿನಿ/ಸ/ಅ.ಮ/ಸಿಆರ್–01/2022–23 ದಿನಾಂಕ:13.07.2022
ಪ್ರಕಟಣೆ
ಡಿ. ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದಿಂದ 2022–23ನೇ ಸಾಲಿಗೆ ಸ್ವಾತಂತ್ರ್ಯ ಅಮೃತ ಮಹೋತ್ಸವ ಮುನ್ನಡೆ ಯೋಜನೆಯಡಿ ಕೌಶಲ್ಯ ಕರ್ನಾಟಕ ತಂತ್ರಾಂಶದ ಮುಖಾಂತರ ಆನ್‌ಲೈನ್ ಅರ್ಜಿ ಆಹ್ವಾನಿಸಲಾಗಿದೆ.
ಸ್ವಾತಂತ್ರ್ಯ ಅಮೃತ ಮಹೋತ್ಸವ ಮುನ್ನಡೆ ಯೋಜನೆ
ಡಿ. ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ, ಕರ್ನಾಟಕ ಅಲೆಮಾರಿ ಮತ್ತು ಅರೆ ಅಲೆಮಾರಿ ಅಭಿವೃದ್ಧಿ ನಿಗಮ, ಕರ್ನಾಟಕ ಮಡಿವಾಳ ಮಾಚಿದೇವ ಅಭಿವೃದ್ಧಿ ನಿಗಮ, ಕರ್ನಾಟಕ ಸವಿತಾ ಸಮಾಜ ಅಭಿವೃದ್ಧಿ ನಿಗಮ, ಕರ್ನಾಟಕ ವಿಶ್ವಕರ್ಮ ಸಮುದಾಯಗಳ ಅಭಿವೃದ್ಧಿ ನಿಗಮ, ಕರ್ನಾಟಕ ಉಪ್ಪಾರ ಅಭಿವೃದ್ಧಿ ನಿಗಮ ಹಾಗೂ ನಿಜಶರಣ ಅಂಬಿಗರ ಚೌಡಯ್ಯ ಅಭಿವೃದ್ಧಿ ನಿಗಮಗಳ ವ್ಯಾಪ್ತಿಗೆ ಒಳಪಡುವ **(ಒಕ್ಕಲಿಗ, ಲಿಂಗಾಯತ, ಕಾಡುಗೊಲ್ಲ, ಹಟ್ಟಿಗೊಲ್ಲ ಮತ್ತು ಮರಾಠ ನಿಗಮದಡಿಯಲ್ಲಿ ಬರುವ ಸಮುದಾಯಗಳನ್ನು ಹೊರತುಪಡಿಸಿ)** ಹಿಂದುಳಿದ ವರ್ಗಗಳ ಯುವ ಜನರಿಗೆ ಕೌಶಲ್ಯ ಅಭಿವೃದ್ಧಿಪಡಿಸಿ ಉದ್ಯೋಗಮುಖಿಯನ್ನಾಗಿಸಲು ಸರ್ಕಾರದ ಸಂಸ್ಥೆಗಳಾದ **ITIs, GTTC, KGTTI** ರಲ್ಲಿ ಅಲ್ಪಾವಧಿ ಕೊರ್ಸುಗಳ ಮೂಲಕ ಕೌಶಲ್ಯ ತರಬೇತಿ ನೀಡಲು **ಕೌಶಲ್ಯ ಕರ್ನಾಟಕ ತಂತಾಂಶದ** ಮೂಲಕ ಅರ್ಜಿಗಳನ್ನು ಆಹ್ವಾನಿಸಲಾಗಿದೆ.
ಅರ್ಹತೆಗಳು: 10ನೇ ತರಗತಿ / ದ್ವಿತೀಯ ಪಿ.ಯು.ಸಿ. / ಡಿಪ್ಲೋಮ / ಪದವಿ / ಇಂಜಿನಿಯರಿಂಗ್ ವ್ಯಾಸಂಗವನ್ನು ಪೂರ್ಣಗೊಳಿಸಿರಬೇಕು, ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಜಾತಿ ಪಟ್ಟಿಯಲ್ಲಿ ನಮೂದಿಸಿದ ಮೇಲ್ಕಂಡ ನಿಗಮಗಳ ವ್ಯಾಪ್ತಿಗೆ ಒಳಪಡುವ ಜಾತಿಗಳಿಗೆ ಸೇರಿದವರಾಗಿರಬೇಕು. ಅರ್ಜಿದಾರರ ವಯಸ್ಸು **18 ರಿಂದ 25 ವರ್ಷಗಳ** ಒಳಗಿರಬೇಕು. **ಪ್ರವರ್ಗ–1ಕ್ಕೆ** ಸೇರಿದ ಅಭ್ಯರ್ಥಿಗಳಿಗೆ ಕುಟುಂಬದ ವಾರ್ಷಿಕ ವರಮಾನ/ಆದಾಯ ಮಿತಿ ಇರುವುದಿಲ್ಲ. **ಪ್ರವರ್ಗ–2ಎ,3ಎ ಮತ್ತು 3ಬಿಗೆ** ಸೇರಿದ ಅರ್ಜಿದಾರರ ಕುಟುಂಬದ ವಾರ್ಷಿಕ ವರಮಾನ/ಆದಾಯ ರೂ.8.00 ಲಕ್ಷಗಳಿಗಿಂತ ಕಡಿಮೆ ಇರಬೇಕು.
ಅರ್ಜಿದಾರರು **https://kaushalkar.com** ಜಾಲತಾಣದೊಂದಿಗೆ ಅರ್ಜಿಯನ್ನು ಸಲ್ಲಿಸಬಹುದು ಅಥವಾ ಮೇಲ್ಕಂಡ ನಿಗಮಗಳ ಈ ಕೆಳಕಂಡ ವೆಬ್‌ಸೈಟ್‌ಗಳನ್ನು ಸಂಪರ್ಕಿಸುವುದು.
https://dbcdc.karnataka.gov.in : (ಡಿ.ದೇವರಾಜ ಅರಸು ಅಭಿವೃದ್ಧಿ ನಿಗಮ),
https://kaad.karnataka.gov.in : (ಅಲೆಮಾರಿ ಅಭಿವೃದ್ಧಿ ನಿಗಮ),
https://kssd.karnataka.gov.in : (ಸವಿತಾ ಸಮಾಜ ಅಭಿವೃದ್ಧಿ ನಿಗಮ),
https://kmmd.karnataka.gov.in : (ಮಡಿವಾಳ ಅಭಿವೃದ್ಧಿ ನಿಗಮ),
https://uppardevelopment.karnataka.gov.in : (ಉಪ್ಪಾರ ಅಭಿವೃದ್ಧಿ ನಿಗಮ),
https://kvcdcl.karnataka.gov.in : (ವಿಶ್ವಕರ್ಮ ಅಭಿವೃದ್ಧಿ ನಿಗಮ),
https://ambigaradevelopment.karnataka.gov.in: (ನಿಜಶರಣ ಅಂಬಿಗರ ಚೌಡಯ್ಯ ಅಭಿವೃದ್ಧಿ ನಿಗಮ),
ಹೆಚ್ಚಿನ ಮಾಹಿತಿಗಾಗಿ ನಿಗಮದ ಕೇಂದ್ರ ಕಛೇರಿಯ ದೂರವಾಣಿ/ಸಹಾಯವಾಣಿ ಸಂಖ್ಯೆ: 080–22374832, 9606066389 ಮತ್ತು 8824300400 ಅಥವಾ ಆಯಾ ಜಿಲ್ಲಾ ಕಛೇರಿಯ ದೂರವಾಣಿ ಸಂಖ್ಯೆಗಳನ್ನು ವೆಬ್‌ಸೈಟ್‌ನಲ್ಲಿ ನೀಡಲಾಗಿರುತ್ತದೆ. ಆನ್‌ಲೈನ್ ಮೂಲಕ ಭರ್ತಿ ಮಾಡಿದ ಅರ್ಜಿಗಳನ್ನು ಅಗತ್ಯ / ದಾಖಲೆಗಳೊಂದಿಗೆ **ದಿನಾಂಕ: 14.07.2022 ರಿಂದ ದಿನಾಂಕ: 29.08.2022 ರೊಳಗೆ** ಸಲ್ಲಿಸಲು ಅವಕಾಶವಿರುತ್ತದೆ.
ಸೂಚನೆ: ಆನ್‌ಲೈನ್ ಮುಖಾಂತರ ಅರ್ಜಿ ಸಲ್ಲಿಸಲು ಯಾವುದೇ ಶುಲ್ಕ ಪಾವತಿಸುವಂತಿಲ್ಲ. ಸಂಬಂಧಪಟ್ಟ ಜಿಲ್ಲೆಗಳ ಜಿಲ್ಲಾ ವ್ಯವಸ್ಥಾಪಕರ ಕಛೇರಿ, ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದ ಕಛೇರಿಯ ಅವಧಿಯಲ್ಲಿ ಉಚಿತವಾಗಿ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸುವ ವ್ಯವಸ್ಥೆ ಇರುತ್ತದೆ.
ಸಹಿ/–
(ವಿ. ರವಿ)
ವ್ಯವಸ್ಥಾಪಕ ನಿರ್ದೇಶಕರು
ವಾಸಾಸಂಇ/ವಾಪ್ರ/ಜಗದಾಳೆ ಅಡ್ವರ್ಟೈಸಿಂಗ್/1364/2022–23
ಕೋವಿಡ್-19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಆರೋಪಿಗಳ ಜಾಮೀನು ಅರ್ಜಿ ವಿಚಾರಣೆ; ಹೈಕೋರ್ಟ್ ಕಳವಳ

'ಪಿಎಸ್‌ಐ ಅಕ್ರಮ ಭಯೋತ್ಪಾದನೆ ಇದ್ದಂತೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪೊಲೀಸ್ ಸಬ್ ಇನ್‌ಸ್ಪೆಕ್ಟರ್ (ಪಿಎಸ್‌ಐ) ನೇಮಕಾತಿ ಹಗರಣ ಸಮಾಜದ ಮೇಲೆ ನಡೆದಿರುವ ಭಯೋತ್ಪಾದನೆ. ಸರ್ಕಾರಿ ನೇಮಕಾತಿಯಂತಹ ಮಹತ್ವದ ಪರೀಕ್ಷೆಯಲ್ಲಿ ನಡೆದಿರುವ ಅಕ್ರಮದಿಂದ ಇವತ್ತು ಕನಿಷ್ಠವೆಂದರೂ 50 ಸಾವಿರ ಜನ ತೊಂದರೆ ಅನುಭವಿಸುತ್ತಿದ್ದಾರೆ' ಎಂದು ಹೈಕೋರ್ಟ್ ಕಳವಳ ವ್ಯಕ್ತಪಡಿಸಿದೆ.

ಹಗರಣಕ್ಕೆ ಸಂಬಂಧಿಸಿದಂತೆ ನ್ಯಾಯಾಂಗ ಬಂಧನದಲ್ಲಿರುವ ಸಿ.ಎನ್. ಶಶಿಧರ್ ಸೇರಿದಂತೆ ಮೂರಕ್ಕೂ ಹೆಚ್ಚು ಆರೋಪಿಗಳು ನಿಯಮಿತ (ರೆಗ್ಯುಲರ್) ಹಾಗೂ ಒಬ್ಬ ಆರೋಪಿಯು ನಿರೀಕ್ಷಣಾ ಜಾಮೀನು ಕೋರಿ ಸಲ್ಲಿಸಿದ್ದ ಅರ್ಜಿಗಳನ್ನು ನ್ಯಾಯಮೂರ್ತಿ ಎಚ್.ಪಿ.ಸಂದೇಶ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಗುರುವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಆರೋಪಿ ಪರ ವಕೀಲರು, 'ಹಗರಣದಲ್ಲಿ ಆರೋಪಿಗಳನ್ನು ವೃತ್ತಿ ಮತ್ತು ವೈಯಕ್ತಿಕ ದ್ವೇಷದಿಂದ ವೃಥಾ ಸಿಲುಕಿಸಲಾಗಿದೆ. ಇದೇನೂ ಕೊಲೆ ಪ್ರಕರಣ ಅಲ್ಲ. ಆದ್ದರಿಂದ, ಜಾಮೀನು ನೀಡಬೇಕು' ಎಂದು ಕೋರಿದರು.

ಇದಕ್ಕೆ ತೀಕ್ಷ್ಣವಾಗಿ ಪ್ರತಿಕ್ರಿಯಿಸಿದ ನ್ಯಾಯಪೀಠ, 'ಈ ಹಗರಣ ಕೊಲೆಗಿಂತಲೂ ಮಿಗಿಲಾದದ್ದು, ಕೊಲೆ ಆದರೆ ಒಬ್ಬನ ಪ್ರಾಣ ಹೋಗಿರುತ್ತದೆ ಎನ್ನಬಹುದು. ಆದರೆ, ಈ ಹಗರಣದಲ್ಲಿ ಕನಿಷ್ಠ 50 ಸಾವಿರ ಜನ ತೊಂದರೆ ಎದುರಿಸುತ್ತಿದ್ದಾರೆ. ಇದು ಸಮಾಜದ ಮೇಲೆ ನಡೆದಿರುವ ಭಯೋತ್ಪಾದನಾ ದಾಳಿಯಿದ್ದಂತೆ' ಎಂದು ತಿರುಗೇಟು ನೀಡಿತು.

ಇದೇ ವೇಳೆ ಪ್ರಾಸಿಕ್ಯೂಷನ್ ಪರ ಬಲವಾಗಿ ವಾದ ಮಂಡಿಸಿದ ರಾಜ್ಯ ಪಬ್ಲಿಕ್ ಪ್ರಾಸಿಕ್ಯೂಟರ್–2 ವಿ.ಎಸ್. ಹೆಗಡೆ, 'ಪ್ರಾಸಿಕ್ಯೂಷನ್ ತನಿಖೆಯನ್ನು ಅತ್ಯಂತ ವೈಜ್ಞಾನಿಕವಾಗಿ ಮತ್ತು ನಿಖರವಾದ ತಳಹದಿಗಳ ಮೇಲೆ ನಡೆಸುತ್ತಿದೆ. ಇದರಲ್ಲಿ ನೀತಿಗೆಟ್ಟ ಆರೋಪಿಗಳ ದಂಡೇ ಇದೆ. ನ್ಯಾಯಪೀಠ ಯಾವುದೇ ಕಾರಣಕ್ಕೂ ಆರೋಪಿಗಳ ಬಗ್ಗೆ ಕನಿಕರ ತೋರಬಾರದು' ಎಂದು ಮನವಿ ಮಾಡಿದರು.

'ಹಗರಣದಲ್ಲಿನ ಫಲಾನುಭವಿಗಳಲ್ಲಿ ಅಂಕ ಪಡೆದ ಅಭ್ಯರ್ಥಿಗಳು, ಹಣ ಸಂಗ್ರಹಿಸಿ ತಲುಪಬೇಕಾದವರಿಗೆ ತಲುಪಿಸಲು ಸಹಕರಿಸಿದ ದಲ್ಲಾಳಿಗಳು, ಪೊಲೀಸ್ ಅಧಿಕಾರಿಗಳು ಇದ್ದಾರೆ. ಅದರಲ್ಲೂ ಎಡಿಜಿಪಿ ಹುದ್ದೆಯ ಅಧಿಕಾರಿಯೇ ಆರೋಪಿಯಾಗಿರುವುದು ಇದರ ಗಂಭೀರತೆಗೆ ಸಾಕ್ಷಿ. ತನಿಖೆಯ ದಿಕ್ಕೂ ಇನ್ನೂ ಎಲ್ಲಿಗಾದರೂ ಹೋಗಿ ತಲುಪಬಹುದು' ಎಂದು ಮಾರ್ಮಿಕವಾಗಿ ವಿವರಿಸಿದರು.

'ತನಿಖಾ ಸಂಸ್ಥೆಗೆ ಯಾವುದನ್ನೂ ಮುಚ್ಚಿಡುವ ಅಗತ್ಯವಿಲ್ಲ. ಸಿಐಡಿಯ ಡಿಜಿಪಿ ಸ್ವತಃ ತನಿಖೆ ನಡೆಸುತ್ತಿದ್ದಾರೆ. ಇದೊಂದು ರೀತಿ ಬೇಲಿಯೇ ಎದ್ದು ಹೊಲ ಮೇಯ್ದದಂತಿದೆ. ಎಡಿಜಿಪಿ ಅಮ್ರಿತ್ ಪೌಲ್, ಇಬ್ಬರು ಡಿಎಸ್‌ಪಿ, ಮೂವರು ಪಿಎಸ್‌ಐ ಅಭ್ಯರ್ಥಿಗಳನ್ನು ಬಂಧಿಸಲಾಗಿದ್ದು, ಸಾವಿರಾರು ಫೋನ್ ಕರೆಗಳ ವಿಶ್ಲೇಷಣೆ ನಡೆಯಬೇಕಿದೆ. ಮೊಬೈಲ್‌ಗಳಲ್ಲಿರುವ ದತ್ತಾಂಶ ಸಂಗ್ರಹಣೆ ಬೃಹತ್ ಪ್ರಮಾಣದಲ್ಲಿದೆ. ಇದರ ಇತ್ಯೋಪರಿ, ಆಳ, ಅಗಲ ಅರಿಯಲು ಇನ್ನೂ ಒಂದು ತಿಂಗಳಾದರೂ ಬೇಕಾಗುತ್ತದೆ. ಪ್ರಕರಣದ ಗಂಭೀರತೆ, ಸ್ವರೂಪ, ಯಾರೆಲ್ಲಾ ಇದರಲ್ಲಿ ಭಾಗಿಯಾಗಿದ್ದಾರೆ ಎನ್ನುವುದರ ಜೊತೆ ಜೊತೆಗೇ ಭ್ರಷ್ಟಾಚಾರದ ಅಂಶವೂ ಇದರಲ್ಲಿ ಅಡಕವಾಗಿದೆ' ಎಂದರು.

'ಇಡೀ ಹಗರಣದಲ್ಲಿ ಒಂದು ಘಟನೆ ಮತ್ತೊಂದು ಘಟನೆಯ ಬಾಗಿಲು ತೆರೆಯುತ್ತಾ ಹೋಗುತ್ತಿದ್ದು, ಇದರ ಹಿಂದೆ ಬಹುದೊಡ್ಡ ವ್ಯೂಹವೇ ಕಾರ್ಯನಿರ್ವಹಿಸಿರುವುದು ಬೆಳಕಿಗೆ ಬರುತ್ತಿದೆ. ಹಣ ಯಾರಿಂದ ಯಾರಿಗೆ ತಲುಪಿದೆ, ಆರೋಪಿಗಳು ಯಾರ ಜೊತೆಗೆ ಸಂಪರ್ಕ ಹೊಂದಿದ್ದರು, ಸಾಕ್ಷಿಗಳು ಯಾರು ಎಂಬುದನ್ನೆಲ್ಲಾ ವಿವರವಾಗಿ ಪತ್ತೆ ಹಚ್ಚಬೇಕಿದೆ. ಒಎಂಆರ್ ಶೀಟ್‌ಗಳನ್ನು ತಿದ್ದಲಾಗಿದೆ ಹಾಗೂ ಪರೀಕ್ಷಾ ಹಾಲ್‌ನಲ್ಲಿ ನಡೆದಿರುವ ಅಕ್ರಮದ ಸಿಸಿಟಿವಿ ಫೂಟೇಜ್ ಕೂಡಾ ಲಭ್ಯವಿದೆ. ಈಗಾಗಲೇ ತನಿಖೆ ಕೊನೆಯ ಹಂತದಲ್ಲಿದ್ದು, ಈ ಹಂತದಲ್ಲಿ ಆರೋಪಿಗಳಿಗೆ ಜಾಮೀನು ನೀಡಬಾರದು' ಎಂದು ಕೋರಿದರು.

₹ 2.5 ಕೋಟಿ ವಶ: 'ತನಿಖೆಯಲ್ಲಿ ಎಷ್ಟು ಹಣವನ್ನು ವಶಕ್ಕೆ ಪಡೆಯಲಾಗಿದೆ' ಎಂಬ ನ್ಯಾಯಪೀಠದ ಪ್ರಶ್ನೆಗೆ ಉತ್ತರಿಸಿದ ಹೆಗಡೆ, 'ಈವರೆಗೆ ಒಟ್ಟು ₹2.5 ಕೋಟಿ ದೊರೆತಿದೆ' ಎಂದರು. ಕೋರ್ಟ್‌ನ ದಿನದ ಕಲಾಪದ ಅವಧಿ ಮೀರಿದ ಕಾರಣ ವಿಚಾರಣೆಯನ್ನು ಇದೇ 20ಕ್ಕೆ ಮುಂದೂಡಲಾಗಿದೆ. ಆರೋಪಿಗಳ ಪರ ಹಿರಿಯ ವಕೀಲ ಸಿ.ಎಚ್.ಜಾಧವ್, ಶಿವಸ್ವಾಮಿ ವಾದ ಮಂಡಿಸಿದರು.

'ನನ್ನದೂ ಒಂದು ಮನವಿಯಿದೆ'

ವಿಚಾರಣೆಯ ಅಂತ್ಯದಲ್ಲಿ ಕೇಶವಮೂರ್ತಿ ಎಂಬ ಹೆಸರಿನ ವ್ಯಕ್ತಿ ವಿಡಿಯೊ ಕಾನ್ಫರೆನ್ಸ್‌ನಲ್ಲಿ, 'ಮೈ ಲಾರ್ಡ್ ನಾನೂ ಪಿಎಸ್‌ಐ ಅಭ್ಯರ್ಥಿ. ನನ್ನದೂ ಒಂದು ಮನವಿ ಇದೆ ಕೇಳಿ' ಎಂದು ಕೋರಿದರು.

ಇದಕ್ಕೆ ನ್ಯಾಯಮೂರ್ತಿಗಳು, 'ನ್ಯಾಯಾಂಗ ಪ್ರಕ್ರಿಯೆಯಲ್ಲಿ ಈ ರೀತಿ ಏಕಾಏಕಿ ಮಧ್ಯಪ್ರವೇಶ ಮಾಡುವುದು ಸರಿಯಲ್ಲ. ನಿಮಗೆ ತೊಂದರೆ ಆಗಿದ್ದರೆ ಕೋರ್ಟ್‌ಗೆ ಅರ್ಜಿ ಸಲ್ಲಿಸಿ, ಪರಿಗಣಿಸಲಾಗುವುದು. ಎಲ್ಲಾ 50 ಸಾವಿರ ಅಭ್ಯರ್ಥಿಗಳನ್ನು ನಾನು ಕೇಳಲಿಕ್ಕಾಗುವುದಿಲ್ಲ ಎಂದರು.



ಇದೇ ವೇಳೆ ಒಂದಿಬ್ಬರು ಪುರುಷರು ವಿಡಿಯೊ ಕಾನ್ಫರೆನ್ಸ್‌ನಲ್ಲಿ ಬನಿಯನ್ ಧರಿಸಿ ಕಲಾಪ ವೀಕ್ಷಿಸುತ್ತಿರುವುದನ್ನು ಗಮನಿಸಿದ ನ್ಯಾಯಮೂರ್ತಿಗಳು 'ಇದೇನು ಉಪದ್ರವ, ಇದಕ್ಕೆ ಏನಾದರೂ ಮಾಡಿ' ಎಂದು ಕೋರ್ಟ್ ಆಫೀಸರ್ ಎನ್.ಆರ್. ಗೀತಾ ಅವರಿಗೆ ಸೂಚಿಸಿದರು.

ಇಂದು ಕೋರ್ಟ್‌ಗೆ ಪೌಲ್

ಪ್ರಕರಣದ ಆರೋಪಿಯಾಗಿರುವ ಎಡಿಜಿಪಿ ಅಮ್ರಿತ್ ಪೌಲ್ ಅವರು ಕಳೆದ ಹದಿಮೂರು ದಿನಗಳಿಂದ ಪೊಲೀಸ್ ಕಸ್ಟಡಿಯಲ್ಲಿದ್ದು, ಶುಕ್ರವಾರ (ಜುಲೈ 14) ಅವರನ್ನು ಮೊದಲನೇ ಎಸಿಎಂಎಂ ಕೋರ್ಟ್‌ನಲ್ಲಿ ಹಾಜರುಪಡಿಸಲಾಗುತ್ತಿದೆ.

ಮುಖ್ಯಾಂಶಗಳು

- 50 ಸಾವಿರ ಜನರಿಗೆ ತೊಂದರೆ: ಹೈಕೋರ್ಟ್ ಕಳವಳ
- ಎಚ್.ಪಿ.ಸಂದೇಶ್ ಅವರಿದ್ದ ಏಕಸದಸ್ಯ ಪೀಠ

'ಅಭ್ಯರ್ಥಿ ಪರಿಚಯಿಸಿ ₹5 ಲಕ್ಷ ಪಡೆದಿದ್ದ'

ಬೆಂಗಳೂರು: ಪೊಲೀಸ್ ಸಬ್ ಇನ್‌ಸ್ಪೆಕ್ಟರ್ (ಪಿಎಸ್‌ಐ) ನೇಮಕಾತಿ ಅಕ್ರಮ ಪ್ರಕರಣದಲ್ಲಿ ಮತ್ತೊಬ್ಬ ಪಿಎಸ್‌ಐ ಮನೋಜ್ ಎಂಬುವರನ್ನು ಸಿಐಡಿ ಪೊಲೀಸರು ಬಂಧಿಸಿದ್ದು, ವಿಚಾರಣೆಗಾಗಿ ಕಸ್ಟಡಿಗೆ ಪಡೆದುಕೊಂಡಿದ್ದಾರೆ.

'ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಆನಗೊಂಡನಹಳ್ಳಿ ಠಾಣೆ ಪಿಎಸ್‌ಐ ಆಗಿದ್ದ ಮನೋಜ್ ಅವರಿಗೆ ವಿಚಾರಣೆಗೆ ಬರುವಂತೆ ನೋಟಿಸ್ ನೀಡಲಾಗಿತ್ತು. ಆದರೆ, ಅವರು ವಿಚಾರಣೆಗೆ ಬಂದಿರಲಿಲ್ಲ. ಕೆಲಸಕ್ಕೂ ರಜೆ ಹಾಕಿ, ತಲೆಮರೆಸಿಕೊಂಡಿದ್ದರು' ಎಂದು ಸಿಐಡಿ ಮೂಲಗಳು ಹೇಳಿವೆ.

'ಮನೋಜ್ ಬಗ್ಗೆ ಮಾಹಿತಿ ಕಲೆಹಾಕಿದ್ದ ವಿಶೇಷ ತಂಡ, ಬುಧವಾರ ಅವರನ್ನು ಬಂಧಿಸಿದೆ. ಸದ್ಯ ಅವರನ್ನು ವಿಚಾರಣೆಗೆ ಗುರಿಪಡಿಸಲಾಗಿದೆ' ಎಂದೂ ತಿಳಿಸಿವೆ.

'ಪೊಲೀಸ್ ನೇಮಕಾತಿ ವಿಭಾಗದ ಡಿವೈಎಸ್ಪಿ ಶಾಂತಕುಮಾರ್ ಜೊತೆ ಒಡನಾಟ ಹೊಂದಿದ್ದ ಮನೋಜ್, ಅಭ್ಯರ್ಥಿಯೊಬ್ಬರನ್ನು ಪರಿಚಯ ಮಾಡಿಕೊಟ್ಟಿದ್ದರು. ಅದೇ ಅಭ್ಯರ್ಥಿಯ ಒಎಂಆರ್ ಪ್ರತಿ ತಿದ್ದುಪಡಿ ಮಾಡಿ, ಪಿಎಸ್‌ಐ ಹುದ್ದೆಗೆ ಆಯ್ಕೆ ಮಾಡಲಾಗಿತ್ತು. ಇದಕ್ಕಾಗಿ ಪಿಎಸ್‌ಐ ಮನೋಜ್ ಅವರಿಗೆ ₹ 5 ಲಕ್ಷ ಸಂದಾಯವಾಗಿತ್ತೆಂಬ ಮಾಹಿತಿ ಇದೆ. ದಾಖಲೆಗಳ ಪರಿಶೀಲನೆ ನಡೆಯುತ್ತಿದೆ' ಎಂದೂ ಮೂಲಗಳು ಹೇಳಿವೆ.

'ಪಕ್ಷದ ಚಿಹ್ನೆಯಡಿ ಸಿದ್ದರಾಮಯ್ಯ ಜನ್ಮ ದಿನ ಆಚರಿಸುತ್ತಿಲ್ಲ'

ದಾವಣಗೆರೆಯಲ್ಲಿ ಆಗಸ್ಟ್ 3ರಂದು ಆಯೋಜನೆಗೊಂಡಿರುವ 'ಸಿದ್ದರಾಮಯ್ಯ–75' ಅಮೃತ ಮಹೋತ್ಸವ 'ಸಿದ್ದರಾಮೋತ್ಸವ'ವಾಗಿ ಪ್ರಚಾರ ಪಡೆಯುತ್ತಿರುವುದಕ್ಕೆ ಅಪಸ್ವರ ಹುಟ್ಟಿಕೊಂಡ ಬೆನ್ನಲ್ಲೆ, ಈ ಸಮಾವೇಶ ಪಕ್ಷದ್ದೇ, ಪಕ್ಷಾತೀತವೇ ಎಂಬ ಗೊಂದಲ 'ಕೈ' ನಾಯಕರಲ್ಲಿಯೇ ಮೂಡಿದೆ. 'ಸಿದ್ದರಾಮೋತ್ಸವ' ಪದ ಬಳಕೆ ವ್ಯಕ್ತಿ ವೈಭವೀಕರಣವನ್ನು ಬಿಂಬಿಸುತ್ತದೆ ಎನ್ನುವ ಆಕ್ಷೇಪ ಕಾಂಗ್ರೆಸ್ ಒಳಗಿನ 'ಬಣ' ರಾಜಕೀಯವನ್ನು ಮುನ್ನೆಲೆಗೆ ತಂದಿದೆ.

ಬೆಂಗಳೂರು: 'ನಾವು ವ್ಯಕ್ತಿ ಪೂಜೆ ಮಾಡುತ್ತಿಲ್ಲ. ಪಕ್ಷದ ಚಿಹ್ನೆಯನ್ನು ಬಳಸಿ ಸಿದ್ದರಾಮಯ್ಯ ಅವರ ಜನ್ಮ ದಿನ ಆಚರಿಸುತ್ತಿಲ್ಲ. ಹೀಗಾಗಿ, ಬೇರೆ ಪ್ರಶ್ನೆ ಉದ್ಭವಿಸುವುದೇ ಇಲ್ಲ. ಪಕ್ಷವನ್ನು ಮುಜುಗರಕ್ಕೆ ಸಿಲುಕಿಸುವ, ತಪ್ಪು ಸಂದೇಶ ಕೊಡುವ ಉದ್ದೇಶವೂ ನಮ್ಮದಲ್ಲ' ಎಂದು ಅಮೃತ ಮಹೋತ್ಸವ ಸಮಿತಿಯ ಸ್ವಾಗತ ಸಮಿತಿಯ ಅಧ್ಯಕ್ಷ ಎಚ್.ಸಿ. ಮಹದೇವಪ್ಪ ಹೇಳಿದರು.

ಸುದ್ದಿಗಾರರ ಜೊತೆ ಗುರುವಾರ ಮಾತನಾಡಿದ ಅವರು, 'ಕಾಂಗ್ರೆಸ್‌ನಲ್ಲಿ ನಾಯಕನೊಬ್ಬನ ಹುಟ್ಟುಹಬ್ಬದ ಆಚರಣೆ ಪಕ್ಷದ ವತಿಯಿಂದ ಮಾಡಿಲ್ಲ. ಈ ಸಮಾವೇಶ ಕೂಡಾ ಪಕ್ಷದ ಕಾರ್ಯಕ್ರಮ ಅಲ್ಲ. ಆದರೆ, ಪಕ್ಷದೊಳಗಿನ ಅವರ ಅನೇಕ ಸ್ನೇಹಿತರು, ಅಭಿಮಾನಿಗಳು, ಸಂಘ–ಸಂಸ್ಥೆಯವರು ಸೇರಿ ಮಾಡಿರುವ ಸಮಿತಿಯ ಮೂಲಕ ಸಮಾವೇಶ ಮಾಡುತ್ತಿದ್ದೇವೆ. ಅಲ್ಲದೆ, ಅವರ ವೈಭವೀಕರಣದ ಕಾರ್ಯಕ್ರಮವಲ್ಲ. ಅವರ ಹೋರಾಟವನ್ನು ದಾಖಲು ಮಾಡುವ ಕೆಲಸ ಮಾಡುತ್ತೇವೆ' ಎಂದರು.

ಅರಮನೆ ಮೈದಾನದಲ್ಲಿ ಬುಧವಾರ ನಡೆದ ಅಮೃತ ಮಹೋತ್ಸವ ಸಮಿತಿಯ ಪೂರ್ವಭಾವಿ ಸಭೆಯಲ್ಲಿ, ಸಿದ್ದರಾಮಯ್ಯ ಜನ್ಮದಿನವನ್ನು ವ್ಯಕ್ತಿಪೂಜೆಯಾಗಿ ಮಾಡಲಾಗುತ್ತಿದೆ ಎಂದು ಸಂಸದ ಡಿ.ಕೆ. ಸುರೇಶ್ ಹೇಳಿದ್ದರು. ಆ ಬೆನ್ನಲ್ಲೆ, ಬಸವರಾಜ ರಾಯರಡ್ಡಿ, 'ಸಿದ್ದರಾಮೋತ್ಸವ ಎಂಬುದನ್ನು ನಾವು ಒಪ್ಪುವುದಿಲ್ಲ. ಒಬ್ಬ ವ್ಯಕ್ತಿಯನ್ನು ವೈಭವೀಕರಿಸುವುದಿಲ್ಲ' ಎಂದರು.

'ಸಿದ್ದರಾಮಯ್ಯನವರ 75ನೇ ವರ್ಷದ ಜನ್ಮದಿನ ಕಾರ್ಯಕ್ರಮ ಪಕ್ಷದ ಚೌಕಟ್ಟಿನಲ್ಲಿ ನಡೆಯುತ್ತಿದೆ. ಈ ಕಾರ್ಯಕ್ರಮವನ್ನು ಈಗ ಪಕ್ಷದ ವೇದಿಕೆಯಲ್ಲಿ ಮಾಡಲು ಕಾಂಗ್ರೆಸ್ ತೀರ್ಮಾನ ಮಾಡಿದೆ' ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಈ ಹಿಂದೆಯೇ ಹೇಳಿದ್ದರು. 'ಪಕ್ಷದ ಚೌಕಟ್ಟಿನಲ್ಲೇ ಹುಟ್ಟುಹಬ್ಬ ನಡೆಯುತ್ತದೆ' ಎಂದಿದ್ದರು.

'ಆಕ್ಷೇಪ ಇಲ್ಲ'

ಮೈಸೂರು: 'ವಿಧಾನಸಭೆಯ ವಿರೋಧಪಕ್ಷದ ನಾಯಕ ಸಿದ್ದರಾಮಯ್ಯ ಅವರ ಅಮೃತ ಮಹೋತ್ಸವ ಕಾರ್ಯಕ್ರಮಕ್ಕೆ ಪಕ್ಷದಲ್ಲಿ ಯಾರಿಂದಲೂ ಆಕ್ಷೇಪ ವ್ಯಕ್ತವಾಗಿಲ್ಲ' ಎಂದು ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್. ಧ್ರುವನಾರಾಯಣ ಹೇಳಿದರು.

> **ಅಭಿಮಾನಿಗಳು ನನ್ನ ಜನ್ಮದಿನ ಆಯೋಜಿಸುತ್ತಿರುವುದು ಬಿಜೆಪಿಯವರಿಗೆ ನಡುಕ ಹುಟ್ಟಿಸಿದೆ. ಹೀಗಾಗಿ, ಹತಾಶೆಯಿಂದ ಮಾತನಾಡುತ್ತಿದ್ದಾರೆ. ನಮ್ಮ ಪಕ್ಷದಲ್ಲಿ ಯಾರೂ ಆಕ್ಷೇಪಿಸಿಲ್ಲ**
> **ಸಿದ್ದರಾಮಯ್ಯ**
> ವಿಧಾನಸಭೆ ವಿರೋಧ ಪಕ್ಷದ ನಾಯಕ

ಗುರುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ದಾವಣಗೆರೆಯಲ್ಲಿ ನಡೆಯಲಿರುವ ಕಾರ್ಯಕ್ರಮದ ಆಚರಣಾ ಸಮಿತಿಯ ಉಪಾಧ್ಯಕ್ಷರಾಗಿ ಸಂಸದ ಡಿ.ಕೆ. ಸುರೇಶ್ ಅವರೇ ಇದ್ದಾರೆ. ಆರ್.ವಿ. ದೇಶಪಾಂಡೆ ಸಮಿತಿಯ ಅಧ್ಯಕ್ಷರಾಗಿದ್ದಾರೆ' ಎಂದು ತಿಳಿಸಿದರು.

'ಪಕ್ಷದ ವರಿಷ್ಠ ರಾಹುಲ್ ಗಾಂಧಿ, ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್, ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ ಪಾಲ್ಗೊಳ್ಳಲಿದ್ದಾರೆ. ಮೈಸೂರಿನಲ್ಲಿ ಜುಲೈ 23ರಂದು ಸಿದ್ದರಾಮಯ್ಯ ಕುರಿತ ಕೃತಿಯನ್ನು ಮಲ್ಲಿಕಾರ್ಜುನ ಖರ್ಗೆ ಬಿಡುಗಡೆ ಮಾಡಲಿದ್ದಾರೆ' ಎಂದರು.

ರಾಜ್ಯಗಳ ಕೃಷಿ ಮತ್ತು ತೋಟಗಾರಿಕೆ ಸಚಿವರ ರಾಷ್ಟ್ರೀಯ ಸಮ್ಮೇಳನ

‘ಭೂಚೇತನ’ ಮತ್ತೆ ಜಾರಿ: ಬೊಮ್ಮಾಯಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಮಣ್ಣಿನ ಫಲವತ್ತತೆ ಕಾಪಾಡುವ ನಿಟ್ಟಿನಲ್ಲಿ ಭೂಚೇತನ ಯೋಜನೆಯನ್ನು ಮರು ಜಾರಿಗೊಳಿಸಲು ನಿರ್ಧರಿಸಲಾಗಿದೆ’ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ನಗರದಲ್ಲಿ ಗುರುವಾರ ಆರಂಭವಾದ ಎರಡು ದಿನಗಳ ರಾಜ್ಯಗಳ ಕೃಷಿ ಮತ್ತು ತೋಟಗಾರಿಕೆ ಸಚಿವರ ರಾಷ್ಟ್ರೀಯ ಸಮ್ಮೇಳನದಲ್ಲಿ ಮಾತನಾಡಿದ ಅವರು, ‘ಬಿ.ಎಸ್. ಯಡಿಯೂರಪ್ಪ ಅವರು ಮುಖ್ಯಮಂತ್ರಿಯಾಗಿದ್ದ ಸಂದರ್ಭದಲ್ಲಿ ಮಣ್ಣಿನ ಪೋಷಕಾಂಶ ಹೆಚ್ಚಿಸಲು ಭೂಚೇತನ ಯೋಜನೆ ಜಾರಿಗೊಳಿದ್ದರು’ ಎಂದು ನೆನಪಿಸಿದರು.

‘ರೈತರ ಆದಾಯ ದ್ವಿಗುಣಗೊಳಿಸಲು ಕೃಷಿ ಕೇಂದ್ರಿತ ನೀತಿಗಳನ್ನು ರೂಪಿಸುವ ಅಗತ್ಯವಿದೆ. ಆಹಾರ ಭದ್ರತೆ ಒದಗಿಸುತ್ತಿರುವ ಕೃಷಿ ಕ್ಷೇತ್ರ ಈ ದೇಶದ ಆರ್ಥಿಕತೆಗೆ ಪ್ರಮುಖ ಕೊಡುಗೆ ನೀಡುತ್ತಿದೆ. ಆದರೆ, ಕೃಷಿ ಕ್ಷೇತ್ರಕ್ಕೆ ಸಂಬಂಧಿಸಿದಂತೆ ನಿರೀಕ್ಷಿತ ಮಟ್ಟದಲ್ಲಿ ಬಂಡವಾಳ ಹೂಡಿಕೆಯಾಗುತ್ತಿಲ್ಲ’ ಎಂದರು.

‘ತೋಟಗಾರಿಕೆ, ಪಶುಸಂಗೋಪನೆ, ಮೀನುಗಾರಿಕೆ ಒಳಗೊಂಡ ಸಮಗ್ರ ಕೃಷಿ ಹಾಗೂ ಸೂಕ್ಷ್ಮ ನೀರಾವರಿ ಯೋಜನೆಗೆ ಆದ್ಯತೆ ನೀಡಬೇಕು’ ಎಂದು ಹೇಳಿದರು.

ಡಿಜಿಟಲ್ ಕೃಷಿಗೆ ಆದ್ಯತೆ: ‘ರಾಷ್ಟ್ರೀಯ ಕೃಷಿ ಮಾರುಕಟ್ಟೆಯ (ಇ-ನ್ಯಾಮ್) ಆನ್‌ಲೈನ್ ಪೋರ್ಟಲ್ ವೇದಿಕೆಯನ್ನು ಸುಧಾರಿಸಲು ಕೇಂದ್ರ ಸರ್ಕಾರ ಕ್ರಮಕೈಗೊಂಡಿದೆ. 1,000 ಕೃಷಿ ಮಂಡಿಗಳು ಇ-ನ್ಯಾಮ್ ಯೋಜನೆ ಜತೆ ಸಂಪರ್ಕ ಹೊಂದಿವೆ ಮತ್ತು ಇದುವರೆಗೆ 1.5 ಲಕ್ಷ ಕೋಟಿ ಮೊತ್ತದ ವ್ಯಾಪಾರ ವಹಿವಾಟು ನಡೆದಿದೆ’ ಎಂದು ಕೇಂದ್ರ ಕೃಷಿ ಸಚಿವ ನರೇಂದ್ರಸಿಂಗ್ ತೋಮರ್ ವಿವರಿಸಿದರು.

‘ಡಿಜಿಟಲ್ ಕೃಷಿಗೆ ಉತ್ತೇಜನ ನೀಡಲು ಕೇಂದ್ರ ಸರ್ಕಾರ ನಿರ್ಧರಿಸಿದೆ. ಈ ಮೂಲಕ ರೈತರು ಮಧ್ಯವರ್ತಿಗಳ ಮೇಲೆ ಅವಲಂಬನೆಯಾಗುವುದು ತಪ್ಪುತ್ತದೆ. ತಂತ್ರಜ್ಞಾನವು ಕೃಷಿಯಲ್ಲೂ ಗರಿಷ್ಠ ಬಳಕೆಯಾಗಬೇಕು. ಹವಾಮಾನ ವೈಪರೀತ್ಯದಿಂದ ಯಾವುದಾದರೂ ಪ್ರದೇಶದಲ್ಲಿ ಬೆಳೆ ನಷ್ಟವಾದರೆ ತಕ್ಷಣವೇ ರೈತರಿಗೆ ಪರಿಹಾರ ದೊರೆಯುವ ವ್ಯವಸ್ಥೆಯಾಗಬೇಕು’ ಎಂದು ಸಲಹೆ ನೀಡಿದರು.

ಕೃಷಿ ಖಾತೆ ರಾಜ್ಯ ಸಚಿವರಾದ ಶೋಭಾ ಕರಂದ್ಲಾಜೆ ಮತ್ತು ಕೈಲಾಶ್ ಚೌಧರಿ, ಕರ್ನಾಟಕದ ಕೃಷಿ ಸಚಿವ ಬಿ.ಸಿ. ಪಾಟೀಲ ಇದ್ದರು.

ಬೆಂಗಳೂರಿನಲ್ಲಿ ಗುರುವಾರ ನಡೆದ ಕೃಷಿ ಮತ್ತು ತೋಟಗಾರಿಕೆ ಸಚಿವರ ರಾಷ್ಟ್ರೀಯ ಸಮ್ಮೇಳನದಲ್ಲಿ ಕೇಂದ್ರ ಕೃಷಿ ಸಚಿವ ನರೇಂದ್ರಸಿಂಗ್ ತೋಮರ್ ಮತ್ತು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಚರ್ಚಿಸಿದರು. ಕೃಷಿ ಖಾತೆ ರಾಜ್ಯ ಸಚಿವರಾದ ಕೈಲಾಶ್ ಚೌಧರಿ ಮತ್ತು ಶೋಭಾ ಕರಂದ್ಲಾಜೆ ಇದ್ದರು

– ಪ್ರಜಾವಾಣಿ ಚಿತ್ರ

‘ನ್ಯಾನೊ ಯೂರಿಯಾಗೆ ಉತ್ತೇಜನ ನೀಡಿ’

‘ದೇಶಿಯವಾಗಿ ಅಭಿವೃದ್ಧಿಪಡಿಸಿರುವ ನ್ಯಾನೊ ಯೂರಿಯಾ ಗೊಬ್ಬರ ಬಳಕೆಗೆ ರಾಜ್ಯ ಸರ್ಕಾರಗಳು ಹೆಚ್ಚು ಉತ್ತೇಜನ ನೀಡಬೇಕು’ ಎಂದು ಕೇಂದ್ರ ರಾಸಾಯನಿಕ ಮತ್ತು ರಸಗೊಬ್ಬರ ಸಚಿವ ಮನ್‌ಸುಖ್ ಮಾಂಡವೀಯ ಸಲಹೆ ನೀಡಿದರು.

‘ಪ್ರತಿ ವರ್ಷ ಭಾರತ ಸುಮಾರು 70 ಲಕ್ಷ ಟನ್ ರಸಗೊಬ್ಬರವನ್ನು ಆಮದು ಮಾಡಿಕೊಳ್ಳುತ್ತಿದೆ. ಜಗತ್ತಿನ ಒಟ್ಟು ರಸಗೊಬ್ಬರದಲ್ಲಿ ಭಾರತದಲ್ಲೇ ಶೇ 35ರಷ್ಟು ಬಳಸಲಾಗುತ್ತಿದೆ’ ಎಂದು ವಿವರಿಸಿದರು.

‘ಕೇಂದ್ರ ಸರ್ಕಾರವು ರಸಗೊಬ್ಬರಕ್ಕೆ ಸುಮಾರು ₹2.5 ಲಕ್ಷ ಕೋಟಿ ಮೊತ್ತದಷ್ಟು ಸಬ್ಸಿಡಿ ನೀಡುತ್ತಿದೆ. ಇದು ಕರ್ನಾಟಕದಂತಹ ರಾಜ್ಯಗಳ ವಾರ್ಷಿಕ ಬಜೆಟ್‌ನಷ್ಟಾಗಿದೆ. ಹೀಗಾಗಿ, ಈ ಕ್ಷೇತ್ರದಲ್ಲೂ ಆತ್ಮನಿರ್ಭರ ಸಾಧಿಸುವ ಅಗತ್ಯವಿದೆ’ ಎಂದು ವಿವರಿಸಿದರು.

‘ಪ್ರತಿ ಬಾಟಲ್ ನ್ಯಾನೊ ಯೂರಿಯಾ ಬೆಲೆ ₹240. ಒಂದು ಕೋಟಿ ನ್ಯಾನೊ ಯೂರಿಯಾ ಬಾಟಲ್‌ಗಳು ನಾಲ್ಕು ಲಕ್ಷ ಟನ್‌ಗಳಷ್ಟು ರಸಗೊಬ್ಬರ ಚೀಲಗಳಿಗೆ ಸಮನಾಗಿವೆ. ನನ್ನ 100 ಎಕರೆ ಜಮೀನಿನಲ್ಲೂ ನ್ಯಾನೊ ಯೂರಿಯಾ ಬಳಸಿದ್ದೇನೆ. ಮುಂದಿನ ದಿನಗಳಲ್ಲಿ ಒಂದು ದೇಶ, ಒಂದು ರಸಗೊಬ್ಬರ ಯೋಜನೆಯನ್ನು ಜಾರಿಗೊಳಿಸಲಾಗುವುದು. ಇದರಿಂದ ರಸಗೊಬ್ಬರದ ಕೊರತೆಯಾಗುವುದಿಲ್ಲ’ ಎಂದರು.

‘ಸಮಗ್ರ ರಸಗೊಬ್ಬರ ಪೂರೈಕೆ ನಿರ್ವಹಣೆ ವ್ಯವಸ್ಥೆಯನ್ನು (ಐಎಫ್‌ಎಂಎಸ್) ಕೇಂದ್ರ ಸರ್ಕಾರ ರೂಪಿಸಿದೆ. ಈ ವ್ಯವಸ್ಥೆ ಅಡಿಯಲ್ಲಿ ದೇಶದ ಪ್ರತಿಯೊಂದು ಜಿಲ್ಲೆಯಲ್ಲಿರುವ ರಸಗೊಬ್ಬರ ಸಂಗ್ರಹವಾಗಿರುವ ಮಾಹಿತಿ ಲಭ್ಯವಾಗುತ್ತದೆ. ರಾಜ್ಯ ಸರ್ಕಾರಗಳು ಸಹ ಈ ವ್ಯವಸ್ಥೆಯನ್ನು ಅನುಸರಿಸಬೇಕು’ ಎಂದು ಸೂಚಿಸಿದರು.

ಮುನ್ನೆಚ್ಚರಿಕೆ ಡೋಸ್: 4.34 ಕೋಟಿ ಗುರಿ

ಬೆಂಗಳೂರು: 18 ವರ್ಷ ಮೇಲ್ಪಟ್ಟವರಿಗೆ ಉಚಿತವಾಗಿ ಕೋವಿಡ್ ಲಸಿಕೆಯ ಮುನ್ನೆಚ್ಚರಿಕೆ ಡೋಸ್ ವಿತರಿಸುವ ‘ಕೋವಿಡ್ ಲಸಿಕಾ ಅಮೃತ ಮಹೋತ್ಸವ’ಕ್ಕೆ ಶುಕ್ರವಾರ ಚಾಲನೆ ದೊರೆಯಲಿದೆ. 75 ದಿನಗಳಲ್ಲಿ 4.34 ಕೋಟಿ ಮಂದಿಗೆ ಲಸಿಕೆ ವಿತರಿಸುವ ಗುರಿ ಹೊಂದಲಾಗಿದೆ. ರಾಜ್ಯದಲ್ಲಿ 8 ಸಾವಿರ ಸರ್ಕಾರಿ ಕೇಂದ್ರಗಳಲ್ಲಿ ಸೆ.30ರವರೆಗೆ ಮುನ್ನೆಚ್ಚರಿಕೆ ಡೋಸ್ ವಿತರಿಸಲಾಗುತ್ತದೆ. ಎರಡನೇ ಡೋಸ್ ಪಡೆದು 6 ತಿಂಗಳು ಪೂರ್ಣಗೊಳಿಸಿದವರು ಮುನ್ನೆಚ್ಚರಿಕೆ ಡೋಸ್ ಪಡೆಯಲು ಅರ್ಹರಾಗಿರುತ್ತಾರೆ ಎಂದು ಇಲಾಖೆ ತಿಳಿಸಿದೆ.

ಮುಂದಿನ ಶೈಕ್ಷಣಿಕ ವರ್ಷದಿಂದ ಅಳವಡಿಕೆ

ಪ್ರೌಢಶಾಲಾ ಹಂತದಲ್ಲೇ ತಾಂತ್ರಿಕ ಶಿಕ್ಷಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಂದಿನ ಶೈಕ್ಷಣಿಕ ವರ್ಷದಿಂದ ಪ್ರೌಢಶಾಲಾ ಹಂತದಲ್ಲೇ ಮಕ್ಕಳಿಗೆ ತಾಂತ್ರಿಕ ಶಿಕ್ಷಣದ ಪ್ರಾಥಮಿಕ ಜ್ಞಾನ ನೀಡಲು ಉದ್ದೇಶಿಸಲಾಗಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ಗುರುವಾರ ನಡೆದ ವಿಶ್ವ ಯುವ ಕೌಶಲ್ಯ ದಿನಾಚರಣೆಯಲ್ಲಿ ಭಾಗವಹಿಸಿ ಮಾತನಾಡಿದ ಅವರು, ‘60 ರ ದಶಕದಲ್ಲಿ ಪ್ರೌಢಶಾಲಾ ಹಂತದಲ್ಲೇ ಮಕ್ಕಳಿಗೆ ತಾಂತ್ರಿಕ ಶಿಕ್ಷಣದ ಜ್ಞಾನ ನೀಡಲಾಗುತ್ತಿತ್ತು. ಕ್ರಮೇಣ ಅದನ್ನು ನಿಲ್ಲಿಸಲಾಯಿತು. ಪುನಃ ಆರಂಭಿಸಲಿದ್ದೇವೆ. ಇದರಿಂದ ಜೀವನೋಪಾಯಕ್ಕೆ ಅನುಕೂಲವಾಗುವ ತಂತ್ರಜ್ಞಾನದಲ್ಲಿ ಆಸಕ್ತಿಯನ್ನು ಬೆಳೆಸಲು ಅನುಕೂಲವಾಗುತ್ತದೆ’ ಎಂದು ಅವರು ಹೇಳಿದರು.

8,9 ಮತ್ತು 10 ನೇ ತರಗತಿ ವಿದ್ಯಾರ್ಥಿಗಳಿಗೆ ತಾಂತ್ರಿಕ ಶಿಕ್ಷಣದ ಪ್ರಾಥಮಿಕ ಜ್ಞಾನ ನೀಡಲಾಗುವುದು. ಕೌಶಲ ಕ್ಷೇತ್ರದಲ್ಲಿ ಕರ್ನಾಟಕ ದೇಶದಲ್ಲಿ ನಂ. 1 ಆಗಬೇಕು, ವಿಶ್ವದಲ್ಲಿ 10 ರೊಳಗಿನ ಸ್ಥಾನವನ್ನು ಪಡೆಯುವ ನಿಟ್ಟಿನಲ್ಲಿ ಪ್ರಯತ್ನ ಹಾಕಬೇಕು ಎಂದೂ ಅವರು ತಿಳಿಸಿದರು.

ರಾಜ್ಯದಲ್ಲಿ ಐಟಿಐಗಳನ್ನು ಹೈಟೆಕ್ ಮಾಡುವುದರ ಜತೆಗೆ, ಜಿಟಿಟಿಸಿಗಳ ಆಧುನೀಕರಣ ಮತ್ತು ಸಾಮರ್ಥ್ಯವನ್ನು ವೃದ್ಧಿಸುವ ಕೆಲಸವೂ ನಡೆದಿದೆ ಎಂದು ಹೇಳಿದರು.

‘ಇದಲ್ಲದೇ, ಸ್ತ್ರೀಶಕ್ತಿ ಮೂಲಕ ಸುಮಾರು 5 ಲಕ್ಷ ಮಹಿಳೆಯರಿಗೆ ಕೌಶಲ ತರಬೇತಿ ನೀಡಲು ಉದ್ದೇಶಿಸಲಾಗಿದೆ. ಇದರಿಂದ ಗ್ರಾಮೀಣ ಪ್ರದೇಶದಲ್ಲಿ ಮಹಿಳೆಯರು ಆರ್ಥಿಕವಾಗಿ ಸ್ವಾವಲಂಬಿಗಳಾಗಲು ಸಹಾಯಕವಾಗುತ್ತದೆ. ಕೌಶಲ ಎಂಬುದು ದೇವರು ಕೊಟ್ಟ ವರ ಅದನ್ನು ಜ್ಞಾನದ ಜೊತೆ ಜೋಡಿಸುವ ಕೆಲಸ ಆಗಬೇಕು’ ಎಂದರು.

ಕೌಶಲಾಭಿವೃದ್ಧಿ ಸಚಿವ ಡಾ.ಸಿ. ಎನ್.ಅಶ್ವತ್ಥನಾರಾಯಣ ಮಾತನಾಡಿ, ‘ಯುವ ಜನರಿಗೆ ಈಗಿನ ಕಾಲಕ್ಕೆ ತಕ್ಕಂತೆ ಕೌಶಲ ತರಬೇತಿ ನೀಡಲು ಸರ್ಕಾರ ಉದ್ದೇಶಿಸಿದೆ. ಪ್ರತಿಯೊಂದು ಜಿಲ್ಲೆಯಲ್ಲೂ ಗುಣಮಟ್ಟದ ಕೌಶಲ ತರಬೇತಿ ನೀಡಲಾಗುವುದು. ಇದಕ್ಕಾಗಿ ಹಲವು ಸಂಸ್ಥೆಗಳ ಜತೆ ಒಡಂಬಡಿಕೆ ಮಾಡಿಕೊಳ್ಳಲಾಗಿದೆ ಇನ್ಫೋಸಿಸ್ ಸಂಸ್ಥೆಯೊಂದೇ 27 ಲಕ್ಷ ಯುವ ಜನರಿಗೆ ಕೌಶಲ ತರಬೇತಿ ನೀಡಿದ್ದು, ಅದರಲ್ಲಿ ರಾಜ್ಯದ 17 ಲಕ್ಷ ಮಂದಿ ತರಬೇತಿ ಪಡೆದಿದ್ದಾರೆ’ ಎಂದರು.

ಇದೇ ಸಂದರ್ಭದಲ್ಲಿ ರಾಷ್ಟ್ರೀಯ ಕೌಶಲ ಸ್ಪರ್ಧೆಯಲ್ಲಿ ವಿಜೇತರಾದ ರಾಜ್ಯ 24 ಮಂದಿ ಯುವಕ–ಯುವತಿಯರಿಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಪ್ರಮಾಣಪತ್ರ ಮತ್ತು ಬಹುಮಾನ ವಿತರಿಸಿದರು.

‘ಕಾಶಿ ಯಾತ್ರಿಕರಿಗೆ ₹5 ಸಾವಿರ’

ಆನ್‌ಲೈನ್ ಅರ್ಜಿ ಸಲ್ಲಿಕೆ: ವೆಬ್ ಪೋರ್ಟಲ್ ಲೋಕಾರ್ಪಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕಾಶಿಗೆ ಹೆಚ್ಚಿನ ಸಂಖ್ಯೆ ಯಲ್ಲಿ ಭಕ್ತರು ಸಂದರ್ಶಿಸಲಿ ಎನ್ನುವ ಉದ್ದೇಶದಿಂದ, ಅಲ್ಲಿಗೆ ತೆರಳುವ ಯಾತ್ರಾರ್ಥಿಗಳಿಗೆ ತಲಾ ₹5 ಸಾವಿರ ಸಹಾಯಧನ ಯೋಜನೆ ಆರಂಭಿಸಲಾಗಿದೆ’ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ಮುಜರಾಯಿ ಇಲಾಖೆ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ, ಕಾಶಿ ಯಾತ್ರೆ ಕೈಗೊಂಡ ಯಾತ್ರಾರ್ಥಿಗಳಿಗೆ ಸಾಂಕೇತಿಕವಾಗಿ ಸಹಾಯಧನ ವಿತರಿಸಿ, ಆನ್‌ಲೈನ್ ಮೂಲಕ ಹಣ ವರ್ಗಾವಣೆ ಮತ್ತು ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸುವ ವೆಬ್ ಪೋರ್ಟಲ್ ಲೋಕಾರ್ಪಣೆ ಮಾಡಿ, ‘ಇತ್ತೀಚೆಗೆ ಪ್ರಧಾನಿ ನರೇಂದ್ರ ಮೋದಿ ಕಾಶಿಯನ್ನು ಅಭಿವೃದ್ಧಿಪಡಿಸಿದ್ದಾರೆ. 23 ಘಾಟ್‌ಗಳನ್ನು ಸ್ವಚ್ಛಗೊಳಿಸಿ ಬದಲಾವಣೆ ಮಾಡಲಾಗಿದೆ. ದೇವಸ್ಥಾನದ ಆವರಣವನ್ನೂ ಸ್ವಚ್ಛಗೊಳಿಸಿ, ಭಕ್ತಿ– ಭಾವ ಮೂಡುವಂತೆ ಮಾಡಿದ್ದಾರೆ. ರಾಜ್ಯದ ಜನ ಹೆಚ್ಚಿನ ಸಂಖ್ಯೆಯಲ್ಲಿ ಅಲ್ಲಿಗೆ ತೆರಳಲಿ ಎಂಬ ಉದ್ದೇಶದಿಂದ ಆರಂಭಿಸಿದ ಸಹಾಯಧನ ಯೋಜನೆಗೆ ಬಜೆಟ್‌ನಲ್ಲಿ ಅನುದಾನ ನೀಡಲಾಗಿದೆ. ಯಾತ್ರಾರ್ಥಿಗಳು ಕಾಶಿಗೆ ಹೋದಾಗ ಅಲ್ಲಿನ ಕರ್ನಾಟಕ ಛತ್ರದಲ್ಲಿ ನೋಂದಣಿಯಾಗಿ, ದಾಖಲಾತಿಗಳನ್ನು ವೆಬ್ ಪೋರ್ಟಲ್‌ಗೆ ಸಲ್ಲಿಸಿ, ಸಹಾಯಧನ ಪಡೆಯಬಹುದು’ ಎಂದರು.

ಮುಜರಾಯಿ ಸಚಿವರಾದ ಶಶಿಕಲಾ ಜೊಲ್ಲೆ ಮಾತನಾಡಿ, ‘ಇಲಾಖೆಗೆ ಮುಖ್ಯಮಂತ್ರಿ ಈ ವರ್ಷ ಅತಿಹೆಚ್ಚು ಅನುದಾನ ನೀಡಿದ್ದಾರೆ. ಪ್ರಸಕ್ತ ಆರ್ಥಿಕ ವರ್ಷದಲ್ಲಿ ₹ 693 ಕೋಟಿ ಅನುದಾನ ಕೊಟ್ಟಿದ್ದಾರೆ. ಕಾಶಿ ಯಾತ್ರಾರ್ಥಿಗಳಿಗೆ ಪ್ರೋತ್ಸಾಹಧನ ನೀಡಬೇಕು ಎನ್ನುವುದು ನನ್ನ ಆಶಯವಾಗಿತ್ತು. ಅದಕ್ಕೆ ಸ್ಪಂದಿಸಿದ್ದಾರೆ’ ಎಂದರು.

ಕಾಶಿ ಯಾತ್ರೆಗೆ ತೆರಳಿದ್ದ 10 ಜನರಿಗೆ ಸಾಂಕೇತಿಕವಾಗಿ ಮುಖ್ಯಮಂತ್ರಿ ಸಹಾಯಧನ ವಿತರಿಸಿದರು. ಜಲ ಸಂಪನ್ಮೂಲ ಸಚಿವ ಗೋವಿಂದ ಕಾರಜೋಳ ಇದ್ದರು.

ಸಹಾಯಧನ ಪಡೆಯುವುದು ಹೇಗೆ?

‘ಇದೇ ಏಪ್ರಿಲ್ 1ರಿಂದ ಜುಲೈ 20ರವರೆಗೆ ಕಾಶಿ ಯಾತ್ರೆ ಕೈಗೊಂಡಿರುವ ಜನರು ಆಫ್‌ಲೈನ್ ಅರ್ಜಿಗಳನ್ನು ಮುಜರಾಯಿ ಆಯುಕ್ತರ ಕಚೇರಿಗೆ ಸಲ್ಲಿಸಿ ಸಹಾಯಧನ ಪಡೆಯಬಹುದು. ಆಫ್‌ಲೈನ್‌ನಲ್ಲಿ 500ಕ್ಕೂ ಹೆಚ್ಚು ಅರ್ಜಿಗಳು ಸಲ್ಲಿಕೆಯಾಗಿವೆ. ಇನ್ನು ಮುಂದೆ ಸರ್ಕಾರದ ಮಾರ್ಗಸೂಚಿಯ ಅನ್ವಯ ಸಂಬಂಧಿಸಿದ ದಾಖಲಾತಿಗಳನ್ನು ಇಲಾಖೆಯ ವೆಬ್‌ಸೈಟ್ https://itms.kar.nic.in/ ಮತ್ತು ಸೇವಾ ಸಿಂಧು ವೆಬ್ ಪೋರ್ಟಲ್‌ನಲ್ಲಿ (https://sevasindhu.karnataka.gov.in/) ಅಪ್‌ಲೋಡ್ ಮಾಡಬೇಕು. ದಾಖಲೆಗಳನ್ನು ಪರಿಶೀಲಿಸಿ, ಅರ್ಜಿದಾರರ ಆಧಾರ್ ಲಿಂಕ್ ಹೊಂದಿರುವ ಬ್ಯಾಂಕ್ ಖಾತೆಗೆ ನೇರವಾಗಿ (ಡಿಬಿಟಿ) ಸಹಾಯಧನ ಜಮೆ ಮಾಡಲಾಗುವುದು’ ಎಂದು ಜೊಲ್ಲೆ ಮಾಹಿತಿ ನೀಡಿದರು.

ಬಹು ಮಾಧ್ಯಮ ಪ್ರಜಾವಾಣಿ LIVE
www.prajavani.net
Prajavani.net | Prajavani | Prajavani
ಫೇಸ್‌ಬುಕ್, ಯೂಟ್ಯೂಬ್, ಟ್ವಿಟರ್‌ನಲ್ಲಿ ಏಕಕಾಲಕ್ಕೆ ನೇರಪ್ರಸಾರ

ಇಂದು

ಪ್ರಜಾವಾಣಿ ಕನ್ನಡ ಧ್ವನಿ

ಪಾಡ್‌ಕಾಸ್ಟ್: ಪ್ರಚಲಿತ: ಬೆಳಿಗ್ಗೆ 9
ಸಂಪಾದಕೀಯ: ಬೆಳಿಗ್ಗೆ 9.30
ಪ್ರಜಾವಾಣಿ ವಾರ್ತೆ: ಬೆಳಿಗ್ಗೆ 8, ಮಧ್ಯಾಹ್ನ 2 ಮತ್ತು ರಾತ್ರಿ 8

ನಾಳೆ

ಸ್ನೇಕ್ ಶ್ಯಾಮ್, ಸೂರ್ಯಕೀರ್ತಿ
ಉರಗ ರಕ್ಷಕರು, ಮೈಸೂರು
ವಿಶ್ವ ಹಾವು ದಿನ
ಸೆಲೆಬ್ರಿಟಿ LIVE
ಬೆಳಿಗ್ಗೆ 11 ರಿಂದ 12

ನಟ ಅನಂತ್‌ನಾಗ್ ಸೇರಿ ಮೂವರಿಗೆ ಗೌರವ ಡಾಕ್ಟರೇಟ್

ಕೋಲಾರ: ನಟ ಅನಂತ್‌ನಾಗ್, ಶಹನಾಯಿ ವಾದಕ ಪಂಡಿತ್ ಬಾಳೇಶ ಭಜಂತ್ರಿ ಹಾಗೂ ಎಂಜಿನಿಯರ್ ಶರದ್ ಶರ್ಮ ಅವರಿಗೆ ಬೆಂಗಳೂರು ಉತ್ತರ ವಿಶ್ವವಿದ್ಯಾಲಯ ಗೌರವ ಡಾಕ್ಟರೇಟ್ ಪ್ರಕಟಿಸಿದೆ.

ಶುಕ್ರವಾರ (ಜುಲೈ 15) ನಡೆಯಲಿರುವ ವಿಶ್ವವಿದ್ಯಾಲಯದ ಎರಡನೇ ಘಟಿಕೋತ್ಸವದಲ್ಲಿ ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರು ಗೌರವ ಡಾಕ್ಟರೇಟ್ ಪ್ರದಾನ ಮಾಡಲಿದ್ದಾರೆ.

ಇಂದು ಇಡೀ ದಿನ ಬಿಜೆಪಿ ಚಿಂತನ ಸಭೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 2023 ರ ವಿಧಾನಸಭಾ ಚುನಾವಣೆಗೆ ತಯಾರಿ, ಅದಕ್ಕಾಗಿ ಪಕ್ಷದ ಸಂಘಟನೆ ಬಲಪಡಿಸುವ ಸಂಬಂಧ ಶುಕ್ರವಾರ ನಡೆಯುವ ಇಡೀ ದಿನದ ಚಿಂತನ ಸಭೆಯ ರೂಪುರೇಷೆಯ ಬಗ್ಗೆ ಗುರುವಾರ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ರಾಜ್ಯ ಬಿಜೆಪಿ ಉಸ್ತುವಾರಿ ಅರುಣ್‌ಸಿಂಗ್ ಮತ್ತು ಪಕ್ಷದ ರಾಜ್ಯ ಅಧ್ಯಕ್ಷ ನಳಿನ್‌ಕುಮಾರ್ ಕಟೀಲ್ ಚರ್ಚೆ ನಡೆಸಿದರು.

ದೇವನಹಳ್ಳಿ ಸಮೀಪದ ರೆಸಾರ್ಟ್‌ವೊಂದರಲ್ಲಿ ಬೆಳಿಗ್ಗೆ 9 ಕ್ಕೇ ಸಭೆ ಆರಂಭವಾಗಲಿದೆ. ಇದರಲ್ಲಿ ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಪ್ರಮುಖ ಮುಖಂಡರೂ ಭಾಗವಹಿಸಲಿದ್ದಾರೆ ಎಂದು ಬಿಜೆಪಿ ಮೂಲಗಳು ತಿಳಿಸಿವೆ.

ಪಕ್ಷದ ಕಚೇರಿಯಲ್ಲಿ ನಡೆದ ಪೂರ್ವಭಾವಿ ಸಭೆಯ ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ‘ನಾಳೆ ನಡೆಯುವ ಚಿಂತನ ಸಭೆಯ ಕುರಿತು ವಿಸ್ತೃತವಾಗಿ ಚರ್ಚಿಸಲಾಯಿತು. ಪಕ್ಷದ ಸಂಘಟನೆ ಬಲಪಡಿಸುವುದು, ಮುಂಬರುವ ಚುನಾವಣೆಗಳನ್ನು ಎದುರಿಸುವ ಕುರಿತು ಸಮಾಲೋಚಿಸಿ ಅಗತ್ಯ ತೀರ್ಮಾನಗಳನ್ನು ತೆಗೆದುಕೊಳ್ಳುತ್ತೇವೆ’ ಎಂದರು.

‘ಚುನಾವಣೆ ಮತ್ತು ಸಂಘಟನೆಯ ವಿಷಯವಲ್ಲದೇ, ಬೇರೆ ಬೇರೆ ವಿಷಯಗಳ ಬಗ್ಗೆಯೂ ಚರ್ಚೆ ನಡೆಸಲಾಗುವುದು. ಮುಕ್ತವಾಗಿ ಚಿಂತನೆಗೆ ಅವಕಾಶ ಮಾಡಿಕೊಟ್ಟಿದ್ದೇವೆ. ಸಭೆಯಲ್ಲಿ ಪಕ್ಷದ ಕೋರ್ ಕಮಿಟಿಯ ಸದಸ್ಯರು, ಸಚಿವ ಸಂಪುಟದ ಎಲ್ಲ ಸದಸ್ಯರು ಸೇರಿ 50 ಕ್ಕೂ ಹೆಚ್ಚು ಪ್ರಮುಖ ನಾಯಕರು ಭಾಗವಹಿಸಲಿದ್ದಾರೆ. ಸಭೆಯ ಬಳಿಕ ಸಂಪೂರ್ಣ ಚಿತ್ರಣ ಲಭಿಸಲಿದೆ’ ಎಂದು ಅವರು ತಿಳಿಸಿದರು.

ರಾಜ್ಯದಲ್ಲಿ ಸರ್ಕಾರದ ಕಾರ್ಯವೈಖರಿ, ಸರ್ಕಾರದ ಬಗ್ಗೆ ಜನರಿಗಿರುವ ಅಭಿಪ್ರಾಯ ಮತ್ತು ಬಿಜೆಪಿ ಚುನಾವಣೆ ಗೆಲ್ಲುವ ಸಾಮರ್ಥ್ಯ ಬಗ್ಗೆ ವಿವಿಧ ಮೂಲಗಳ ಮಾಹಿತಿಯನ್ನು ಸಭೆಯಲ್ಲಿ ಚರ್ಚಿಸಲಾಗುವುದು. ಕಳೆದ ವಿಧಾನಸಭಾ ಚುನಾವಣೆಯಲ್ಲಿ ಬಹುಮತ ಸಾಧಿಸಲು ಸಾಧ್ಯವಾಗದೇ ಇದ್ದರೂ, ಲೋಕಸಭಾ ಚುನಾವಣೆಯಲ್ಲಿ 28 ರಲ್ಲಿ 25 ಸ್ಥಾನಗಳನ್ನು ಬಿಜೆಪಿ ಗೆದ್ದುಕೊಂಡಿತ್ತು. ಇವೆಲ್ಲವನ್ನೂ ಗಮನದಲ್ಲಿಟ್ಟುಕೊಂಡು ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಬಹುಮತ ಸಾಧಿಸುವುದು ಮತ್ತು 2024 ಲೋಕಸಭಾ ಚುನಾವಣೆಯಲ್ಲಿ ಅತ್ಯಧಿಕ ಸ್ಥಾನಗಳನ್ನು ಗೆಲ್ಲುವ ರಣತಂತ್ರದ ಬಗ್ಗೆ ಚರ್ಚೆ ನಡೆಯಲಿದೆ ಎಂದು ಮೂಲಗಳು ತಿಳಿಸಿವೆ.

ಕೆಪಿಟಿಸಿಎಲ್ ಪರೀಕ್ಷೆಗೂ ‘ವಸ್ತ್ರಸಂಹಿತೆ’!

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ವಿದ್ಯುತ್ ಪ್ರಸರಣ ನಿಗಮದಲ್ಲಿ (ಕೆಪಿಟಿಸಿಎಲ್) ಖಾಲಿ ಇರುವ ಕಿರಿಯ ಎಂಜಿನಿಯರ್ ಮತ್ತು ಸಹಾಯಕ ಎಂಜಿನಿಯರ್ ಹುದ್ದೆಗಳಿಗೆ ಇದೇ 23 ಮತ್ತು 24ರಂದು ನಡೆಯಲಿರುವ ನೇಮಕಾತಿ ಪರೀಕ್ಷೆಗೂ ಅಭ್ಯರ್ಥಿಗಳಿಗೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆಇಎ) ಕಟ್ಟುನಿಟ್ಟಿನ ‘ವಸ್ತ್ರಸಂಹಿತೆ’ ಜಾರಿಗೊಳಿಸಿದೆ.

ಪುರುಷರು ಪೂರ್ಣ ತೋಳಿನ ಶರ್ಟ್ ಧರಿಸಬಾರದು, ಬಟ್ಟೆಗಳು ಹಗುರವಾಗಿರಬೇಕು. ಅಂದರೆ, ಜಿಪ್ ಪಾಕೆಟ್‌ಗಳು, ಪಾಕೆಟ್‌ಗಳು, ದೊಡ್ಡ ಬಟನ್‌ಗಳೂ ಮತ್ತು ವಿಸ್ತಾರವಾದ ಕಸೂತಿ ಇರುವ ಬಟ್ಟೆ ಧರಿಸಬಾರದು ಎಂದು ಸೂಚಿಸಲಾಗಿದೆ. ಸರಳವಾದ ಪ್ಯಾಂಟ್ ಧರಿಸಬಹುದು. ಆದರೆ, ಕುರ್ತಾ, ಪೈಜಾಮ ಧರಿಸಲು ಅವಕಾಶ ಇಲ್ಲ. ಪರೀಕ್ಷಾ ಕೇಂದ್ರದ ಒಳಗೆ ಶೂ ಧರಿಸುವಂತೆ ಇಲ್ಲ. ತೆಳುವಾದ ಅಡಿಭಾಗ ಇರುವ ಸ್ಯಾಂಡಲ್ ಮತ್ತು ಚಪ್ಪಲಿ ಧರಿಸುವುದು ಸೂಕ್ತ. ಕುತ್ತಿಗೆ ಸುತ್ತ ಯಾವುದೇ ಲೋಹದ ಅಭರಣ ಧರಿಸಬಾರದು. ಜೊತೆಗೆ, ಕಿವಿಯೋಲೆ, ಉಂಗುರ, ಕಡಗ ಕೂಡಾ ಧರಿಸುವಂತೆ ಇಲ್ಲ.

ಇನ್ನು ಮಹಿಳಾ ಅಭ್ಯರ್ಥಿಗಳಿಗೆ ವಿಸ್ತಾರವಾದ ಕಸೂತಿ, ಹೂಗಳು, ಬ್ರೂಚ್ ಅಥವಾ ಬಟನ್ ಇರುವ ಉಡುಗೆ ನಿಷೇಧಿಸಲಾಗಿದೆ. ಅರ್ಧ ತೋಳಿನ ಬಟ್ಟೆ ಧರಿಸಬೇಕು. ಎತ್ತರದ ಹಿಮ್ಮಡಿಯ ಬೂಟುಗಳು ಮತ್ತು ಅಡಿಭಾಗ ಹೊಂದಿರುವ ಬೂಟು ಹಾಕಬಾರದು. ಅದರ ಬದಲು ಸ್ಯಾಂಡಲ್ ಅಥವಾ ಚಪ್ಪಲಿ ಬಳಸಬೇಕು. ಕಡಿಮೆ ಹಿಮ್ಮಡಿಯ ಪಾದರಕ್ಷೆಗೆ ಅನುಮತಿ ನೀಡಲಾಗಿದೆ. ಕಿವಿಯೋಲೆ, ಉಂಗುರ, ಪೆಂಡೆಂಟ್, ನೆಕ್ಲೇಸ್, ಬಳೆ ಇಂಥ ಯಾವುದೇ ರೀತಿಯ ಲೋಹದ ಆಭರಣಗಳನ್ನು ಧರಿಸುವುದನ್ನೂ ನಿಷೇಧಿಸಲಾಗಿದೆ.

ಅಭ್ಯರ್ಥಿಗಳು ಕೋವಿಡ್ ಸುರಕ್ಷತಾ ಮಾರ್ಗಸೂಚಿಗಳ ಪ್ರಕಾರ, ಅರೆ ಪಾರದರ್ಶಕವಾದ ಸರ್ಜಿಕಲ್ ಮಾಸ್ಕ್ ಮಾತ್ರ ಧರಿಸಬೇಕು. ಎನ್–95, ಕಾಟನ್ ಮಾಸ್ಕ್‌ಗಳನ್ನು ಪರೀಕ್ಷಾ ಕೇಂದ್ರಗಳ ಒಳಗೆ ಅನುಮತಿ ಇಲ್ಲ ಎಂದೂ ಕೆಇಎ ತಿಳಿಸಿದೆ.

ಸಹಾಯಕ ಪ್ರಾಧ್ಯಾಪಕ ಹುದ್ದೆಗೆ ನಡೆದ ನೇಮಕಾತಿ ಪರೀಕ್ಷೆಗೂ ಅಭ್ಯರ್ಥಿಗಳಿಗೆ ಇದೇ ರೀತಿಯ ವಸ್ತ್ರ ಸಂಹಿತೆಯನ್ನು ಕೆಇಎ ಸೂಚಿಸಿತ್ತು.

ಮತದಾನದ ಹಕ್ಕು ಕುರಿತು ಟೀಕೆ; ಕ್ರಮಕ್ಕೆ ಆದೇಶ

ಭೋಪಾಲ್ (ಪಿಟಿಐ): ಮತದಾನದ ಹಕ್ಕು ಮತ್ತು ಪ್ರಜಾಪ್ರಭುತ್ವ ಈ ದೇಶದ 'ಅತಿದೊಡ್ಡ ಪ್ರಮಾದಗಳು' ಎಂದು ಹೇಳಿರುವ ಹೆಚ್ಚುವರಿ ಜಿಲ್ಲಾಧಿಕಾರಿ ವಿರುದ್ಧ ಶಿಸ್ತುಕ್ರಮಕೈಗೊಳ್ಳುವಂತೆ ಮಧ್ಯಪ್ರದೇಶ ಸರ್ಕಾರವು ಆದೇಶಿಸಿದೆ.

ರಾಜ್ಯದಲ್ಲಿನ ಸ್ಥಳೀಯ ಸಂಸ್ಥೆಗಳಿಗೆ ಕಡೆಯ ಹಂತದ ಮತದಾನ ಬುಧವಾರ ನಡೆದಿತ್ತು. ಅದಕ್ಕೂ ಮುನ್ನ, ಶಿವಪುರಿಯ ಹೆಚ್ಚುವರಿ ಜಿಲ್ಲಾಧಿಕಾರಿ (ಎಡಿಎಂ) ಉಮೇಶ್ ಶುಕ್ಲಾ ಈ ರೀತಿ ಹೇಳಿರುವ ವಿಡಿಯೊ ಜಾಲತಾಣದಲ್ಲಿ ಹೆಚ್ಚು ಹಂಚಿಕೆಯಾಗಿತ್ತು. ಅಧಿಕಾರಿಯ ನಿಲುವಿಗೆ ತೀವ್ರ ಟೀಕೆ ವ್ಯಕ್ತವಾದ ಬೆನ್ನಲ್ಲೇ ಶಿಸ್ತುಕ್ರಮಕ್ಕೆ ಆದೇಶಿಸಲಾಗಿದೆ.

'ಇದು, ಗಂಭೀರ ವಿಷಯ. ಅಧಿಕಾರಿಗೆ ನೋಟಿಸ್ ನೀಡಿದ್ದು, ಶಿಸ್ತುಕ್ರಮ ಜರುಗಿಸಲಾಗುವುದು. ಅಧಿಕಾರಿ ವರ್ಗಾವಣೆ ಕುರಿತು ರಾಜ್ಯ ಚುನಾವಣಾ ಆಯೋಗಕ್ಕೂ ಪತ್ರ ಬರೆದಿದ್ದೇವೆ' ಎಂದು ಗೃಹ ಸಚಿವ ನರೋತ್ತಮ್ ಮಿಶ್ರಾ ಪ್ರತಿಕ್ರಿಯಿಸಿದರು.

ಪ್ರತ್ಯಕ್ಷದರ್ಶಿಗಳ ಪ್ರಕಾರ, ಮತಪತ್ರಗಳ ಕೊರತೆಯ ಕಾರಣ ನಮಗೆ ಮತದಾನ ಮಾಡಲು ಆಗಲಿಲ್ಲ ಎಂದು ಕೆಲ ನೌಕರರು ಮಂಗಳವಾರ ಅಹವಾಲು ತೋಡಿಕೊಂಡಾಗ, ಅದಕ್ಕೆ ಪ್ರತಿಕ್ರಿಯಿಸುತ್ತಾ ಶುಕ್ಲಾ ಅವರು ಹೀಗೇ ಹೇಳಿದ್ದಾರೆ.

'ಮತದಾರರ ಪಟ್ಟಿಯಲ್ಲಿ ನಿಮ್ಮ ಹೆಸರು ಇಲ್ಲದಿದ್ದರೆ ನಿಮಗಾಗುವ ತೊಂದರೆ ಏನು? ಮತದಾನ ಮಾಡಿದ್ದರಿಂದ ಇದುವರೆಗೆ ನಿಮಗೆ ಏನು ಸಿಕ್ಕಿದೆ? ಎಷ್ಟೊಂದು ಭ್ರಷ್ಟ ನಾಯಕರನ್ನು ನಾವು ರೂಪಿಸಿದ್ದೇವೆ. ನನ್ನ ಪ್ರಕಾರ, ಪ್ರಜಾಪ್ರಭುತ್ವ ಮತ್ತು ಮತದಾನದ ಹಕ್ಕು ಈ ದೇಶದ ಅತಿದೊಡ್ಡ ಪ್ರಮಾದಗಳಾಗಿವೆ' ಎಂದು ಅಧಿಕಾರಿ ಶುಕ್ಲಾ ಹೇಳಿರುವುದು ವಿಡಿಯೊದಲ್ಲಿದೆ.

ಜುಬೈರ್‌ಗೆ 14 ದಿನಗಳ ನ್ಯಾಯಾಂಗ ಬಂಧನ



ಅಲೀಗಡ/ಹಾಥ್ರಾಸ್: ಟ್ವಿಟರ್ ಪೋಸ್ಟ್ ಮೂಲಕ ಹಿಂದೂಗಳ ಧಾರ್ಮಿಕ ಭಾವನೆಗಳಿಗೆ ಧಕ್ಕೆ ತರಲಾಗಿದೆ ಎಂದು ಆರೋಪಿಸಿರುವ ಪ್ರಕರಣದ ವಿಚಾರಣೆ ನಡೆಸಿದ ಹಾಥ್ರಾಸ್‌ನ ನ್ಯಾಯಾಲಯವು ಗುರುವಾರ ಆಲ್ಟ್‌ನ್ಯೂಸ್ ಸಹ ಸಂಸ್ಥಾಪಕ ಮೊಹಮ್ಮದ್ ಜುಬೈರ್ ಅವರನ್ನು 14 ದಿನಗಳ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದೆ.

ಸದರ್ ಕೊತ್ವಾಲಿ ಪೊಲೀಸ್ ಠಾಣೆಯಲ್ಲಿ ಜೂನ್ 14 ರಂದು ದಾಖಲಾಗಿದ್ದ ಈ ಪ್ರಕರಣದ ವಿಚಾರಣೆಗಾಗಿ ಜುಬೈರ್ ಅವರನ್ನು ದೆಹಲಿಯ ತಿಹಾರ್ ಜೈಲಿನಿಂದ ಬಿಗಿ ಭದ್ರತೆಯಲ್ಲಿ ಕರೆತರಲಾಗಿತ್ತು.

'ಈ ವಿಷಯವು ನಾಲ್ಕು ವರ್ಷಗಳ ಹಿಂದಿನದ್ದಾಗಿದ್ದು, ರಾಜಕೀಯ ಒತ್ತಡದಿಂದ ದುರುದ್ದೇಶಪೂರ್ವಕವಾಗಿ ಜುಬೈರ್ ಅವರನ್ನು ಬಂಧಿಸಲಾಗಿದೆ' ಎಂದು ಅವರ ವಕೀಲ ಉಮಂಗ್ ರಾವತ್ ವಾದಿಸಿದರು.

ಇದೇ ಪ್ರಕರಣಕ್ಕೆ ಸಂಬಂಧಿಸಿ ಜುಬೈರ್ ವಿರುದ್ಧ ವಿವಿಧ ಜಿಲ್ಲೆಗಳಲ್ಲಿ ದಾಖಲಾಗಿರುವ ಪ್ರಕರಣಗಳ ತನಿಖೆಗಾಗಿ ಉತ್ತರ ಪ್ರದೇಶ ಪೊಲೀಸರು ಮಂಗಳವಾರ ವಿಶೇಷ ತನಿಖಾ ತಂಡವನ್ನು (ಎಸ್‌ಐಟಿ) ರಚಿಸಿದ್ದರು.

'ಸುಪ್ರೀಂ' ಮೊರೆ ಹೋದ ಜುಬೈರ್: ಉತ್ತರ ಪ್ರದೇಶದ ವಿವಿಧ ಜಿಲ್ಲೆಗಳಲ್ಲಿ ತಮ್ಮ ವಿರುದ್ಧ ದಾಖಲಾಗಿರುವ ಆರು ಎಫ್‌ಐಆರ್‌ಗಳನ್ನು ರದ್ದುಗೊಳಿಸಬೇಕೆಂದು ಕೋರಿ ಜುಬೈರ್ ಅವರು ಗುರುವಾರ ಸುಪ್ರೀಂಕೋರ್ಟ್ ಮೊರೆ ಹೋಗಿದ್ದಾರೆ.

ಆರು ಪ್ರಕರಣಗಳಲ್ಲೂ ಮಧ್ಯಂತರ ಜಾಮೀನು ಮಂಜೂರು ಮಾಡಬೇಕು ಎಂದೂ ಕೋರಿದ್ದಾರೆ. ಉತ್ತರ ಪ್ರದೇಶ ಪೊಲೀಸರು ತನಿಖೆಗಾಗಿ ಎಸ್‌ಐಟಿ ರಚಿಸಿರುವುದನ್ನೂ ಅವರು ಅರ್ಜಿಯಲ್ಲಿ ಪ್ರಶ್ನಿಸಿದ್ದಾರೆ.

ಕೇರಳದಲ್ಲಿ ದೇಶದ ಮೊದಲ ಪ್ರಕರಣ ಪತ್ತೆ: ರಾಜ್ಯಗಳಿಗೆ ಕೇಂದ್ರ ಸೂಚನೆ

ಮಂಕಿಪಾಕ್ಸ್ ತಡೆಗೆ ಸಜ್ಜಾಗಿ

ಪ್ರಜಾವಾಣಿ ವಾರ್ತೆ

ಪ್ರಾತಿನಿಧಿಕ ಚಿತ್ರ

ನವದೆಹಲಿ/ತಿರುವನಂತಪುರ: ಜಗತ್ತಿನಾದ್ಯಂತ ಮಂಕಿಪಾಕ್ಸ್ ವೈರಾಣು ಪ್ರಕರಣಗಳು ನಿಧಾನವಾಗಿ ಏರಿಕೆಯಾಗುತ್ತಿದ್ದು, ದೇಶದ ಮೊದಲ ಮಂಕಿಪಾಕ್ಸ್ ಪ್ರಕರಣ ಕೇರಳದ ಕೊಲ್ಲಂ ಜಿಲ್ಲೆಯಲ್ಲಿ ಪತ್ತೆಯಾಗಿದೆ. ಹೀಗಾಗಿ ಅಗತ್ಯ ಸಿದ್ಧತೆ ಮತ್ತು ಮುನ್ನೆಚ್ಚರಿಕೆ ಕ್ರಮಗಳನ್ನು ತೆಗೆದುಕೊಳ್ಳಲು ಕೇಂದ್ರ ಸರ್ಕಾರವು ಗುರುವಾರ ಎಲ್ಲ ರಾಜ್ಯಗಳಿಗೆ ಸೂಚನೆ ಕೊಟ್ಟಿದೆ.

ಇದರ ಬೆನ್ನಲ್ಲೇ ಕೇರಳದಾದ್ಯಂತ ಸಾರ್ವಜನಿಕ ಆರೋಗ್ಯ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳಲು ಬಹು ಶಿಸ್ತೀಯ ಉನ್ನತಮಟ್ಟದ ತಂಡವನ್ನು ಕೇಂದ್ರ ಸರ್ಕಾರ ಗುರುವಾರ ಆ ರಾಜ್ಯಕ್ಕೆ ಕಳುಹಿಸಿದೆ.

ಸಂಯುಕ್ತ ಅರಬ್ ಸಂಸ್ಥಾನದಿಂದ ಕೇರಳಕ್ಕೆ ಮರಳಿರುವ 35 ವರ್ಷದ ವ್ಯಕ್ತಿಯಲ್ಲಿ ಮಂಕಿಪಾಕ್ಸ್ ವೈರಾಣು ಇರುವುದನ್ನು ರಾಷ್ಟ್ರೀಯ ವೈರಾಣು ಸಂಸ್ಥೆಯ (ಎನ್‌ಐವಿ) ಪ್ರಯೋಗಾಲಯ ವರದಿ ದೃಢಪಡಿಸಿದೆ. ಪ್ರಕರಣ ದೃಢಪಟ್ಟ ದಿನವೇ ಆಸ್ಪತ್ರೆಗಳು, ನುರಿತ ಮಾನವ ಸಂಪನ್ಮೂಲ ಮತ್ತು ಇಂತಹ ಪ್ರಕರಣಗಳ ನಿರ್ವಹಣೆಗೆ ಅಗತ್ಯ ವ್ಯವಸ್ಥೆ ಸಿದ್ಧವಾಗಿಡಲು ಕೇಂದ್ರ ಆರೋಗ್ಯ ಸಚಿವಾಲಯವು ಎಲ್ಲ ರಾಜ್ಯ ಸರ್ಕಾರಗಳಿಗೆ ಪತ್ರ ರವಾನಿಸಿದೆ.

ಕೇಂದ್ರ ಆರೋಗ್ಯ ಕಾರ್ಯದರ್ಶಿ ರಾಜೇಶ್ ಭೂಷಣ್, ರಾಜ್ಯಗಳಿಗೆ ಕಳುಹಿಸಿರುವ ಪತ್ರದಲ್ಲಿ, '2022ರ ಜನವರಿಯಿಂದ ಜೂನ್ 22ರವರೆಗೆ ಜಗತ್ತಿನ 50 ದೇಶಗಳಲ್ಲಿ ಒಟ್ಟು 3,413 ಪ್ರಕರಣಗಳು ವರದಿಯಾಗಿದ್ದು, ಒಬ್ಬರು ಮೃತಪಟ್ಟಿರುವ ಮಾಹಿತಿ ವಿಶ್ವ ಆರೋಗ್ಯ ಸಂಸ್ಥೆಗೆ ಸಿಕ್ಕಿದೆ. ಯುರೋಪ್‌ನಲ್ಲಿ (ಶೇ 86) ಮತ್ತು ಅಮೆರಿಕದಲ್ಲಿ (ಶೇ 11) ಹೆಚ್ಚು ಪ್ರಕರಣ ವರದಿಯಾಗಿವೆ' ಎಂದು ಉಲ್ಲೇಖಿಸಲಾಗಿದೆ.

ವಿಶ್ವ ಆರೋಗ್ಯ ಸಂಸ್ಥೆಯ ವರದಿ ಪ್ರಕಾರ, ಈವರೆಗೆ 63 ದೇಶಗಳಲ್ಲಿ ವೈರಾಣು ಕಾಣಿಸಿದ್ದು, ಸುಮಾರು 9,200 ಪ್ರಕರಣಗಳು ಪತ್ತೆಯಾಗಿವೆ.

'ವಿಶ್ವ ಆರೋಗ್ಯ ಸಂಸ್ಥೆಯ ಐದು ವಲಯಗಳ ಕ್ಲಸ್ಟರ್ ಮಟ್ಟದಲ್ಲಿ ಏಕಕಾಲದಲ್ಲಿ ಪ್ರಕರಣಗಳು ಪತ್ತೆಯಾಗಿರುವುದು ಇದೇ ಮೊದಲು. ಪ್ರಕರಣಗಳ ಪ್ರಸರಣ ಜಾಗತಿಕವಾಗಿ ನಿಧಾನಗತಿಯಲ್ಲಿ ಇದ್ದರೂ ನಿರಂತರ ಏರಿಕೆಯಾಗುತ್ತಿದೆ. ಜಾಗತಿಕ ಮಟ್ಟದಲ್ಲಿ ಪ್ರಕರಣಗಳ ಒಟ್ಟಾರೆ ಅಪಾಯವನ್ನೂ ಮೌಲ್ಯಮಾಪನ ಮಾಡಲಾಗಿದೆ' ಎಂದು ಅವರು ಪತ್ರದಲ್ಲಿ ತಿಳಿಸಿದ್ದಾರೆ.

ಈ ವೈರಾಣುವಿನಿಂದ ಮರಣ ತಡೆಗಟ್ಟಲು ರೋಗಿಯನ್ನು ಪ್ರತ್ಯೇಕವಾಗಿರಿಸುವುದು (ಗಾಯ, ಹುಣ್ಣುಗಳು ಗುಣವಾಗುವವರೆಗೆ), ಹುಣ್ಣುಗಳಿಗೆ ಪೂರಕ ಚಿಕಿತ್ಸೆಗಳು, ನಿರಂತರ ಮೇಲ್ವಿಚಾರಣೆ ಮತ್ತು ಸಮಯೋಚಿತ ಚಿಕಿತ್ಸೆ ನೀಡುವುದು ಪ್ರಮುಖವಾಗಿದೆ.

ರೋಗಿ ಸಂಪರ್ಕಿತರ ಐಸೋಲೇಷನ್

ಮಂಕಿಪಾಕ್ಸ್ ರೋಗಿಯ ಆರೋಗ್ಯ ಸ್ಥಿರವಾಗಿದ್ದು, ತಿರುವನಂತಪುರದ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ. ಪ್ರಯಾಣದ ವೇಳೆ ರೋಗಿಯ ಸಂಪರ್ಕಕ್ಕೆ ಬಂದ ವಿಮಾನ ಸಹ ಪ್ರಯಾಣಿಕರು, ಟ್ಯಾಕ್ಸಿ ಚಾಲಕ, ಕುಟುಂಬ ಸದಸ್ಯರು, ಚಿಕಿತ್ಸೆ ನೀಡಿದ್ದ ಕೊಲ್ಲಂನ ಖಾಸಗಿ ಆಸ್ಪತ್ರೆಯ ವೈದ್ಯರು ಹಾಗೂ ಸಿಬ್ಬಂದಿ ಪ್ರತ್ಯೇಕವಾಗಿರಿಸಲಾಗಿದೆ ಎಂದು ಕೇರಳ ಆರೋಗ್ಯ ಸಚಿವೆ ವೀಣಾ ಜಾರ್ಜ್ ತಿಳಿಸಿದ್ದಾರೆ.

ವಿದೇಶದಲ್ಲಿರುವ ತನ್ನ ಆಪ್ತ ಸ್ನೇಹಿತರಲ್ಲಿ ಒಬ್ಬರಿಗೆ ಸೋಂಕು ಕಾಣಿಸಿಕೊಂಡಿದ್ದರಿಂದ ಈ ವ್ಯಕ್ತಿ ತನಗೂ ವೈರಾಣು ಹರಡಿರುವ ಶಂಕೆಯಿಂದ ಪ್ರಯಾಣದ ವೇಳೆ ಮುನ್ನೆಚ್ಚರಿಕೆ ವಹಿಸಿದ್ದಾರೆ. ವ್ಯಕ್ತಿಯಿಂದ ಮಾದರಿ ಸಂಗ್ರಹಿಸಿ, ಪುಣೆಯ ಎನ್‌ಐವಿಗೆ ಕಳುಹಿಸಲಾಗಿತ್ತು, ಸಂಜೆ ವೇಳೆಗೆ ವರದಿ ಬಂದಿದ್ದು, ರೋಗಾಣು ದೃಢಪಟ್ಟಿದೆ. ಈ ಪ್ರಕರಣದಿಂದ ರಾಜ್ಯದಾದ್ಯಂತ ಅಗತ್ಯ ಮುನ್ನೆಚ್ಚರಿಕೆ ವಹಿಸಲಾಗಿದೆ ಎಂದು ಸಚಿವೆ ಹೇಳಿದ್ದಾರೆ.

ಈ ವೈರಾಣುವಿನ ಇನ್‌ಕ್ಯುಬೇಷನ್ ಅವಧಿ 21 ದಿನಗಳಾಗಿದ್ದು, ರೋಗಿಗಳಿಗೆ ತೀರಾ ಹತ್ತಿರದ ಸಂಪರ್ಕಕ್ಕೆ ಬಂದವರಿಗೆ ವೈರಾಣು ಹರಡುವ ಸಾಧ್ಯತೆ ಇರುತ್ತದೆ. ಇದರಿಂದ ಮರಣ ಪ್ರಮಾಣ ಅತ್ಯಂತ ಕಡಿಮೆ ಇದೆ ಎನ್ನುವುದು ತಜ್ಞರ ಅಭಿಮತ.

ದೇಶದಲ್ಲಿ ಮೊದಲ ಕೋವಿಡ್ ಪ್ರಕರಣ ಚೀನಾದಿಂದ ವಾಪಾಸಾಗಿದ್ದ ವೈದ್ಯಕೀಯ ವಿದ್ಯಾರ್ಥಿನಿಯಿಂದ 2020 ಜನವರಿ 30ರಂದು ಪತ್ತೆಯಾಗಿತ್ತು.

ಸುದ್ದಿ 2 ನಿಮಿಷ

ಚೋಕ್ಸಿ ವಿರುದ್ಧ ಹೊಸ ಪ್ರಕರಣ ದಾಖಲಿಸಿದ ಸಿಬಿಐ

ನವದೆಹಲಿ (ಪಿಟಿಐ): ಕೆನರಾ ಬ್ಯಾಂಕ್ ನೇತೃತ್ವದ ಒಕ್ಕೂಟಕ್ಕೆ ₹55.27 ಕೋಟಿ ವಂಚಿಸಿದ ಆರೋಪದ ಮೇಲೆ ದೇಶದಿಂದ ಪರಾರಿಯಾಗಿರುವ ವಜ್ರದ ವ್ಯಾಪಾರಿ ಮೇಹುಲ್ ಚೋಕ್ಸಿ ವಿರುದ್ಧ ಕೇಂದ್ರೀಯ ತನಿಖಾ ದಳ (ಸಿಬಿಐ) ಹೊಸ ಪ್ರಕರಣ ದಾಖಲಿಸಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಚೋಕ್ಸಿ, ಚೇತನಾ ಝಾವೇರಿ, ದಿನೇಶ್ ಭಾಟಿಯಾ ಮತ್ತು ಮಿಲಿಂದ್ ಲಿಮಾಯೆ ಸೇರಿದಂತೆ ಬೆಜೆಲ್

ಜ್ಯೂವೆಲ್ಲರಿ ಹಾಗೂ ಅದರ ಪೂರ್ಣಕಾಲಿಕ ನಿರ್ದೇಶಕರ ಮೇಲೂ ಸಿಬಿಐ ಪ್ರಕರಣ ದಾಖಲಿಸಿದೆ.

ಕೆನರಾ ಬ್ಯಾಂಕ್ ಹಾಗೂ ಬ್ಯಾಂಕ್ ಆಫ್ ಮಹಾರಾಷ್ಟ್ರ ಒಪ್ಪಂದದಡಿ ಕ್ರಮವಾಗಿ ₹30 ಕೋಟಿ ಹಾಗೂ ₹20 ಕೋಟಿಯನ್ನು ಕಾರ್ಯನಿರತ ಬಂಡವಾಳ ಸೌಲಭ್ಯವಾಗಿ ಬೆಜೆಲ್ ಜ್ಯೂವೆಲ್ಲರಿಗೆ ಬಿಡುಗಡೆ ಮಾಡಿದ್ದವು. ಆದರೆ, ಚಿನ್ನ ಹಾಗೂ ವಜ್ರಖಚಿತ ಆಭರಣಗಳ ತಯಾರಿಕೆ ಮತ್ತು ಮಾರಾಟಕ್ಕಾಗಿ ನೀಡಲಾದ ಹಣದ ಹರಿವನ್ನು ಮುಚ್ಚಿಡುವ ಉದ್ದೇಶದಿಂದ ಸಂಸ್ಥೆಯು ಯಾವುದೇ ವ್ಯವಹಾರವನ್ನು ಖಾತೆಯ ಮೂಲಕ ನಡೆಸಿಲ್ಲ ಎಂದು ಸಿಬಿಐ ಆರೋಪಿಸಿದೆ.

ಅಲ್ಲದೆ, ಬೆಜೆಲ್ ಹಣವನ್ನು ಹಿಂತಿರುಗಿಸದೇ ಇದ್ದುದರಿಂದ, ಬ್ಯಾಂಕ್‌ಗಳಿಗೆ ₹55.27 ಕೋಟಿ ನಷ್ಟವಾಗಿದೆ ಎಂದೂ ಸಿಬಿಐ ಹೇಳಿದೆ.

ಚಿತ್ರಾ ರಾಮಕೃಷ್ಣನ್ ವಿಚಾರಣೆಗಾಗಿ ಇ.ಡಿ ವಶಕ್ಕೆ

ನವದೆಹಲಿ (ಪಿಟಿಐ): ರಾಷ್ಟ್ರೀಯ ಷೇರು ವಿನಿಮಯ ಕೇಂದ್ರದ (ಎನ್‌ಎಸ್‌ಇ) ಮಾಜಿ ವ್ಯವಸ್ಥಾಪಕ ನಿರ್ದೇಶಕಿ ಮತ್ತು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಚಿತ್ರಾ ರಾಮಕೃಷ್ಣನ್ ಅವರನ್ನು ಹಣ ಅಕ್ರಮ ವರ್ಗಾವಣೆ, ದೂರವಾಣಿ ಅಕ್ರಮ ಕದ್ದಾಲಿಕೆ ಹಾಗೂ ಷೇರು ಪೇಟೆ ಸಿಬ್ಬಂದಿ ಮೇಲೆ ಬೇಹುಗಾರಿಕೆ ನಡೆಸಿದ ಆರೋಪಗಳ ಸಂಬಂಧ ಜಾರಿ ನಿರ್ದೇಶನಾಲಯ (ಇ.ಡಿ) ಗುರುವಾರ ಬಂಧಿಸಿದೆ.

ಚಿತ್ರಾ ಅವರು ವಿಚಾರಣೆಗೆ ಸರಿಯಾಗಿ ಸಹಕರಿಸುತ್ತಿಲ್ಲ. ಹೆಚ್ಚಿನ ವಿಚಾರಣೆ ಅಗತ್ಯವಿರುವುದರಿಂದ ಒಂಬತ್ತು ದಿನಗಳವರೆಗೆ ಕಸ್ಟಡಿಗೆ ನೀಡುವಂತೆ ಇ.ಡಿ ಅಧಿಕಾರಿಗಳು, ದೆಹಲಿ ನ್ಯಾಯಾಲಯಕ್ಕೆ ಮನವಿ ಮಾಡಿದರು. ವಿಶೇಷ ನ್ಯಾಯಾಧೀಶರಾದ ಸುನೈನಾ ಶರ್ಮಾ ಅವರು, ಚಿತ್ರಾ ಅವರನ್ನು ನಾಲ್ಕು ದಿನ ಇ.ಡಿ ಕಸ್ಟಡಿಗೆ ಒಪ್ಪಿಸಿ ಆದೇಶ ಹೊರಡಿಸಿದರು. ಇದಕ್ಕೂ ಮೊದಲು ಜೈಲಿನಲ್ಲಿದ್ದ ಚಿತ್ರಾ ಅವರನ್ನು ಕೋರ್ಟ್ ಮುಂದೆ ಹಾಜರುಪಡಿಸಲಾಯಿತು.

ಮತ್ತೊಂದು ಪ್ರಕರಣ ಸಂಬಂಧ ಚಿತ್ರಾ ರಾಮಕೃಷ್ಣನ್ ಅವರನ್ನು ಸಿಬಿಐ ಈ ಹಿಂದೆಯೇ ಬಂಧಿಸಿದ್ದು, ನ್ಯಾಯಾಂಗ ಬಂಧನದಲ್ಲಿದ್ದರು.

ಫುಡ್ ಪಾರ್ಕ್; ಯುಎಇ ಹೂಡಿಕೆ

₹16 ಸಾವಿರ ಕೋಟಿ ಹೂಡಿಕೆಗೆ ಐ2ಯು2 ಸಮ್ಮೇಳನದಲ್ಲಿ ನಿರ್ಣಯ

ನವದೆಹಲಿ (ಪಿಟಿಐ): ಭಾರತದಾದ್ಯಂತ ಏಕೀಕೃತ 'ಫುಡ್ ಪಾರ್ಕ್'ಗಳ ಅಭಿವೃದ್ಧಿಗಾಗಿ ಯುನೈಟೆಡ್ ಅರಬ್ ಎಮಿರೇಟ್ಸ್ (ಯುಎಇ) ಸುಮಾರು ₹16 ಸಾವಿರ ಕೋಟಿ (2 ಬಿಲಿಯನ್ ಅಮೆರಿಕನ್ ಡಾಲರ್) ಹೂಡಿಕೆ ಮಾಡಲಿದೆ.

ಭಾರತ, ಇಸ್ರೇಲ್ (ಐ2), ಅಮೆರಿಕ, ಯುಎಇ (ಯು2) ದೇಶಗಳನ್ನೊಳಗೊಂಡ 'ಐ2ಯು2' ವರ್ಚುವಲ್ ಸಮ್ಮೇಳನದಲ್ಲಿ ಗುರುವಾರ ಈ ನಿರ್ಣಯ ಕೈಗೊಳ್ಳಲಾಗಿದೆ.

ಪ್ರಧಾನಿ ನರೇಂದ್ರ ಮೋದಿ, ಅಮೆರಿಕ ಅಧ್ಯಕ್ಷ ಜೋ ಬೈಡನ್, ಇಸ್ರೇಲ್ ಪ್ರಧಾನಿ ಯಾಯಿರ್ ಲಪಿದ್ ಹಾಗೂ ಯುಎಇ ಅಧ್ಯಕ್ಷ ಮೊಹಮ್ಮದ್ ಬಿನ್ ಜಾಯೆದ್ ಅಲ್ ನಹ್ಯಾನ್ ಅವರು ಸಮ್ಮೇಳನದಲ್ಲಿ ಭಾಗವಹಿಸಿದ್ದರು.

'ಆಹಾರ ಭದ್ರತಾ ಬಿಕ್ಕಟ್ಟು, ಶುದ್ಧ ಇಂಧನ, ವೈವಿಧ್ಯಮಯ ಆಹಾರ ಪದಾರ್ಥಗಳನ್ನು ಸುದೀರ್ಘ ಅವಧಿವರೆಗೂ ಕಾಪಿಟ್ಟುಕೊಳ್ಳಲು ಇರುವ ನವೀನ ಮಾರ್ಗೋಪಾಯಗಳು ಹಾಗೂ ಆಹಾರ ಪೂರೈಕೆ ವ್ಯವಸ್ಥೆಯ ಕುರಿತು ಸಮ್ಮೇಳನದಲ್ಲಿ ಪ್ರಮುಖವಾಗಿ ಚರ್ಚಿಸಲಾಯಿತು' ಎಂದು ಐ2ಯು2 ನಾಯಕರ ಜಂಟಿ ಪ್ರಕಟಣೆ ತಿಳಿಸಿದೆ.

'ಯೋಜನೆಗೆ ಅಗತ್ಯವಿರುವ ಭೂಮಿಯನ್ನು ಭಾರತ ಒದಗಿಸಲಿದೆ. ಅಮೆರಿಕ ಹಾಗೂ ಇಸ್ರೇಲ್‌ನ ಖಾಸಗಿ ಕಂಪನಿಗಳ ಪರಿಣತರು ಈ ಯೋಜನೆ ಸಾಕಾರಗೊಳಿಸುವ ದಿಸೆಯಲ್ಲಿ ಕೆಲಸ ಮಾಡಲಿದ್ದಾರೆ. ಬೆಳೆಯ ಇಳುವರಿ ಹೆಚ್ಚಿಸಲು, ಆ ಮೂಲಕ ದಕ್ಷಿಣ ಏಷ್ಯಾ ಹಾಗೂ ಮಧ್ಯ ಪ್ರಾಚ್ಯ ರಾಷ್ಟ್ರಗಳು ಎದುರಿಸುತ್ತಿರುವ ಆಹಾರದ ಅಭದ್ರತೆ ನಿವಾರಿಸಲು ಈ ಯೋಜನೆ ಸಹಕಾರಿಯಾಗಲಿದೆ' ಎಂದೂ ಪ್ರಕಟಣೆಯಲ್ಲಿ ವಿವರಿಸಲಾಗಿದೆ.

'ಇಂಧನ ಭದ್ರತೆ, ಆಹಾರ ಭದ್ರತೆ ಹಾಗೂ ಆರ್ಥಿಕತೆಯ ಬೆಳವಣಿಗೆಗೆ ಐ2ಯು2 ಮಹತ್ವದ ಕಾಣಿಕೆ ನೀಡಲಿದೆ. ನಾವು ಜಂಟಿಯಾಗಿ ಹಲವು ಯೋಜನೆಗಳನ್ನು ರೂಪಿಸಿದ್ದೇವೆ. ಅವುಗಳನ್ನು ಕಾರ್ಯಗತಗೊಳಿಸಲು ಅಗತ್ಯವಿರುವ ರೂಪುರೇಷೆಯನ್ನೂ ಸಿದ್ಧಪಡಿಸಿದ್ದೇವೆ' ಎಂದು ಮೋದಿ ಹೇಳಿದ್ದಾರೆ. 'ಜಲ, ಇಂಧನ, ಸಾರಿಗೆ, ಅಂತರಿಕ್ಷ, ಆರೋಗ್ಯ ಮತ್ತು ಆಹಾರ ಭದ್ರತೆಯಂತಹ ಬಹುಮುಖ್ಯ ಕ್ಷೇತ್ರಗಳಲ್ಲಿ ಜಂಟಿ ಹೂಡಿಕೆ ಮಾಡುವ ಸಂಬಂಧ ಒಪ್ಪಂದವೊಂದನ್ನು ಮಾಡಿಕೊಂಡಿದ್ದೇವೆ' ಎಂದೂ ತಿಳಿಸಿದ್ದಾರೆ.

ಜಲಫಿರಂಗಿ ಪ್ರಯೋಗ

ವಿದ್ಯುತ್ ದರ ಏರಿಕೆಯನ್ನು ಖಂಡಿಸಿ ನವದೆಹಲಿಯಲ್ಲಿ ಗುರುವಾರ ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ವಿರುದ್ಧ ಪ್ರತಿಭಟನೆ ನಡೆಸಿದ ಬಿಜೆಪಿ ಕಾರ್ಯಕರ್ತರು ಬ್ಯಾರಿಕೇಡ್ ದಾಟಲು ಯತ್ನಿಸಿದಾಗ ಭದ್ರತಾ ಸಿಬ್ಬಂದಿ ಜಲಫಿರಂಗಿ ಪ್ರಯೋಗಿಸಿದರು – ಪಿಟಿಐ ಚಿತ್ರ

ದೇಶದ ಎರಡನೇ ಅತಿ ದೊಡ್ಡ ಪ್ರವೇಶ ಪರೀಕ್ಷೆ

ಇಂದಿನಿಂದ 'ಸಿಯುಇಟಿ–ಯುಜಿ'

ನವದೆಹಲಿ (ಪಿಟಿಐ): ಕೇಂದ್ರೀಯ ವಿಶ್ವವಿದ್ಯಾಲಯಗಳೂ ಸೇರಿದಂತೆ ದೇಶದ ವಿವಿಧ ವಿಶ್ವವಿದ್ಯಾಲಯಗಳಲ್ಲಿನ ಪದವಿ ಕೋರ್ಸ್‌ಗಳ ಪ್ರವೇಶಕ್ಕೆ ಶುಕ್ರವಾರದಿಂದ (ಇದೇ 15) ಆಗಸ್ಟ್ 20ರವರೆಗೆ ಸಾಮಾನ್ಯ ಪ್ರವೇಶ ಪರೀಕ್ಷೆ (ಸಿಯುಇಟಿ–ಯುಜಿ) ನಡೆಯಲಿದೆ.

ದೇಶದ 500 ಮತ್ತು ವಿದೇಶದ 10 ನಗರಗಳಲ್ಲಿ ನಡೆಯುವ ಈ ಪರೀಕ್ಷೆಗೆ 14.9 ಲಕ್ಷ ವಿದ್ಯಾರ್ಥಿಗಳು ಹೆಸರು ನೋಂದಾಯಿಸಿದ್ದು, ದೇಶದ ಎರಡನೇ ಅತಿ ದೊಡ್ಡ ಪ್ರವೇಶ ಪರೀಕ್ಷೆ ಎನಿಸಿದೆ.

ವೈದ್ಯಕೀಯ ಪದವಿ ಪ್ರವೇಶಕ್ಕಾಗಿ ನಡೆಯುವ 'ನೀಟ್–ಯುಜಿ' ದೇಶದ ಅತಿ ದೊಡ್ಡ ಸಾಮಾನ್ಯ ಪ್ರವೇಶ ಪರೀಕ್ಷೆಯಾಗಿದ್ದು, ಆ ಪರೀಕ್ಷೆಗೆ ಸರಾಸರಿ 18 ಲಕ್ಷದಷ್ಟು ವಿದ್ಯಾರ್ಥಿಗಳು ಹೆಸರು ನೋಂದಾಯಿಸುತ್ತಾರೆ. ಪ್ರತಿಷ್ಠಿತ ಶಿಕ್ಷಣ ಸಂಸ್ಥೆಗಳಲ್ಲಿ ಎಂಜಿನಿಯರಿಂಗ್ ಪದವಿ ಪ್ರವೇಶಕ್ಕೆ ನಡೆಯುವ ಜೆಇಇ (ಮೇನ್ಸ್) ಪರೀಕ್ಷೆಗೆ ಸರಾಸರಿ 9 ಲಕ್ಷದಷ್ಟು ವಿದ್ಯಾರ್ಥಿಗಳು ನೋಂದಾಯಿಸಿಕೊಳ್ಳುತ್ತಾರೆ.

'ಸಿಯುಇಟಿಗೆ (ಯುಜಿಸಿ) ಹೆಸರು ನೋಂದಾಯಿಸಿರುವ ವಿದ್ಯಾರ್ಥಿಗಳ ಈ ಪೈಕಿ 8.1 ಲಕ್ಷ ಮೊದಲ ಹಂತ, 6.80 ಲಕ್ಷ ವಿದ್ಯಾರ್ಥಿಗಳು ಎರಡನೇ ಹಂತದಲ್ಲಿ ಪರೀಕ್ಷೆ ಬರೆಯಲಿದ್ದಾರೆ. ದೇಶದ 90 ವಿಶ್ವವಿದ್ಯಾಲಯಗಳಲ್ಲಿ 54,555 ವಿಷಯಗಳ ವಿಶಿಷ್ಟ ಸಂಯೋಜನೆಯ ಕೋರ್ಸ್‌ಗಳ ಪ್ರವೇಶಕ್ಕಾಗಿ ಈ ವಿದ್ಯಾರ್ಥಿಗಳು ಪರೀಕ್ಷೆ ಬರೆಯಲಿದ್ದಾರೆ' ಎಂದು ವಿಶ್ವವಿದ್ಯಾಲಯ ಅನುದಾನ ಆಯೋಗದ (ಯುಜಿಸಿ) ಅಧ್ಯಕ್ಷ ಜಗದೀಶ್ ಕುಮಾರ್ ಮಾಹಿತಿ ನೀಡಿದರು.

ಪರೀಕ್ಷೆಯ ಮೊದಲ ಹಂತ ಜುಲೈನಲ್ಲಿ ಹಾಗೂ ಎರಡನೇ ಹಂತ ಆಗಸ್ಟ್‌ನಲ್ಲಿ ನಡೆಯಲಿದೆ. ಭೌತ ವಿಜ್ಞಾನ, ರಸಾಯನ ವಿಜ್ಞಾನ ಅಥವಾ ಜೀವ ವಿಜ್ಞಾನ ವಿಷಯಗಳನ್ನು ಆಯ್ಕೆ ಮಾಡಿಕೊಂಡಿರುವ ವಿದ್ಯಾರ್ಥಿಗಳಿಗೆ ಎರಡನೇ ಹಂತದಲ್ಲಿ ಪರೀಕ್ಷೆಗಳು ನಡೆಯಲಿವೆ. ಈ ವಿಷಯಗಳನ್ನು ಆಯ್ಕೆ ಮಾಡಿರುವ ವಿದ್ಯಾರ್ಥಿಗಳಿಗೆ ಜುಲೈ 17ರಂದು 'ನೀಟ್–ಯುಜಿ' ಪರೀಕ್ಷೆಗಳೂ ಜರುಗಲಿವೆ.

ರಾಷ್ಟ್ರೀಯ ಪರೀಕ್ಷಾ ಏಜೆನ್ಸಿ (ಎನ್‌ಟಿಎ) ಈ ಪರೀಕ್ಷೆ ನಡೆಸುತ್ತಿದ್ದು, ವಿದ್ಯಾರ್ಥಿಗಳ ಅಂಕಗಳನ್ನು ಪರ್ಸೆಂಟಲ್ ರೂಪದಲ್ಲಿ ನೀಡಲಾಗುತ್ತದೆ ಎಂದು ಕುಮಾರ್ ತಿಳಿಸಿದರು.

ದೇಶದಲ್ಲಿನ 44 ಕೇಂದ್ರೀಯ ವಿ.ವಿ, 12 ರಾಜ್ಯ ವಿ.ವಿ, 11 ಡೀಮ್ಡ್ ವಿ.ವಿ ಮತ್ತು 19 ಖಾಸಗಿ ವಿ.ವಿಗಳಲ್ಲಿನ ಪದವಿ ಕೋರ್ಸ್‌ಗಳ ಪ್ರವೇಶಕ್ಕೆ ಮೊದಲ ಆವೃತ್ತಿಯ ಸಿಯುಇಟಿ ನಡೆಯಲಿದೆ.

ಪ್ರಜಾವಾಣಿ– ಡೆಕ್ಕನ್ ಹೆರಾಲ್ಡ್ ನೆರವು ನಿಧಿ

ಪ್ರಜಾವಾಣಿ–ಡೆಕ್ಕನ್ ಹೆರಾಲ್ಡ್ ಪತ್ರಿಕೆಗಳು ಎಸ್‌ಎಸ್‌ಎಲ್‌ಸಿಯಲ್ಲಿ ಪಾಸಾಗಿರುವ ಬಡ ವಿದ್ಯಾರ್ಥಿಗಳಿಗೆ ಆರ್ಥಿಕ ನೆರವು ನೀಡಲಿದೆ. ಇದಕ್ಕಾಗಿ ದಾನಿಗಳು ಚೆಕ್ ಅಥವಾ ಡಿ.ಡಿ. ರೂಪದಲ್ಲಿ ಹಣವನ್ನು 'Deccan Herald-Prajavani relief Trust'ಗೆ ಕಳುಹಿಸಬಹುದು. ದಾನಿಗಳು ಹೆಸರು, ವಿಳಾಸ, ಮೊಬೈಲ್ ಸಂಖ್ಯೆ, ಆಧಾರ್/ಪ್ಯಾನ್ ಕಾರ್ಡ್ ಪ್ರತಿಯನ್ನು dept.finc@printersmysore.co.inಗೆ ಮೇಲ್ ಕಳುಹಿಸಿ.

ಆನ್‌ಲೈನ್/ಚೆಕ್ ಮೂಲಕವೂ ಹಣ ವರ್ಗಾಯಿಸಬಹುದು. ₹1 ಸಾವಿರಕ್ಕಿಂತ ಹೆಚ್ಚು ಹಣ ನೀಡುವವರ ಹೆಸರನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುವುದು. ಈ ದೇಣಿಗೆಗೆ ಸೆಕ್ಷನ್ 80 ಜಿ ಅನ್ವಯ ಆದಾಯ ತೆರಿಗೆ ವಿನಾಯಿತಿ ಇದೆ.

ಬ್ಯಾಂಕ್‌ಗೆ ನೇರವಾಗಿ ಹಣ ಸಂದಾಯ ಮಾಡುವವರು **'Deccan Herald-Prajavani Relief Trust', Canara Bank, Cantonment Branch, A/c no. 0404101200385, IFSC code: CNRB0000404, MICR Code: 560015009** ಇಲ್ಲಿಗೆ ಕಳುಹಿಸಬೇಕು.

ಆನ್‌ಲೈನ್‌ನಲ್ಲಿ ಹಣ ಸಂದಾಯ ಮಾಡುವವರು ಕೆಳಗಿನ ಕೋಡ್ ಸ್ಕ್ಯಾನ್ ಮಾಡಿ ಅಥವಾ ಲಿಂಕ್ ಬಳಸಿ.

ಸೂಚನೆ: ದಾನಿಗಳು ಲಕೋಟೆ ಮೇಲೆ **ಶೈಕ್ಷಣಿಕ ನೆರವಿಗೆ ಕೊಡುಗೆ** ಎಂದು ನಮೂದಿಸಬೇಕು. https://bit.ly/3xFpoz4

ವಿಳಾಸ: ಮ್ಯಾನೇಜರ್, ಡೆಕ್ಕನ್ ಹೆರಾಲ್ಡ್–ಪ್ರಜಾವಾಣಿ ಪರಿಹಾರ ಟ್ರಸ್ಟ್, ನಂ. 75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು – 560001

ಅರ್ಹ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನ

2022 ರ ಸಾಲಿನ ಎಸ್‌ಎಸ್‌ಎಲ್‌ಸಿಯಲ್ಲಿ ಹೆಚ್ಚು ಅಂಕ ಗಳಿಸಿದ ಸಾಮಾಜಿಕ, ಆರ್ಥಿಕವಾಗಿ ಹಿಂದುಳಿದ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಬಹುದು. ಜತೆಗೆ ವಿಳಾಸ, ಮೊಬೈಲ್ ಸಂಖ್ಯೆ, ಐಎಫ್‌ಎಸ್‌ಸಿ ನಂಬರ್ ಉಳ್ಳ ಬ್ಯಾಂಕ್ ಪಾಸ್‌ಬುಕ್ ಪುಟದ ಪ್ರತಿಯನ್ನು ಸಲ್ಲಿಸಬೇಕು. ಲಕೋಟೆಯ ಮೇಲೆ **'ಶೈಕ್ಷಣಿಕ ನೆರವಿಗೆ ಅರ್ಜಿ'** ಎಂದು ಬರೆಯಬೇಕು.

ರಾಷ್ಟ್ರೀಯ ಪಕ್ಷಗಳಿಗೆ ದೇಣಿಗೆ ಶೇ 41.49ರಷ್ಟು ಇಳಿಕೆ

ನವದೆಹಲಿ (ಪಿಟಿಐ): ಮಾನ್ಯತೆ ಪಡೆದ ರಾಷ್ಟ್ರೀಯ ಪಕ್ಷಗಳಿಗೆ ಸಂದಾಯವಾಗಿರುವ ದೇಣಿಗೆಯ ಮೊತ್ತ 2020–21ನೇ ಹಣಕಾಸು ವರ್ಷದಲ್ಲಿ ₹420 ಕೋಟಿಗೂ ಹೆಚ್ಚು ಕುಗ್ಗಿದೆ. ಅಂದರೆ ಇದು, ಹಿಂದಿನ ಹಣಕಾಸು ವರ್ಷಕ್ಕೆ ಹೋಲಿಸಿದರೆ ಶೇ 41.49ರಷ್ಟು ಕಡಿಮೆಯಾಗಿದೆ.

ಬಿಜೆಪಿಗೆ 2019–20ರ ಸಾಲಿನಲ್ಲಿ ₹ 785.77 ಕೋಟಿ ದೇಣಿಗೆ ಬಂದಿತ್ತು. ಆದರೆ, ಈ ಮೊತ್ತ 2020–21ರಲ್ಲಿ ₹ 477.54 ಕೋಟಿಗೆ ಇಳಿದಿದೆ ಎಂದು ಪ್ರಜಾಪ್ರಭುತ್ವ ಸುಧಾರಣಾ ಸಂಸ್ಥೆ (ಎಡಿಆರ್) ಈ ಕುರಿತ ಹೇಳಿಕೆಯಲ್ಲಿ ತಿಳಿಸಿದೆ.

ಆದರೆ, ಬಿಜೆಪಿಯು ನೀಡಿರುವ ಡೊನೇಷನ್ ಮೊತ್ತವು 2018–19ಕ್ಕೆ ಹೋಲಿಸಿದರೆ 2019–20ನೇ ವರ್ಷದಲ್ಲಿ ಶೇ 5.88ರಷ್ಟು ಏರಿಕೆಯಾಗಿದೆ ಎಂದು ಸಂಸ್ಥೆಯ ಹೇಳಿಕೆಯು ವಿವರಿಸಿದೆ.

ಕಾಂಗ್ರೆಸ್ ಪಕ್ಷಕ್ಕೆ 2019–20ರಲ್ಲಿ ₹ 139.016 ಕೋಟಿ ದೇಣಿಗೆ ಸಂದಾಯವಾಗಿದೆ, ಈ ಮೊತ್ತ 2020–21ರಲ್ಲಿ ₹ 74.524 ಕೋಟಿಗೆ ಇಳಿದಿದ್ದು, ಶೇ 46.39 ಕುಗ್ಗಿದೆ. ಇನ್ನೊಂದೆಡೆ, ಪಕ್ಷವು ನೀಡಿರುವ ಡೊನೇಷನ್ ಪ್ರಮಾಣವು 2018–19ಕ್ಕೆ ಹೋಲಿಸಿದರೆ 2020–21ರಲ್ಲಿ ಶೇ 6.44ರಷ್ಟು ಕಡಿಮೆ ಆಗಿದೆ.

ಒಟ್ಟಾರೆ ರಾಷ್ಟ್ರೀಯ ಪಕ್ಷಗಳಿಗೆ ದೆಹಲಿಯಿಂದ ಗರಿಷ್ಠ ಅಂದರೆ ಒಟ್ಟು ₹ 246 ಕೋಟಿ ದೇಣಿಗೆಯು ಸಂದಾಯವಾಗಿದ್ದರೆ, ನಂತರದ ಸ್ಥಾನದಲ್ಲಿ ಮಹಾರಾಷ್ಟ್ರ (₹ 71.68 ಕೋಟಿ) ಹಾಗೂ ಗುಜರಾತ್ (₹ 47 ಕೋಟಿ) ರಾಜ್ಯಗಳಿವೆ.

ಪರಿಪೂರ್ಣ ಮಾಹಿತಿ ಕೊರತೆಯಿಂದಾಗಿ 2020–21ನೇ ಸಾಲಿನಲ್ಲಿ ರಾಷ್ಟ್ರೀಯ ಪಕ್ಷಗಳಿಗೆ ಸಂದಾಯವಾಗಿರುವ ಒಟ್ಟು ₹ 37.912 ಕೋಟಿ ದೇಣಿಗೆಯನ್ನು ಯಾವುದೇ ರಾಜ್ಯ, ಕೇಂದ್ರಾಡಳಿತ ಪ್ರದೇಶಗಳ ಲೆಕ್ಕಕ್ಕೆ ತೋರಿಸಲಾಗುತ್ತಿಲ್ಲ ಎಂದು ತಿಳಿಸಿದೆ.

ಬಿಜೆಪಿ ಮತ್ತು ಕಾಂಗ್ರೆಸ್ ಹೊರತುಪಡಿಸಿ ಸಿಪಿಐ, ಸಿಪಿಐ-ಎಂ, ಟಿಎಂಸಿ, ಎನ್‌ಸಿಪಿ, ನ್ಯಾಷನಲ್ ಪೀಪಲ್ಸ್ ಪಾರ್ಟಿ ರಾಷ್ಟ್ರೀಯ ಪಕ್ಷಗಳು ಚುನಾವಣಾ ಆಯೋಗದ ಮಾನ್ಯತೆಯನ್ನು ಪಡೆದುಕೊಂಡಿವೆ.

'ಖಂಡನೆ: ನ್ಯಾಯಾಂಗ ನಿಂದನೆಯಾಗದು'

ನವದೆಹಲಿ: 'ಬಿಜೆಪಿ ವಕ್ತಾರೆಯಾಗಿದ್ದ ನೂಪುರ್ ಶರ್ಮಾ ಪ್ರಕರಣಕ್ಕೆ ಸಂಬಂಧಿಸಿದಂತೆ ಸುಪ್ರೀಂಕೋರ್ಟ್‌ನ ದ್ವಿಸದಸ್ಯ ಪೀಠದ ಹೇಳಿಕೆ ಖಂಡಿಸಿದ್ದ ನಿವೃತ್ತ ನ್ಯಾಯಮೂರ್ತಿಗಳು ಹಾಗೂ ಇತರರ ವಿರುದ್ಧ ನ್ಯಾಯಾಂಗ ನಿಂದನೆಯಡಿ ಕ್ರಮ ಕೈಗೊಳ್ಳುವುದು ಸರಿಯಲ್ಲ' ಎಂದು ಅಟಾರ್ನಿ ಜನರಲ್ ಕೆ.ಕೆ.ವೇಣುಗೋಪಾಲ್ ಅವರು ಸುಪ್ರೀಂಕೋರ್ಟ್‌ಗೆ ತಿಳಿಸಿದ್ದಾರೆ.

'ದೆಹಲಿ ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಎಸ್.ಎನ್.ಡಿಂಗ್ರಾ, ಮಾಜಿ ಹೆಚ್ಚುವರಿ ಸಾಲಿಸಿಟರ್ ಜನರಲ್ ಅಮನ್ ಲೇಖಿ ಮತ್ತು ಹಿರಿಯ ವಕೀಲ ಕೆ.ರಾಮಕುಮಾರ್ ಅವರ ಹೇಳಿಕೆ ನ್ಯಾಯಾಂಗದ ಘನತೆಗೆ ಚ್ಯುತಿ ತರುವಂತಿದೆ. ಹೀಗಾಗಿ ಇವರ ವಿರುದ್ಧ ನ್ಯಾಯಾಂಗ ನಿಂದನೆಯಡಿ ಕ್ರಮ ಕೈಗೊಳ್ಳಬೇಕು' ಎಂದು ವಕೀಲ ಸಿ.ಆರ್. ಜಯ ಸುಕಿನ್ ಅರ್ಜಿ ಸಲ್ಲಿಸಿದ್ದರು. ಇದರ ವಿಚಾರಣೆ ವೇಳೆ ವೇಣುಗೋಪಾಲ್ ಈ ರೀತಿ ಹೇಳಿದ್ದಾರೆ.

ಲಲಿತ್ ಮೋದಿ– ಸುಶ್ಮಿತಾ ಸೇನ್ ಡೇಟಿಂಗ್

ಪ್ರಜಾವಾಣಿ ವಾರ್ತೆ



ಸುಶ್ಮಿತಾ ಸೇನ್ ಜೊತೆಗಿರುವ ಚಿತ್ರವನ್ನು ಟ್ವೀಟ್ ಮಾಡಿರುವ ಲಲಿತ್ ಮೋದಿ

ನವದೆಹಲಿ: ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ಹುಟ್ಟುಹಾಕಿದ ರೂವಾರಿ ಮತ್ತು ಐಪಿಎಲ್ ಮೊದಲ ಅಧ್ಯಕ್ಷ ಲಲಿತ್ ಕುಮಾರ್ ಮೋದಿ ಈಗ ಮತ್ತೊಮ್ಮೆ ಸುದ್ದಿಯಲ್ಲಿದ್ದಾರೆ. ಕಾರಣ, ಬಾಲಿವುಡ್ ನಟಿ ಹಾಗೂ ಮಾಜಿ ವಿಶ್ವ ಸುಂದರಿ ಸುಶ್ಮಿತಾ ಸೇನ್ ಅವರೊಂದಿಗೆ ಡೇಟಿಂಗ್ ನಡೆಸುತ್ತಿರುವ ಸುದ್ದಿಯನ್ನು ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಂಡಿರುವುದು ವೈರಲ್ ಆಗಿದೆ.

'ಇದು ಹೊಸ ಆರಂಭ, ಕೊನೆಗೂ ನವ ಜೀವನ ಶುರುವಾಗಿದೆ. ಮಿಸ್ ಸೇನ್ ಒಳ್ಳೆಯ ಅರ್ಧಾಂಗಿ' ಎಂದು ಬಣ್ಣಿಸಿರುವ ಲಲಿತ್ ಕುಮಾರ್ ಮೋದಿ, ನಟಿಯ ಜತೆಗಿನ ಆಪ್ತತೆಯ ಕ್ಷಣಗಳ ಚಿತ್ರಗಳನ್ನು ಗುರುವಾರ ಟ್ವಿಟರ್‌ನಲ್ಲಿ ಹಂಚಿಕೊಂಡಿದ್ದಾರೆ.

'ಸಾರ್ಡಿನಿಯಾ ಜತೆಗೆ ಕುಟುಂಬದೊಂದಿಗೆ ವಿಶ್ವ ಪ್ರವಾಸ ಮುಗಿಸಿ ಈಗಷ್ಟೇ ಲಂಡನ್‌ಗೆ ಹಿಂತಿರುಗಿರುವೆ. ಸೇನ್ ಜತೆಗೆ ಹೊಸ ಜೀವನ ಶುರುವಾಗಿದೆ. ಸದ್ಯ ಇಬ್ಬರೂ ಡೇಟಿಂಗ್‌ನಲ್ಲಿದ್ದೇವೆ. ನಾವು ಸದ್ಯಕ್ಕೆ ಮದುವೆಯಾಗಿಲ್ಲ. ಮುಂದೆ ಅದೂ ಆಗಬಹುದು' ಟ್ವೀಟ್‌ನಲ್ಲಿ ಮೋದಿ ಹೇಳಿಕೊಂಡಿದ್ದಾರೆ.

'ಪ್ರಜಾವಾಣಿ' ಸ್ಕಾಲರ್‌ಶಿಪ್

'ಶುಲ್ಕ ಭರಿಸಿದೆ



ಎಸ್ಸೆಸ್ಸೆಲ್ಸಿಯಲ್ಲಿ 625 ಅಂಕ ಪಡೆದಿದ್ದೆ. 'ಪ್ರಜಾವಾಣಿ' ಸ್ಕಾಲರ್‌ಶಿಪ್‌ನಿಂದ ವಿದ್ಯಾಭ್ಯಾಸಕ್ಕೆ ಅನುಕೂಲವಾಯಿತು. ಬನ್ನೂರಿನ ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ವಿಜ್ಞಾನ ವಿಭಾಗದಲ್ಲಿ ಅಧ್ಯಯನ ನಡೆಸುತ್ತಿದ್ದು, ಪಾವತಿ, ಪುಸ್ತಕ ಖರೀದಿ ಹಾಗೂ ಸಮವಸ್ತ್ರಕ್ಕೆ ಈ ಹಣ ಬಳಸಿದೆ. ಈಗಷ್ಟೇ ದ್ವಿತೀಯ ಪಿಯುಸಿಗೆ ದಾಖಲಾಗಿದ್ದೇನೆ. ಪ್ರಥಮ ವರ್ಷದಲ್ಲಿ (ವಿಜ್ಞಾನ ವಿಭಾಗ) 575 ಅಂಕ ಪಡೆದಿದ್ದೇನೆ.

ಜಿ.ಎಸ್. ಹರ್ಷಿತಾ

'ಪುಸ್ತಕ ಖರೀದಿಸಿದೆ'



ಕಾಲೇಜಿನ ಶುಲ್ಕ ಭರಿಸಿದೆ. ಪುಸ್ತಕ ತೆಗೆದುಕೊಂಡೆ. ಪ್ರಥಮ ಪಿಯುಸಿ ಉತ್ತಮ ಅಂಕ ಬಂದಿದೆ. ಸ್ಕಾಲರ್‌ಶಿಪ್ ನೀಡಿದ 'ಪ್ರಜಾವಾಣಿ'ಗೆ ಕೃತಜ್ಞತೆ ಸಲ್ಲಿಸುತ್ತೇನೆ.

ಪ್ರಸಾದ್ ಎ.ಎಂ

ಕೋವಿಡ್: 20 ಸಾವಿರ ದಾಟಿದ ಹೊಸ ಪ್ರಕರಣ

ನವದೆಹಲಿ (ಪಿಟಿಐ): ದೇಶದಲ್ಲಿ 145 ದಿನಗಳ ಬಳಿಕ ದೈನಂದಿನ ಕೋವಿಡ್ ಪ್ರಕರಣಗಳ ಸಂಖ್ಯೆ 20,000 ಗಡಿ ದಾಟಿದೆ. ಗುರುವಾರ ಬೆಳಿಗ್ಗೆ 8 ಗಂಟೆಗೆ ಕೊನೆಗೊಂಡ 24 ತಾಸುಗಳ ಅವಧಿಯಲ್ಲಿ 20,139 ಪ್ರಕರಣಗಳು ದೃಢಪಟ್ಟಿವೆ. ಇದೇ ಅವಧಿಯಲ್ಲಿ 38 ಮಂದಿ ಮೃತಪಟ್ಟಿದ್ದಾರೆ.

ಒಟ್ಟು ಸಕ್ರಿಯ ಪ್ರಕರಣಗಳ ಸಂಖ್ಯೆ 1,36,076ಕ್ಕೆ ಏರಿಕೆಯಾಗಿದೆ. ಚೇತರಿಕೆ ಪ್ರಮಾಣ ಶೇ 98.49ರಷ್ಟಿದೆ. ದೈನಂದಿನ ಪಾಸಿಟಿವಿಟಿ ದರ ಶೇ 5.10ರಷ್ಟಿದೆ. ಹೊಸ ಪ್ರಕರಣಗಳೂ ಸೇರಿದಂತೆ ದೇಶದಲ್ಲಿ ಒಟ್ಟು ಪ್ರಕರಣಗಳ ಸಂಖ್ಯೆ 4,36,89,989ಕ್ಕೆ ಏರಿದೆ. ಒಟ್ಟು ಸಾವಿನ ಸಂಖ್ಯೆ 5,25,557ಕ್ಕೆ ತಲುಪಿದೆ.

ಪ್ರತಿಕೂಲ ಹವಾಮಾನ: 2 ಮಾರ್ಗಗಳಲ್ಲಿ ಯಾತ್ರೆ ರದ್ದು

ಅಮರನಾಥ ಯಾತ್ರೆ ತಾತ್ಕಾಲಿಕ ಸ್ಥಗಿತ

ಶ್ರೀನಗರ (ಪಿಟಿಐ): ಕಾಶ್ಮೀರದಲ್ಲಿ ತೀವ್ರ ಮಳೆಯಿಂದಾಗಿ ಪ್ರತಿಕೂಲ ಹವಾಮಾನ ಸೃಷ್ಟಿಯಾದ ಕಾರಣದಿಂದ ಗುರುವಾರ ಅಮರನಾಥ ಯಾತ್ರೆಯನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಪಹಾಲ್ಗಂ ಮತ್ತು ಬಾಲ್‌ಟಾಲ್ ಎರಡೂ ಮಾರ್ಗಗಳಿಂದ ಯಾತ್ರೆಯನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಗಿದೆ. ಹವಾಮಾನ ಸುಧಾರಣೆ ಬಳಿಕ ಮತ್ತೆ ಯಾತ್ರೆಗೆ ಅವಕಾಶ ಮಾಡಿಕೊಡಲಾಗುತ್ತದೆ ಎಂದು ತಿಳಿಸಿದ್ದಾರೆ.

ಜುಲೈ 8ರಂದು ಅಮರನಾಥದಲ್ಲಿ ಮೇಘಸ್ಫೋಟಗೊಂಡು 15 ಜನರು ಮೃತಪಟ್ಟ ಬಳಿಕ ಯಾತ್ರೆಯನ್ನು ಮೂರು ದಿನ ಸ್ಥಗಿತಗೊಳಿಸಲಾಗಿತ್ತು. ಸೋಮವಾರದಿಂದ ಪಹಾಲ್ಗಂ ಮಾರ್ಗದ ಮೂಲಕ, ಮಂಗಳವಾರದಿಂದ ಬಾಲ್‌ಟಾಲ್ ಮಾರ್ಗದ ಮೂಲಕ ಯಾತ್ರೆಗೆ ಅವಕಾಶ ನೀಡಲಾಗಿತ್ತು.

ರಕ್ಷಣಾ ಕಾರ್ಯಾಚರಣೆ ರದ್ದು: ಜುಲೈ 8ರಂದು ಅಮರನಾಥದಲ್ಲಿ ಮೇಘಸ್ಫೋಟಗೊಂಡ ಬಳಿಕ ಆರಂಭಿಸಲಾಗಿದ್ದ ರಕ್ಷಣಾ ಕಾರ್ಯಾಚರಣೆಯನ್ನು ಗುರುವಾರ ನಿಲ್ಲಿಸಲಾಗಿದೆ ಎಂದು ಜಮ್ಮು ಮತ್ತು ಕಾಶ್ಮೀರ ಲೆಫ್ಟಿನೆಂಟ್ ಗವರ್ನರ್ ಮನೋಜ್ ಸಿನ್ಹಾ ಅವರು ತಿಳಿಸಿದ್ದಾರೆ.

ಈ ಘಟನೆಯಲ್ಲಿ 15 ಯಾತ್ರಾರ್ಥಿಗಳು ಮೃತಪಟ್ಟಿದ್ದಾರೆ. ಎಲ್ಲರ ಗುರುತೂ ಪತ್ತೆಯಾಗಿದೆ. 55 ಮಂದಿ ಗಾಯಗೊಂಡಿದ್ದಾರೆ ಎಂದು ತಿಳಿಸಿದ್ದಾರೆ.

ಇದೇ ವೇಳೆ, ಹಲವರು ಇನ್ನೂ ನಾಪತ್ತೆಯಾಗಿದ್ದಾರೆ ಎಂಬ ವರದಿ ಉಲ್ಲೇಖಿಸಿ ಪ್ರತಿಕ್ರಿಯಿಸಿದ ಅವರು, 'ದುರ್ಘಟನೆ ಬಳಿಕ ದೇಗುಲ ಆಡಳಿತ ಮಂಡಳಿ ಸಹಾಯವಾಣಿ ತೆರೆದಿದ್ದು, 200ಕ್ಕೂ ಹೆಚ್ಚಿನ ಕರೆಗಳು ಬಂದಿದ್ದವು. ಯಾತ್ರಾರ್ಥಿಗಳ ಮೊಬೈಲ್ ಫೋನ್ ಸ್ವಿಚ್ ಆಫ್ ಆಗಿದ್ದರಿಂದ ಅವರ ಪತ್ತೆಗೆ ಸ್ವಲ್ಪ ಕಾಲಾವಕಾಶ ಬೇಕಾಯಿತು. ಎಲ್ಲಾ ರಾಜ್ಯ ಸರ್ಕಾರಗಳೊಂದಿಗೆ ಸಂಪರ್ಕದಲ್ಲಿದ್ದೇವೆ. ಘಟನಾ ಸ್ಥಳದಿಂದ ಯಾರೊಬ್ಬರೂ ನಾಪತ್ತೆಯಾಗಿಲ್ಲ' ಎಂದು ಸ್ಪಷ್ಟಪಡಿಸಿದರು.

ಸಂಕ್ಷಿಪ್ತ ಸುದ್ದಿ

ಮಹಾರಾಷ್ಟ್ರದಲ್ಲಿ ಪೆಟ್ರೋಲ್, ಡೀಸೆಲ್ ದರ ಇಳಿಕೆ

ಮುಂಬೈ (ಪಿಟಿಐ): ಮಹಾರಾಷ್ಟ್ರದಲ್ಲಿ ಪೆಟ್ರೋಲ್ ಮತ್ತು ಡೀಸೆಲ್‌ಗೆ ವಿಧಿಸುತ್ತಿದ್ದ ಮೌಲ್ಯ ವರ್ಧಿತ ತೆರಿಗೆಯನ್ನು (ವ್ಯಾಟ್) ಕ್ರಮವಾಗಿ ₹ 5 ಮತ್ತು ₹ 3 ಕಡಿಮೆ ಮಾಡಲಾಗಿದೆ ಎಂದು ಮುಖ್ಯಮಂತ್ರಿ ಏಕನಾಥ್ ಶಿಂಧೆ ತಿಳಿಸಿದ್ದಾರೆ.

ಈ ಕ್ರಮದಿಂದ ರಾಜ್ಯದ ಬೊಕ್ಕಸಕ್ಕೆ ₹ 6000 ಕೋಟಿ ಹೊರೆ ಆಗಲಿದೆ. ಪರಿಷ್ಕೃತ ತೆರಿಗೆ ಗುರುವಾರ ಮಧ್ಯರಾತ್ರಿಯಿಂದ ಜಾರಿಗೆ ಬರಲಿದೆ. ಇಂಧನ ದರ ಏರಿಕೆಯಿಂದ ಬಳಲಿರುವ ಜನರಿಗೆ ಇದರಿಂದ ನೆರವಾಗಲಿದೆ ಎಂದು ಅವರು ಹೇಳಿದರು.

ಶಿಕ್ಷೆ ಪ್ರಶ್ನಿಸಿ ದಲೇರ್ ಮೆಹಂದಿ ಸಲ್ಲಿಸಿದ್ದ ಅರ್ಜಿ ವಜಾ



ಪಟಿಯಾಲಾ (ಪಿಟಿಐ):2003ರ ಮಾನವ ಕಳ್ಳ ಸಾಗಣೆ ಪ್ರಕರಣಕ್ಕೆ ಸಂಬಂಧಿಸಿದಂತೆ ನ್ಯಾಯಾಲಯ ಎರಡು ವರ್ಷ ಶಿಕ್ಷೆ ವಿಧಿಸಿದ್ದನ್ನು ಪ್ರಶ್ನಿಸಿ ಗಾಯಕ ದಲೇರ್ ಮೆಹಂದಿ ಸಲ್ಲಿಸಿದ್ದ ಅರ್ಜಿಯನ್ನು ಪಟಿಯಾಲಾ ನ್ಯಾಯಾಲಯ ವಜಾಗೊಳಿಸಿದೆ.

'ಅರ್ಜಿ ವಜಾಗೊಂಡ ಬೆನ್ನಲ್ಲೇ ದಲೇರ್ ಮೆಹಂದಿ ಅವರನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ. ಅವರನ್ನು ವೈದ್ಯಕೀಯ ಪರೀಕ್ಷೆಗೆ ಒಳಪಡಿಸಲಾಗುತ್ತದೆ' ಎಂದು ಅಧಿಕಾರಿಯೊಬ್ಬರು ಹೇಳಿದ್ದಾರೆ.

ಪ್ರಕರಣಕ್ಕೆ ಸಂಬಂಧಿಸಿದಂತೆ 2018ರ ಮಾರ್ಚ್‌ನಲ್ಲಿ ವಿಚಾರಣೆ ನಡೆಸಿದ್ದ ಪಟಿಯಾಲಾ ನ್ಯಾಯಾಲಯ ದಲೇರ್ ಮೆಹಂದಿ ಅವರಿಗೆ ಎರಡು ವರ್ಷ ಜೈಲು ಶಿಕ್ಷೆ ಹಾಗೂ ₹1 ಸಾವಿರ ದಂಡ ವಿಧಿಸಿತ್ತು. ಅದರ ಬೆನ್ನಲ್ಲೇ ದಲೇರ್ ಅವರಿಗೆ ಜಾಮೀನು ಮಂಜೂರು ಮಾಡಲಾಗಿತ್ತು.

ದಲೇರ್ ಹಾಗೂ ಅವರ ಸಹೋದರ ಶಂಷೇರ್ ಮೆಹಂದಿ ವಿರುದ್ಧ ಬಕ್ಷಿಶ್ ಸಿಂಗ್ ಸೇರಿದಂತೆ 35ಕ್ಕೂ ಅಧಿಕ ದೂರು ದಾಖಲಾಗಿತ್ತು. ಅಕ್ರಮವಾಗಿ ಬೇರೆ ದೇಶವನ್ನು ಪ್ರವೇಶಿಸಲು ನೆರವು ನೀಡುವುದಾಗಿ ತಮ್ಮಿಂದ ಹಣ ಪಡೆದು ಈ ಸಹೋದರರು ಮೋಸ ಮಾಡಿರುವುದಾಗಿ ತಿಳಿಸಲಾಗಿತ್ತು.

'ಏಕರೂಪದ ವಸ್ತ್ರ ಸಂಹಿತೆ: ತುರ್ತು ವಿಚಾರಣೆ ಇಲ್ಲ'

ನವದೆಹಲಿ (ಪಿಟಿಐ): ಶಿಕ್ಷಣ ಸಂಸ್ಥೆಗಳಲ್ಲಿ ಏಕರೂಪದ ವಸ್ತ್ರ ಸಂಹಿತೆ ಜಾರಿ ಸಂಬಂಧ ವಕೀಲರೊಬ್ಬರು ಸಲ್ಲಿಸಿದ್ದ ಅರ್ಜಿಯ ತುರ್ತು ವಿಚಾರಣೆಗೆ ಸುಪ್ರೀಂಕೋರ್ಟ್ ನಿರಾಕರಿಸಿದೆ.

ನೋಂದಾಯಿತ ಶಿಕ್ಷಣ ಸಂಸ್ಥೆಗಳಲ್ಲಿನ ಬೋಧಕರು ಹಾಗೂ ವಿದ್ಯಾರ್ಥಿಗಳಿಗೆ ಏಕರೂಪದ ವಸ್ತ್ರ ಸಂಹಿತೆ ಜಾರಿಗೊಳಿಸುವ ಕುರಿತು ಕೇಂದ್ರ, ರಾಜ್ಯ ಸರ್ಕಾರಗಳಿಗೆ ನಿರ್ದೇಶನ ನೀಡುವಂತೆ ಆಗ್ರಹಿಸಿ ವಕೀಲ ಅಶ್ವಿನಿ ಉಪಾಧ್ಯಾಯ ಅರ್ಜಿ ಸಲ್ಲಿಸಿದ್ದರು. ಮುಖ್ಯ ನ್ಯಾಯಮೂರ್ತಿ ಎನ್.ವಿ.ರಮಣ ನೇತೃತ್ವದ ಪೀಠ ತುರ್ತು ವಿಚಾರಣೆ ಸಾಧ್ಯವಿಲ್ಲ ಎಂದು ಹೇಳಿತು.

ಅಪ್ಪನ ಹೆಸರು ಉಳಿಸುವ ಹಂಬಲ

ಅಕ್ಷಿತ್ ಶಶಿಕುಮಾರ್, ಕೀರ್ತಿ ಕಲ್ಕೆರೆ

ಸಿನಿಮಾ ಆಸಕ್ತಿಯನ್ನು ಮನೆಯಿಂದಲೇ ಬೆಳೆಸಿಕೊಂಡು, ಶಾಲಾ ದಿನಗಳಲ್ಲಿ ಮುಂದುವರಿಸಿದವರು ನಟ ಶಶಿಕುಮಾರ್ ಪುತ್ರ ಅಕ್ಷಿತ್ ಶಶಿಕುಮಾರ್. ನಟನೆಯ ಪಟ್ಟುಗಳನ್ನು ಕಲಿತುಕೊಳ್ಳುತ್ತಲೇ ಎಂಜಿನಿಯರಿಂಗ್ ಮುಗಿಸಿದರು. 'ಸೀತಾಯಣಂ' ತೆಲುಗು ಚಿತ್ರದ ಮೂಲಕ ಬೆಳ್ಳಿ ತೆರೆ ಪ್ರವೇಶಿಸಿದ ಅವರು ಜುಲೈ 15ರಂದು 'ಓ ಮೈ ಲವ್' ಮೂಲಕ ಕನ್ನಡದ ಬೆಳ್ಳಿತೆರೆಗೆ ಕಾಲಿಡುತ್ತಿದ್ದಾರೆ. ಈ ಹೊತ್ತಿನಲ್ಲಿ ಅಕ್ಷಿತ್ ಅವರ ಜೊತೆಗೊಂದು ಮಾತುಕತೆ.

ಸಿನಿಮಾತು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಪ್ರಜಾವಾಣಿ ನೋಡಿಯೊ

ಶರತ್ ಹೆಗ್ಡೆ

• ಎಂಜಿನಿಯರಿಂಗ್ ಓದಿದವರು ನಟನೆಯತ್ತ ಹೊರಳಿದಿರಿ?

ನಟನೆ ಚಿಕ್ಕ ವಯಸ್ಸಿನ ಹಂಬಲ. ಎಂಜಿನಿಯರಿಂಗ್ ಓದಿದ್ದು ಅಪ್ಪನ ಒತ್ತಾಯದಿಂದ. ಯಾವುದೇ ಕೆಲಸ ಮಾಡಿ, ಒಂದು ಭದ್ರವಾದ ಶಿಕ್ಷಣದ ತಳಹದಿ ಇರಬೇಕು ಎಂಬುದು ಅವರ ನಿಲುವು. ಹಾಗೆ ನೋಡಿದರೆ ನಾನು ಈ ಕ್ಷೇತ್ರವನ್ನು ಆರಿಸಿಕೊಳ್ಳುವಾಗ ಅವರಿಗೆ ಆತಂಕ ಇತ್ತು. ನಾನು ನಟನೆಗೆ ಬರುವುದು ಅವರಿಗೆ ಇಷ್ಟವೂ ಇರಲಿಲ್ಲ. ಆದರೆ, ಇದು ನನ್ನ ಆಯ್ಕೆ. ಇಷ್ಟಪಟ್ಟೇ ಬಂದಿದ್ದೇನೆ.

• ತಂದೆಯವರ ಪ್ರಭಾವ ಮತ್ತು ಅವರಿಂದ ಕಲಿತದ್ದು ಏನು?

ತಂದೆಯವರು ಸ್ಟಾರ್ ಆಗಿದ್ದವರು. ಅವರ ಹೆಸರನ್ನು ಗಟ್ಟಿಯಾಗಿ ಉಳಿಸಬೇಕು ಎಂಬ ಛಲ ನನ್ನಲ್ಲಿದೆ. ಈಗಲೂ ಅವರ ಪ್ರಭಾವವನ್ನು ಎಲ್ಲಿಯೂ ಬಳಸದೇ ಸ್ವತಃ ಮುನ್ನಡೆಯುತ್ತಿದ್ದೇನೆ. ನನ್ನ ಸಾಮರ್ಥ್ಯವನ್ನು ಒರೆಗೆ ಹಚ್ಚುತ್ತಿದ್ದೇನೆ. 'ಸೀತಾಯಣಂ'ನಿಂದ ಇಲ್ಲಿಯವರೆಗೂ ನಾನು ಆಡಿಷನ್‌ನಲ್ಲಿ ಭಾಗವಹಿಸಿಯೇ ಆಯ್ಕೆಯಾಗಿದ್ದೇನೆ. ಸ್ವತಃ ಸಾಮರ್ಥ್ಯದ ಮೇಲೆ ನಂಬಿಕೆ ಇಟ್ಟು ಬಂದಿದ್ದೇನೆ. ಎಲ್ಲ ಕ್ಷೇತ್ರಗಳಂತೆಯೇ ಇಲ್ಲಿಯೂ ಸ್ಪರ್ಧೆ ಇದೆ. ನಿಜವಾದ ಪ್ರತಿಭೆ ಇದ್ದರೆ ಮಾತ್ರ ಇಲ್ಲಿ ಉಳಿಯಬಹುದು. ಹಾಗಾಗಿಯೇ ನನ್ನ ಚಿತ್ರಗಳ ಪ್ರಚಾರಕ್ಕೂ ತಂದೆಯವರು ಬರುವುದಿಲ್ಲ. ಸ್ವಂತಿಕೆ ಮೇಲೆ ನಂಬಿಕೆ ಇದೆ. ಪ್ರತಿ ಹಂತದಲ್ಲೂ ಕಲಿಯುತ್ತಲೇ ಇದ್ದೇನೆ.

• ಸಾಲು ಚಿತ್ರಗಳಲ್ಲಿ ಅವಕಾಶ ಬಂದಿವೆ. ತುಂಬಾ ಬ್ಯುಸಿಯಾಗಿಬಿಟ್ಟಿರಾ ಹೇಗೆ?

ಹೌದು, ಸದ್ಯ 'ಓ ಮೈ ಲವ್' ಚಿತ್ರದ ಪ್ರಮೋಷನ್‌ನಲ್ಲಿ ತೊಡಗಿದ್ದೇನೆ. ಇದರ ಫಲಿತಾಂಶದ ಮೇಲೆ ನಿರೀಕ್ಷೆ ಇದೆ. ಆ ಬಳಿಕ ಸೆಪ್ಟೆಂಬರ್‌ನಲ್ಲಿ ನಾನು ಮತ್ತು ಅದಿತಿ ಪ್ರಭುದೇವ ಅಭಿನಯದ ಇನ್ನೊಂದು ಹೊಸ ಚಿತ್ರ ಬಿಡುಗಡೆಯಾಗಲಿದೆ. ಅದರ ಡಬ್ಬಿಂಗ್ ಕೂಡಾ ಮುಗಿದಿದೆ. ಒಳ್ಳೆಯ ಕಥಾ ವಸ್ತುವನ್ನು ನೋಡಿಕೊಂಡು ಆಯ್ಕೆ ಮಾಡುತ್ತೇನೆ. ಕಮರ್ಷಿಯಲ್ ಚಿತ್ರ ಅಂದಾಕ್ಷಣ ಸುಮ್ಮನೆ ಒಪ್ಪಿಕೊಂಡು ಬಿಡುವುದಿಲ್ಲ. ಹಾಗಾಗಿ ಬ್ಯುಸಿ ಆಗಿರಲೇಬೇಕು.

• 'ಓ ಮೈಲವ್' ನಲ್ಲಿ ಏನಿದೆ?

ಪೂರ್ಣಪ್ರಮಾಣದ ಕುಟುಂಬ ಮನೋರಂಜನಾತ್ಮಕ ಪ್ಯಾಕೇಜನ್ನು ನೀವು ನೋಡಬಹುದು. ಒಳ್ಳೆಯ ನಿರ್ದೇಶಕರು ಸಿಕ್ಕಿದ್ದಾರೆ. ಅವರಿಗೆ ಸಂಗೀತದ ಗ್ರಹಿಕೆ ಚೆನ್ನಾಗಿದೆ. ಕಥೆಯೊಂದನ್ನು ಸಿನಿಮೀಯವಾಗಿ ಕಟ್ಟಿಕೊಡುವಲ್ಲಿ ಆಸ್ಥೆ ವಹಿಸಿದ್ದಾರೆ. ಕಥೆ, ಸಂಗೀತ, ಛಾಯಾಗ್ರಹಣ, ಸಾಹಸ, ಕಲಾವಿದರ ಆಯ್ಕೆ ಇವೆಲ್ಲದರಲ್ಲೂ ಕರಾರುವಾಕ್ಕುತನ ಇತ್ತು. ಹಾಗಾಗಿ ಇದು ಪ್ರೇಕ್ಷಕನಿಗೆ ಇಷ್ಟವಾಗುತ್ತದೆ.

• ಹಿರಿಯ ಕಲಾವಿದರೊಂದಿಗಿನ ಅನುಭವ?

ಪ್ರೀತಿಯಿಂದ ತುಂಬಾ ಕಲಿಸಿದ್ದಾರೆ. ಎಸ್. ನಾರಾಯಣ್, ಪವಿತ್ರಾ ಲೋಕೇಶ್, ಸಾಧು ಕೋಕಿಲ ಅವರಂತಹ ಹಿರಿಯರು ಇದ್ದರು. ಸೆಟ್‌ಗೆ ಹೋದಾಗ ಸಣ್ಣಗೆ ಅಳುಕು, ಕಂಪನ ನನ್ನಲ್ಲಿತ್ತು. ಆದರೆ, ನಿರ್ದೇಶಕರು ಇದನ್ನೆಲ್ಲಾ ಗಮನಿಸಿ ಹಲವಾರು ಕಾರ್ಯಾಗಾರಗಳನ್ನು ನಡೆಸಿದರು. ಆ ಅಳುಕು ಹೋಗಲಾಡಿಸಲು ಎಲ್ಲ ಪ್ರಯತ್ನಗಳೂ ನಡೆದಿವೆ. ಹಿರಿಯ ಕಲಾವಿದರು ಪ್ರೀತಿಯಿಂದ ನಡೆಸಿಕೊಂಡಿದ್ದಾರೆ. ಎಸ್.ನಾರಾಯಣ್ ಅಭಿನಯದ ವೇಳೆ ನಾನು ಕ್ಯಾಮೆರಾ ಮಾನಿಟರ್ ಮುಂದೆಯೇ ಕೂತಿರುತ್ತಿದ್ದೆ. ಇವರ ಜೊತೆಗೆ ಕೆಲಸ ಮಾಡಬೇಕಾದರೆ ಶ್ರದ್ಧೆ ಇರಬೇಕು ಎಂದು ತಂದೆಯವರ ಎಚ್ಚರಿಕೆಯೂ ಇತ್ತು. ನಾಯಕಿ ಕೀರ್ತಿ ಕಲ್ಕೆರೆ ಅವರೂ ತುಂಬಾ ಖುಷಿ ಮತ್ತು ಪ್ರೀತಿಯಿಂದ ತೊಡಗಿಕೊಂಡಿದ್ದಾರೆ. ❖

ಸಂಗೀತದಲ್ಲೇ ಕಲಿಯುವುದು ಬಹಳಷ್ಟಿವೆ. ಅದೇ ನನ್ನ ಪದವಿ, ಬದುಕು, ಎಲ್ಲವೂ... ಅನ್ನುತ್ತಾ ಮುಂಬೈಗೆ ಹೊರಟಿದ್ದಾರೆ ಗಾಯಕ ಸಂಜಿತ್ ಹೆಗ್ಡೆ

ಮುಂಬೈನತ್ತ ಸಂಜಿತ್...

ಸಂಜಿತ್ ಹೆಗ್ಡೆ

'ಸಂಗೀತವೇ ನನ್ನ ಹಸಿವು. ಅದೇ ದಾರಿ ತೋರಿಸಿದೆ. ಅದರಂತೆ ಸಾಗುತ್ತಿದ್ದೇನೆ' ಹೀಗೆನ್ನುತ್ತಲೇ ಸಂಗೀತದ ಜಾಡಿನಲ್ಲಿ ಮುಂದುವರಿದು ಶ್ರೋತೃಗಳ ಕಿವಿಗಿಂಪು ನೀಡಿದ್ದಾರೆ ಸಂಜಿತ್ ಹೆಗ್ಡೆ. ಇದುವರೆಗೆ ಸುಮಾರು 150ಕ್ಕೂ ಹೆಚ್ಚು ಹಾಡುಗಳು ಅವರ ಕಂಠದಲ್ಲಿ ತೇಲಿಬಂದಿವೆ.

ಈಗ ಸಂಜಿತ್ ಅವರು ಅಲ್ಬಂವೊಂದರಲ್ಲಿ ಬ್ಯುಸಿಯಾಗಿದ್ದಾರೆ. ಕನ್ನಡ, ಹಿಂದಿ ಮತ್ತು ಇಂಗ್ಲಿಷ್ ಭಾಷೆಗಳಲ್ಲಿ 14 ಹಾಡುಗಳ ಆಲ್ಬಂ ಬರಲಿದೆ. ಆ ಯೋಜನೆಗಾಗಿ ಅವರು ಕೆಲಕಾಲ ಮುಂಬೈಯಲ್ಲೇ ನೆಲೆಯೂರಲಿದ್ದಾರೆ. ಹಾಡು, ಚಿತ್ರೀಕರಣ ಎಲ್ಲವೂ ಈ ಯೋಜನೆಯಲ್ಲಿದೆ.

ಸಂಜಿತ್ ಅವರ ಮೂಲ ಊರು ಹೊನ್ನಾವರ. ಸದ್ಯ ಬೆಂಗಳೂರಿನಲ್ಲಿದ್ದಾರೆ. ಅಪ್ಪ ಗಣೇಶ ಹೆಗಡೆ ಅವರು ಅಂಗವಿಕಲರ ಬದುಕಿಗೆ ಸ್ವಾವಲಂಬನೆ ಕಲ್ಪಿಸುವ ಕ್ಷೇತ್ರದಲ್ಲಿದ್ದಾರೆ. ಅವರು ಪ್ರತಿಷ್ಠಿತ 'ಹೆಲೆನ್ ಕೆಲರ್' ಪ್ರಶಸ್ತಿ ಪುರಸ್ಕೃತರೂ ಹೌದು. ತಾಯಿ ಶೈಲಾ ಹೆಗ್ಡೆ ಅವರು ಆಟಿಸಂನಿಂದ ಬಳಲುವ ಮಕ್ಕಳಿಗಾಗಿ ದುಡಿಯುತ್ತಿದ್ದಾರೆ.

ಸಂಜಿತ್ ಅವರ ಬಾಲ್ಯ ಭಜನೆ, ಪಂಡಿತ್ ಭೀಮಸೇನ ಜೋಷಿ ಅವರ ಶಾಸ್ತ್ರೀಯ ಸಂಗೀತ ಕೇಳುವುದರಲ್ಲಿಯೇ ಕಳೆಯಿತು. ಮನೆಯಲ್ಲಿ ಸಂಗೀತದ ವಾತಾವರಣವೂ ಇತ್ತು. ಅದೇ ವೇಳೆ ಶಾಲೆಯಲ್ಲಿದ್ದ ಸಂಜಿತ್ ಸಂಗೀತದ ಬ್ಯಾಂಡ್ ತಂಡದಲ್ಲೂ ಸಕ್ರಿಯರಾಗಿದ್ದರು. ಮುಂದೆ ಅದೇ ಸಂಗೀತದ ಗುಂಗು ಹಿಡಿಸಿತು. ಜ್ಯೋತಿ ಕುಲಕರ್ಣಿ, ಪಂಡಿತ್ ನಾಗಭೂಷಣ ಹೆಗಡೆ ಅವರು ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತವನ್ನು ಧಾರೆ ಎರೆದರು. ಮುಂದೆ ಸಂಗೀತ ಕ್ಷೇತ್ರವೇ ಪಾಠ ಶಾಲೆ, ಪ್ರಯೋಗ ಶಾಲೆ ಎಲ್ಲವೂ ಆದವು. ಸಂಗೀತಕ್ಕೆ ಮುಡಿಪಾಗಿರಲು ಎಂಜಿನಿಯರಿಂಗ್, ಬಿಬಿಎ ಎಲ್ಲ ಕೋರ್ಸ್‌ಗಳನ್ನು ತೊರೆದರು. ಈಗ ಪಾಶ್ಚಾತ್ಯ ಸಂಗೀತವನ್ನೂ ಕಲಿಯುತ್ತಿದ್ದಾರೆ. ಜೊತೆಗೆ ಗಿಟಾರ್, ಪಿಯಾನೋ ನುಡಿಸುವುದನ್ನೂ ಅಭ್ಯಾಸ ಮಾಡುತ್ತಿದ್ದಾರೆ.

ಸಂಜಿತ್ ಹಾಡಿದ ಶಾಕುಂತ್ಲೆ ಸಿಕ್ಕಳು..., ಮರಳಿ ಮನಸಾಗಿದೆ... ಗುನುಗುವ ಹಾಡಿನಂತೆ.. ನಿನ್ನೆ ತನಕಾ... ಇಂಥ ಸೂಪರ್ ಹಿಟ್ ಹಾಡುಗಳು ಸಿನಿಮಾಗಳನ್ನೂ ಗೆಲ್ಲಿಸಿವೆ. ಸಣಕಲು ದೇಹದ ಸಪೂರ ಕಂಠದಿಂದ ಹೊರಬರುವ ಆರ್ದ್ರ ಧ್ವನಿ, ಬೇಸ್ ಧ್ವನಿಯ ಮಾಧುರ್ಯ ಎಲ್ಲ ಭಾವಗಳಿಗೂ ಹೊಂದುತ್ತದೆ. ಹಾಡಿನ ಪದಗಳಿಗೆ ಜೀವತುಂಬಿ ಕೇಳುಗರೂ ಗುನುಗುವಂತೆ ಮಾಡಿವೆ. ಹಾಗಾಗಿ ಅವರ ಹಾಡುಗಳು ಸಂಗೀತದ ಆ್ಯಪ್‌ಗಳಲ್ಲಿ ಎಫ್‌ಎಂ ಚಾನೆಲ್‌ಗಳಲ್ಲಿ ಸೂಪರ್ ಹಿಟ್ ಸಾಲಿನಲ್ಲೇ ಇವೆ.

ಈ ಮಧ್ಯೆ ಸಂಜಿತ್ ನೆಟ್‌ಫ್ಲಿಕ್ಸ್ ನಿರ್ಮಾಣದ 'ಪಿಟ್ಟ ಕಥಾಲು' ತೆಲುಗು ಚಿತ್ರದಲ್ಲೂ ನಟಿಸಿದ್ದಾರೆ. 'ನಾಗ್ ಅಶ್ವಿನ್ ಅವರಂಥ ನಿರ್ದೇಶಕರಿರುವಾಗ ನಾನು ಮಾಡಿದ್ದು ನಟನೆ ಎಂದೇ ಅನಿಸಲಿಲ್ಲ. ಅಂಥ ಸಹಜ, ಪ್ರೀತಿಯ ವಾತಾವರಣದಲ್ಲಿ ಅಭಿನಯಿಸಿದೆ' ಎಂದು ಕೃತಜ್ಞತೆಯಿಂದ ಹೇಳುತ್ತಾರೆ ಸಂಜಿತ್. 'ಕನ್ನಡ, ಇಂಗ್ಲಿಷ್, ಹಿಂದಿ ಬಲ್ಲೆ. ತಮಿಳು, ತೆಲುಗು ಸ್ವಲ್ಪ ಅರ್ಥವಾಗುತ್ತದೆ. ಹಾಗಾಗಿ ನಾನು ಭಾಷೆಗೆ ಬೇಲಿ ಹಾಕಿಕೊಂಡಿಲ್ಲ' ಎಂದು ನಗುತ್ತಾರೆ ಅವರು.

'ಪ್ರೀತಿಯಿಂದ ಸಂಗೀತ ಸಂಯೋಜಿಸುವ ಎಲ್ಲ ನಿರ್ದೇಶಕರೂ ನನಗಿಷ್ಟ. ಜಗತ್ತಿನ ಸಂಗೀತ ದಿಗ್ಗಜರನ್ನು ಗಮನಿಸುತ್ತಲೇ ಇರುತ್ತೇನೆ. ಅಂಥ ಸಂಗೀತವನ್ನು ನಾನೂ ಕೊಡಬೇಕು. ಎಲ್ಲ ಭಾಷೆಗಳೂ ನನಗಿಷ್ಟ. ನಾನಿನ್ನೂ ಕಲಿಯುತ್ತಿದ್ದೇನೆ. ಜನ ತುಂಬಾ ಖುಷಿಪಡುವ ಒಳ್ಳೆಯ ಕೃತಿಯೊಂದನ್ನು ನೀಡುತ್ತೇನೆ' ಎಂದು ವಿನಮ್ರವಾಗಿ ಹೇಳುತ್ತಾರೆ ಅವರು.

'ಫಿಟ್‌ನೆಸ್, ಹೇರ್ ಸ್ಟೈಲ್ ಬಗ್ಗೆ ಅವರು ತುಂಬಾ ತಲೆ ಕೆಡಿಸಿಕೊಳ್ಳುವುದಿಲ್ಲ. 'ಹೇರ್ ಕಟ್ಟಿಂಗ್ ಮಾಡಿಸುವಲ್ಲಿ ನಾನು ಸ್ವಲ್ಪ ಆಲಸಿ. ಕೆಲವು ಆಲ್ಬಂಗಳ ನಿರ್ಮಾಣದಲ್ಲಿ ಉದ್ದ ಕೂದಲಿರಬೇಕು ಎಂದು ನಿರ್ದೇಶಕರು ಬಯಸುವುದುಂಟು. ಈ ಕಾರಣದಿಂದಾಗಿ ಕೂದಲು ತೆಗೆಸಲು ಹೋಗಿಲ್ಲ. ನನ್ನ ಶೈಲಿಯನ್ನು ಚಿತ್ರರಂಗದ ಎಲ್ಲ ಹಿರಿ ಕಿರಿಯರು ಇಷ್ಟಪಟ್ಟಿದ್ದಾರೆ. ಪ್ರೀತಿಯಿಂದಲೇ ಕಂಡಿದ್ದಾರೆ. ಹಾಗಾಗಿ ಅವರೆಲ್ಲರಿಗೆ ಆಭಾರಿ' ಎನ್ನುತ್ತಾರೆ ಸಂಜಿತ್. ❖

'ವಿಕ್ರಾಂತ್ ರೋಣ'ನ ಸ್ವಾಗತಕ್ಕೆ ಸಜ್ಜು

ಸುದೀಪ್

ಕಿಚ್ಚ ಸುದೀಪ್ ನಟನೆಯ ಬಹುನಿರೀಕ್ಷಿತ ಪ್ಯಾನ್ ಇಂಡಿಯಾ ಸಿನಿಮಾ 'ವಿಕ್ರಾಂತ್ ರೋಣ' ಜುಲೈ 28ರಂದು ಬಿಡುಗಡೆಯಾಗಲಿದೆ. ದೇಶದಾದ್ಯಂತ ಈ ಚಿತ್ರದ ವಿತರಕರ ಪಟ್ಟಿ ಇದೀಗ ಹೊರಬಿದ್ದಿದೆ.

ಕನ್ನಡದಲ್ಲಿ 'ವಿಕ್ರಾಂತ್ ರೋಣ' ಸಿನಿಮಾವನ್ನು ಜೀ ಸ್ಟುಡಿಯೊ ಮತ್ತು ಕಿಚ್ಚ ಕ್ರಿಯೇಷನ್ಸ್ ಪ್ರಸ್ತುತಪಡಿಸುತ್ತಿದ್ದು, ಶಾಲಿನಿ ಆರ್ಟ್ಸ್ ಮುಖಾಂತರ ನಿರ್ಮಾಪಕ ಜಾಕ್ ಮಂಜು ಹಾಗೂ ಶಾಲಿನಿ ಮಂಜುನಾಥ್ ಅವರು ವಿತರಣೆ ಮಾಡುತ್ತಿದ್ದಾರೆ. ಉತ್ತರ ಭಾರತದಲ್ಲಿ, ಬಾಲಿವುಡ್‌ನ ಖ್ಯಾತ ನಟ ಸಲ್ಮಾನ್ ಖಾನ್ ಅವರ ಸಲ್ಮಾನ್ ಖಾನ್ ಫಿಲ್ಮ್ಸ್(ಎಸ್‌ಕೆಎಫ್) ಈ ಸಿನಿಮಾವನ್ನು ಪ್ರಸ್ತುತಪಡಿಸಲಿದೆ. ಸಿನಿಮಾದ ಹಿಂದಿ ಅವತರಣಿಕೆಯನ್ನು ಪಿವಿಆರ್ ಪಿಕ್ಚರ್ಸ್ ವಿತರಣೆ ಮಾಡಲಿದೆ.

ಕೇರಳದಲ್ಲಿ ಖ್ಯಾತ ನಟ ದುಲ್ಕರ್ ಸಲ್ಮಾನ್ ತಮ್ಮ ವೇಫರರ್ ಫಿಲ್ಮ್ಸ್ ಡಿಸ್ಟ್ರಿಬ್ಯೂಷನ್ಸ್‌ನಡಿ ಮಲಯಾಳಂ ಅವತರಣಿಕೆಯನ್ನು ವಿತರಿಸಲಿದ್ದಾರೆ. ಆಂಧ್ರ ಮತ್ತು ತೆಲಂಗಾಣದಲ್ಲಿ ಕೆಎಫ್‌ಸಿ ಡಿಸ್ಟ್ರಿಬ್ಯೂಟರ್ಸ್ ಮೂಲಕ ಕಾಸ್ಮೋಸ್ ಎಂಟರ್‌ಟೈನ್‌ಮೆಂಟ್ಸ್ ಈ ಸಿನಿಮಾವನ್ನು ವಿತರಿಸಲಿದೆ. ತಮಿಳುನಾಡಿನಲ್ಲಿ ಜೀ ಸ್ಟುಡಿಯೋ ವಿತರಿಸಲಿದೆ. ವಿದೇಶಗಳಲ್ಲಿ 'ಒನ್ ಟ್ವೆಂಟಿ 8 ಮೀಡಿಯಾ' ವಿತರಣೆ ಮಾಡಲಿದೆ.

ವಿಶ್ವದಾದ್ಯಂತ 1,200ಕ್ಕೂ ಅಧಿಕ ಪರದೆಗಳಲ್ಲಿ 'ವಿಕ್ರಾಂತ್ ರೋಣ' 3ಡಿಯಲ್ಲಿ ತೆರೆ ಕಾಣಲಿದೆ. ಅನೂಪ್ ಭಂಡಾರಿ ನಿರ್ದೇಶನದ ಈ ಸಿನಿಮಾ ಹಿಂದಿ, ಮಲಯಾಳಂ, ತೆಲುಗು, ತಮಿಳು ಹಾಗೂ ಇಂಗ್ಲಿಷ್‌ನಲ್ಲಿ ಡಬ್ ಆಗಿದೆ. ಬಾಲಿವುಡ್‌ನ ಖ್ಯಾತ ನಟಿ ಜಾಕ್ವೆಲಿನ್ ಫರ್ನಾಂಡಿಸ್, ನಿರೂಪ್ ಭಂಡಾರಿ ಮತ್ತು ನೀತಾ ಅಶೋಕ್ ಮುಖ್ಯ ಪಾತ್ರದಲ್ಲಿ ನಟಿಸಿದ್ದಾರೆ. ❖

'A' ಅಂದ್ರೆ ಕೇವಲ ಅದಲ್ಲ!

ಸುಮಾರು ಎರಡೂವರೆ ವರ್ಷದ ಬಳಿಕ ನಟ ಸತೀಶ್ ನೀನಾಸಂ ಅವರು 'ಪೆಟ್ರೋಮ್ಯಾಕ್ಸ್'ಗೆ ಕಿಡಿ ಹಚ್ಚಿ ಬೋಲ್ಡ್ ಆಗಿ ಬೆಳ್ಳಿಪರದೆ ಮೇಲೆ ಬರುತ್ತಿದ್ದಾರೆ. 'ನೀರ್‌ದೋಸೆ' ಖ್ಯಾತಿಯ ನಟ ವಿಜಯ್ ಪ್ರಸಾದ್ ನಿರ್ದೇಶನದ 'ಪೆಟ್ರೋಮ್ಯಾಕ್ಸ್' ಇಂದು(ಜುಲೈ 15) ತೆರೆಕಂಡಿದೆ. 'ಚಿತ್ರಕ್ಕೆ ಸೆನ್ಸಾರ್ ಮಂಡಳಿ 'ಎ' ಪ್ರಮಾಣಪತ್ರ ನೀಡಿದೆ. ಆದರೆ ಮನೆದೇವ್ರಾಣೆಗೂ ಚಿತ್ರದಲ್ಲಿ ಅದಿಲ್ಲ' ಎನ್ನುತ್ತಾ ಸಿನಿಮಾ ಪುರವಣಿಯೊಂದಿಗೆ ಸತೀಶ್ ಮಾತಿಗಿಳಿದರು.

'ಇದೊಂದು ನನ್ನ ಹೊಸ ಇನ್ನಿಂಗ್ಸ್. ಇಂಥಾ ಜಾನರ್ ಸಿನಿಮಾಗಳನ್ನು ನಾನು ಮಾಡಿಲ್ಲ. ವಿಜಯ್ ಪ್ರಸಾದ್ ಅವರ ದೊಡ್ಡ ಫ್ಯಾನ್ ನಾನು. 'ಸಿದ್ಲಿಂಗು', 'ನೀರ್‌ದೋಸೆ'ಯಲ್ಲಿ ಅವರು ನೀಡಿದ ಮನರಂಜನೆ ಅಷ್ಟಿಷ್ಟಲ್ಲ. ಅವರ ಜಾನರ್‌ನಲ್ಲಿ ಒಂದು ಸಿನಿಮಾ ಮಾಡಬೇಕು ಎಂಬ ಆಸೆಯೂ ಇತ್ತು. ಹೀಗಾಗಿ ಒಪ್ಪಿಕೊಂಡಿದ್ದೆ. ಅವರ ಸಿನಿಮಾಗಳಲ್ಲಿ ಜೀವನಕ್ಕೆ ಬೇಕಾದ ಒಳಗುಟ್ಟುಗಳಿಗೆ, ಅರ್ಥಭರಿತವಾದ ಕಥೆಯಿದೆ. ಆ ಕಾರಣಕ್ಕಾಗಿಯೇ ನಾನು 'ಪೆಟ್ರೋಮ್ಯಾಕ್ಸ್' ಮಾಡಿದ್ದು. ಟ್ರೇಲರ್‌ನಲ್ಲಿ ಚೇಷ್ಟೆ, ಪೋಲಿತನ ಏನೇ ಕಂಡರೂ, ಸಿನಿಮಾದೊಳಗೆ ನಾಲ್ವರು ಅನಾಥ ಹುಡುಗರ ಗಂಭೀರ ಕಥೆಯಿದೆ. ನಾನು ಪ್ರತಿ ಮನೆಗೆ ಊಟ ತಲುಪಿಸುವ ಮಧ್ಯಮ ವರ್ಗದ ಫುಡ್ ಡೆಲಿವರಿ ಬಾಯ್ ಆಗಿ ಕಾಣಿಸಿಕೊಂಡಿದ್ದೇನೆ. ಜೊತೆಗೆ ತಾಯಿ ಕಥೆಯೂ ಇದೆ'.

'ಚಿತ್ರದಲ್ಲಿ ಕೆಲವು ಬೋಲ್ಡ್ ದೃಶ್ಯಗಳು ಇರುವ ಕಾರಣ 'ಎ' ಪ್ರಮಾಣಪತ್ರ ನೀಡಿದ್ದಾರೆ. ಇದು ನಮಗೆ ಮೊದಲೇ ಗೊತ್ತಿತ್ತು. ಈ ಪ್ರಮಾಣಪತ್ರ ಸಿಕ್ಕಿದ ಮಾತ್ರಕ್ಕೆ ಮನೆದೇವ್ರಾಣೆಗೂ ಚಿತ್ರ ಅದಲ್ಲ! ಸಿನಿಮಾ ಕಥೆ ನಿಮ್ಮನ್ನು ಎಷ್ಟು ನಗಿಸುತ್ತದೆಯೋ ಅಷ್ಟೇ ಕಣ್ಣನ್ನು ತೇವ ಮಾಡುತ್ತದೆ. ನಾನು ಈ ಚಿತ್ರದಲ್ಲಿ ನಿರ್ದೇಶಕನ ಕಲಾವಿದನಾದೆಯಷ್ಟೇ. ವಿಜಯ್ ಪ್ರಸಾದ್ ಅವರು ಹೇಳುವಂತೆಯೇ ಟ್ರೇಲರ್ ಪ್ರೇಕ್ಷಕರನ್ನು ಚಿತ್ರಮಂದಿರಕ್ಕೆ ಸೆಳೆಯುವ ಆಮಂತ್ರಣವಷ್ಟೇ. ಇದು ಇಷ್ಟರ ಮಟ್ಟಿಗೆ ಹಿಟ್ ಆಗುತ್ತದೆ ಎಂದುಕೊಂಡಿರಲಿಲ್ಲ' ಎಂದ ಸತೀಶ್, 'ಜೀವನವಿರುವವರೆಗೂ ಈ ಬದುಕು ಎನ್ನುವುದೇ ಪೆಟ್ರೋಮ್ಯಾಕ್ಸ್' ಎನ್ನುತ್ತಾರೆ.

ಸತೀಶ್ ಹಾಗೂ ಹರಿಪ್ರಿಯಾ ಮೊದಲ ಬಾರಿಗೆ ಈ ಸಿನಿಮಾ ಮೂಲಕ ತೆರೆಯ ಮೇಲೆ ಜೋಡಿಯಾಗಿದ್ದಾರೆ. ಹರಿಪ್ರಿಯಾ–ಸತೀಶ್ ಬೋಲ್ಡ್ ಆ್ಯಕ್ಟಿಂಗ್, ಡೈಲಾಗ್ಸ್‌ಗಳಿಂದ ಸಿನಿಮಾ ಮೇಲಿನ ಪ್ರೇಕ್ಷಕರ ನಿರೀಕ್ಷೆ ಹೆಚ್ಚಿದೆ. ❖

ಸತೀಶ್ ನೀನಾಸಂ

ಗಣೇಶ್

ನಾಳೆಯಿಂದ 'ಇಸ್ಮಾರ್ಟ್ ಜೋಡಿ'

ಸ್ಟಾರ್ ಸುವರ್ಣ ವಾಹಿನಿಯಲ್ಲಿ ಗೋಲ್ಡನ್ ಸ್ಟಾರ್ ಗಣೇಶ್ ನಿರೂಪಣೆಯಲ್ಲಿ ಮೂಡಿ ಬರಲಿದೆ 'ಇಸ್ಮಾರ್ಟ್ ಜೋಡಿ'. ಜುಲೈ 16ರಿಂದ ಈ ಕಾರ್ಯಕ್ರಮ ಸ್ಟಾರ್ ಸುವರ್ಣ ವಾಹಿನಿಯಲ್ಲಿ ಪ್ರತಿ ಶನಿವಾರ ಮತ್ತು ಭಾನುವಾರ ರಾತ್ರಿ 9ಕ್ಕೆ ಪ್ರಸಾರವಾಗಲಿದೆ. 10 ತಾರಾ ಜೋಡಿಗಳನ್ನು ರಂಜಿಸಿ, ಕುಣಿಸಿ, ನಗಿಸುವ ವಾರಾಂತ್ಯದ ಮನೋರಂಜನೆಯ ಕಾರ್ಯಕ್ರಮವಿದು ಎಂದಿದೆ ವಾಹಿನಿ.

ಈ ಕಾರ್ಯಕ್ರಮಕ್ಕಾಗಿ ರಾಕ್ ಲೈನ್ ಸ್ಟುಡಿಯೋದಲ್ಲಿ ಅದ್ದೂರಿ ಸೆಟ್ ಹಾಕಲಾಗಿದೆ. ಕಾರ್ಯಕ್ರಮದ ಶೀರ್ಷಿಕೆ ಗೀತೆಯನ್ನು ಆಲ್ ಓಕೆ ಅಲೋಕ್ ಸಂಯೋಜಿಸಿ ಹಾಡಿದ್ದಾರೆ. ಕಾರ್ಯಕ್ರಮದಲ್ಲಿ ವೀಕ್ಷಕರಿಗಾಗಿಯೂ ಗೋಲ್ಡನ್ ಸ್ಟಾರ್ ಗಣೇಶ್ ಪ್ರಶ್ನೆಯೊಂದನ್ನು ಕೇಳಲಿದ್ದು, ಈ ಪ್ರಶ್ನೆಗೆ ಉತ್ತರಿಸುವ 2 ಜೋಡಿಗಳಿಗೆ ವಜ್ರದ ಉಂಗುರದ ಉಡುಗೊರೆ ನೀಡಲಾಗುವುದು ಎಂದು ವಾಹಿನಿ ಹೇಳಿದೆ. ❖

ಆಗಸ್ಟ್‌ಗೆ ಬರ್ತಾಳೆ 'ಯಶೋದಾ'

ಶ್ರೀದೇವಿ ಮೂವೀಸ್ ಬ್ಯಾನರ್‌ನಲ್ಲಿ ನಿರ್ಮಾಣವಾಗಿರುವ, ನಟಿ ಸಮಂತಾ ರುತ್‌ಪ್ರಭು ಅಭಿನಯದ ಪ್ಯಾನ್ ಇಂಡಿಯಾ ಸಿನಿಮಾ 'ಯಶೋದಾ' ಚಿತ್ರೀಕರಣ ಪೂರ್ಣಗೊಂಡಿದ್ದು, ಜುಲೈ 15ರಿಂದ ಕನ್ನಡ ಸೇರಿದಂತೆ ವಿವಿಧ ಭಾಷೆಗಳ ಡಬ್ಬಿಂಗ್ ಆರಂಭವಾಗಲಿದೆ.

ನಾಯಕಿ ಪ್ರಧಾನ ಈ ಸಿನಿಮಾದಲ್ಲಿ ಸಮಂತಾ 'ಯಶೋದಾ' ಎಂಬ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ಶ್ರೀದೇವಿ ಪ್ರೊಡಕ್ಷನ್‌ನ 14ನೇ ಸಿನಿಮಾ ಇದಾಗಿದ್ದು, ಹರಿ ಮತ್ತು ಹರೀಶ್ ಈ ಚಿತ್ರಕ್ಕೆ ನಿರ್ದೇಶನ ಮಾಡಿದ್ದಾರೆ. ಶಿವಲೆಂಕಾ ಕೃಷ್ಣ ಪ್ರಸಾದ್ ಚಿತ್ರದ ನಿರ್ಮಾಪಕರು. ಸಿನಿಮಾ ಬಗ್ಗೆ ಮಾಹಿತಿ ನೀಡಿದ ಶಿವಲೆಂಕಾ, '100 ದಿನಗಳಲ್ಲಿ ಈ ಸಿನಿಮಾದ ಚಿತ್ರೀಕರಣ ಮುಗಿಸಿದ್ದೇವೆ. ಪೋಸ್ಟ್ ಪ್ರೊಡಕ್ಷನ್ ಕೆಲಸಗಳು ಆರಂಭವಾಗಿದ್ದು, ಜುಲೈ 15ರಿಂದ ಡಬ್ಬಿಂಗ್ ಕೆಲಸ ಶುರುವಾಗಲಿದೆ. ಇದರ ಜತೆಗೆ ಬೇರೆ ಭಾಷೆಯ ಡಬ್ಬಿಂಗ್ ಕೂಡಾ ಪೂರ್ಣಗೊಳಿಸುವ ಯೋಚನೆ ಇದೆ. ಇದೆಲ್ಲದರ ಜತೆಗೆ, 'ಯಶೋದಾ' ಪ್ಯಾನ್ ಇಂಡಿಯಾ ಸಿನಿಮಾ ಆಗಿರುವ ಕಾರಣ ಪ್ರಚಾರ ಕೆಲಸಕ್ಕೂ ಚಾಲನೆ ನೀಡಲಿದ್ದೇವೆ' ಎಂದಿದ್ದಾರೆ.

'ಸಸ್ಪೆನ್ಸ್ ಥ್ರಿಲ್ಲರ್ ಶೈಲಿಯ ಸಿನಿಮಾ ಇದಾಗಿದ್ದು, ಸಾಹಸ ದೃಶ್ಯಗಳೂ ಈ ಚಿತ್ರದಲ್ಲಿವೆ. ಚಿತ್ರವನ್ನು ತೆಲುಗು, ತಮಿಳು, ಕನ್ನಡ, ಹಿಂದಿ ಮತ್ತು ಮಲಯಾಳಂ ಭಾಷೆಯಲ್ಲಿ ಬಿಡುಗಡೆ ಮಾಡಲಿದ್ದೇವೆ. ಶೀಘ್ರದಲ್ಲಿಯೇ ಚಿತ್ರದ ಟೀಸರ್ ಮತ್ತು ಹಾಡನ್ನು ಬಿಡುಗಡೆ ಮಾಡಲಿದ್ದೇವೆ' ಎನ್ನುತ್ತಾರೆ ಶಿವಲೆಂಕಾ.

ಆಗಸ್ಟ್ 12ಕ್ಕೆ ಸಿನಿಮಾ ತೆರೆಗೆ ಬರಲಿದೆ. ❖

ಸಮಂತಾ

ಸುಧಾ ಮತ್ತು ಮಯೂರ ಓದಿ

ಉಕ್ರೇನ್ ಮೇಲೆ ಕ್ಷಿಪಣಿ ದಾಳಿ: 20 ನಾಗರಿಕರ ಸಾವು

ಕೀವ್ (ಎಪಿ): ರಷ್ಯಾ ಪಡೆಗಳು ಗುರುವಾರ ಬೆಳಿಗ್ಗೆ ಕಪ್ಪು ಸಮುದ್ರದಿಂದ ಯುದ್ಧ ನೌಕೆ ಮೂಲಕ ಹಾರಿಸಿದ ಕಲಿಬ್ ಕ್ಷಿಪಣಿ ದಾಳಿಗೆ ಉಕ್ರೇನ್ ರಾಜಧಾನಿ ಬಳಿಯ ವಿನಿಟ್ಸಿಯಾ ನಗರದಲ್ಲಿ ಮೂವರು ಮಕ್ಕಳು ಸೇರಿ ಸುಮಾರು 20 ನಾಗರಿಕರು ಮೃತಪಟ್ಟು, 90ಕ್ಕೂ ಹೆಚ್ಚು ಜನರು ಗಾಯಗೊಂಡಿದ್ದಾರೆ.

ರಾಜಧಾನಿ ಕೀವ್‌ನ ನೈರುತ್ಯದಲ್ಲಿರುವ ವಿನಿಟ್ಸಿಯಾದಲ್ಲಿ ಕಚೇರಿ ಕಟ್ಟಡ ಮತ್ತು ಹತ್ತಿರದ ವಸತಿ ಕಟ್ಟಡಗಳಿಗೆ ಮೂರು ಕ್ಷಿಪಣಿಗಳು ಅಪ್ಪಳಿಸಿದ್ದು, ಇಲ್ಲಿದ್ದ 50ಕ್ಕೂ ಹೆಚ್ಚು ಕಾರುಗಳು ಸುಟ್ಟು ಕರಕಲಾಗಿವೆ ಎಂದು ಪೊಲೀಸರು ತಿಳಿಸಿದ್ದಾರೆ.

ವಿಶ್ವಸಂಸ್ಥೆ ಕ್ರಮ: ಜಾಗತಿಕ ಆಹಾರ ಬಿಕ್ಕಟ್ಟು ಪರಿಹರಿಸುವ ಸಲುವಾಗಿ ಉಕ್ರೇನ್‌ನ ಕಪ್ಪು ಸಮುದ್ರದ ಬಂದರಿನಿಂದ ಧಾನ್ಯಗಳ ರಫ್ತು ಸುಗಮಗೊಳಿಸಲು ರಷ್ಯಾ ಮತ್ತು ಉಕ್ರೇನ್ ನಡುವಿನ ಮೊದಲ ಸಭೆಯಲ್ಲಿ ಕ್ರಮ ತೆಗೆದು ಕೊಳ್ಳಲಾಗಿದೆ ಎಂದು ವಿಶ್ವಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಆಂಟೋನಿಯೊ ಗುಟೆರಸ್ ಹೇಳಿದ್ದಾರೆ.

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

13ನೇ ವರ್ಷದ ಚಿರಸ್ಮರಣೆ



ಶ್ರೀಮತಿ॥ ಯಶೋಧರ ಚಿಂದಯ್ಯ
ನೀವು ನಮ್ಮನ್ನೆಲ್ಲಾ ಅಗಲಿ ಇಂದಿಗೆ ಹದಿಮೂರು ವರ್ಷವಾಯಿತು
ನೀವು ನಮ್ಮ ಹೃದಯಗಳಲ್ಲಿ ಚಿರಸ್ಥಾಯಿಯಾಗಿರುವಿರಿ ನಿಮ್ಮ ಆತ್ಮಕ್ಕೆ ಶಾಂತಿನೀಡಲೆಂದು ದೇವರಲ್ಲಿ ಪ್ರಾರ್ಥಿಸುತ್ತೇವೆ.
ಮಕ್ಕಳು, ಮೊಮ್ಮಕ್ಕಳು ಹಾಗೂ ಕುಟುಂಬವರ್ಗದವರು

ಪದೋನ್ನತಿ, ಹುದ್ದೆ ನೀಡದೆ ಪಿಡಬ್ಲ್ಯುಡಿಯಿಂದ ಇತರ ಇಲಾಖೆಗೆ ವರ್ಗಾವಣೆಗೆ ವಿರೋಧ

ಬಡ್ತಿಗಾಗಿ 418 ಬ್ಯಾಕ್‌ಲಾಗ್ ಎಇಗಳ ಅಳಲು

• ರಾಜೇಶ್ ರೈ ಚಟ್ಲ

ಬೆಂಗಳೂರು: ಮೀಸಲಾತಿ (ಎಸ್‌ಸಿ ಶೇ 15, ಎಸ್‌ಟಿ ಶೇ 3) ಪ್ರಮಾಣ ಕಾಪಾಡಬೇಕೆಂಬ ಕಾರಣ ನೀಡಿ ಜಲಸಂಪನ್ಮೂಲ ಇಲಾಖೆಗೆ 368 ಹಾಗೂ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ (ಆರ್‌ಡಿ ಪಿಆರ್) ಇಲಾಖೆಗೆ 50 ಸೇರಿ ಒಟ್ಟು 418 ಬ್ಯಾಕ್‌ಲಾಗ್ ಸಹಾಯಕ ಎಂಜಿನಿಯರ್‌ಗಳನ್ನು (ಎಇ) ಶಾಶ್ವತವಾಗಿ ವರ್ಗಾವಣೆ ಮಾಡಲು ಲೋಕೋಪಯೋಗಿ ಇಲಾಖೆ ಮುಂದಾಗಿದೆ.

ಇಲಾಖೆಯ ಈ ನಡೆಗೆ ತೀವ್ರ ವಿರೋಧ ವ್ಯಕ್ತಪಡಿಸಿರುವ ಈ ಎಂಜಿನಿಯರ್‌ಗಳು, 'ಎಇ ಹುದ್ದೆಯಿಂದ ಸಹಾಯಕ ಕಾರ್ಯಪಾಲಕ ಎಂಜಿನಿಯರ್ (ಎಇಇ) ಹುದ್ದೆಗೆ ಬಡ್ತಿ ನೀಡುವುದರಿಂದ ತಪ್ಪಿಸಲು ಈ ಷಡ್ಯಂತ್ರ ಹೆಣೆಯಲಾಗಿದೆ' ಎಂದು ಆರೋಪಿಸಿದ್ದಾರೆ. 18 ವರ್ಷಗಳಿಂದ ಎಇ ಹುದ್ದೆಯಲ್ಲಿಯೇ ಕಾರ್ಯನಿರ್ವಹಿಸುತ್ತಿದ್ದು, ಎಇಇ ಹುದ್ದೆಗೆ ಪದೋನ್ನತಿ ಮತ್ತು ಹುದ್ದೆ ನೀಡಿದ ಬಳಿಕ ವರ್ಗಾವಣೆ ಪ್ರಕ್ರಿಯೆ ಪೂರ್ಣಗೊಳಿಸಬೇಕು ಎಂದು ಆಗ್ರಹಿಸಿದ್ದಾರೆ. ಈ ಬಗ್ಗೆ ರಾಜ್ಯ ಸರ್ಕಾರಿ ಎಸ್‌ಸಿ, ಎಸ್‌ಟಿ ನೌಕರರ ಸಂಘದ ಮೂಲಕ ಲೋಕೋಪಯೋಗಿ ಸಚಿವ ಸಿ.ಸಿ. ಪಾಟೀಲ ಮತ್ತು ಇಲಾಖೆಯ ಅಧಿಕಾರಿಗಳಿಗೆ ಮನವಿ ಸಲ್ಲಿಸಿರುವ ಈ ಎಂಜಿನಿಯರ್‌ಗಳು, ಸಾಮಾಜಿಕ ನ್ಯಾಯ ಒದಗಿಸುವಂತೆ ಕೋರಿದ್ದಾರೆ.

ಬ್ಯಾಕ್‌ಲಾಗ್ ಸಹಾಯಕ ಎಂಜಿನಿಯರ್‌ಗಳಿಗೆ ಎಇಇ ಹುದ್ದೆಗೆ ನ್ಯಾಯಯುತವಾಗಿ ಸಿಗಬೇಕಾದ ಪದೋನ್ನತಿ ಮತ್ತು ಹುದ್ದೆ ತಪ್ಪಿಸುವ, ವಿಳಂಬ ಮಾಡುವ ಈ ನಡೆ ಅಮಾನವೀಯ

ಡಿ. ಚಂದ್ರಶೇಖರಯ್ಯ, ಅಧ್ಯಕ್ಷರು, ರಾಜ್ಯ ಸರ್ಕಾರಿ ಎಸ್‌ಸಿ, ಎಸ್‌ಟಿ ನೌಕರರ ಸಂಘ

ಇಲಾಖೆಗಳ ವಿಭಜನೆ ಕಾರಣಕ್ಕೆ ಎಇಗಳನ್ನು ಮರು ಹಂಚಿಕೆ ಮಾಡುವುದರಿಂದ ಅವರ ಜ್ಯೇಷ್ಠತೆಗೆ ಯಾವುದೇ ಕುತ್ತು ಬರುವುದಿಲ್ಲ. ಅರ್ಹರಿಗೆ ಪದೋನ್ನತಿಯ ಜೊತೆಗೆ ಹುದ್ದೆಯೂ ಸಿಗಲಿದೆ

ಬಿ.ಎಚ್.ಅನಿಲ್‌ಕುಮಾರ್, ಹೆಚ್ಚುವರಿ ಮುಖ್ಯ ಕಾರ್ಯದರ್ಶಿ, ಲೋಕೋಪಯೋಗಿ ಇಲಾಖೆ

ಬ್ಯಾಕ್‌ಲಾಗ್ ಎಂಜಿನಿಯರ್‌ಗಳನ್ನು ಜಲಸಂಪನ್ಮೂಲ ಮತ್ತು ಆರ್‌ಡಿಪಿಆರ್ ಇಲಾಖೆಗೆ ಹಂಚಿಕೆ ಮಾಡುವ ಕುರಿತು ಚರ್ಚಿಸಲು ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ರಜನೀಶ್ ಗೋಯಲ್ ಅಧ್ಯಕ್ಷತೆಯಲ್ಲಿ ಶನಿವಾರ (ಜುಲೈ 16) ಸಭೆ ನಿಗದಿಯಾಗಿದೆ.

ಏನಿದು ಗೊಂದಲ: ಗುತ್ತಿಗೆ ಆಧಾರದಲ್ಲಿ 2003–04ರಲ್ಲಿ 846 ಬ್ಯಾಕ್‌ಲಾಗ್ ಸಹಾಯಕ ಎಂಜಿನಿಯರ್ (ಲೋಕೋಪಯೋಗಿ ಇಲಾಖೆಗೆ 261, ಜಲಸಂಪನ್ಮೂಲ ಇಲಾಖೆಗೆ 499, ಆರ್‌ಡಿಪಿಆರ್ ಇಲಾಖೆಗೆ 86) ಹುದ್ದೆಗಳನ್ನು ಗುರುತಿಸಿ ಲೋಕೋಪಯೋಗಿ ಇಲಾಖೆಯ ಮೂಲಕ ಭರ್ತಿ ಮಾಡಿಕೊಳ್ಳಲಾಗಿತ್ತು. ಅವರನ್ನು 2005ರ ಮೇ 24ರಂದು ಕಾಯಂಗೊಳಿಸಲಾಗಿದೆ. ಆದರೆ, ಈ ನೇಮಕಾತಿ ಪ್ರಕರಣ ಸುಪ್ರೀಂ ಕೋರ್ಟ್ ಮೆಟ್ಟಿಲೇರಿ 2015ರ ನ. 4 ತೀರ್ಪಿನಂತೆ ಕಾಯಂಗೊಂಡಿದ್ದು, ಕೆಪಿಎಸ್‌ಸಿ ಮೂಲಕ 2003–04ರಿಂದ ಪೂರ್ವಾನ್ವಯ ಸೇವಾ ಸೌಲಭ್ಯ ನೀಡಿ ಎಲ್ಲ ಎಂಜಿನಿಯರ್‌ಗಳನ್ನು ಮರು ನೇಮಕಾತಿ ಮಾಡಲಾಗಿತ್ತು. 2019 ಆಗಸ್ಟ್ 19ರಂದು ಜ್ಯೇಷ್ಠತೆಯನ್ನೂ ನಿಗದಿಪಡಿಸಲಾಗಿತ್ತು.

'ಇತ್ತೀಚೆಗೆ ಈ ಮೂರೂ ಇಲಾಖೆಗಳ ವಿಭಜನೆ ಪ್ರಕ್ರಿಯೆ ನಡೆಯುತ್ತಿದ್ದು, ಅಭಿಮತ ನೀಡಿದವರನ್ನು ಅವರು ಬಯಸಿದ ಇಲಾಖೆಗೆ ವರ್ಗಾವಣೆ ಮಾಡಲಾಗಿದೆ. ಅಭಿಮತ ನೀಡಿದ ಬಳಿಕ ಜಲಸಂಪನ್ಮೂಲ ಇಲಾಖೆಗೆ 131 ಹಾಗೂ ಆರ್‌ಡಿಪಿಆರ್ ಇಲಾಖೆಗೆ 36 ಎಂಜಿನಿಯರ್‌ಗಳನ್ನು ಹಂಚಿಕೆ ಮಾಡಲಾಗಿದೆ. ಲೋಕೋಪಯೋಗಿ ಇಲಾಖೆಗೆಂದೇ ಗುರುತಿಸಿದ 261 ಬ್ಯಾಕ್‌ಲಾಗ್ ಎಂಜಿನಿಯರ್‌ಗಳಲ್ಲದೆ ಹೆಚ್ಚುವರಿಯಾಗಿ ಜಲಸಂಪನ್ಮೂಲ ಇಲಾಖೆಯ 368 ಹಾಗೂ ಆರ್‌ಡಿಪಿಆರ್ ಇಲಾಖೆಯ 50 (ಒಟ್ಟು 418) ಎಂಜಿನಿಯರ್‌ಗಳು ಲೋಕೋಪಯೋಗಿ ಇಲಾಖೆಯಲ್ಲೇ ಉಳಿದಿದ್ದಾರೆ. ಅವರ ವರ್ಗಾವಣೆ ಕುರಿತು ಈ ಸಭೆಯಲ್ಲಿ ಚರ್ಚೆ ನಡೆಯಲಿದೆ' ಎಂದು ಲೋಕೋಪಯೋಗಿ ಇಲಾಖೆಯ ಅಧಿಕಾರಿಯೊಬ್ಬರು ತಿಳಿಸಿದರು.

ಮುಖ್ಯಾಂಶಗಳು

- ಜಲಸಂಪನ್ಮೂಲ ಇಲಾಖೆಗೆ 368 ಮಂದಿ ವರ್ಗಾವಣೆ
- ಲೋಕೋಪಯೋಗಿ ಸಚಿವ ಮತ್ತು ಇಲಾಖೆಯ ಅಧಿಕಾರಿಗಳಿಗೆ ಮನವಿ
- ಇದೇ 16ರಂದು ಸಭೆ ನಿಗದಿ

ನಾಲ್ಕು ಬಾರಿ ಡಿಪಿಸಿ ಮುಂದೂಡಿಕೆ

'ಸಹಾಯಕ ಎಂಜಿನಿಯರ್ ವಿಭಾಗ– 1ರಿಂದ ಸಹಾಯಕ ಕಾರ್ಯಪಾಲಕ ಎಂಜಿನಿಯರ್ ವಿಭಾಗ–1ಕ್ಕೆ ಬಡ್ತಿ ನೀಡಲು ಇದೇ ವರ್ಷ ಜೂನ್ 6, 13, 22, ಜುಲೈ7 ಹೀಗೆ ನಾಲ್ಕು ಬಾರಿ ಇಲಾಖಾ ಪದೋನ್ನತಿ ಸಮಿತಿ ಸಭೆ (ಡಿಪಿಸಿ) ನಿಗದಿಪಡಿಸಿ, ಮುಂದೂಡಲಾಗಿದೆ. ಅರ್ಹ ಸಹಾಯಕ ಎಂಜಿನಿಯರ್‌ಗಳಿಗೆ ಬಡ್ತಿ ನೀಡುವಂತೆ ಹಲವು ಬಾರಿ ಮನವಿ ಸಲ್ಲಿಸಿದ್ದೇವೆ. ಅದನ್ನು ಪರಿಗಣಿಸದೆ ಜ್ಯೇಷ್ಠತೆಯಲ್ಲಿ ಕಿರಿಯರಾದ, 2009ರಲ್ಲಿ ಜಲಸಂಪನ್ಮೂಲ ಇಲಾಖೆಗೆ ಹಾಗೂ 2016ರಲ್ಲಿ ಆರ್‌ಡಿಪಿಆರ್ ಇಲಾಖೆಗೆ ನೇಮಕಗೊಂಡವರಿಗೆ ಪದೋನ್ನತಿ ನೀಡಿ ಹುದ್ದೆ ನೀಡಲಾಗಿದೆ. ಈ ಸಭೆಯ ಕಾರ್ಯಸೂಚಿಯಂತೆ ಕ್ರಮ ತೆಗೆದುಕೊಂಡರೆ 2009 ಮತ್ತು 2016ರಲ್ಲಿ ನೇಮಕಗೊಂಡು ಬಡ್ತಿ ಹೊಂದಿರುವ ಎಂಜಿನಿಯರ್‌ಗಳ ಕೆಳಗೆ ಕೆಲಸ ಮಾಡಬೇಕಾಗುತ್ತದೆ' ಎಂದು ಬ್ಯಾಕ್‌ಲಾಗ್ ಸಹಾಯಕ ಎಂಜಿನಿಯರ್‌ಗಳು ಆಕ್ಷೇಪ ವ್ಯಕ್ತಪಡಿಸಿದ್ದಾರೆ.

ಉತ್ತರಕ್ರಿಯಾದಿ ಆಹ್ವಾನ ಪತ್ರಿಕೆ



ಶ್ರೀಮತಿ ಮಾಸ್ತಮ್ಮ
ನನ್ನ ಪೂಜ್ಯ ತಾಯಿಯವರಾದ ಶ್ರೀಮತಿ ಮಾಸ್ತಮ್ಮರವರು
(ದಿ. ಶ್ರೀ ಎನ್. ನಿಂಗಯ್ಯರವರ ಧರ್ಮಪತ್ನಿ)
ದಿನಾಂಕ 05.07.2022, ಮಂಗಳವಾರ ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ.
ತತ್ಸಂಬಂಧವಾದ ಹಾಲು ತುಪ್ಪ ಕಾರ್ಯಕ್ರಮವನ್ನು ದಿನಾಂಕ 15.07.2022, ಶುಕ್ರವಾರ, ಬೆಳಿಗ್ಗೆ 9:30 ಗಂಟೆಗೆ ಹಿಂದೂ ರುದ್ರಭೂಮಿ, ಟಿ.ಆರ್. ಮಿಲ್, ಚಾಮರಾಜಪೇಟೆ, ಬೆಂಗಳೂರು ಹಾಗೂ ವೈಕುಂಠ ಸಮಾರಾಧನೆಯನ್ನು ಮಧ್ಯಾಹ್ನ 12:30 ಗಂಟೆಗೆ # 1599, ಬಿಎಸ್‌ಕೆ 1ನೇ ಹಂತ, 2ನೇ ಬ್ಲಾಕ್, 5ನೇ ಎ ಕ್ರಾಸ್, ಬೆಂಗಳೂರು-560050 ಇಲ್ಲಿ ನಡೆಸಲು ನಿಶ್ಚಯಿಸಿರುವುದರಿಂದ, ತಾವುಗಳು ಕಾರ್ಯಕ್ರಮದಲ್ಲಿ ಭಾಗವಹಿಸಿ, ನಮ್ಮ ತಾಯಿಯವರ ಆತ್ಮಕ್ಕೆ ಚಿರಶಾಂತಿ ಕೋರಬೇಕಾಗಿ ವಿನಂತಿಸಿಕೊಳ್ಳುತ್ತೇವೆ.
ಇಂತಿ ದುಃಖತಪ್ತರು
ಶ್ರೀ ಎನ್. ರಾಮಕೃಷ್ಣ ಮತ್ತು ಶ್ರೀಮತಿ ಶಶಿರೇಖಾ
ಮೊಮ್ಮಕ್ಕಳು ಹಾಗೂ ಕುಟುಂಬ ವರ್ಗದವರು
ಭೋಜನ: ಮಧ್ಯಾಹ್ನ 1:00 ಗಂಟೆಗೆ

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ
ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ದಯವಿಟ್ಟು ಸಂಪರ್ಕಿಸಿ:
Vishal : 9845114560
Jerry : 9731810277 | Tanveer : 9886213331
Ravichandra : 9901641752 | Anitha R: 9900428036
ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ
https://homages.deccanherald.com
ಅಥವಾ QR code ಸ್ಕ್ಯಾನ್ ಮಾಡಿ
ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

ಗೊಟಬಯ ಕೊನೆಗೂ ರಾಜೀನಾಮೆ

ಒಂದನೇ ಪುಟದಿಂದ

ಕಪ್ಪು ದಿರಿಸಿನಲ್ಲಿದ್ದ ಅವರು, ಪತ್ನಿ ಹಾಗೂ ಇಬ್ಬರು ಭದ್ರತಾ ಸಿಬ್ಬಂದಿ ಜೊತೆ ವಿಮಾನದಲ್ಲಿ ಪ್ರಯಾಣಿಸಿದರು ಎಂದೂ ತಿಳಿಸಿದ್ದಾರೆ.

ಸಿಂಗಪುರದಲ್ಲಿ ಇಳಿಯಲು ಗೊಟಬಯ ಅವರಿಗೆ ಅಲ್ಲಿನ ಸರ್ಕಾರ ಅವಕಾಶ ಮಾಡಿಕೊಟ್ಟಿದೆ. ಗೊಟಬಯ ಅವರು 'ಖಾಸಗಿ ಭೇಟಿ'ಗಾಗಿ ಇಲ್ಲಿಗೆ ಬಂದಿದ್ದಾರೆ ಎಂದು ಸಿಂಗಪುರದ ಅಧಿಕಾರಿಗಳು ತಿಳಿಸಿದ್ದಾರೆ.

ಕರ್ಫ್ಯೂ ವಿಸ್ತರಣೆ: ಈ ನಡುವೆ, ಗಲಭೆಪೀಡಿತ ರಾಜಧಾನಿ ಕೊಲಂಬೊದಲ್ಲಿ ಕರ್ಫ್ಯೂ ಮುಂದುವರಿಸಲಾಗಿದ್ದು, ಭದ್ರತಾಪಡೆಗಳು ನಗರದಲ್ಲಿ ಗಸ್ತು ನಡೆಸುತ್ತಿವೆ.

ಅಹಿತಕರ ಘಟನೆಗಳು ನಡೆಯುವುದನ್ನು ತಡೆಯಲು ಶುಕ್ರವಾರ ಬೆಳಗಿನವರೆಗೆ ನಗರದಲ್ಲಿ ಕರ್ಫ್ಯೂ ವಿಸ್ತರಿಸಲಾಗಿದೆ. ಶಸ್ತ್ರಸಜ್ಜಿತ ಯೋಧರು ವಾಹನಗಳಲ್ಲಿ ನಗರವನ್ನು ಸುತ್ತುತ್ತಿದ್ದಾರೆ ಎಂದು ಸ್ಥಳೀಯ ಮಾಧ್ಯಮಗಳು ವರದಿ ಮಾಡಿವೆ.

ಸಂಸತ್ ಭವನದ ಬಳಿ ಗುರುವಾರ ಸಣ್ಣ ಪ್ರಮಾಣದ ಪ್ರತಿಭಟನೆ ನಡೆಯಿತು. ಉಳಿದ ಜಾಗಗಳಲ್ಲಿ ಪ್ರತಿಭಟನೆ ಅಷ್ಟಾಗಿ ಇರಲಿಲ್ಲ.

ಗೊಟಬಯ ಅಧ್ಯಕ್ಷ ಹುದ್ದೆಗೆ ರಾಜೀನಾಮೆ ಪ್ರಕಟಿಸಿದ ಸುದ್ದಿ ತಿಳಿದು ಶ್ರೀಲಂಕಾ ನಾಗರಿಕರು ಸಂಭ್ರಮಿಸಿದರು—ಎಎಫ್‌ಪಿ ಚಿತ್ರ

ಪ್ರಧಾನಿ ರಾನಿಲ್ ವಿಕ್ರಮಸಿಂಘೆ ಅವರನ್ನು ಪ್ರಭಾರಿ ಅಧ್ಯಕ್ಷರನ್ನಾಗಿ ನೇಮಿಸಿದ್ದು ಜನರಲ್ಲಿ ಸಿಟ್ಟು ತರಿಸಿದೆ. 'ರಾನಿಲ್ ಮನೆಗೆ ಹೋಗಬೇಕು ಎಂಬುದು ನಮ್ಮ ಬೇಡಿಕೆ' ಎಂದು ಆಟೋ ಚಾಲಕ ಮಲಿಕ್ ಪರೇರಾ ಎಂಬುವರು ಹೇಳಿದ್ದಾರೆ.

ಸಂಸತ್ ಭವನ ಹಾಗೂ ಪ್ರಧಾನಿ ನಿವಾಸದ ಬಳಿ ಪ್ರತಿಭಟನಕಾರರು ಹಾಗೂ ಭದ್ರತಾಪಡೆಗಳ ಮಧ್ಯೆ ನಡೆದ ಸಂಘರ್ಷದಲ್ಲಿ ಒಬ್ಬ ಮೃತಪಟ್ಟಿದ್ದು, 84 ಜನರು ಗಾಯಗೊಂಡಿದ್ದಾರೆ ಎಂದು ಪೊಲೀಸರು ಹೇಳಿದ್ದಾರೆ. ಇಬ್ಬರು ಸೇನಾ ಸಿಬ್ಬಂದಿ ಮೇಲೆ ಆಕ್ರೋಶಭರಿತ ಜನರು ದಾಳಿ ನಡೆಸಿದ್ದರಿಂದ ಅವರು ಗಾಯಗೊಂಡಿದ್ದಾರೆ. ಯೋಧರ ಶಸ್ತ್ರಾಸ್ತ್ರಗಳನ್ನು ಕಿತ್ತುಕೊಳ್ಳಲಾಗಿದೆ.

ಶ್ರೀಲಂಕಾ: ದಿನದ ಬೆಳವಣಿಗೆ

- ತಮ್ಮ ವಿರುದ್ಧ ಸಲ್ಲಿಕೆ ಆಗಿರುವ ಮೂಲಭೂತ ಹಕ್ಕು ಅರ್ಜಿಯ ವಿಚಾರಣೆ ಶುಕ್ರವಾರ ನಡೆಯಲಿದ್ದು, ಅಲ್ಲಿಯವರೆಗೆ ದೇಶವನ್ನು ತೊರೆಯುವುದಿಲ್ಲ ಎಂದು ಶ್ರೀಲಂಕಾದ ಮಾಜಿ ಪ್ರಧಾನಿ ಮಹಿಂದ ರಾಜಪಕ್ಸ ಮತ್ತು ಮಾಜಿ ಹಣಕಾಸು ಸಚಿವ ಬಾಸಿಲ್ ರಾಜಪಕ್ಸ ಅವರು ಸುಪ್ರೀಂ ಕೋರ್ಟ್‌ಗೆ ಮುಚ್ಚಳಿಕೆ ನೀಡಿದ್ದಾರೆ. ಇವರಿಬ್ಬರು ಗೊಟಬಯ ಅವರ ಸಹೋದರರು
- ಶ್ರೀಲಂಕಾ ಸಂಸತ್ ಅಧಿವೇಶನವು ಶುಕ್ರವಾರ ನಡೆಯುವುದಿಲ್ಲ ಎಂದು ಅಲ್ಲಿಯ ಸ್ಪೀಕರ್ ಕಚೇರಿ ಗುರುವಾರ ತಿಳಿಸಿದೆ. ಸಂಸತ್ ಅಧಿವೇಶನವನ್ನು ಶುಕ್ರವಾರ ನಡೆಸಲಾಗುವುದು ಎಂದು ಈ ಮೊದಲು ಸ್ಪೀಕರ್ ಕಚೇರಿಯು ಘೋಷಿಸಿತ್ತು. ಅಧ್ಯಕ್ಷ ಗೊಟಬಯ ರಾಜಪಕ್ಸ ಅವರ ರಾಜೀನಾಮೆಯನ್ನು ಸ್ಪೀಕರ್ ಅವರು ಗುರುವಾರವೇ ಸ್ವೀಕರಿಸಿದರೆ ಸಂಸತ್ ಅಧಿವೇಶನದ ದಿನಾಂಕವನ್ನು ಮುಂದಿನ ಮೂರು ದಿನಗಳ ಒಳಗೆ ಘೋಷಿಸಲಾಗುವುದು ಎಂದು ಸ್ಪೀಕರ್ ಕಚೇರಿ ತಿಳಿಸಿದೆ.
- ವಶಕ್ಕೆ ಪಡೆದಿರುವ ಸರ್ಕಾರಿ ಕಟ್ಟಡಗಳನ್ನು ಹಿಂದಿರುಗಿಸುತ್ತೇವೆ, ಆದರೆ ಅಧ್ಯಕ್ಷ ಮತ್ತು ಪ್ರಧಾನಿ ರಾಜೀನಾಮೆ ವರೆಗೆ ಹೋರಾಟ ಮುಂದುವರಿಯಲಿದೆ ಎಂದು ಪ್ರತಿಭಟನಕಾರರು ಹೇಳಿದ್ದಾರೆ. ಅಧ್ಯಕ್ಷರ ಅರಮನೆ, ಪ್ರಧಾನಿ ಕಾರ್ಯಾಲಯ ಮುಂತಾದ ಕಟ್ಟಡಗಳನ್ನು ಪ್ರತಿಭಟನಕಾರರು ವಶದಲ್ಲಿ ಇರಿಸಿಕೊಂಡಿದ್ದರು
- ಗೊಟಬಯ ಅವರು ಸಿಂಗಪುರದಲ್ಲಿ ಬಂದಿಳಿದಾಗ, ಸಿಂಗಪುರದಲ್ಲಿ ನೆಲೆಸಿರುವ 20ಕ್ಕೂ ಹೆಚ್ಚು ಶ್ರೀಲಂಕನ್ನರು ವಿಮಾನ ನಿಲ್ದಾಣದಲ್ಲಿ ಸೇರಿದ್ದರು. 'ಅಪರಾಧಿಯೊಬ್ಬನನ್ನು ನೋಡಲು ಬಂದಿದ್ದೇವೆ', 'ದೇಶವನ್ನು ನಾಶಗೊಳಿಸಿ ಪರಾರಿಯಾದ ವ್ಯಕ್ತಿಯನ್ನು ನೋಡಲು ಬಂದಿದ್ದೇವೆ' ಎಂದು ಈ ಜನರು ಹೇಳಿದ್ದಾರೆ
- ಪ್ರತಿಭಟನಕಾರರು ಆಸ್ತಿ ಮತ್ತು ಜೀವಕ್ಕೆ ಹಾನಿ ಮಾಡಲು ಮುಂದಾದರೆ ಅದನ್ನು ತಡೆಯಲು ಅಗತ್ಯ ಬಲಪ್ರಯೋಗಿಸುವ ಅಧಿಕಾರವನ್ನು ಭದ್ರತಾ ಸಿಬ್ಬಂದಿಗೆ ಕೊಡಲಾಗಿದೆ ಎಂದು ಸೇನೆಯು ತಿಳಿಸಿದೆ
- 'ಖಾಸಗಿ ಭೇಟಿ' ಎಂಬ ನೆಲೆಯಲ್ಲಿ ಗೊಟಬಯ ಅವರಿಗೆ ಸಿಂಗಪುರ ಪ್ರವೇಶಕ್ಕೆ ಅವಕಾಶ ಕೊಡಲಾಗಿದೆ. ಅವರು ಆಶ್ರಯ ಕೋರಿಲ್ಲ, ಅವರಿಗೆ ಸಿಂಗಪುರ ಆಶ್ರಯ ಕೊಟ್ಟಿಲ್ಲ. ಸಿಂಗಪುರವು ಈ ರೀತಿಯ ಆಶ್ರಯ ಕೊಡುವುದೂ ಇಲ್ಲ ಎಂದು ಅಲ್ಲಿನ ವಿದೇಶಾಂಗ ಸಚಿವಾಲಯದ ವಕ್ತಾರ ಹೇಳಿದ್ದಾರೆ

'ಅಸಂಸದೀಯ ಪದ'ಗಳಿಗೆ ಆಕ್ರೋಶ

ಒಂದನೇ ಪುಟದಿಂದ

'ಅಸಂಸದೀಯ ವಾಕ್ಯವೊಂದರ ಉದಾಹರಣೆ ಹೀಗಿದೆ: 'ಸುಳ್ಳುಗಳು ಮತ್ತು ಅದಕ್ಷತೆ ಬಹಿರಂಗವಾದಾಗ ಜುಮ್ಲಾಜೀವಿ ತಾನಾಶಾ (ನಿರಂಕುಶ ಅಧಿಕಾರಿ) ಮೊಸಳೆ ಕಣ್ಣೀರು ಸುರಿಸಿದನು' ಎಂದೂ ಟ್ವೀಟ್‌ನಲ್ಲಿ ಅವರು ಹೇಳಿದ್ದಾರೆ.

'ಮೋದಿ ಸರ್ಕಾರದ ವಾಸ್ತವವನ್ನು ವಿವರಿಸಲು ವಿರೋಧ ಪಕ್ಷಗಳು ಬಳಸುತ್ತಿದ್ದ ಎಲ್ಲ ಪದಗಳನ್ನು ಅಸಂಸದೀಯ ಎಂದು ಪರಿಗಣಿಸಲಾಗಿದೆ. ವಿಶ್ವಗುರು ಅವರೇ ಮುಂದೇನು' ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ಟ್ವೀಟ್ ಮಾಡಿದ್ದಾರೆ.

'ಕೆಲ ದಿನಗಳಲ್ಲಿ ಅಧಿವೇಶನ ಆರಂಭವಾಗಲಿದೆ. ಸಂಸದರಿಗೆ ನಿಷೇಧ ಆದೇಶ ಹೊರಡಿಸಲಾಗಿದೆ. ಸಂಸತ್ತಿನಲ್ಲಿ ಭಾಷಣ ಮಾಡುವಾಗ ಈ ಮುಂದಿನ ಮೂಲ ಪದಗಳನ್ನೇ ಬಳಸಲು ಅವಕಾಶ ಇಲ್ಲ: ನಾಚಿಕೆಗೇಡು, ದುರುಪಯೋಗಪಡಿಸಿಕೊಳ್ಳಲಾಗಿದೆ, ವಂಚಿಸಲಾಗಿದೆ, ಭ್ರಷ್ಟ, ಅದಕ್ಷ. ನಾನು ಈ ಎಲ್ಲ ಪದಗಳನ್ನು ಬಳಸಲಿದ್ದೇನೆ. ನನ್ನನ್ನು ಅಮಾನತು ಮಾಡಿ' ಎಂದು ತೃಣಮೂಲ ಕಾಂಗ್ರೆಸ್ ಮುಖಂಡ ಡೆರೆಕ್ ಒಬ್ರಯಾನ್ ಟ್ವೀಟ್ ಮಾಡಿದ್ದಾರೆ.

'ಅಸಂಸದೀಯ ಅಭಿವ್ಯಕ್ತಿಗಳು' ಕಿರುಹೊತ್ತಗೆ ಪ್ರಕಟಿಸಲು 1954ರಲ್ಲಿಯೇ ಆರಂಭಿಸಲಾಗಿದೆ. 2010ರ ಬಳಿಕ ಪ್ರತಿ ವರ್ಷವೂ ಪ್ರಕಟಿಸುವ ಪದ್ಧತಿಯನ್ನು ಅನುಸರಿಸಿಕೊಂಡು ಬರಲಾಗುತ್ತಿದೆ.

ಪನ್ನೀರಸೆಲ್ವಂ ಮಕ್ಕಳ ಉಚ್ಚಾಟನೆ

ಚೆನ್ನೈ (ಪಿಟಿಐ): ಒ.ಪನ್ನೀರಸೆಲ್ವಂ ಅವರ ಇಬ್ಬರು ಮಕ್ಕಳು ಮತ್ತು ಅವರ ಇನ್ನೂ 16 ಬೆಂಬಲಿಗರನ್ನು ಎಐಎಡಿಎಂಕೆಯಿಂದ ಉಚ್ಚಾಟಿಸಲಾಗಿದೆ. ಪಕ್ಷದ ಹಂಗಾಮಿ ಪ್ರಧಾನ ಕಾರ್ಯದರ್ಶಿ ಇ.ಪಳನಿಸ್ವಾಮಿ ಅವರು ಪಕ್ಷದಲ್ಲಿನ ತಮ್ಮೆಲ್ಲಾ ವಿರೋಧಿಗಳನ್ನು ಈ ಮೂಲಕ ಹೊರಗಟ್ಟಿದ್ದಾರೆ.

'ಪಕ್ಷ ವಿರೋಧಿ ಚಟುವಟಿಕೆ, ಪಕ್ಷದ ತತ್ವಗಳಿಗೆ ವಿರುದ್ಧವಾಗಿ ನಡೆದುಕೊಂಡ ಕಾರಣಕ್ಕೆ ಶಿಸ್ತುಕ್ರಮವಾಗಿ ಇವರನ್ನು ಪಕ್ಷದಿಂದ ಉಚ್ಚಾಟಿಸಲಾಗಿದೆ' ಎಂದು ಪಳನಿಸ್ವಾಮಿ ಅವರು ಮಾಧ್ಯಮ ಪ್ರಕಟಣೆಯಲ್ಲಿ ವಿವರಿಸಿದ್ದಾರೆ.

ಪನ್ನೀರಸೆಲ್ವಂ ಅವರ ಪುತ್ರ ಮತ್ತು ಥೇಣಿ ಲೋಕಸಭಾ ಕ್ಷೇತ್ರದ ಸಂಸದ ರವೀಂದ್ರನಾಥ್, ಮತ್ತೊಬ್ಬ ಮಗ ಜಯಪ್ರದೀಪ್, ಮಾಜಿ ಸಚಿವ ವೆಲ್ಲಮಂಡಿ ಎನ್.ನಟರಾಜನ್, ಕೋವೈ ಸೆಲ್ವರಾಜ್ ಸೇರಿ ಒಟ್ಟು 18 ಜನರನ್ನು ಪಕ್ಷದಿಂದ ಉಚ್ಚಾಟಿಸಲಾಗಿದೆ.

ಕೆಲಕಾಲ ಟ್ವಿಟರ್ ಸೇವೆಯಲ್ಲಿ ವ್ಯತ್ಯಯ

ವಾಷಿಂಗ್ಟನ್ (ಎಎಫ್‌ಪಿ): 33 ಕೋಟಿ ಬಳಕೆದಾರರನ್ನು ಹೊಂದಿರುವ ಟ್ವಿಟರ್, ಗುರುವಾರ ಜಗತ್ತಿನಾದ್ಯಂತ ಕೆಲಕಾಲ ಸ್ಥಗಿತಗೊಂಡಿತ್ತು. ಈ ಕುರಿತು ಬಳಕೆದಾರರು ಆಕ್ರೋಶ ವ್ಯಕ್ತಪಡಿಸಿದರು. ಇದರ ಬೆನ್ನಲ್ಲೇ, 'ಕೆಲ ಹೊತ್ತಿನ ಬಳಿಕ ಸಮಸ್ಯೆ ಸರಿಯಾಗಿದೆ' ಎಂದು 'ಡೌನ್‌ಡಿಟೆಕ್ಟರ್' ವೆಬ್‌ಸೈಟ್ ತಿಳಿಸಿತು.

ಡೌನ್‌ಡೆಕ್ಟರ್‌ನಲ್ಲಿ 54,000ಕ್ಕೂ ಹೆಚ್ಚು ಮಂದಿ ಸಮಸ್ಯೆಯ ಕುರಿತು ವರದಿ ಮಾಡಿದ್ದಾರೆ. ಟ್ವಿಟರ್ ಖರೀದಿ ಕುರಿತು ಇಲಾನ್ ಮಸ್ಕ್ ಮತ್ತು ಟ್ವಿಟರ್ ಮಧ್ಯೆ ಕಾನೂನು ಹೋರಾಟ ನಡೆಯುತ್ತಿದೆ. ಈ ಕಾರಣಕ್ಕಾಗಿಯೇ ಈ ಸಮಸ್ಯೆ ತಲೆದೋರಿದೆ ಎಂದು ಹೇಳಲಾಗುತ್ತಿದೆ.

ಅಮೆರಿಕದ ಸ್ಥಳೀಯ ಕಾಲಮಾನ ಬೆಳಿಗ್ಗೆ 8ರ ಹೊತ್ತಿಗೆ ಜನರ ಆಕ್ರೋಶ ತೀವ್ರಗೊಂಡಿತ್ತು.

ಡೋಲೊ–650: ವೈದ್ಯರಿಗೆ ಸಾವಿರ ಕೋಟಿ ಉಡುಗೊರೆ!

ಒಂದನೇ ಪುಟದಿಂದ

ಮೈಕ್ರೋ ಲ್ಯಾಬ್ಸ್ ಲಿಮಿಟೆಡ್ ತನ್ನ ಸಮೂಹದ ಔಷಧ ಮತ್ತು ಉತ್ಪನ್ನಗಳ ಮಾರಾಟ ಮಾಡಲು, 'ಉತ್ತೇಜನ ಮತ್ತು ಪ್ರಚಾರ', 'ವಿಚಾರ ಸಂಕಿರಣ ಮತ್ತು ಉಪನ್ಯಾಸ' ಹಾಗೂ 'ವೈದ್ಯಕೀಯ ಸಲಹೆಗಳು' ಹೆಸರಿನಡಿ ವೈದ್ಯರಿಗೆ, ವೈದ್ಯಕೀಯ ರಂಗದ ವೃತ್ತಿಪರರಿಗೆ ಉಡುಗೊರೆಗಳನ್ನು ನೀಡಿದೆ. ಉಡುಗೊರೆಯ ಮೊತ್ತವೇ ₹1,000 ಕೋಟಿಗೂ ಹೆಚ್ಚು. ಈ ಉಡುಗೊರೆಯಲ್ಲಿ ಪ್ರಯಾಣ ವೆಚ್ಚ, ವಿಶೇಷ ಸವಲತ್ತುಗಳೂ ಸೇರಿವೆ. ತನ್ನ ಉತ್ಪನ್ನಗಳ ಮತ್ತು ಬ್ರ್ಯಾಂಡ್ ಪ್ರಚಾರಕ್ಕಾಗಿ ಕಂಪನಿ ಅನೈತಿಕ ಮಾರ್ಗ ಅಳವಡಿಸಿಕೊಂಡಿದೆ' ಎಂದು ಅದು ಹೇಳಿದೆ. ಔಷಧ ಉತ್ಪನ್ನಗಳು ಮತ್ತು ಸಕ್ರಿಯ ಔಷಧೀಯ ಪದಾರ್ಥಗಳ (ಎಪಿಐ) ತಯಾರಿಕೆಯ ಮೈಕ್ರೋ ಲ್ಯಾಬ್ಸ್ ಲಿಮಿಟೆಡ್ ಭಾಗವಾಗಿರುವ ತಯಾರಕರು 50ಕ್ಕೂ ಹೆಚ್ಚು ದೇಶಗಳಲ್ಲಿ ಇದ್ದು, ಇವೆಲ್ಲವೂ ತೆರಿಗೆ ವಂಚನೆ ಮತ್ತು ನಿಯಮ ಉಲ್ಲಂಘನೆಯಲ್ಲಿ ತೊಡಗಿವೆ ಎಂದು ಸಿಬಿಡಿಟಿ ಹೇಳಿದೆ.

ಡೋಲೊ- 650 ಮಾತ್ರೆಗಳು, ಡೋಲೊ- 650 ಸಿರಪ್ ಜ್ವರ, ನೋವು ನಿವಾರಕವಾಗಿ ಬಳಕೆಯಲ್ಲಿರುವ ಜನಪ್ರಿಯ ಔಷಧವಾಗಿದೆ. ಕೊರೊನಾ ವೈರಸ್ ರೋಗಿಗಳಿಗೆ ನೋವು ಮತ್ತು ಜ್ವರಕ್ಕಾಗಿ ವೈದ್ಯರು ಮತ್ತು ಔಷಧ ಅಂಗಡಿಗಳಲ್ಲಿ ಡೋಲೊ -650 ಮಾತ್ರೆಗಳನ್ನು ವ್ಯಾಪಕವಾಗಿ ಶಿಫಾರಸು ಮಾಡುತ್ತಿದ್ದರು.

'ಹನುಮಾನ್ ಚಾಲೀಸಾ' ಪಠಿಸುವ ಬೆದರಿಕೆ

ಮಾಲ್‌ನಲ್ಲಿ 'ನಮಾಜ್'

ಲಖನೌ: ಇಲ್ಲಿನ ಮಾಲ್‌ವೊಂದರಲ್ಲಿ ಕೆಲವರು 'ನಮಾಜ್' ಮಾಡುತ್ತಿದ್ದ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆದ ಬಳಿಕ ಅಖಿಲ ಭಾರತೀಯ ಹಿಂದೂ ಮಹಾಸಭಾದ ಮುಖಂಡರು ಮಾಲ್‌ನಲ್ಲಿ 'ಹನುಮಾನ್ ಚಾಲೀಸಾ' ಪಠಿಸುವುದಾಗಿ ಗುರುವಾರ ಬೆದರಿಕೆಯೊಡ್ಡಿದ್ದಾರೆ.

ಈ ಸಂಬಂಧ ಮಹಾಸಭಾ ಪೊಲೀಸರಿಗೆ ದೂರು ಸಲ್ಲಿಸಿದೆ. ಈ ವಿಷಯದಲ್ಲಿ ಕ್ರಮ ತೆಗೆದುಕೊಳ್ಳಲು ಪೊಲೀಸರು ವಿಫಲರಾದರೆ, ಸಂಘಟನೆಯ ಸದಸ್ಯರು ಮಾಲ್‌ನಲ್ಲಿ 'ಹನುಮಾನ್ ಚಾಲೀಸಾ' ಪಠಿಸಲಿದ್ದಾರೆ ಎಂದು ಸಭಾ ತಿಳಿಸಿದೆ.

'ಗಲ್ಫ್ ಮೂಲದ ಕಂಪನಿಯ ಒಡೆತನದ ಈ ಮಾಲ್‌ನಲ್ಲಿ ಶೇ 80ರಷ್ಟು ಸಿಬ್ಬಂದಿ ಮುಸ್ಲಿಂ ಸಮುದಾಯದವರು. ಇಲ್ಲಿ ಹಲವು ಹಿಂದೂ ಯುವತಿಯರೂ ಕೆಲಸ ನಿರ್ವಹಿಸುತ್ತಿದ್ದಾರೆ. ಹೀಗಾಗಿ ಮಾಲ್‌ನಲ್ಲಿ ನಮಾಜ್ ಮಾಡುವುದು ಸರಿಯಲ್ಲ' ಎಂದು ಅಯೋಧ್ಯೆಯ ಹನುಮಾನ್ ದೇವಾಲಯವೊಂದರ ಅರ್ಚಕ ಮಹಾಂತ ರಾಜು ದಾಸ್ ಹೇಳಿದ್ದಾರೆ.

'ಮಾಲ್, ಶಾಪಿಂಗ್ ಕಾಂಪ್ಲೆಕ್ಸ್ ಆಗಿಯೇ ಇರಬೇಕು. ಅದನ್ನು ಮಸೀದಿ ಮಾಡಲು ಸರ್ಕಾರ ಬಿಡಬಾರದು' ಎಂದು ಹಿಂದೂ ಮಹಾಸಭಾದ ಮುಖಂಡ ಚತುರ್ವೇದಿ ಆಗ್ರಹಿಸಿದ್ದಾರೆ.

ಆಡಳಿತ ಮಂಡಳಿ ಪ್ರತಿಕ್ರಿಯೆ: 'ಮಾಲ್‌ನ ಸಿಬ್ಬಂದಿ ಅಥವಾ ಹೊರಗಿನವರಿಗೆ ಇಲ್ಲಿ ನಮಾಜ್ ಮಾಡಲು ಅವಕಾಶ ಕಲ್ಪಿಸಲಾಗಿತ್ತಾ ಎಂಬುದರ ಕುರಿತು ಪರಿಶೀಲಿಸುತ್ತಿರುವುದಾಗಿ' ಮಾಲ್‌ನ ಆಡಳಿತ ಮಂಡಳಿ ಪ್ರತಿಕ್ರಿಯಿಸಿದೆ. ಈ ಮಾಲ್ ಅನ್ನು ಇತ್ತೀಚೆಗೆ ಉತ್ತರ ಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಉದ್ಘಾಟಿಸಿದ್ದರು.

ಮುಖ್ಯಾಂಶಗಳು

- ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿದ ವಿಡಿಯೊ
- ಅಖಿಲ ಭಾರತೀಯ ಹಿಂದೂ ಮಹಾಸಭಾದಿಂದ ದೂರು ದಾಖಲು
- ಗಲ್ಫ್ ಮೂಲದ ಕಂಪನಿಯ ಒಡೆತನದ ಮಾಲ್

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ರಿಯಲ್ ಎಸ್ಟೇಟ್ ಸೆಲ್ಲಿಂಗ್
Sites
Airport Road
BDA BIAAPA Approved Corner Sites For Sale 14 Kms Before Airport Near Stone Hill School Direct Owner 8904050690

ಉದ್ಯೋಗಾವಕಾಶ
Cook
ಜೈಪುರದಲ್ಲಿರುವ ಫೈನ್ ಡೈನಿಂಗ್ ರೆಸ್ಟೋರೆಂಟ್ ಗೆ ದಕ್ಷಿಣ ಭಾರತೀಯ ಬಾಣಸಿಗ/ ಅಡಿಗೆಭಟ್ಟರು ಬೇಕಾಗಿದ್ದಾರೆ. ಕರ್ನಾಟಕ ಶೈಲಿಯ ಅಡಿಗೆಯ ಅನುಭವವಿರಬೇಕು.ಸಂಬಳ ಪ್ರಸ್ತುತ ಉದ್ಯಮದಲ್ಲಿರುವಂತೆ, ಊಟ,ವಸತಿಯಿದೆ..ಸಂಪರ್ಕಿಸಿ: 9886395565.

Domestic Helpers / Housekeeping
ಶಾಲೆಗೆ ಮತ್ತು ಶಾಲಾ ಮಕ್ಕಳನ್ನು ನೋಡಿಕೊಳ್ಳಲು ಹೌಸ್ ಕೀಪಿಂಗ್ ಹಾಗೂ ಸ್ಕೂಲ್ ವ್ಯಾನ್ ಅಟೆಂಡರ್ ಲೇಡಿ ಬೇಕಾಗಿದ್ದಾರೆ. ಪಾರ್ಟ್‌ಟೈಮ್ / ಫುಲ್ ಟೈಮ್, ಮಾಸಿಕ 7000 ವೇತನ. ಸಂಪರ್ಕಿಸಿ : ಕೆನ್‌ಮೋರ್ ಸ್ಕೂಲ್ ಆಫೀಸ್, ನಂ. 31, ಕನಕಪುರ ರಸ್ತೆ, ಶಾಂತಿನಗರ, ಬೆಂಗಳೂರು - 560004. ಮೊ : 9901501185 / 9538527617

Drivers
HAEID REQUIRES Experienced Educated 4WH Automatic Car Driver at Rajajinagar Bangalore. Attractive Package & Immediate Placement Contact:+91 6366443134.

General
ಪ್ರಮುಖ ಟ್ಯಾಕ್ಸಿ ಕಂಪನಿಗೆ ಡ್ರೈವರ್ ಬೇಕಾಗಿದ್ದಾರೆ (ತಕ್ಷಣವೇ ಸೇರುವಿಕೆ) ಬೆಂಗಳೂರಿನಾದ್ಯಂತ ಮುಕ್ತ ಸ್ಥಾನ ಆಟೋಮ್ಯಾಟಿಕ್ ಕಾರ್: ಒತ್ತಡ ಮುಕ್ತ ಚಾಲನೆ ಸಂಬಳ: 18000- 20000 ಪ್ರತಿ ತಿಂಗಳು + ಕುಟುಂಬಕ್ಕೆ ಖಾಸಗಿ ವಿಮೆ + ಮಕ್ಕಳ ಶೈಕ್ಷಣಿಕ ಬೆಂಬಲ ನೀಡಲಾಗುವುದು ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ: 08047106868

ಕಂಪನಿಗಳಿಗೆ ಬೇಕಾಗಿದ್ದಾರೆ: ಟಾಟಾಮೋಟಾರ್ಸ್, ಟಯೋಟಾ, ಟಿ.ವಿ.ಎಸ್, ಬ್ರಿಟಾನಿಯಾಗಳಿಗೆ ಎಸ್.ಎಸ್.ಎಲ್.ಸಿ, ಪಿಯುಸಿ, ಡಿಗ್ರಿ, ಐಟಿಐನವರುಗಳು 18,100- 56,000 (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟದೊಂದಿಗೆ. 9686220858

ಕರ್ನಾಟಕದಾದ್ಯಂತ ಹೆಸರಾಂತ ಕಂಪನಿ, ಆಫೀಸ್ ಕೆಲಸಕ್ಕೆ ಯುವಕ / ಯುವತಿಯರು ಬೇಕಾಗಿದ್ದಾರೆ. ವಸತಿಯೂಟದೊಂದಿಗೆ Salary+OT 17800/-68000/-. 9513330916, 9513330914.

ರಾವ್ ಸಂಸ್ಥೆಗೆ ವಯಸ್ಸಾದವರನ್ನು, ರೋಗಿಗಳನ್ನು, ಮಕ್ಕಳನ್ನು ನೋಡಿಕೊಳ್ಳಲು. ಮನೆಕೆಲಸಕ್ಕೆ, ಅಡುಗೆಗೆ ಮಹಿಳೆಯರು ಹೋಂ ನರ್ಸಗಳು ಹುಡುಗಿಯರು ಬೇಕಾಗಿದ್ದಾರೆ. ಊಟವಸತಿಯಿದೆ. 10,000- 15,000, 8951315839, 9880545002

Part-Time Jobs
ಕನ್ನಡ ಮತ್ತು ಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ, ಗೃಹಿಣಿಯರಿಗೆ, ಮನೆಯಲ್ಲೆ ಕುಳಿತು,ಬುಕ್ ಬರೆಯುವ ಮೂಲಕ ತಿಂಗಳಿಗೆ 14,000- 16,000/-ರ ವರೆಗೆ ಸಂಪಾದಿಸಿ.(ಕೊರಿಯರ್ ಇದೆ).8884686861, 8884686860.

ಕನ್ನಡ ಮತ್ತುಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ,ಗೃಹಿಣಿಯರಿಗೆ ವಯಸ್ಸಾದವರು ಮನೆಯಲ್ಲೇ ಕುಳಿತು ನಾವು ಕೊಡುವ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000- 15,000 ವರೆಗೆ ಸಂಪಾದಿಸಿ.ಕೊರಿಯರ್ ಸೌಲಭ್ಯವಿದೆ.8884777502, 8884777503

ಭವಿಷ್ಯ
Astrology
★॥ವಶೀಕರಣ ಸ್ಪೆಷಲಿಸ್ಟ್॥★ ಇಷ್ಟಪಟ್ಟವರು ನಿಮ್ಮಂತೆ ಆಗಲು ನೋಡುವ ಮೂಲಕ, ಮಾತನಾಡುವ ಮೂಲಕ, ಹೆಸರಿನ ಮೂಲಕ ಸ್ತ್ರೀವಶೀಕರಣ 27ನಿಮಿಷಗಳಲ್ಲಿ ಶಾಶ್ವತ_ಪರಿಹಾರ. 9535088827"

ಒಂದೇ ಕರೆಯಲ್ಲಿ100% ಗ್ಯಾರಂಟಿ ಶಾಶ್ವತ ಪರಿಹಾರ ಸ್ತ್ರೀಪುರುಷ ವಶೀಕರಣ ಸ್ಪೆಷಲಿಸ್ಟ್ ಪಂಡಿತ್. ಕೃಷ್ಣಪ್ರಸಾದ್:ಉಚಿತಭವಿಷ್ಯ ಖಚಿತಪರಿಹಾರ, ದಕ್ಷಿಣಕನ್ನಡ ಮಾಂತ್ರಿಕರು, ಶ್ರೀಕ್ಷೇತ್ರಹೊರನಾಡು: 7022443071

ಪ್ರೇಮ-ವಿಚಾರ, ವಶೀಕರಣ, ಮಾಟ-ಮಂತ್ರ, ಇನ್ನು ಮುಂತಾದ ಸಮಸ್ಯೆಗಳಿಗೆ ಚಿಂತಿಸುವ ಅವಶ್ಯಕತೆ ಇಲ್ಲ,ನಿಮ್ಮ ಸಮಸ್ಯೆ ಏನೇ ಇರಲಿ ಪರಿಹಾರ ಶತಸಿದ್ಧ: 9513707409

ಕೆಲಸದ ನಂತರ ಕಾಣಿಕೆ. ಸ್ತ್ರೀ ಪುರುಷ ವಶೀಕರಣ. ನಿಮ್ಮ ಯಾವುದೇ ಗುಪ್ತಸಮಸ್ಯೆಗಳಿಗೆ, ಇಷ್ಟಪಟ್ಟವರು. ನಿಮ್ಮಂತೆ ಆಗಲು, 2 ದಿನದಲ್ಲಿ ಪರಿಹಾರ: 9591580089.

ಪ್ರವಾಸ
Travel
18.08.2022 05.09.2022 15.09.2022 29.09.2022 11/17/35 ದಿನಗಳ ದೆಹಲಿ ನೇಪಾಳ,ಮುಕ್ತಿನಾಥ್, ಕಾಶಿ,ಗಯಾ ಚಾರ್‌ಧಾಮ್ ಹರಿದ್ವಾರ್ ವೈಷ್ಣೊದೇವಿ, ಅಮೃತಸರ್ ಕಾಶ್ಮೀರ್. 09.11.2022 ದ್ವಾರಕಾ ಸೋಮನಾಥ್ ಓಂಕಾರೇಶ್ವರ್ ದಕ್ಷಿಣಭಾರತ ಮಧ್ಯಭಾರತ ಪ್ರವಾಸಕ್ಕೆ ಸಂಪರ್ಕಿಸಿ: ಏಷ್ಯನ್ ಟ್ರಾವಲ್ ಏಜೆನ್ಸಿ ಕೆಳಮಹಡಿ ಬೆಂಗಳೂರು.4 080-26574131 8317446683

ಮಾತೃಗಯಾ ಉಜ್ಜಯಿನಿ ಓಂಕಾರೇಶ್ವರ್ ಸೋಮನಾಥ್,ದ್ವಾರಕಾ ನಾಗೇಶಂ 08.08.2022 ರಿಂದ 10 ದಿನಗಳು. ಯುಮುನೋತ್ರಿ ಗಂಗೋತ್ರಿ,ಕೇದಾರನಾಥ್ ಬದರಿನಾಥ್,ಹರಿದ್ವಾರ್ 15.09.2022 17.09.2022 07.10.2022 10.10.2022 ರಿಂದ 14/18 ದಿನಗಳು. ದೆಹಲಿ,ಆಗ್ರಾ,ಮಥುರ ಕಾಶಿ,ಗಯಾ,ಪ್ರಯಾಗ, ಹರಿದ್ವಾರ್ 17.09.2022 07.10.2022 10.10.2022 ರಿಂದ 13/17 ದಿನಗಳು. ಶ್ರೀಶೈಲಂ,ಮಹಾನಂದಿ ಅಹೋಬಲ ನವನಸಿಂಹ 11.08.2022 ರಿಂದ 5 ದಿನಗಳು. ಸಂಪರ್ಕಿಸಿ: 26508925 9980993631 ಶ್ರೀಚೈತನ್ಯ ಟ್ರಾವಲ್ಸ್ ಚಾಮರಾಜಪೇಟೆ ಬೆಂಗಳೂರು-18

ಸುಸಜ್ಜಿತ ಪ್ರವಾಸಗಳು: 04.09.2022 11.10.2022 ರಿಂದ 15 ದಿನಗಳ ಚಾರ್‌ಧಾಮ್ ಯಾತ್ರೆ. 13.09.2022 06.10.2022 ರಿಂದ 12 ದಿನಗಳ ಕಾಶಿ,ಗಯಾ. 02.10.2022 20.10.2022 ರಿಂದ 8 ದಿನಗಳ ಶಿಮ್ಲಾ,ಮನಾಲಿ. 13.09.2022 19.10.2022 ರಿಂದ 11 ದಿನಗಳ ಕಾಶಿ,ನೇಪಾಳ. 07.10.2022 ರಿಂದ 12 ದಿನಗಳ ಶಿಮ್ಲಾ ಅಮೃತ್ಸರ್ ವೈಷ್ಣೊದೇವಿ, 06.09.2022 ರಿಂದ 6/16 ದಿನಗಳ ಪುರಿ,ಕಲ್ಕತ್ತ ನೇಪಾಳ ಪ್ರವಾಸಗಳು. ಸಂಪರ್ಕಿಸಿ: ಆನಂದ್ ವಿಹಾರಿ ಬೆಂಗಳೂರು-23. 080-23385837 8088887677

ನೇಪಾಳ-ಕಠ್ಮಂಡು 10 ದಿನದ ವಿದೇಶ ಪ್ರವಾಸ. ಕುವೆಂಪು ಕಲಾನಿಕೇತನ ಸಂಸ್ಥೆಯ ವತಿಯಿಂದ ಅಂತರಾಷ್ಟ್ರೀಯ ವಿಶ್ವಮಾನವ ಕುವೆಂಪು ಕಲಾ ಉತ್ಸವ-2022. ದಿನಾಂಕ:12-09-2022 ರಿಂದ ನೇಪಾಳಕಠ್ಮಂಡು ಪೋಕ್ರಾ ಗೋರಕಪುರ ಲುಂಬಿನಿ ಮುಕ್ತಿನಾಥ ಚಿತವಾನ್ ಮನೋಕಾಮನ ಜನಕಪುರಿ. ಸಂಪರ್ಕಿಸಿ: 09880988298/ 09448025130.

6.8.2022 ತಮಿಳುನಾಡು, ಕೇರಳಬಸ್ ಪ್ರವಾಸ. 15-9-2022 ಶ್ರೀಶೈಲ, ಮಂತ್ರಾಲಯ, ಹೈದರಾಬಾದ್ ಬಸ್ ಪ್ರವಾಸ. 27-9-2022 ಶಿರಡಿ, ಎಲ್ಲೋರ (ರೈಲು) 11-10-22ಕಾಶಿ, ದೆಹಲಿ (ರೈಲು) ಮಲ್ಲಿಕಾರ್ಜುನ ಪ್ಯಾಕೇಜ್ ಟೂರ್ಸ್ ತುಮಕೂರು 8496044942

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

DH ಪ್ರಜಾವಾಣಿ
EFFECTIVE FROM May 1, 2022

BOOK YOUR REAL ESTATE
Classified Advertisement In Deccan Herald & Prajavani
SATURDAY & SUNDAY COMBO OFFER

Ordinary Per word	Bold Per word	Ordinary Semi Display Per word	Bold Semi Display Per word	Single Col CD Per sqcm
100	150	120	190	600

For More Details Contact:
Ph:080- 45557160 | 163 | 164 | M: 9880856233 | 9731810277 | 9901641752 | 9845114560 | 9886213331
dhclassifieds@deccanherald.co.in www.dhclassifieds.com
condition apply*

ಏಕದಿನ ಕ್ರಿಕೆಟ್: ಭಾರತಕ್ಕೆ 100 ರನ್‌ಗಳ ಸೋಲು, ಸರಣಿ ಸಮಬಲ

ಲಾರ್ಡ್ಸ್‌ನಲ್ಲಿ ಇಂಗ್ಲೆಂಡ್ ಮೆರೆದಾಟ


ಇಂಗ್ಲೆಂಡ್ ತಂಡದ ರೀಸ್ ಟೋಪ್ಲಿ ಸಂಭ್ರಮ –ಎಎಫ್‌ಪಿ ಚಿತ್ರ

ಲಂಡನ್: ಬ್ಯಾಟಿಂಗ್ ಕೈಕೊಟ್ಟರೂ, ಬೌಲರ್‌ಗಳ ಚುರುಕಿನ ದಾಳಿಯ ನೆರವಿನಿಂದ ಇಂಗ್ಲೆಂಡ್ ತಂಡ, ಭಾರತದ ಎದುರಿನ ಎರಡನೇ ಏಕದಿನ ಕ್ರಿಕೆಟ್ ಪಂದ್ಯವನ್ನು 100 ರನ್‌ಗಳಿಂದ ಗೆದ್ದಿತು.

ಲಾರ್ಡ್ಸ್ ಅಂಗಳದಲ್ಲಿ ಗುರುವಾರ ನಡೆದ ಪಂದ್ಯದಲ್ಲಿ ಮೊದಲು ಬ್ಯಾಟ್ ಮಾಡಿದ ಇಂಗ್ಲೆಂಡ್ ಯಜುವೇಂದ್ರ ಚಾಹಲ್ (47ಕ್ಕೆ4) ಸ್ಪಿನ್ ಮೋಡಿಯ ಹೊರತಾಗಿಯೂ 49 ಓವರ್‌ಗಳಲ್ಲಿ 246 ರನ್ ಗಳಿಗೆ ಆಲೌಟಾಯಿತು.

ಸಾಧಾರಣ ಗುರಿ ಬೆನ್ನಟ್ಟಿದ ರೋಹಿತ್ ಶರ್ಮಾ ಬಳಗ, ರೀಸ್ ಟೋಪ್ಲಿ (24ಕ್ಕೆ 6) ಅವರ ದಾಳಿಗೆ ನಲುಗಿ ಆಗಿಂದಾಗ್ಗೆ ವಿಕೆಟ್ ಕಳೆದುಕೊಂಡು 38.5 ಓವರ್‌ಗಳಲ್ಲಿ 146 ರನ್‌ಗಳಿಗೆ ಆಲೌಟಾಯಿತು.

ಮೂರು ಪಂದ್ಯಗಳ ಸರಣಿ 1-1 ರಲ್ಲಿ ಸಮಬಲ ಆಗಿದ್ದು, ಜುಲೈ 17 ರಂದು ನಡೆಯುವ ಅಂತಿಮ ಪಂದ್ಯ ಕುತೂಹಲ ಮೂಡಿಸಿದೆ.

ಬ್ಯಾಟಿಂಗ್ ವೈಫಲ್ಯ: ರೋಹಿತ್ ಮತ್ತು ರಿಷಭ್ ಪಂತ್ 'ಸೊನ್ನೆ' ಸುತ್ತಿದರು. ವಿರಾಟ್ ಕೊಹ್ಲಿ (16 ರನ್, 25 ಎ) ಮತ್ತೆ ವಿಫಲರಾದರು. ಸೂರ್ಯಕುಮಾರ್ ಯಾದವ್ (27 ರನ್, 29 ಎ.), ಹಾರ್ದಿಕ್ ಪಾಂಡ್ಯ (29 ರನ್, 44 ಎ) ಮತ್ತು ರವೀಂದ್ರ ಜಡೇಜ (29 ರನ್, 44 ಎಸೆತ) ಉತ್ತಮ ಆರಂಭ ಪಡೆದರೂ, ಅದನ್ನು ದೊಡ್ಡ ಮೊತ್ತವಾಗಿ ಪರಿವರ್ತಿಸುವಲ್ಲಿ ವಿಫಲರಾದರು.

ಮೋಯಿನ್, ವಿಲಿ ಆಸರೆ: ಭಾರತದ ಬೌಲಿಂಗ್ ಪಡೆಯ ಪರಿಣಾಮಕಾರಿ ದಾಳಿಯಿಂದಾಗಿ ಇಂಗ್ಲೆಂಡ್ ತಂಡವು 102 ರನ್‌ಗಳಿಗೆ ಐದು ವಿಕೆಟ್‌ಗಳನ್ನು ಕಳೆದುಕೊಂಡಿತ್ತು. ಆದರೆ, ಮಧ್ಯಮ ಕ್ರಮಾಂಕದಲ್ಲಿ ಲಿಯಾಮ್ ಲಿವಿಂಗ್‌ಸ್ಟೋನ್ (33; 33ಎ) ಮತ್ತು ಮೋಯಿನ್ ಅಲಿ (47; 64ಎ) ಆರನೇ ವಿಕೆಟ್ ಜೊತೆಯಾಟದಲ್ಲಿ 62 ರನ್‌ಗಳು ತಂಡಕ್ಕೆ ಚೇತೋಹಾರಿಯಾದವು. ಡೇವಿಡ್ ವಿಲಿ (41 ರನ್) ಕೂಡ ಉಪಯುಕ್ತ ಕಾಣಿಕೆ ನೀಡಿದರು. ಇದರಿಂದಾಗಿ ತಂಡವು ಇನ್ನೂರರ ಗಡಿ ದಾಟಿತು.

ಭಾರತ ತಂಡಕ್ಕೆ ಈ ಪಂದ್ಯದಲ್ಲಿ ಆರಂಭದಲ್ಲಿ ಯಶಸ್ಸು ಸಿಗಲಿಲ್ಲ. ಆದರೆ, ಒಂಬತ್ತನೇ ಓವರ್‌ನಲ್ಲಿ ಜೇಸನ್ ರಾಯ್ ವಿಕೆಟ್ ಕಬಳಿಸಿದ ಹಾರ್ದಿಕ್ ಪಾಂಡ್ಯ ಮೊದಲ ಯಶಸ್ಸು ಪಡೆದರು. ಜೇಸನ್ (23 ರನ್) ಅವರು ಜಾನಿ ಬೆಸ್ಟೊ ಜೊತೆಗೆ ಮೊದಲ ವಿಕೆಟ್‌ಗೆ 41 ರನ್ ಸೇರಿಸಿದರು. 38 ರನ್ ಗಳಿಸಿದ್ದ ಜಾನಿ ವಿಕೆಟ್ ಅನ್ನು 15ನೇ ಓವರ್‌ನಲ್ಲಿ ಉರುಳಿಸಿದ ಚಾಹಲ್ ತಮ್ಮ ಖಾತೆ ತೆರೆದರು. ಜೋ ರೂಟ್ ಅವರನ್ನು ಎಲ್‌ಬಿಡಬ್ಲ್ಯು ಬಲೆಗೆ ಕೆಡವಿದ ಚಾಹಲ್ ಭಾರತಕ್ಕೆ ಮಹತ್ವದ ಕಾಣಿಕೆ ನೀಡಿದರು.

ನಂತರದ ಓವರ್‌ನಲ್ಲಿ ಶಮಿ ಹಾಕಿದ ಎಸೆತಕ್ಕೆ ನಾಯಕ ಬಟ್ಲರ್ ಕ್ಲೀನ್‌ಬೌಲ್ಡ್ ಆದರು. ಆಟಕ್ಕೆ ಕುದುರಿಕೊಳ್ಳುತ್ತಿದ್ದ ಬೆನ್ ಸ್ಟೋಕ್ಸ್ ಅವರನ್ನು ಎಲ್‌ಬಿ ಬಲೆಗೆ ಕೆಡವಿದ ಚಾಹಲ್ ಸಂಭ್ರಮಿಸಿದರು. ಇನ್ನೊಂದೆಡೆ ಹಾರ್ದಿಕ್ ಪಾಂಡ್ಯ ಕೂಡ ಬ್ಯಾಟರ್‌ಗಳ ಮೇಲೆ ಒತ್ತಡ ಹಾಕಿದರು. ಲಿಯಾಮ್ ವಿಕೆಟ್ ಗಳಿಸಿದರು. ಡೇವಿಡ್ ವಿಲಿಗೆ ಅರ್ಧಶತಕ ಗಳಿಸಲು ಬೂಮ್ರಾ ಬಿಡಲಿಲ್ಲ.

ಮೊದಲ ಪಂದ್ಯದಲ್ಲಿ ಆರು ವಿಕೆಟ್ ಗಳಿಸಿದ್ದ ಬೂಮ್ರಾ ಇಲ್ಲಿ ಡೇವಿಡ್ ಸೇರಿದಂತೆ ಎರಡು ವಿಕೆಟ್ ಗಳಿಸಿದರು.

ಸಂಕ್ಷಿಪ್ತ ಸ್ಕೋರ್: ಇಂಗ್ಲೆಂಡ್ 246 (49 ಓವರ್‌ಗಳಲ್ಲಿ) ಜೇಸನ್ ರಾಯ್ 23, ಜಾನಿ ಬೆಸ್ಟೊ ಬಿ ಚಾಹಲ್ 38, ಬೆನ್ ಸ್ಟೋಕ್ಸ್ 21, ಲಿಯಾಮ್ ಲಿವಿಂಗ್‌ಸ್ಟೋನ್ 33, ಮೋಯಿನ್ ಅಲಿ 47, ಡೇವಿಡ್ ವಿಲಿ 41, ಯಜುವೇಂದ್ರ ಚಾಹಲ್ 47ಕ್ಕೆ 4, ಜಸ್‌ಪ್ರೀತ್ ಬೂಮ್ರಾ 49ಕ್ಕೆ 2, ಮೊಹಮ್ಮದ್ ಶಮಿ 48ಕ್ಕೆ 1, ಹಾರ್ದಿಕ್ ಪಾಂಡ್ಯ 28ಕ್ಕೆ 2

ಭಾರತ 146 (38.5 ಓವರ್) ವಿರಾಟ್ ಕೊಹ್ಲಿ 16, ಸೂರ್ಯಕುಮಾರ್ ಯಾದವ್ 27, ಹಾರ್ದಿಕ್ ಪಾಂಡ್ಯ 29, ರವೀಂದ್ರ ಜಡೇಜ 29, ಮೊಹಮ್ಮದ್ ಶಮಿ 23, ರೀಸ್ ಟೋಪ್ಲಿ 24ಕ್ಕೆ 6, ಡೇವಿಡ್ ವಿಲಿ 27ಕ್ಕೆ 1

ಫಲಿತಾಂಶ: ಇಂಗ್ಲೆಂಡ್‌ಗೆ 100 ರನ್ ಗೆಲುವು

ನೀರಜ್ ಮೇಲೆ ನಿರೀಕ್ಷೆ ಭಾರ

ವಿಶ್ವ ಅಥ್ಲೆಟಿಕ್ ಚಾಂಪಿಯನ್‌ಷಿಪ್‌ಗೆ ಇಂದು ಚಾಲನೆ


ಭಾರತದ ಭರವಸೆ ಎನಿಸಿರುವ ನೀರಜ್ ಚೋಪ್ರಾ

ಯೂಜೀನ್, ಅಮೆರಿಕ (ಪಿಟಿಐ): ಶತಕೋಟಿಗೂ ಅಧಿಕ ಮಂದಿಯ ನಿರೀಕ್ಷೆ ಭಾರ ಹೊತ್ತುಕೊಂಡಿರುವ ನೀರಜ್ ಚೋಪ್ರಾ ಅವರು ಶುಕ್ರವಾರ ಇಲ್ಲಿ ಆರಂಭವಾಗಲಿರುವ ವಿಶ್ವ ಅಥ್ಲೆಟಿಕ್ ಚಾಂಪಿಯನ್‌ಷಿಪ್‌ನಲ್ಲಿ ಭಾರತದ ಸವಾಲನ್ನು ಮುನ್ನಡೆಸಲಿದ್ದಾರೆ.

ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಚಿನ್ನ ಜಯಿಸಿರುವ ಚೋಪ್ರಾ, ಈ ಚಾಂಪಿಯನ್‌ಷಿಪ್‌ನಲ್ಲಿ ಭಾರತಕ್ಕೆ ಪದಕ ತಂದುಕೊಡುವುದು ಬಹುತೇಕ ಖಚಿತ. ಈ ಋತುವಿನಲ್ಲಿ ಅವರು ತಮ್ಮ ಪ್ರದರ್ಶನದಲ್ಲಿ ಸ್ಥಿರತೆ ಕಾಪಾಡಿಕೊಂಡಿದ್ದಾರೆ. ಎಲ್ಲ ಕೂಟಗಳಲ್ಲೂ 90 ಮೀ. ಸನಿಹದ ಪ್ರದರ್ಶನ ತೋರಿದ್ದಾರೆ.

ಜೂನ್ ತಿಂಗಳಲ್ಲಿ ಫಿನ್ಲೆಂಡ್‌ನಲ್ಲಿ ನಡೆದ ಪಾವೊ ನೂರ್ಮಿ ಕೂಟದಲ್ಲಿ 89.30 ಮೀ. ಸಾಧನೆಯೊಂದಿಗೆ ತಮ್ಮ ವೈಯಕ್ತಿಕ ಶ್ರೇಷ್ಠ ಪ್ರದರ್ಶನ ನೀಡಿದ್ದರು. ಸ್ಟಾಕ್‌ಹೋಮ್ ಡೈಮಂಡ್ ಲೀಗ್‌ನಲ್ಲಿ 89.94 ಮೀ. ಸಾಧನೆ ಮೂಲಕ ತಮ್ಮ ಪ್ರದರ್ಶನ ಉತ್ತಮಪಡಿಸಿಕೊಂಡಿದ್ದರು.

ಗ್ರೆನಾಡದ ಆ್ಯಂಡರ್ಸನ್ ಪೀಟರ್ಸ್ ಅವರು ಇಲ್ಲಿ ಚೋಪ್ರಾಗೆ ಪೈಪೋಟಿ ನೀಡಲಿದ್ದಾರೆ. ಹಾಲಿ ಚಾಂಪಿಯನ್ ಆಗಿರುವ ಪೀಟರ್ಸ್ ಈ ಋತುವಿನಲ್ಲಿ 93.07 ಮೀ. ಸಾಧನೆ ಮಾಡಿದ್ದಾರೆ.

ಚೋಪ್ರಾ ಅವರನ್ನು ಹೊರತುಪಡಿಸಿದರೆ ಲಾಂಗ್‌ಜಂಪ್ ಸ್ಪರ್ಧಿ ಮುರಳಿ ಶ್ರೀಶಂಕರ್ ಭಾರತದ ಪರ ಅಲ್ಪ ಭರವಸೆ ಮೂಡಿಸಿದ್ದಾರೆ. ಏಪ್ರಿಲ್‌ನಲ್ಲಿ ನಡೆದಿದ್ದ ಫೆಡರೇಷನ್ ಕಪ್‌ನಲ್ಲಿ ಅವರು 8.36 ಮೀ. ಸಾಧನೆ ಮಾಡಿದ್ದರು. ಈ ಋತುವಿನಲ್ಲಿ ವಿವಿಧ ದೇಶಗಳ ಸ್ಪರ್ಧಿಗಳ ಸಾಧನೆಗೆ ಹೋಲಿಸಿದರೆ, ಶ್ರೀಶಂಕರ್ ಅವರು ಏಳನೇ ಸ್ಥಾನದಲ್ಲಿದ್ದಾರೆ.

ವಿಶ್ವ ಅಥ್ಲೆಟಿಕ್ ಚಾಂಪಿಯನ್‌ಷಿಪ್‌ನಲ್ಲಿ ಭಾರತದ 23 ಸ್ಪರ್ಧಿಗಳು ವಿವಿಧ ವಿಭಾಗಗಳಲ್ಲಿ ಪದಕಕ್ಕಾಗಿ ಪೈಪೋಟಿ ನಡೆಸಲಿದ್ದಾರೆ.

ಅಥ್ಲೆಟಿಕ್ ಕೂಟದ ನೇರ ಪ್ರಸಾರ: ರಾತ್ರಿ 9.35 (ಭಾರತೀಯ ಕಾಲಮಾನ) ಸೋನಿ, ಟೆನ್ 2

ಕಿಕ್ ಬಾಕ್ಸರ್ ಸಾವು: ಎಫ್‌ಐಆರ್

ಪ್ರಜಾವಾಣಿ ವಾರ್ತೆ

ಬೆಂಗಳೂರು/ಮೈಸೂರು: ಕಿಕ್ ಬಾಕ್ಸಿಂಗ್ ಸ್ಪರ್ಧೆಯಲ್ಲಿ ತೀವ್ರ ಗಾಯಗೊಂಡಿದ್ದ ಮೈಸೂರಿನ ಕಿಕ್‌ಬಾಕ್ಸರ್ ಎಸ್. ನಿಖಿಲ್ (23) ಮೃತಪಟ್ಟ ಪ್ರಕರಣದ ಸಂಬಂಧ ಸಂಘಟಕರ ವಿರುದ್ಧ ಎಫ್‌ಐಆರ್ ದಾಖಲಾಗಿದೆ.

ಕೆ-ಒನ್ ಅಸೋಸಿಯೇಷನ್ ಆಫ್ ಕರ್ನಾಟಕ ವತಿಯಿಂದ ಕಿಕ್ ಬಾಕ್ಸಿಂಗ್ ಸ್ಪರ್ಧೆ ಆಯೋಜಿಸಲಾಗಿತ್ತು. ಎದುರಾಳಿ ಪಂಚ್ ನೀಡಿದ್ದರಿಂದಾಗಿ ನಿಖಿಲ್ ತೀವ್ರ ಗಾಯಗೊಂಡಿದ್ದರು. ಆಸ್ಪತ್ರೆಗೆ ದಾಖಲಿಸಿದರೂ ಚಿಕಿತ್ಸೆಗೆ ಸ್ಪಂದಿಸದೇ ಬುಧವಾರ ಮೃತಪಟ್ಟಿದ್ದರು.

'ನಿಖಿಲ್ ಸಾವಿನ ಬಗ್ಗೆ ತಂದೆ ಪಿ. ಸುರೇಶ್ ದೂರು ನೀಡಿದ್ದಾರೆ. ಕಿಕ್ ಬಾಕ್ಸಿಂಗ್ ಸಂಘಟಕರಾದ ನವೀನ್ ರವಿಶಂಕರ್ ಹಾಗೂ ಇತರರ ವಿರುದ್ಧ ಎಫ್‌ಐಆರ್ ದಾಖಲಿಸಿಕೊಳ್ಳಲಾಗಿದೆ. ಆರೋಪಿಗಳಿಗೆ ನೋಟಿಸ್ ನೀಡಲಾಗಿದ್ದು, ವಿಚಾರಣೆ ನಡೆಸಬೇಕಿದೆ' ಎಂದು ಪೊಲೀಸರು ಹೇಳಿದರು.

'ಬಾಕ್ಸಿಂಗ್ ಸ್ಪರ್ಧೆ ಸ್ಥಳದಲ್ಲಿ ಯಾವುದೇ ಮುಂಜಾಗ್ರತಾ ಕ್ರಮ ಕೈಗೊಂಡಿರಲಿಲ್ಲ. ಕನಿಷ್ಠ ಪ್ರಾಥಮಿಕ ಚಿಕಿತ್ಸೆ ಸೌಲಭ್ಯವೂ ಇರಲಿಲ್ಲ. ಸಂಘಟಕರ ನಿರ್ಲಕ್ಷ್ಯದಿಂದಲೇ ಮಗ ನಿಖಿಲ್ ಮೃತಪಟ್ಟಿರುವುದಾಗಿ ತಂದೆ ದೂರಿದ್ದಾರೆ' ಎಂದೂ ವಿವರಿಸಿದರು.

'ನಿಖಿಲ್ ತಾಯಿಗೆ ಏನು ಹೇಳಲಿ'

'ಆಯೋಜಕರ ನಿರ್ಲಕ್ಷ್ಯದಿಂದಲೇ ನಿಖಿಲ್ ಸಾವನ್ನಪ್ಪಿದ್ದಾನೆ. ಅವನ ತಾಯಿಗೆ ಏನು ಹೇಳಲಿ. ಸಿನಿಮಾದಲ್ಲಿ ನಡೆಯುವ ಹೊಡೆದಾಟದಂತೆ ಒಂದೇ ಪಂಚ್‌ನಲ್ಲಿ ಮಗನನ್ನು ಕ್ರೂರವಾಗಿ ಕೊಂದರು' ಎಂದು ಕಿಕ್ ಬಾಕ್ಸರ್ ನಿಖಿಲ್ ತಂದೆ ಸುರೇಶ್ ಕಣ್ಣೀರಾದರು.

'ಕಿಕ್ ಬಾಕ್ಸಿಂಗ್‌ಗೆ ಪ್ರೇರೇಪಿಸಿ ಪುತ್ರನ ಸಾವಿಗೆ ಕಾರಣನಾದೆ. ಘಟನೆ ನಡೆದಾಗ ಮೈಸೂರಿನಲ್ಲಿದ್ದೆ, ಅಂತರರಾಷ್ಟ್ರೀಯ ಮಟ್ಟದ ಕ್ರೀಡೆ, ಕೋಚ್‌ಗಳೆನಿಸಿಕೊಂಡವರು ಸ್ಪರ್ಧೆ ಆಯೋಜಿಸುವಾಗ ಕನಿಷ್ಠ ವೈದ್ಯಕೀಯ ಸೌಲಭ್ಯವನ್ನೂ ಒದಗಿಸದೆ ಅಮಾನವೀಯವಾಗಿ ನಡೆದುಕೊಂಡಿದ್ದಾರೆ. ಸ್ಪರ್ಧೆ ನಡೆಯುವಾಗ ಬೇರೆಲ್ಲೋ ಕುಳಿತಿದ್ದರು' ಎಂದು ಗುರುವಾರ ಸುದ್ದಿಗಾರರೊಂದಿಗೆ ಆಕ್ರೋಶ ವ್ಯಕ್ತಪಡಿಸಿದರು.

'ಸುರಕ್ಷತೆ ನೀಡದ ಇಂಥ ಆಯೋಜಕರು ಇರುವವರೆಗೂ ಮಕ್ಕಳನ್ನು ಕ್ರೀಡೆಗಳಿಗೆ ಕಳುಹಿಸುವುದು ಅಪಾಯ. ಕಿಕ್ ಬಾಕ್ಸಿಂಗ್ ಸ್ಪೋರ್ಟ್ಸ್ ಎಂದವನು ಮೂರ್ಖ. ಪೋಷಕರಾರು ಇಂಥವುಗಳಿಗೆ ಕಳುಹಿಸಬೇಡಿ. ಕರಾಟೆ ಪಟುವಾಗಿ ಹೀಗೆ ಹೇಳುವುದಕ್ಕೂ ದುಃಖವಾಗುತ್ತದೆ' ಎಂದರು.

'ನಿಯಮಾವಳಿ ಪಾಲಿಸಬೇಕು'

'ಸಮರ ಕಲೆಯಲ್ಲಿ ಗಾಯಗಳಾಗುವುದು ಸಹಜ. ಆದರೆ, ತತ್‌ಕ್ಷಣ ಚಿಕಿತ್ಸೆ ನೀಡಲು ನುರಿತ ವೈದ್ಯಕೀಯ ಸಿಬ್ಬಂದಿ, ಆಮ್ಲಜನಕ ವ್ಯವಸ್ಥೆ ಮತ್ತು ಅಂಬುಲೆನ್ಸ್‌ಗಳು ಸಿದ್ಧವಾಗಿರಬೇಕು. ಅದಕ್ಕಾಗಿ ವಿಶ್ವ ಕಿಕ್ ಬಾಕ್ಸಿಂಗ್ ಫೆಡರೇಷನ್ ನಿಯಮಾವಳಿಯನ್ನು ಪಾಲಿಸಬೇಕು. ಅದರಲ್ಲಿ ತೆಗೆದುಕೊಳ್ಳಬೇಕಾದ ಮುಂಜಾಗ್ರತಾ ಕ್ರಮಗಳ ಬಗ್ಗೆ ಸ್ಪಷ್ಟ ಉಲ್ಲೇಖವಿದೆ' ಎಂದು ಅಂತರರಾಷ್ಟ್ರೀಯ ಕಿಕ್ ಬಾಕ್ಸರ್ ಜಿ. ಶರಣ್ 'ಪ್ರಜಾವಾಣಿ'ಗೆ ತಿಳಿಸಿದರು.

ತಂಡಕ್ಕೆ ಮರಳಿದ ಅಶ್ವಿನ್, ರಾಹುಲ್

ಆರ್. ಅಶ್ವಿನ್

ನವದೆಹಲಿ (ಪಿಟಿಐ): ವೆಸ್ಟ್ ಇಂಡೀಸ್‌ನಲ್ಲಿ ನಡೆಯಲಿರುವ ಟಿ20 ಕ್ರಿಕೆಟ್ ಸರಣಿಯಲ್ಲಿ ಆಡುವ ಭಾರತ ತಂಡದಿಂದ ಬ್ಯಾಟರ್ ವಿರಾಟ್ ಕೊಹ್ಲಿ ಮತ್ತು ವೇಗಿ ಜಸ್‌ಪ್ರೀತ್ ಬೂಮ್ರಾ ಅವರಿಗೆ ವಿಶ್ರಾಂತಿ ನೀಡಲಾಗಿದೆ. ಅನುಭವಿ ಆಫ್‌ಸ್ಪಿನ್ನರ್ ಆರ್. ಅಶ್ವಿನ್ ತಂಡಕ್ಕೆ ಮರಳಿದ್ದಾರೆ.

ಗಾಯದಿಂದ ಚೇತರಿಸಿಕೊಂಡಿರುವ ಕೆ.ಎಲ್. ರಾಹುಲ್ ಮತ್ತು ಕುಲದೀಪ್ ಯಾದವ್ ಅವರನ್ನು 18 ಆಟಗಾರರ ಬಳಗಕ್ಕೆ ಸೇರ್ಪಡೆ ಮಾಡಲಾಗಿದೆ. ಫಿಟ್‌ನೆಸ್ ಪರೀಕ್ಷೆಯ ನಂತರವಷ್ಟೇ ಅವರು ಆಡುವುದು ಖಚಿತವಾಗಲಿದೆ.

ಜುಲೈ 29ರಿಂದ ಸರಣಿಯು ಆರಂಭವಾಗಲಿದೆ. ಈ ಮೊದಲು ಏಕದಿನ ಕ್ರಿಕೆಟ್ ತಂಡವನ್ನೂ ಪ್ರಕಟಿಸಲಾಗಿತ್ತು. ಅದರಲ್ಲಿ ರೋಹಿತ್ ಶರ್ಮಾ, ರಿಷಭ್ ಪಂತ್ ಮತ್ತು ಹಾರ್ದಿಕ್ ಪಾಂಡ್ಯ ಅವರಿಗೆ ವಿಶ್ರಾಂತಿ ನೀಡಲಾಗಿತ್ತು. ಆ ತಂಡವನ್ನು ಶಿಖರ್ ಧವನ್ ಮುನ್ನಡೆಸುವರು.

ಟಿ20 ಸರಣಿಯಲ್ಲಿ ಆಡಲಿರುವ ರೋಹಿತ್ ತಂಡವನ್ನು ಮುನ್ನಡೆಸುವರು. ಹಾರ್ದಿಕ್ ಮತ್ತು ರಿಷಭ್ ಕೂಡ ಕಣಕ್ಕಿಳಿಯಲಿದ್ದಾರೆ. ಯುವಪ್ರತಿಭೆಗಳಾದ ಆವೇಶ್ ಖಾನ್, ಅರ್ಷದೀಪ್ ಸಿಂಗ್, ರವಿ ಬಿಷ್ಣೋಯಿ ಕೂಡ ಸ್ಥಾನ ಗಿಟ್ಟಿಸಿದ್ದಾರೆ. ತಮಿಳುನಾಡಿನ ಅಶ್ವಿನ್ ಅವರು ನವೆಂಬರ್‌ನಲ್ಲಿ ಕೊನೆಯ ಬಾರಿಗೆ ಟಿ20 ಪಂದ್ಯದಲ್ಲಿ ಆಡಿದ್ದರು.

ತಂಡ: ರೋಹಿತ್ ಶರ್ಮಾ (ನಾಯಕ), ಇಶಾನ್ ಕಿಶನ್, ಸೂರ್ಯಕುಮಾರ್ ಯಾದವ್, ದೀಪಕ್ ಹೂಡಾ, ಶ್ರೇಯಸ್ ಅಯ್ಯರ್, ದಿನೇಶ್ ಕಾರ್ತಿಕ್, ರಿಷಭ್ ಪಂತ್, ಹಾರ್ದಿಕ್ ಪಾಂಡ್ಯ, ರವಿಂದ್ರ ಜಡೇಜ, ಅಕ್ಷರ್ ಪಟೇಲ್, ಆರ್. ಅಶ್ವಿನ್, ರವಿ ಬಿಷ್ಣೋಯಿ, ಭುವನೇಶ್ವರ್ ಕುಮಾರ್, ಆವೇಶ್ ಖಾನ್, ಹರ್ಷಲ್ ಪಟೇಲ್, ಅರ್ಷದೀಪ್ ಸಿಂಗ್. ಕುಲದೀಪ್ ಯಾದವ್ ಹಾಗೂ ಕೆ.ಎಲ್. ರಾಹುಲ್ (ಇಬ್ಬರಿಗೂ ಫಿಟ್‌ನೆಸ್ ಟೆಸ್ಟ್ ಬಾಕಿ)

ಮರಳಿ ಮಾನ್ಯತೆ: ಕೆಬಿಎ ಪ್ರಯತ್ನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭಾರತ ಬ್ಯಾಡ್ಮಿಂಟನ್ ಸಂಸ್ಥೆಯ (ಬಿಎಐ) ಮಾನ್ಯತೆ ಕಳೆದುಕೊಂಡಿರುವ ಕರ್ನಾಟಕ ಬ್ಯಾಡ್ಮಿಂಟನ್ ಸಂಸ್ಥೆ (ಕೆಬಿಎ) ಮಾನ್ಯತೆ ಮರಳಿ ಪಡೆಯುವ ಪ್ರಯತ್ನ ಆರಂಭಿಸಿದೆ.

ನಿಯಮಗಳ ತಿದ್ದುಪಡಿಗೆ ನೀಡಿದ್ದ ಗಡುವು ಮೀರಿದ ಕಾರಣ ಬಿಎಐ, ರಾಜ್ಯ ಬ್ಯಾಡ್ಮಿಂಟನ್ ಸಂಸ್ಥೆಯ ಮಾನ್ಯತೆಯನ್ನು ಬುಧವಾರ ರದ್ದುಗೊಳಿಸಿತ್ತು.

'ಮಾನ್ಯತೆ ರದ್ದುಪಡಿಸಿರುವುದು ಅಚ್ಚರಿ ಉಂಟುಮಾಡಿದೆ. ಈ ಬೆಳವಣಿಗೆ ಬಗ್ಗೆ ಚರ್ಚಿಸಿ ಮುಂದಿನ ತೀರ್ಮಾನ ಕೈಗೊಳ್ಳಲು ಕಾರ್ಯಕಾರಿ ಸಮಿತಿಯ ತುರ್ತು ಸಭೆಯನ್ನು ಶುಕ್ರವಾರ ಕರೆಯಲಾಗಿದೆ. ಮಾನ್ಯತೆಯನ್ನು ಶೀಘ್ರದಲ್ಲೇ ಮರಳಿ ಪಡೆಯಲು ಎಲ್ಲ ಪ್ರಯತ್ನ ಮಾಡಲಾಗುವುದು' ಎಂದು ಕೆಬಿಎ ಅಧ್ಯಕ್ಷ ಮನೋಜ್‌ಕುಮಾರ್ ಜಿ.ಎಚ್ 'ಪ್ರಜಾವಾಣಿ'ಗೆ ತಿಳಿಸಿದರು.

'ರಾಜ್ಯದಲ್ಲಿ ಬ್ಯಾಡ್ಮಿಂಟನ್ ಕ್ರೀಡೆಯ ನಿರ್ವಹಣೆಯನ್ನು ಕೆಬಿಎ ಇಷ್ಟು ವರ್ಷ ಸುಗಮವಾಗಿ ನಡೆಸುತ್ತಾ ಬಂದಿದೆ. ಹೆಚ್ಚಿನ ಜಿಲ್ಲಾ ಸಂಸ್ಥೆಗಳು ನಮ್ಮ ಈಗಿನ ನಿಯಮಗಳ ಪರವಾಗಿವೆ. ಇಂತಹ ದೊಡ್ಡ ತೀರ್ಮಾನ ತೆಗೆದುಕೊಳ್ಳುವ ಮುನ್ನ ನೋಟಿಸ್ ಕಳುಹಿಸಿ ಸ್ಪಷ್ಟೀಕರಣ ಕೇಳಬೇಕಿತ್ತು. ಆದರೆ ಏಕಾಏಕಿ ಮಾನ್ಯತೆ ರದ್ದುಗೊಳಿಸಲಾಗಿದೆ' ಎಂದರು.

ಜುಲೈ 4ರ ಗಡುವು: ಜಿಲ್ಲಾ ಸಂಸ್ಥೆಗಳಿಗೆ ಪ್ರಾತಿನಿಧ್ಯ ಕಲ್ಪಿಸುವುದರ ಕುರಿತು ಈಗ ಇರುವ ನಿಯಮ ಬದಲಿಸುವಂತೆ ಬಿಎಐ, ಮಾರ್ಚ್ 3 ರಂದು ಕೆಬಿಎಗೆ ಸೂಚಿಸಿತ್ತು. ನಾಲ್ಕು ತಿಂಗಳು ಗಡುವು ಕೂಡಾ ವಿಧಿಸಿತ್ತು.

'ಕೆಲ ನಿಯಮಗಳಲ್ಲಿ ತಿದ್ದುಪಡಿಗೆ ಸೂಚಿಸಿ ನಾಲ್ಕು ತಿಂಗಳ ಗಡುವು ನೀಡಲಾಗಿತ್ತು. ಜುಲೈ 4ರ ಒಳಗಾಗಿ ನಿಯಮದಲ್ಲಿ ಬದಲಾವಣೆ ತರುವ ಬದಲು, ಕೆಬಿಎ ಹೆಸರಿನಲ್ಲಿ ಮತ್ತೊಂದು ಸಂಸ್ಥೆ ರಚಿಸುವುದಾಗಿ ನೀವು ಇ-ಮೇಲ್‌ನಲ್ಲಿ ತಿಳಿಸಿದ್ದೀರಿ. ಇದು ಬಿಎಐ ನಿಯಮಗಳಿಗೆ ವಿರುದ್ಧವಾಗಿರುವ ಕಾರಣ ಮಾನ್ಯತೆ ರದ್ದುಗೊಳಿಸಲಾಗಿದೆ. ನಿಯಮಗಳಲ್ಲಿ ತಿದ್ದುಪಡಿ ತಂದು ಮತ್ತೊಮ್ಮೆ ಅರ್ಜಿ ಸಲ್ಲಿಸಿದರೆ ಮಾನ್ಯತೆ ವಾಪಸ್ ನೀಡಲಾಗುವುದು' ಎಂದು ಬಿಎಐ ಕಾರ್ಯದರ್ಶಿ ಸಂಜಯ್ ಮಿಶ್ರಾ, ಕೆಬಿಎ ಕಾರ್ಯದರ್ಶಿಗೆ ಬರೆದ ಪತ್ರದಲ್ಲಿ ತಿಳಿಸಿದ್ದಾರೆ.

ತಿಕ್ಕಾಟಕ್ಕೆ ಏನು ಕಾರಣ?

ರಾಜ್ಯ ಬ್ಯಾಡ್ಮಿಂಟನ್ ಸಂಸ್ಥೆಗಳಲ್ಲಿ ಆಯಾ ರಾಜ್ಯಗಳ ಎಲ್ಲ ಜಿಲ್ಲೆಗಳಿಗೂ ಪ್ರಾತಿನಿಧ್ಯ ಇರಬೇಕು. ಜಿಲ್ಲಾ ಸಂಸ್ಥೆಗಳ ಪ್ರತಿನಿಧಿಗಳೇ ರಾಜ್ಯ ಸಂಸ್ಥೆಯ ಆಡಳಿತ ನಡೆಸಬೇಕು ಎಂದು ಬಿಎಐ ನಿಯಮ ಹೇಳುತ್ತದೆ. 'ಕೆಬಿಎನಲ್ಲಿ ರಾಜ್ಯದ ಎಲ್ಲ ಜಿಲ್ಲೆಗಳಿಗೆ ಇನ್ನೂ ಪ್ರಾತಿನಿಧ್ಯ ಕಲ್ಪಿಸಿಲ್ಲ. ನಿಯಮದಲ್ಲಿ ತಿದ್ದುಪಡಿ ತಂದು ಜಿಲ್ಲಾ ಸಂಸ್ಥೆಗಳ ಪ್ರತಿನಿಧಿಗಳಿಗೆ ಅವಕಾಶ ಮಾಡಿಕೊಡಬೇಕು' ಎಂಬುದು ಬಿಎಐ ಸೂಚನೆ.

'ರಾಜ್ಯದಲ್ಲಿರುವ ಜಿಲ್ಲಾ ಸಂಸ್ಥೆಗಳಲ್ಲಿ ಅರ್ಧಕ್ಕಿಂತಲೂ ಹೆಚ್ಚಿನವು ನಮ್ಮ ಈಗಿನ ನಿಯಮಗಳನ್ನು ಬೆಂಬಲಿಸಿವೆ. ಆದ್ದರಿಂದ ತಿದ್ದುಪಡಿ ಅಗತ್ಯವಿಲ್ಲ' ಎಂಬುದು ಕೆಬಿಎ ವಾದ.

> **ರಾಜ್ಯ ಸಂಸ್ಥೆಯ ಲೋಪಗಳನ್ನು ದಾಖಲೆಗಳ ಸಮೇತ ಬಿಎಐ ಗಮನಕ್ಕೆ ತರಲಾಗಿತ್ತು. ಕೆಬಿಎ ಮಾನ್ಯತೆ ರದ್ದಾಗುವ ಮೂಲಕ ನಮ್ಮ ಹೋರಾಟಕ್ಕೆ ಗೆಲುವು ಸಿಕ್ಕಿದೆ.**
> **ರಘುಪತಿ ಭಟ್,** ಕರ್ನಾಟಕ ರಾಜ್ಯ ಬ್ಯಾಡ್ಮಿಂಟನ್ ಅಸೋಸಿಯೇಷನ್ ಅಧ್ಯಕ್ಷ

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	15,966
ಇಂದಿನ ಅಂತ್ಯ	15,938
▼	28
ದಿನದ ಕನಿಷ್ಠ	15,858

ವಿನಿಮಯ ದರ

$ ಡಾಲರ್	79.99
£ ಪೌಂಡ್	94.73
€ ಯುರೊ	80.06
¥ ಯೆನ್ (100ಕ್ಕೆ)	58

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹470
12 ಮೊಟ್ಟೆಗೆ	₹68
ಮೈಸೂರು	
100 ಮೊಟ್ಟೆಗೆ	₹470

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1605 (1615)
ಸೋಯಾ (ರಿಫೈನ್ಡ್)	₹1245 (1260)
ಸೂರ್ಯಕಾಂತಿ (ರಿಫೈನ್ಡ್)	₹1590 (1590)
ಪಾಮೋಲಿನ್	₹1165 (1177)

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ)	₹151-500
ದ್ವಿತಳಿ (ಬಿ.ವಿ)	₹211-786

ತೆಂಗು ಧಾರಣೆ (ಸಾವಿರಕ್ಕೆ)

ಮಂಗಳೂರು	
1ನೇ ದರ್ಜೆ	₹16000-20000
2ನೇ ದರ್ಜೆ	₹12000-15000

ಈರುಳ್ಳಿ ಧಾರಣೆ

(ಕ್ವಿಂಟಲ್‌ಗೆ)

ದಪ್ಪ	₹1500-1800
ಮಧ್ಯಮ	₹1000-1500
ಸಣ್ಣ	₹500-1000

₹ 79.99ಕ್ಕೆ ಕುಸಿದ ರೂಪಾಯಿ

ಮುಂಬೈ (ಪಿಟಿಐ): ರೂಪಾಯಿ ಮೌಲ್ಯವು ಅಮೆರಿಕದ ಡಾಲರ್ ಎದುರು 80ರ ಗಡಿ ತಲುಪಲು 1 ಪೈಸೆಯ ಅಂತರವಷ್ಟೇ ಬಾಕಿ ಉಳಿದಿದೆ. ಕರೆನ್ಸಿ ವಿನಿಮಯ ಮಾರುಕಟ್ಟೆಯಲ್ಲಿ ಗುರುವಾರದ ಅಂತ್ಯಕ್ಕೆ ರೂಪಾಯಿ ಮೌಲ್ಯ ₹79.99ಕ್ಕೆ ತಲುಪಿದೆ. ಗುರುವಾರ ರೂಪಾಯಿ ಮೌಲ್ಯದಲ್ಲಿ 18 ಪೈಸೆ ಇಳಿಕೆ ಆಗಿದೆ.

ಸಗಟು ಹಣದುಬ್ಬರ ಪ್ರಮಾಣವು ಸತತ 15 ತಿಂಗಳುಗಳಿಂದ ಎರಡಂಕಿ ಮಟ್ಟದಲ್ಲಿ ಉಳಿದಿರುವುದು, ದೇಶದ ಚಾಲ್ತಿ ಖಾತೆ ಕೊರತೆ ತೀವ್ರವಾಗುವ ಸಾಧ್ಯತೆ ಇರುವುದು ಹಾಗೂ ವಿದೇಶಿ ಬಂಡವಾಳದ ಹೊರಹರಿವು ರೂಪಾಯಿ ಮೌಲ್ಯ ಇಳಿಕೆಗೆ ಕಾರಣವಾದವು.

ಎಸ್‌ಬಿಐ ಸೇರಿದಂತೆ ಕೆಲವು ಪ್ರಮುಖ ಬ್ಯಾಂಕ್‌ಗಳು ಡಾಲರ್ ಮಾರಾಟದ ಸಂದರ್ಭದಲ್ಲಿ ರೂಪಾಯಿ ಮೌಲ್ಯವನ್ನು 80ಕ್ಕಿಂತ ಹೆಚ್ಚಿನ ಮಟ್ಟದಲ್ಲಿ ಹೇಳುತ್ತಿವೆ. ವಿದೇಶಿ ಹೂಡಿಕೆದಾರರು ದೇಶದ ಷೇರುಪೇಟೆಗಳಿಂದ ಗುರುವಾರ ಒಟ್ಟು ₹ 309 ಕೋಟಿ ಹಿಂದಕ್ಕೆ ಪಡೆದಿದ್ದಾರೆ.

ಮುಂಬೈ ಧಾರಣೆ

ಶೇಂಗಾ

14-7-2022

ಜಾವಾ 70/80(ಹೊಸ)	11250-11300
ಜಾವಾ 80/90(ಹೊಸ)	10650-10700
ದಪ್ಪ ಮಧ್ಯಪ್ರದೇಶ(ಹೊಸ)	9900-9950
ದಪ್ಪ ಗುಜರಾತ್(ಹೊಸ)	10650-10700

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1615 (1625)
ಒಂದು ವಾರದ ಡೆಲಿವರಿ	1610 (1620)
ಸೋಯಾ ಕಚ್ಚಾ	1610 (1190)
ಪಾಮ್ ವಾರದ ಡೆಲಿವರಿ	1163 (1175)
ಸೂರ್ಯಕಾಂತಿ ಎಣ್ಣೆ ಕಚ್ಚಾ	1520 (1530)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ

50,300 (50,575)

ಬೆಳ್ಳಿ ಕೆ.ಜಿ 55,600 (56,000)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ವ್ಯಾಪಾರ ಕೊರತೆ ಅಂತರ ₹ 2.09 ಲಕ್ಷ ಕೋಟಿಗೆ ಏರಿಕೆ

ನವದೆಹಲಿ (ಪಿಟಿಐ): ರಫ್ತು ವಹಿವಾಟಿನ ಮೌಲ್ಯಕ್ಕಿಂತಲೂ ಆಮದು ವಹಿವಾಟು ಮೌಲ್ಯ ಹೆಚ್ಚಳ ಆಗಿರುವುದರಿಂದ ದೇಶದ ವ್ಯಾಪಾರ ಕೊರತೆ ಅಂತರವು ಜೂನ್‌ನಲ್ಲಿ ದಾಖಲೆಯ ₹ 2.09 ಲಕ್ಷ ಕೋಟಿಗೆ ಏರಿಕೆ ಕಂಡಿದೆ.

ಚಿನ್ನ ಮತ್ತು ಕಚ್ಚಾ ತೈಲ ಆಮದು ಹೆಚ್ಚಳ ಆಗಿರುವುದರಿಂದ ಒಟ್ಟಾರೆ ಆಮದು ಮೌಲ್ಯದಲ್ಲಿ ಏರಿಕೆ ಆಗಿದೆ. ಇದರಿಂದಾಗಿ ವ್ಯಾಪಾರ ಕೊರತೆ ಅಂತರ ಹೆಚ್ಚಾಗಿದೆ.

ಹಿಂದಿನ ವರ್ಷದ ಜೂನ್‌ನಲ್ಲಿ ವ್ಯಾಪಾರ ಕೊರತೆ ಅಂತರವು ₹76,704 ಕೋಟಿ ಇತ್ತು. ಜೂನ್ ತಿಂಗಳಿನಲ್ಲಿ ರಫ್ತು ವಹಿವಾಟು ಶೇ 23.5ರಷ್ಟು ಹೆಚ್ಚಾಗಿ ₹ 3.20 ಲಕ್ಷ ಕೋಟಿಗೆ ತಲುಪಿದೆ. ಆಮದು ಶೇ 57.55ರಷ್ಟು ಹೆಚ್ಚಾಗಿ, ₹ 5.29 ಲಕ್ಷ ಕೋಟಿಗೆ ಏರಿಕೆ ಆಗಿದೆ ಎಂದು ವಾಣಿಜ್ಯ ಸಚಿವಾಲಯವು ಪ್ರಕಟಣೆಯಲ್ಲಿ ತಿಳಿಸಿದೆ.

ಕಚ್ಚಾ ತೈಲ ಆಮದು ₹ 1.70 ಲಕ್ಷ ಕೋಟಿಗೆ ಬಹುತೇಕ ಎರಡು ಪಟ್ಟು ಹೆಚ್ಚಾಗಿದೆ. ಚಿನ್ನದ ಆಮದು ಸಹ ಶೇ 183ರಷ್ಟು ಹೆಚ್ಚಾಗಿದ್ದು, ₹ 29,917 ಕೋಟಿಗೆ ಏರಿಕೆ ಆಗಿದೆ.

ಜೂನ್‌ನಲ್ಲಿ ಪೆಟ್ರೋಲಿಯಂ ಉತ್ಪನ್ನಗಳ ರಫ್ತು ಎರಡು ಪಟ್ಟಿಗೂ ಹೆಚ್ಚು ಏರಿಕೆ ಆಗಿದ್ದರೆ, ಹರಳು ಮತ್ತು ಚಿನ್ನಾಭರಣ ರಫ್ತು ಶೇ 25ರಷ್ಟು ಏರಿಕೆ ಆಗಿದೆ.

ಪ್ರಸಕ್ತ ಹಣಕಾಸು ವರ್ಷದ ಏಪ್ರಿಲ್–ಜೂನ್ ಅವಧಿಯಲ್ಲಿ ರಫ್ತು ವಹಿವಾಟು ಶೇ 24.5ರಷ್ಟು ಹೆಚ್ಚಾಗಿದ್ದರೆ, ಆಮದು ವಹಿವಾಟು ಶೇ 49.4ರಷ್ಟು ಏರಿಕೆ ಆಗಿದೆ. ಇಡೀ ತ್ರೈಮಾಸಿಕದಲ್ಲಿ ವ್ಯಾಪಾರ ಕೊರತೆ ಅಂತರವು ₹ 2.50 ಲಕ್ಷ ಕೋಟಿಯಿಂದ ₹ 5.65 ಲಕ್ಷ ಕೋಟಿಗೆ ಏರಿಕೆ ಆಗಿದೆ.

ಜೂನ್‌ನಲ್ಲಿ ಸೇವೆಗಳ ರಫ್ತು ಶೇ22 ರಷ್ಟು ಮತ್ತು ಆಮದು ಶೇ 39ರಷ್ಟು ಏರಿಕೆ ಆಗಿದೆ. ಏಪ್ರಿಲ್ ಜೂನ್ ಅವಧಿಯಲ್ಲಿ ಸೇವೆಗಳ ರಫ್ತು ಶೇ 26ರಷ್ಟು ಮತ್ತು ಆಮದು ಶೇ 29ರಷ್ಟು ಹೆಚ್ಚಾಗಿದೆ ಎಂದು ಸಚಿವಾಲಯ ಹೇಳಿದೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೊಳೆ	400-420
ನಡುಗೋಲು	450-480
ರಾಶಿ	500-520
ರಾಶಿ ಉತ್ತಮ	550-600
ಜರಡಿ	600-650
ಹೆರಕಿದ್ದು	1000-1100
ಹಸಿರು ಸಾಧಾರಣ	600-700
ಹಸಿರು ಉತ್ತಮ	900-1000
ಹಸಿರು ಅತಿ ಉತ್ತಮ	1150-1250
ಕಾಳು ಮೆಣಸು	470
ಅಡಿಕೆ	
ಬಂಟ್ವಾಳ	
ಕೋಕ	12500-25000
ಹೊಸತು	27500-45000
ಚಿತ್ರದುರ್ಗ	
ಬೆಟ್ಟೆ	39149-39589
ಕೆಂಪುಗೋಟು	29309-29710
ರಾಶಿ	48219-48669
ಕುಮಟ	
ಚಿಪ್ಪು	24209-30989
ಕೋಕ	15099-29499
ಹಳೆಚಾಲಿ	45679-45679
ಹೊಸಚಾಲಿ	35119-39069
ಪುತ್ತೂರು	
ಕೋಕ	11000-26000
ಹೊಸತು	30500-43500
ಸಾಗರ	
ಬಿಳಿಗೋಟು	20199-28499
ಚಾಲಿ	26890-37099
ಕೋಕ	15169-33900
ಕೆಂಪುಗೋಟು	26999-37509
ರಾಶಿ	3589-49839
ಸಿಪ್ಪೆಗೋಟು	8290-21769
ಶಿವಮೊಗ್ಗ	
ರಾಶಿ	45111-49679
ಸಿದ್ದಾಪುರ	
ಬಿಳಿಗೋಟು	26799-32099
ಚಾಲಿ	34799-38769
ಕೋಕ	24299-32899
ಕೆಂಪುಗೋಟು	30190-32899
ರಾಶಿ	47099-48599
ತಟ್ಟಿಬೆಟ್ಟೆ	45099-45099
ಶಿರಸಿ	
ಬೆಟ್ಟೆ	34099-45999
ಬಿಳಿಗೋಟು	25611-33272
ಚಾಲಿ	35461-39102
ರಾಶಿ	45499-49189
ಯಲ್ಲಾಪುರ	
ಬಿಳಿಗೋಟು	26969-33190
ಚಾಲಿ	34969-38619
ಕೋಕ	18899-28969
ಕೆಂಪುಗೋಟು	29499-34969
ರಾಶಿ	47150-51899
ತಟ್ಟಿಬೆಟ್ಟೆ	41389-45396

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	---	15400	15700	207.35 ಸೆಂಟ್ಸ್
ಎಸಿ	---	8400	8550	
ಆರ್‌ಪಿ	---	9500	9500	ಲಂಡನ್
ಆರ್‌ಸಿ	---	4500	4550	1981ಡಾಲರ್ಸ್

'ವಾಘ್ ಬಕ್ರಿ: ದೇಶದ ನಂಬರ್ 1 ಚಹಾ ಬ್ರ್ಯಾಂಡ್'

ಪ್ರಜಾವಾಣಿ ವಾರ್ತೆ

ಬೆಂಗಳೂರು: ದೇಶದ 2022ರ ಅತ್ಯಂತ ವಿಶ್ವಾಸಾರ್ಹ ಚಹಾ ಬ್ರ್ಯಾಂಡ್‌ಗಳ ಪೈಕಿ 'ವಾಘ್ ಬಕ್ರಿ' ಕಂಪನಿಗೆ ದೇಶದ ಗ್ರಾಹಕರು ನಂಬರ್ 1 ಸ್ಥಾನ ನೀಡಿದ್ದಾರೆ ಎಂದು ಕಂಪನಿಯು ತಿಳಿಸಿದೆ.

ಟ್ರಸ್ಟ್ ರಿಸರ್ಚ್ ಅಡ್ವೈಸರಿಯ (ಟಿಆರ್‌ಎ) 2022ರ ವಿಶ್ವಾಸಾರ್ಹ ಬ್ರ್ಯಾಂಡ್ ವರದಿಯಲ್ಲಿ ದೇಶದ ಗ್ರಾಹಕರು ಅತಿ ಹೆಚ್ಚಿನ ಮತ ನೀಡುವ ಮೂಲಕ ವಾಘ್ ಬಕ್ರಿಗೆ ಮೊದಲ ಸ್ಥಾನ ನೀಡಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಟಿಆರ್‌ಎ ಸಂಸ್ಥೆಯು 11 ವರ್ಷಗಳಿಂದ ದೇಶದ ಪ್ರಮುಖ ಒಂದು ಸಾವಿರ ವಿಶ್ವಾಸಾರ್ಹ ಬ್ರ್ಯಾಂಡ್‌ಗಳ ಕುರಿತು ವರದಿ ನೀಡುತ್ತಿದೆ. 16 ನಗರಗಳಲ್ಲಿ ಅಭಿಪ್ರಾಯ ಸಂಗ್ರಹಿಸಿ ಈ ವರದಿ ಸಿದ್ಧಪಡಿಸಿದೆ.

'ಇದೊಂದು ಹೆಮ್ಮೆಯ ವಿಷಯ. ದೇಶದಾದ್ಯಂತ ಇರುವ ಗ್ರಾಹಕರಿಗೆ ಉತ್ಕೃಷ್ಟ ಗುಣಮಟ್ಟದ ಉತ್ಪನ್ನಗಳನ್ನು ನೀಡುವ ಕಂಪನಿಯ ಬದ್ಧತೆಯನ್ನು ಇದು ಸೂಚಿಸುತ್ತಿದೆ' ಎಂದು ವಾಘ್ ಬಕ್ರಿ ಚಹಾ ಸಮೂಹದ ವ್ಯವಸ್ಥಾಪಕ ನಿರ್ದೇಶಕ ರಸೇಶ್ ದೇಸಾಯ್ ಹೇಳಿದ್ದಾರೆ.

ಜೂನ್‌ನಲ್ಲಿ ಹರಳು, ಆಭರಣ ರಫ್ತು ಶೇ 21ರಷ್ಟು ವೃದ್ಧಿ

ಮುಂಬೈ (ಪಿಟಿಐ): ಹರಳು ಮತ್ತು ಆಭರಣ ರಫ್ತು 2021ರ ಜೂನ್‌ಗೆ ಹೋಲಿಸಿದರೆ ಈ ವರ್ಷದ ಜೂನ್‌ನಲ್ಲಿ ಶೇಕಡ 21.41ರಷ್ಟು ಹೆಚ್ಚಾಗಿದೆ.

ಮೌಲ್ಯದ ಲೆಕ್ಕದಲ್ಲಿ ₹ 20,835 ಕೋಟಿಯಿಂದ ₹ 25,295 ಕೋಟಿಗೆ ಏರಿಕೆ ಆಗಿದೆ ಎಂದು ಹರಳು ಮತ್ತು ಆಭರಣ ರಫ್ತು ಉತ್ತೇಜನ ಮಂಡಳಿ (ಜಿಜೆಇಪಿಸಿ) ಪ್ರಕಟಣೆ ತಿಳಿಸಿದೆ.

ಚಿನ್ನಾಭರಣ ರಫ್ತು ₹ 4,171 ಕೋಟಿಯಿಂದ ₹ 5,641 ಕೋಟಿಗೆ (ಶೇ 35ರಷ್ಟು) ಏರಿಕೆ ಕಂಡಿದೆ.

2022ರ ಏಪ್ರಿಲ್–ಜೂನ್ ಅವಧಿಯಲ್ಲಿ ರಫ್ತು ವಹಿವಾಟು ಶೇ 14.6ರಷ್ಟು ಹೆಚ್ಚಾಗಿ ₹ 77,049 ಕೋಟಿಗೆ ತಲುಪಿದೆ. 2021ರ ಏಪ್ರಿಲ್–ಜೂನ್ ಅವಧಿಯಲ್ಲಿ ₹ 67,231 ಕೋಟಿ ಮೌಲ್ಯದ ರಫ್ತು ಆಗಿತ್ತು.

ಸತತ 15 ತಿಂಗಳುಗಳಿಂದ ಎರಡಂಕಿ ಮಟ್ಟದಲ್ಲಿ ಹಣದುಬ್ಬರ

ಸಗಟು ಹಣದುಬ್ಬರ ತುಸು ಇಳಿಕೆ

ನವದೆಹಲಿ (ಪಿಟಿಐ): ಸಗಟು ಬೆಲೆ ಆಧಾರಿತ ಹಣದುಬ್ಬರ ಪ್ರಮಾಣವು ಜೂನ್‌ನಲ್ಲಿ ತುಸು ತಗ್ಗಿದ್ದು, ಶೇಕಡ 15.18ಕ್ಕೆ ತಲುಪಿದೆ. ಇದು ಮೂರು ತಿಂಗಳ ಕನಿಷ್ಠ ಮಟ್ಟ. ಖನಿಜಗಳ ಬೆಲೆಯಲ್ಲಿ ಕುಸಿತ ಆಗಿದ್ದು ಸಗಟು ಹಣದುಬ್ಬರ ಇಳಿಕೆಗೆ ಒಂದು ಕಾರಣ.

ಆದರೆ, ಆಹಾರ ವಸ್ತುಗಳ ಬೆಲೆಯು ದುಬಾರಿಯಾಗಿಯೇ ಇದೆ. ಜೂನ್ ತಿಂಗಳನ್ನೂ ಪರಿಗಣಿಸಿದರೆ ಸಗಟು ಹಣದುಬ್ಬರ ಪ್ರಮಾಣವು ಸತತ 15 ತಿಂಗಳುಗಳಿಂದ ಎರಡಂಕಿ ಮಟ್ಟದಲ್ಲಿ ಉಳಿದಂತಾಗಿದೆ. ಮೇ ತಿಂಗಳಲ್ಲಿ ಇದು ದಾಖಲೆಯ ಶೇ 15.88ಕ್ಕೆ ತಲುಪಿತ್ತು. ಹಿಂದಿನ ವರ್ಷದ ಜೂನ್‌ನಲ್ಲಿ ಶೇ 12.07ರಷ್ಟು ಇತ್ತು.

ಆಹಾರ ವಸ್ತುಗಳ ಹಣದುಬ್ಬರ ಪ್ರಮಾಣ ಜೂನ್‌ನಲ್ಲಿ ಶೇ 14.39ರಷ್ಟು ಆಗಿದೆ. ತರಕಾರಿ ಮತ್ತು ಹಣ್ಣಿನ ಬೆಲೆ ಹೆಚ್ಚಳ, ಅದರಲ್ಲೂ ಮುಖ್ಯವಾಗಿ ಆಲೂಗಡ್ಡೆ ಬೆಲೆ ಏರಿಕೆಯು, ಇದಕ್ಕೆ ಕಾರಣ. ಮೇ ತಿಂಗಳಲ್ಲಿ ಆಹಾರ ವಸ್ತುಗಳ ಸಗಟು ಹಣದುಬ್ಬರವು ಶೇ 12.34 ಆಗಿತ್ತು.

'ಜಾಗತಿಕ ಮಟ್ಟದಲ್ಲಿ ಸರಕುಗಳು ಹಾಗೂ ತೈಲ ಬೆಲೆಯಲ್ಲಿ ಕಂಡುಬಂದಿರುವ ಇಳಿಕೆಗೆ ಅನುಗುಣವಾಗಿ ಜುಲೈನಲ್ಲಿ ಸಗಟು ಹಣದುಬ್ಬರ ಪ್ರಮಾಣವು ಶೇ 13ಕ್ಕೆ ತಗ್ಗಲಿದೆ ಎಂಬುದು ನಮ್ಮ ನಿರೀಕ್ಷೆ' ಎಂದು ಐಸಿಆರ್‌ಎ ಸಂಸ್ಥೆಯ ಮುಖ್ಯ ಅರ್ಥಶಾಸ್ತ್ರಜ್ಞೆ ಅದಿತಿ ನಯ್ಯರ್ ಹೇಳಿದ್ದಾರೆ.

ಆರ್‌ಬಿಐ ರೆಪೊ ದರವನ್ನು ಎರಡು ಹಂತಗಳಲ್ಲಿ ಒಟ್ಟು ಶೇ 0.60ರಷ್ಟು ಹೆಚ್ಚಿಸಬಹುದು. ಸೆಪ್ಟೆಂಬರ್ ವೇಳೆಗೆ ರೆಪೊ ದರವು ಶೇ 5.5ಕ್ಕೆ ತಲುಪಬಹುದು. ಇದಾದ ನಂತರ, ಆರ್ಥಿಕ ಬೆಳವಣಿಗೆಯ ವೇಗವನ್ನು ಗಮನಿಸಲು ದರ ಹೆಚ್ಚಳಕ್ಕೆ ವಿರಾಮ ನೀಡಬಹುದು ಎಂದು ಅವರು ಹೇಳಿದ್ದಾರೆ.

ಹಣಕಾಸು ನೀತಿಯ ವಿಚಾರವಾಗಿ ತೀರ್ಮಾನ ಕೈಗೊಳ್ಳುವಾಗ ಆರ್‌ಬಿಐ ಮುಖ್ಯವಾಗಿ ಚಿಲ್ಲರೆ ಹಣದುಬ್ಬರ ಪ್ರಮಾಣವನ್ನು ಪರಿಗಣಿಸುತ್ತದೆ. ರೆಪೊ ದರವನ್ನು ತೀರ್ಮಾನಿಸುವ ಆರ್‌ಬಿಐ ಹಣಕಾಸು ನೀತಿ ಸಮಿತಿಯ (ಎಂಪಿಸಿ) ಸಭೆಯು ಆಗಸ್ಟ್ 2ರಿಂದ 4ರವರೆಗೆ ನಡೆಯಲಿದೆ. ಚಿಲ್ಲರೆ ಹಣದುಬ್ಬರ ಪ್ರಮಾಣವು ಜೂನ್‌ನಲ್ಲಿ ಶೇ 7.01ರಷ್ಟಾಗಿದೆ.

ಸಗಟು ಬೆಲೆ ಏರಿಕೆ ಪ್ರಮಾಣ (%)	
ತರಕಾರಿಗಳು	56.75
ಆಲೂಗಡ್ಡೆ	39.38
ಹಣ್ಣುಗಳು	20.33
ಇಂಧನ, ವಿದ್ಯುತ್	40.38
ತಯಾರಿಸಿದ ಉತ್ಪನ್ನ	9.19
ಕಚ್ಚಾ ಪೆಟ್ರೋಲಿಯಂ, ನೈಸರ್ಗಿಕ ಅನಿಲ	77.29

ಗ್ರಾಹಕರಿಗೆ ರಿಪೇರಿ ಹಕ್ಕು: ರೂಪುರೇಷೆ



ನವದೆಹಲಿ (ಪಿಟಿಐ): ಗ್ರಾಹಕರಿಗೆ ತಾವು ಖರೀದಿಸುವ ವಸ್ತುಗಳ ರಿಪೇರಿಯ ಹಕ್ಕನ್ನು ಖಾತರಿಪಡಿಸುವ ಉದ್ದೇಶದಿಂದ ಕೇಂದ್ರ ಸರ್ಕಾರವು ಕೆಲವು ಕ್ರಮಗಳನ್ನು ಜಾರಿಗೊಳಿಸಲು ಚಿಂತನೆ ನಡೆಸಿದೆ.

ಉತ್ಪನ್ನದ ರಿಪೇರಿಯನ್ನು ಗ್ರಾಹಕರೇ ಮಾಡಿಕೊಳ್ಳಲು ಅಥವಾ ಬೇರೆಯವರಿಂದ ಮಾಡಿಸಲು ಬೇಕಿರುವ ಮಾಹಿತಿಯನ್ನು ಕಂಪನಿಗಳು ಹಂಚಿಕೊಳ್ಳುವುದನ್ನು ಕಡ್ಡಾಯ ಮಾಡಲು ಸರ್ಕಾರ ಯೋಜನೆ ರೂಪಿಸುತ್ತಿದೆ.

ಕಾರು, ಮೊಬೈಲ್ ಮತ್ತು ಇತರೆ ಸರಕುಗಳ ರಿಪೇರಿ ಮತ್ತು ಅವುಗಳ ಬಿಡಿಭಾಗಗಳ ಮಾರುಕಟ್ಟೆಯಲ್ಲಿ ತಯಾರಕರು ಏಕಸ್ವಾಮ್ಯ ಹೊಂದುವುದನ್ನು ತಪ್ಪಿಸಲು ಈ ಕ್ರಮಕ್ಕೆ ಮುಂದಾಗಿದೆ.

ಹೆಚ್ಚುವರಿ ಕಾರ್ಯದರ್ಶಿ ನಿಧಿ ಖೇರ್ ನೇತೃತ್ವದ ಸಮಿತಿಯೊಂದನ್ನು ರಚಿಸಿದ್ದು, 'ರಿಪೇರಿ ಹಕ್ಕು' ಕುರಿತ ರೂಪುರೇಷೆಯನ್ನು ಅದು ಸಿದ್ಧಪಡಿಸಲಿದೆ ಎಂದು ಗ್ರಾಹಕ ವ್ಯವಹಾರಗಳ ಇಲಾಖೆಯು ಪ್ರಕಟಣೆಯಲ್ಲಿ ತಿಳಿಸಿದೆ.

ಅಲ್ಲದೆ, ನಿರ್ದಿಷ್ಟ ವಸ್ತುವನ್ನು ಉತ್ಪಾದಿಸುವ ಕಂಪನಿಯ ಅಧಿಕೃತ ಸೇವಾ ಕೇಂದ್ರಗಳಲ್ಲಿ ರಿಪೇರಿ ಮಾಡಿಸದೇ ಇದ್ದರೆ ಅದರ ವಾರಂಟಿ ಪ್ರಯೋಜನಗಳು ಗ್ರಾಹಕರಿಗೆ ಸಿಗುವುದಿಲ್ಲ ಎಂದು ಹಲವು ಉತ್ಪನ್ನಗಳ ವಾರಂಟಿ ಕಾರ್ಡ್‌ನಲ್ಲಿ ನಮೂದಿಸಲಾಗಿರುತ್ತದೆ.

ಗ್ರಾಹಕರು ಒಂದು ವಸ್ತುವನ್ನು ಖರೀದಿಸಿದ ನಂತರ ಅದನ್ನು ಆತ ಸುಲಭವಾಗಿ ಮತ್ತು ಕೈಗೆಟಕುವ ಬೆಲೆಗೆ ರಿಪೇರಿ ಮತ್ತು ಬದಲಾವಣೆ ಮಾಡಿಸುವಂತೆ ಆಗಬೇಕು ಎನ್ನುವುದೇ 'ರಿಪೇರಿ ಹಕ್ಕು' ಜಾರಿಗೆ ತರುವುದರ ಹಿಂದಿನ ಉದ್ದೇಶವಾಗಿದೆ ಎಂದು ಹೇಳಿದೆ.

ರಿಪೇರಿಯ ಹಕ್ಕಿನ ಹಿಂದೆ ಒಂದು ತರ್ಕ ಇದೆ. ಗ್ರಾಹಕ ಉತ್ಪನ್ನವೊಂದನ್ನು ಖರೀದಿಸಿದಾಗ, ಆತ ಅದರ ಸಂಪೂರ್ಣ ಮಾಲೀಕನಾಗುತ್ತಾನೆ. ಅದನ್ನು ನ್ಯಾಯಸಮ್ಮತ ಬೆಲೆಗೆ ರಿಪೇರಿ ಮಾಡಿಸಿಕೊಳ್ಳುವ ಹಾಗೂ ಅದರಲ್ಲಿ ಬದಲಾವಣೆ ಮಾಡಿಕೊಳ್ಳುವ ಅಧಿಕಾರವೂ ಇರಬೇಕು. ಆತ ತಯಾರಕರ ಮರ್ಜಿಯಲ್ಲಿ ಇರಬಾರದು ಎಂದು ಹೇಳಿಕೆಯಲ್ಲಿ ವಿವರಿಸಲಾಗಿದೆ.

ರಿಪೇರಿ ಹಕ್ಕು ಇರಬೇಕಾದ ಪ್ರಮುಖ ವಲಯಗಳನ್ನು ಸಮಿತಿಯು ಜುಲೈ 13ರ ಸಭೆಯಲ್ಲಿ ಗುರುತಿಸಿದೆ. ಕೃಷಿ ಉಪಕರಣಗಳು, ಮೊಬೈಲ್ ಫೋನ್, ಟ್ಯಾಬ್‌ಗಳು, ವಾಹನಗಳಲ್ಲಿ ಬಳಸುವ ಸಲಕರಣೆಗಳನ್ನು ಗುರುತಿಸಲಾಗಿದೆ.

ಉಪಕರಣಗಳ ರಿಪೇರಿಗೆ ಅಗತ್ಯವಿರುವ ಬಿಡಿಭಾಗಗಳು ಹಾಗೂ ಸಲಕರಣೆಗಳು ಇತರರಿಗೂ ಲಭ್ಯವಾಗುವಂತೆ ಕಂಪನಿಗಳು ಮಾಡಬೇಕು. ಆಗ, ಸಣ್ಣಪುಟ್ಟ ಸಮಸ್ಯೆಗಳು ಎದುರಾದರೆ ರಿಪೇರಿ ಮಾಡಿಕೊಳ್ಳಲು ಸಾಧ್ಯವಾಗುತ್ತದೆ ಎಂಬ ವಿಷಯವೂ ಪ್ರಸ್ತಾಪವಾಗಿದೆ. ಅಮೆರಿಕ, ಬ್ರಿಟನ್ ಮತ್ತು ಐರೋಪ್ಯ ಒಕ್ಕೂಟದಲ್ಲಿ ರಿಪೇರಿಯ ಹಕ್ಕನ್ನು ಗುರುತಿಸಲಾಗಿದೆ.

ಚಾಲ್ತಿ ಖಾತೆ ಕೊರತೆ ಹೆಚ್ಚಳ ಸಾಧ್ಯತೆ

ನವದೆಹಲಿ (ಪಿಟಿಐ): ಆಮದು ವೆಚ್ಚ ಹೆಚ್ಚಾಗುತ್ತಿರುವುದು ಹಾಗೂ ರಫ್ತು ಪ್ರಮಾಣ ಏರಿಕೆ ಆಗುತ್ತಿಲ್ಲದ ಕಾರಣ ಪ್ರಸಕ್ತ ಹಣಕಾಸು ವರ್ಷದಲ್ಲಿ ದೇಶದ ಚಾಲ್ತಿ ಖಾತೆ ಕೊರತೆಯು ತೀವ್ರವಾಗುವ ಸಾಧ್ಯತೆ ಇದೆ ಎಂದು ಕೇಂದ್ರ ಹಣಕಾಸು ಸಚಿವಾಲಯದ ತಿಂಗಳ ಆರ್ಥಿಕ ವರದಿಯಲ್ಲಿ ಹೇಳಲಾಗಿದೆ.

ಜಾಗತಿಕ ವಿದ್ಯಮಾನಗಳು ದೇಶದ ಆರ್ಥಿಕ ಬೆಳವಣಿಗೆಯ ಮೇಲೆ ಪರಿಣಾಮ ಉಂಟುಮಾಡಲಿವೆ ಎಂದು ಗುರುವಾರ ಬಿಡುಗಡೆ ಮಾಡಿರುವ ವರದಿಯಲ್ಲಿ ಹೇಳಲಾಗಿದೆ. ಕಚ್ಚಾ ತೈಲ ಹಾಗೂ ಅಡುಗೆ ಎಣ್ಣೆ ಬೆಲೆಯು ಜಾಗತಿಕ ಮಾರುಕಟ್ಟೆಯಲ್ಲಿ ಈಗ ತಗ್ಗಿದೆ. ಆರ್ಥಿಕ ಹಿಂಜರಿತದ ಭೀತಿಯು ಬೆಲೆ ಇಳಿಕೆಗೆ ಕಾರಣವಾಗಿದೆ. ಇದರಿಂದಾಗಿ ದೇಶದಲ್ಲಿ ಹಣದುಬ್ಬರದ ಮಟ್ಟವು ತುಸು ಕಡಿಮೆ ಆಗಬಹುದು ಎಂದು ವರದಿ ಅಂದಾಜು ಮಾಡಿದೆ.

ಆರ್ಥಿಕ ಹಿಂಜರಿತದ ಭೀತಿಯು ಆಹಾರ ಉತ್ಪನ್ನಗಳು ಹಾಗೂ ತೈಲದ ಬೆಲೆಯನ್ನು ಅರ್ಥಪೂರ್ಣವಾಗಿ ತಗ್ಗಿಸದೆ ಇದ್ದರೆ, ದೇಶದ ಚಾಲ್ತಿ ಖಾತೆ ಕೊರತೆಯು ಪ್ರಸಕ್ತ ಹಣಕಾಸು ವರ್ಷದಲ್ಲಿ ತೀವ್ರವಾಗಲಿದೆ ಎಂದು ಅದು ತಿಳಿಸಿದೆ.

ಸೈನಾ ನೆಹ್ವಾಲ್ ಆಟದ ವೈಖರಿ

ಬ್ಯಾಡ್ಮಿಂಟನ್: ಜಿಯಾವೊಗೆ ಆಘಾತ ನೀಡಿದ ಸೈನಾ

ಸಿಂಗಪುರ (ಪಿಟಿಐ): ಹಳೆಯ ಲಯಕ್ಕೆ ಮರಳುವ ಸೂಚನೆ ನೀಡಿದ ಸೈನಾ ನೆಹ್ವಾಲ್, ಇಲ್ಲಿ ನಡೆಯುತ್ತಿರುವ ಸಿಂಗಪುರ ಓಪನ್ ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಚೀನಾದ ಬಿಂಗ್ ಜಿಯಾವೊಗೆ ಆಘಾತ ನೀಡಿ ಕ್ವಾರ್ಟರ್ ಫೈನಲ್ ಪ್ರವೇಶಿಸಿದರು.

ಗುರುವಾರ ನಡೆದ ಮಹಿಳೆಯರ ಸಿಂಗಲ್ಸ್ ವಿಭಾಗದ ಪಂದ್ಯದಲ್ಲಿ ಭಾರತದ ಆಟಗಾರ್ತಿ 21-19 11-21 21-17 ರಲ್ಲಿ ವಿಶ್ವ ರ‍್ಯಾಂಕಿಂಗ್‌ನಲ್ಲಿ 9ನೇ ಸ್ಥಾನದಲ್ಲಿರುವ ಜಿಯಾವೊ ವಿರುದ್ಧ ಗೆದ್ದರು. ಕ್ವಾರ್ಟರ್ ಫೈನಲ್‌ನಲ್ಲಿ ಅವರು ಜಪಾನ್‌ನ ಅಯಾ ಒಹೊರಿ ಸವಾಲು ಎದುರಿಸುವರು.

ಸೂಪರ್ ಸೀರಿಸ್ ಟೂರ್ನಿಯೊಂದರಲ್ಲಿ ಸೈನಾ ಎರಡೂವರೆ ವರ್ಷಗಳ ಬಿಡುವಿನ ಬಳಿಕ ಎಂಟರಘಟ್ಟ ಪ್ರವೇಶಿಸಿದ ಸಾಧನೆ ಮಾಡಿದ್ದಾರೆ. 32 ವರ್ಷದ ಸೈನಾ ಕಳೆದ ಕೆಲ ವರ್ಷಗಳಿಂದ ಗಾಯದ ಸಮಸ್ಯೆಯಿಂದ ಬಳಲಿದ್ದರಲ್ಲದೆ, ಹಳೆಯ ಫಾರ್ಮ್ ಕಂಡುಕೊಳ್ಳುವಲ್ಲಿ ವಿಫಲರಾಗಿದ್ದರು.

ಕಳೆದ ಮೂರು ವರ್ಷಗಳಲ್ಲಿ ಸೈನಾ ಅವರ ಉತ್ತಮ ಪ್ರದರ್ಶನ 2021ರಲ್ಲಿ ನಡೆದ ಓರ್ಲೀನ್ಸ್ ಮಾಸ್ಟರ್ಸ್ ಟೂರ್ನಿಯಲ್ಲಿ ದಾಖಲಾಗಿತ್ತು. ಅಲ್ಲಿ ಸೆಮಿಫೈನಲ್ ಪ್ರವೇಶಿಸಿದ್ದರು.

ಜಿಯಾವೊ ವಿರುದ್ಧದ ಪಂದ್ಯದಲ್ಲಿ ಸೈನಾ ತಮ್ಮ ನೆಚ್ಚಿನ ಕ್ರಾಸ್ ಕೋರ್ಟ್ ಸ್ಮ್ಯಾಷ್‌ಗಳು ಮತ್ತು ಡ್ರಾಪ್ ಶಾಟ್‌ಗಳನ್ನು ಅತ್ಯಂತ ಪರಿಣಾಮಕಾರಿಯಾಗಿ ಪ್ರಯೋಗಿಸಲು ಯಶಸ್ವಿಯಾದರು.

ಕ್ವಾರ್ಟರ್‌ಗೆ ಸಿಂಧು, ಪ್ರಣಯ್: ಭಾರತದ ಪಿ.ವಿ.ಸಿಂಧು ಮತ್ತು ಎಚ್.ಎಸ್.ಪ್ರಣಯ್ ಅವರೂ ಕ್ವಾರ್ಟರ್ ಫೈನಲ್ ಪ್ರವೇಶಿಸಿದರು.

ಸಿಂಧು 19-21, 21-19, 21-18 ರಲ್ಲಿ ವಿಯೆಟ್ನಾಂನ ಥಯ್ ಲಿನ್ ನುಯೆನ್ ಅವರನ್ನು ಪರಾಭವಗೊಳಿಸಿದರು. ಮೊದಲ ಗೇಮ್ ಸೋತರೂ ಧೃತಿಗೆಡದೆ ಮರುಹೋರಾಟ ನಡೆಸಿ ಪಂದ್ಯ ಗೆದ್ದರು.

ಪುರುಷರ ಸಿಂಗಲ್ಸ್ ವಿಭಾಗದ ಪ್ರೀ ಕ್ವಾರ್ಟರ್ ಫೈನಲ್‌ನಲ್ಲಿ ಪ್ರಣಯ್ 14-21 22-20 21-18 ರಲ್ಲಿ ವಿಶ್ವದ ನಾಲ್ಕನೇ ರ‍್ಯಾಂಕ್‌ನ ಆಟಗಾರ ಚೀನಾ ತೈಪೆಯ ಚೌ ತಿಯೆನ್ ಚೆನ್ ಅವರನ್ನು ಮಣಿಸಿದರು.

ಕ್ವಾರ್ಟರ್‌ಗೆ ಅರ್ಜುನ್, ಧ್ರುವ್: ಎಂ.ಆರ್.ಅರ್ಜುನ್ ಮತ್ತು ಧ್ರುವ್ ಕಪಿಲ ಪುರುಷರ ಡಬಲ್ಸ್ ವಿಭಾಗದ ಕ್ವಾರ್ಟರ್ ಫೈನಲ್ ಪ್ರವೇಶಿಸಿದರು. ಅವರು 18-21, 24-22, 21-18 ರಲ್ಲಿ ಮಲೇಷ್ಯಾದ ಗೊ ಸೆ ಫೆಯಿ– ನೂರ್ ಇಜ್ಜುದ್ದೀನ್ ಎದುರು ಗೆದ್ದರು.

ಮಿಥುನ್‌ಗೆ ಸೋಲು: ಕರ್ನಾಟಕದ ಮಿಥುನ್ ಮಂಜುನಾಥ್ 10-21, 21-18, 16-21 ರಲ್ಲಿ ಐರ್ಲೆಂಡ್‌ನ ನಾಟ್ ನುಯೆನ್ ಎದುರು ಸೋತರು. ಅಶ್ಮಿತಾ ಚಲಿಹಾ 9-21, 13-21 ರಲ್ಲಿ ಚೀನಾದ ಹಾನ್ ಯು ಎದುರು ಪರಾಭವಗೊಂಡರು.

ವುಶು: ಪ್ರಣತಿಗೆ ಕಂಚು

ಮೈಸೂರು: ಇಲ್ಲಿನ ಪೊಲೀಸ್ ಪಬ್ಲಿಕ್ ಶಾಲೆಯ 2ನೇ ತರಗತಿ ವಿದ್ಯಾರ್ಥಿನಿ ಜಿ.ಪ್ರಣತಿ, ಹಿಮಾಚಲ ಪ್ರದೇಶದ ಮಂಡಿಯಲ್ಲಿ ಗುರುವಾರ ನಡೆದ 22ನೇ ರಾಷ್ಟ್ರೀಯ ವುಶು ಸಬ್ ಜೂನಿಯರ್ ಚಾಂಪಿಯನ್‌ಷಿಪ್‌ನಲ್ಲಿ ಕಂಚಿನ ಪದಕ ಗೆದ್ದರು.

ಈ ಕೂಟದಲ್ಲಿ 25 ಸ್ಪರ್ಧಿಗಳು ರಾಜ್ಯವನ್ನು ಪ್ರತಿನಿಧಿಸಿದ್ದಾರೆ. 21 ಕೆ.ಜಿ ಒಳಗಿನ ವಿಭಾಗದಲ್ಲಿ ನಾಲ್ಕರ ಘಟ್ಟ ಪ್ರವೇಶಿಸಿದ್ದ ಅವರು ತೆಲಂಗಾಣದ ಎನ್.ಭಾವನಾ ವಿರುದ್ಧ 0–12 ರಲ್ಲಿ ಸೋತರೂ ರಾಜ್ಯಕ್ಕೆ ಕಂಚಿನ ಪದಕ ತಂದುಕೊಟ್ಟರು.

ವಿಶ್ವಕಪ್ ಶೂಟಿಂಗ್: ಪದಕ ಪಟ್ಟಿಯಲ್ಲಿ ಅಗ್ರಸ್ಥಾನ

ಭಾರತಕ್ಕೆ ಮೂರನೇ ಚಿನ್ನ

ಚಾಂಗ್ವಾನ್, ದಕ್ಷಿಣ ಕೊರಿಯ (ಪಿಟಿಐ): ಭಾರತದ ಶೂಟರ್‌ಗಳು ಇಲ್ಲಿ ನಡೆಯುತ್ತಿರುವ ಐಎಸ್‌ಎಸ್‌ಎಫ್ ವಿಶ್ವಕಪ್ ಶೂಟಿಂಗ್‌ನಲ್ಲಿ ಮತ್ತೊಂದು ಚಿನ್ನ ಹಾಗೂ ಮೂರು ಬೆಳ್ಳಿಯ ಪದಕ ಜಯಿಸಿದರು.

ಅರ್ಜುನ್ ಬಬೂತಾ, ತುಷಾರ್ ಮಾನೆ ಮತ್ತು ಪಾರ್ಥ್ ಮಖಿಜಾ ಅವರು ಗುರುವಾರ ನಡೆದ ಪುರುಷರ 10 ಮೀ ಏರ್ ರೈಫಲ್ ತಂಡ ವಿಭಾಗದಲ್ಲಿ ಅಗ್ರಸ್ಥಾನ ಗಳಿಸಿದರು.

ಚಿನ್ನದ ಪದಕಕ್ಕಾಗಿ ನಡೆದ ಪೈಪೋಟಿಯಲ್ಲಿ ಭಾರತ 17–15 ರಲ್ಲಿ ಕೊರಿಯಾ ತಂಡವನ್ನು ಮಣಿಸಿತು. ಕೊರಿಯಾದ ಸೆಯುಂಗೊ ಬಾಂಗ್, ಸಂಗ್ಹೊ ಕಿಮ್ ಮತ್ತು ಹಾಜುನ್ ಪಾರ್ಕ್ ಪ್ರಬಲ ಪೈಪೋಟಿ ಒಡ್ಡಿದರೂ, ಭಾರತದ ಸ್ಪರ್ಧಿಗಳು ಚಿನ್ನಕ್ಕೆ ಗುರಿಯಿಟ್ಟರು.

ಅರ್ಜುನ್ ಮತ್ತು ತುಷಾರ್ ಅವರಿಗೆ ಚಾಂಪಿಯನ್‌ಷಿಪ್‌ನಲ್ಲಿ ದೊರೆತ ಎರಡನೇ ಚಿನ್ನದ ಪದಕ ಇದಾಗಿದೆ. ಅರ್ಜುನ್ ವೈಯಕ್ತಿಕ ವಿಭಾಗದಲ್ಲೂ ಅಗ್ರಸ್ಥಾನ ಪಡೆದಿದ್ದರು.

ಮಹಿಳೆಯರಿಗೆ ಬೆಳ್ಳಿ: 10 ಮೀ. ಏರ್ ರೈಫಲ್ ಮಹಿಳೆಯರ ವಿಭಾಗದಲ್ಲಿ ಭಾರತಕ್ಕೆ ಬೆಳ್ಳಿ ಲಭಿಸಿತು. ಇಳವೆನಿಲ್ ವಲರಿವನ್, ಮೆಹುಲಿ ಘೋಷ್ ಮತ್ತು ರಮಿತಾ ಅವರನ್ನೊಳಗೊಂಡ ಭಾರತ ತಂಡ 10–16 ರಲ್ಲಿ ಆತಿಥೇಯ ದೇಶದ ಜಿಯೊನ್ ಕುಮ್, ಯುನ್‌ಸಿಯೊ ಲೀ ಮತ್ತು ದಾಯೆಯೊಂಗ್ ಗೊನ್ ಎದುರು ಪರಾಭವಗೊಂಡಿತು.

ಪುರುಷರ 10 ಮೀ ಏರ್ ರೈಫಲ್ ತಂಡ ವಿಭಾಗದಲ್ಲಿ ಚಿನ್ನ ಗೆದ್ದ ಅರ್ಜುನ್ ಬಬೂತಾ, ಪಾರ್ಥ್ ಮಖಿಜಾ ಮತ್ತು ತುಷಾರ್ ಮಾನೆ –ಸಾಯ್ ಮೀಡಿಯಾ ಟ್ವಿಟರ್ ಚಿತ್ರ

ಏರ್ ಪಿಸ್ತೂಲ್ ವಿಭಾಗದಲ್ಲಿ ಬೆಳ್ಳಿ: 10 ಮೀ. ಏರ್ ಪಿಸ್ತೂಲ್ ವಿಭಾಗದಲ್ಲಿ ಭಾರತದ ಪುರುಷರ ಮತ್ತು ಮಹಿಳೆಯರ ತಂಡಗಳು ಬೆಳ್ಳಿಯ ಪದಕ ಗೆದ್ದುಕೊಂಡವು.

ಚಿನ್ನದ ಪದಕಕ್ಕಾಗಿ ನಡೆದ ಪೈಪೋಟಿಯಲ್ಲಿ ಪುರುಷರ ತಂಡ 15–17 ರಲ್ಲಿ ಇಟಲಿ ಎದುರು ಸೋತಿತು. ರಿಧಿಮಾ ಸಂಗ್ವಾನ್, ಯುವಿಕಾ ತೋಮರ್ ಮತ್ತು ಪಲಕ್ ಅವರನ್ನೊಳಗೊಂಡ ಮಹಿಳಾ ತಂಡ 2–10 ರಲ್ಲಿ ಕೊರಿಯಾ ಎದುರು ಪರಾಭವಗೊಂಡಿತು.

ಮೂರು ಚಿನ್ನ, ನಾಲ್ಕು ಬೆಳ್ಳಿ ಮತ್ತು ಒಂದು ಕಂಚಿನ ಪದಕ ಜಯಿಸಿರುವ ಭಾರತ, ಪದಕ ಪಟ್ಟಿಯಲ್ಲಿ ಅಗ್ರಸ್ಥಾನಕ್ಕೇರಿದೆ. ದಕ್ಷಿಣ ಕೊರಿಯ ಮತ್ತು ಸರ್ಬಿಯ ಬಳಿಕದ ಸ್ಥಾನಗಳಲ್ಲಿವೆ.

ಗಾಲ್ಫ್: ಮುನ್ನಡೆ ಕಾಪಾಡಿಕೊಂಡ ಪ್ರಣವಿ

ಬೆಂಗಳೂರು: ಮೈಸೂರಿನ ಪ್ರಣವಿ ಅರಸ್ ಅವರು ಇಲ್ಲಿ ನಡೆಯುತ್ತಿರುವ ಮಹಿಳಾ ಪ್ರೊ ಗಾಲ್ಫ್ ಟೂರ್‌ನ ಒಂಬತ್ತನೇ ಲೆಗ್ ಟೂರ್ನಿಯಲ್ಲಿ ಗುರುವಾರ ಎರಡನೇ ಸುತ್ತಿನ ಬಳಿಕ ಮುನ್ನಡೆ ಕಾಯ್ದುಕೊಂಡಿದ್ದಾರೆ.

ಬೆಂಗಳೂರು ಗಾಲ್ಫ್ ಕ್ಲಬ್‌ನಲ್ಲಿ ತುಂತುರು ಮಳೆ ಹಾಗೂ ಬಿರುಸಾದ ಗಾಳಿಯ ನಡುವೆಯೇ ಎರಡನೇ ಸುತ್ತಿನ ಸ್ಪರ್ಧೆ ನಡೆಯಿತು. ಈ ಪರಿಸ್ಥಿತಿ ಕೆಲವರ ಪ್ರದರ್ಶನದ ಮೇಲೆ ವ್ಯತಿರಿಕ್ತ ಪರಿಣಾಮ ಬೀರಿತು. ಬುಧವಾರ ಎರಡನೇ ಸ್ಥಾನದಲ್ಲಿದ್ದ ಸೆಹೆರ್ ಅತ್ವಾಲ್, ಅದೇ ಸ್ಥಿರತೆ ಕಾಪಾಡಿಕೊಳ್ಳುವಲ್ಲಿ ವಿಫಲರಾದರು.

ಹಿತಾಶ್ರೀ ಬಕ್ಷಿ ಮೂರನೇ ಸ್ಥಾನ ಹಾಗೂ ನಯನಿಕಾ ಸಂಗಾ ಅವರು ನಾಲ್ಕನೇ ಸ್ಥಾನದಲ್ಲಿದ್ದಾರೆ. ಸ್ನೇಹಾ ಸಿಂಗ್ ಐದನೇ ಸ್ಥಾನದಲ್ಲಿದ್ದಾರೆ.